ಪ್ರಜಾವಾಣಿ

ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಹೇಳಿಕೆ

‘ಇಂಡಿಯಾ’ ಕೂಟಕ್ಕೆ ಬೆಂಬಲ

ಪ್ರಜಾವಾಣಿ ವಾರ್ತೆ

ಸಿ.ಎಂ. ಇಬ್ರಾಹಿಂ

ಬೆಂಗಳೂರು: ‘ಜೆಡಿಎಸ್ ಜಾತ್ಯ ತೀತ ಸಿದ್ಧಾಂತದ ಪಕ್ಷ. ಬಿಜೆಪಿ ಅದಕ್ಕೆ ವಿರುದ್ಧವಾದ ಪಕ್ಷ. ನಾವು ಬಿಜೆಪಿಯನ್ನು ಬೆಂಬಲಿಸುವುದಿಲ್ಲ. ‘ಇಂಡಿಯಾ’ ಮೈತ್ರಿಕೂಟಕ್ಕೆ ನಮ್ಮ ಬೆಂಬಲ’ ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಹೇಳಿದರು.

ಬಿಜೆಪಿ ಜತೆ ಮೈತ್ರಿ ಮಾಡಿಕೊಂಡಿರುವ ಪಕ್ಷದ ವರಿಷ್ಠರ ವಿರುದ್ಧ ಮುನಿಸಿಕೊಂಡಿರುವ ಅವರು, ‘ಜೆಡಿಎಸ್–ಕರ್ನಾಟಕ ಚಿಂತನ ಮಂಥನ ಸಭೆ’ ಹೆಸರಿನಲ್ಲಿ ಸೋಮವಾರ ತಮ್ಮ ಬೆಂಬಲಿಗರ ಸಭೆ ನಡೆಸಿದರು. ‘ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಸೋಲಬೇಕು. ಅದಕ್ಕಾಗಿ ‘ಇಂಡಿಯಾ’ ಮೈತ್ರಿಕೂಟವನ್ನು ಬೆಂಬಲಿಸುತ್ತೇವೆ’ ಎಂದು ಘೋಷಿಸಿದರು.

‘ಬಿಜೆಪಿ ಜತೆಗಿನ ಮೈತ್ರಿಯನ್ನು ನಾನು ಒಪ್ಪುವುದಿಲ್ಲ. ಮೈತ್ರಿ ಕುರಿತು ಪಕ್ಷದಲ್ಲಿ ಸಭೆ ನಡೆದಿದೆಯೆ? ಶಾಸಕರ ಜತೆ ಚರ್ಚಿಸಲಾಗಿದೆಯೆ? ನಿರ್ಣಯ ಕೈಗೊಳ್ಳಲಾಗಿದೆಯೆ? ಯಾವುದೂ ಆಗಿಲ್ಲ. ಯಾರನ್ನೂ ಕೇಳದೆ ಎಚ್.ಡಿ. ಕುಮಾರಸ್ವಾಮಿ ಅವರು ದೆಹಲಿಗೆ ಹೋಗಿ ಏಕಪಕ್ಷೀಯವಾಗಿ ಮೈತ್ರಿ ಮಾತುಕತೆ ನಡೆಸಿದ್ದಾರೆ. ಅಮಿತ್ ಶಾ ಜತೆ ಫೋಟೊ ತೆಗೆಸಿಕೊಂಡು ಮೈತ್ರಿ ಘೋಷಣೆ ಮಾಡಿದ್ದಾರೆ. ಪಕ್ಷವೆಂದರೆ ಕುಟುಂಬವಲ್ಲ, ಎಲ್ಲರ ಅಭಿಪ್ರಾಯವೂ ಮುಖ್ಯ’ ಎಂದು ವಾಗ್ದಾಳಿ ನಡೆಸಿದರು.

‘ನಮ್ಮದೇ ನೈಜ ಜೆಡಿಎಸ್’: ‘ನಮ್ಮದೇ ನೈಜ ಜೆಡಿಎಸ್. ನನ್ನನ್ನು ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಿಂದ ತೆಗೆಯಲು ಯಾರಿಗೂ ಸಾಧ್ಯವಿಲ್ಲ. 19 ಶಾಸಕರ ಜತೆಗೂ ಚರ್ಚಿಸುತ್ತೇನೆ. ಹೊಸ ಕೋರ್ ಕಮಿಟಿ ರಚಿಸುತ್ತೇನೆ. ಎಲ್ಲರ ಜತೆ ಚರ್ಚಿಸಿದ ಬಳಿಕ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡರನ್ನು ಭೇಟಿಮಾಡಿ ನಮ್ಮ ನಿರ್ಧಾರವನ್ನು ತಿಳಿಸುತ್ತೇನೆ’ ಎಂದು ಹೇಳಿದರು.

‘ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಬಗ್ಗೆ ದ್ವೇಷವಿಲ್ಲ. ಆದರೆ, ಸೈದ್ಧಾಂತಿಕವಾಗಿ ನಾವು ಮತ್ತು ಅವರು ವಿರುದ್ಧ ಇರುವವರು. ಜಾತ್ಯತೀತ ಸಿದ್ಧಾಂತಕ್ಕೆ ನಮ್ಮ ಬೆಂಬಲ’ ಎಂದು ಹೇಳಿದರು.

ಜೆಡಿಎಸ್ ಜಾತ್ಯತೀತ ತತ್ವ ಹಾಗೂ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟಿರುವ ಪಕ್ಷ. ಜಾತ್ಯತೀತ ಸಿದ್ಧಾಂತವನ್ನು ಉಳಿಸಿಕೊಳ್ಳುವುದಕ್ಕಾಗಿಯೇ ದೇವೇಗೌಡರನ್ನು ಪ್ರಧಾನಿ ಮಾಡಲಾಗಿತ್ತು. ಅವರು ರಾಷ್ಟ್ರೀಯ ನಾಯಕರು. ಈ ಬೆಳವಣಿಗೆಯ ಬಗ್ಗೆ ಅವರಿಗೆ ನೋವಿದೆ. ಆದರೆ, ಸ್ವತಂತ್ರವಾಗಿ ನಿರ್ಣಯ ಕೈಗೊಳ್ಳಲು ಅವರಿಗೆ ಸಾಧ್ಯವಾಗುತ್ತಿಲ್ಲ ಎಂದರು.

ಜೆಡಿಯು ರಾಜ್ಯ ಘಟಕದ ಅಧ್ಯಕ್ಷ ಮಹಿಮಾ ಜೆ. ಪಟೇಲ್, ಮುಖಂಡ ಎಂ.ಪಿ. ನಾಡಗೌಡ, ಜೆಡಿಎಸ್ ಮುಖಂಡರಾದ ಮನೋಹರ ತಹಶೀಲ್ದಾರ್, ಶಫಿಉಲ್ಲಾ ಸಾಹೇಬ್ ವೇದಿಕೆಯಲ್ಲಿದ್ದರು.

ಕುಮಾರಸ್ವಾಮಿ ಭಾವಚಿತ್ರಕ್ಕೆ ಕೊಕ್

ಸಿ.ಎಂ. ಇಬ್ರಾಹಿಂ ನಡೆಸಿದ ಚಿಂತನ–ಮಂಥನ ಸಭೆಯ ಬ್ಯಾನರ್‌ನಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರ ಭಾವಚಿತ್ರ ಇರಲಿಲ್ಲ. ಇಬ್ರಾಹಿಂ ಮತ್ತು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡರ ಭಾವಚಿತ್ರಗಳನ್ನು ಮಾತ್ರ ಬ್ಯಾನರ್‌ನಲ್ಲಿ ಮುದ್ರಿಸಲಾಗಿತ್ತು.

ಸತೀಶ ನಡೆಗೆ ಹೈಕಮಾಂಡ್ ತಡೆ

ಪ್ರಜಾವಾಣಿ ವಾರ್ತೆ

ಸತೀಶ ಜಾರಕಿಹೊಳಿ

ಬೆಂಗಳೂರು: 15 ಶಾಸಕರ ಜೊತೆ ಮೈಸೂರು ದಸರಾಕ್ಕೆ ತೆರಳಲು ಸಿದ್ಧತೆ ನಡೆಸಿದ್ದ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರ ನಡೆಗೆ ಕಾಂಗ್ರೆಸ್ ಹೈಕಮಾಂಡ್ ತಡೆ ಒಡ್ಡಿದೆ ಎಂದು ಗೊತ್ತಾಗಿದೆ.

ಸತೀಶ ಜಾರಕಿಹೊಳಿ ಅವರು ತಾವು ಉಸ್ತುವಾರಿ ಹೊಂದಿರುವ ಬೆಳಗಾವಿ ಜಿಲ್ಲೆಯ ಶಾಸಕರ ಜೊತೆ ಮೈಸೂರಿಗೆ ತೆರಳಲು ಮುಂದಾಗಿದ್ದರು. ಶಾಸಕರನ್ನು ಕರೆದುಕೊಂಡು ಹೋಗಲು ಬಸ್ ಕೂಡಾ ಸಿದ್ಧ ವಾಗಿತ್ತು. ವಿಷಯ ಗೊತ್ತಾಗುತ್ತಿದ್ದಂತೆ ಎಚ್ಚೆತ್ತುಕೊಂಡ ಕಾಂಗ್ರೆಸ್ ವರಿಷ್ಠರು, ಶಾಸಕರನ್ನು ಒಗ್ಗೂಡಿಸಿಕೊಂಡು ಹೋಗದಂತೆ ಸೂಚನೆ ನೀಡಿದರು. ಹೀಗಾಗಿ, ಮೈಸೂರಿಗೆ ತೆರಳುವುದನ್ನು ಕೈಬಿಟ್ಟರು ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಸತೀಶ ಜಾರಕಿಹೊಳಿ, ‘ಮೈಸೂರಿಗೆ ಹೋಗಬೇಕೆಂದು ಕೆಲವರು ಮಾತನಾಡಿಕೊಂಡಿದ್ದೆವು. ದಸರಾ ನೋಡಲು ಬರುವಂತೆ ಅಲ್ಲಿನ ಶಾಸಕರೂ ಹೇಳುತ್ತಿದ್ದರು. ಎಲ್ಲಾದರೂ ಪ್ರವಾಸ ಕರೆದುಕೊಂಡು ಹೋಗುವಂತೆ ಕೆಲವರು ಹೇಳುತ್ತಿದ್ದರು. ಹೀಗಾಗಿ, ನಾವು ಸಮಾನ ಮನಸ್ಕ ಕೆಲವರು ಶಾಸಕರು ಹೋಗಬೇಕೆಂದು ಅಂದುಕೊಂಡಿದ್ದೆವು’ ಎಂದು ಸಮಜಾಯಿಷಿ ನೀಡಿದರು.

‘ಸದ್ಯ ಹೋಗುವುದು ಬೇಡವೆಂದು ಇದ್ದೇವೆ. ಹೋಗಬೇಕೆಂದಾಗ ಮುಖ್ಯಮಂತ್ರಿ ಮತ್ತು ಅಧ್ಯಕ್ಷರ ಗಮನಕ್ಕೆ ತಂದು ಹೋಗುತ್ತೇವೆ. ಪಕ್ಷದೊಳಗೆ ಯಾವುದೇ ಬಣ ಗಿಣ ಇಲ್ಲ’ ಎಂದು ಸ್ಪಷ್ಟನೆ ನೀಡಿದರು.

ವಿದೇಶಕ್ಕೆ ಸತೀಶ?: ಕೆಲವು ಶಾಸಕರ ಜೊತೆ ವಿದೇಶ ಪ್ರವಾಸ ಹೋಗಲು ಮುಂದಾಗಿರುವ ಸತೀಶ, ಮುಖ್ಯಮಂತ್ರಿ ಜೊತೆಗೂ ಚರ್ಚೆ ನಡೆಸಿದ್ದಾರೆ ಎನ್ನಲಾಗಿದೆ. ತಮ್ಮ ಆಪ್ತ ಶಾಸಕರ ಜೊತೆ ದುಬೈಗೆ ಹೋಗಲು ನಿರ್ಧರಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಲಕ್ಷ್ಮಣ ಸವದಿಗೆ ಕಾರ್ಯಾಧ್ಯಕ್ಷ ಸ್ಥಾನ: ವಿರೋಧ

ಬಿಜೆಪಿ ತ್ಯಜಿಸಿ ಕಾಂಗ್ರೆಸ್‌ಗೆ ಬಂದಿರುವ ಲಕ್ಷ್ಮಣ ಸವದಿ ಅವರನ್ನು ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿ ಮಾಡುವ ಬಗ್ಗೆ ಕಾಂಗ್ರೆಸ್‌ನಲ್ಲಿ ಚರ್ಚೆ ನಡೆದಿತ್ತು. ಇದು ಸತೀಶ ಜಾರಕಿಹೊಳಿ ಅವರ ಅಸಮಾಧಾನಕ್ಕೆ ಕಾರಣ ಎನ್ನಲಾಗಿದೆ.

‘ಕಾಂಗ್ರೆಸ್ ಅಧಿಕಾರದಲ್ಲಿ ಇಲ್ಲದಿದ್ದಾಗ ಕಾರ್ಯಾಧ್ಯಕ್ಷನಾಗಿ ಪಕ್ಷ ಸಂಘಟಿಸಿ, ಹೆಚ್ಚಿನ ಸ್ಥಾನ ಗೆಲ್ಲಿಸಲು ಕಾರಣವಾಗಿದ್ದೇನೆ. ಲೋಕಸಭೆ ಚುನಾವಣೆಯಲ್ಲಿಯೂ ಬೆಳಗಾವಿ, ಚಿಕ್ಕೋಡಿ ಗೆಲ್ಲಿಸಬೇಕಿದೆ. ಈ ಹೊತ್ತಿನಲ್ಲಿ, ಸವದಿ ಅವರಿಗೆ ಕಾರ್ಯಾಧ್ಯಕ್ಷ ಸ್ಥಾನ ನೀಡುವ ಬದಲು ಚುನಾವಣೆ ಬಳಿಕ ನೀಡಿ’ ಎಂದು ಜಾರಕಿಹೊಳಿ ಮನವಿ ಮಾಡಿದ್ದರು. ಇದಕ್ಕೆ, ಪಕ್ಷದ ನಾಯಕರು ಸಮ್ಮತಿ ಸೂಚಿಸಿರಲಿಲ್ಲ ಎಂದು ಹೇಳಲಾಗಿದೆ. ತಮ್ಮ ಮಾತಿಗೆ ಕಿಮ್ಮತ್ತು ಸಿಗದೇ, ಕಡೆಗಣಿಸಲಾಗುತ್ತಿದೆ ಎಂದು ಅಸಮಾಧಾನಗೊಂಡ ಜಾರಕಿಹೊಳಿ, ಶಾಸಕರನ್ನು ಒಟ್ಟುಗೂಡಿಸಿ ಪ್ರವಾಸ ಹೋಗುವ ಮೂಲಕ ಬೆಳಗಾವಿ ಜಿಲ್ಲಾ ರಾಜಕೀಯದಲ್ಲಿ ತಮ್ಮಗಿರುವ ‘ಶಕ್ತಿ ಪ್ರದರ್ಶನ’ಕ್ಕೆ ಮುಂದಾದರೇ ಎಂಬ ಚರ್ಚೆಯೂ ನಡೆದಿದೆ.

ಐಎಎಸ್: ಹಲವು ಹುದ್ದೆ ಭಾಗ್ಯ

ಕೆಲವರಿಗೆ ಮಾತ್ರ ಆಯಕಟ್ಟಿನ 2–3 ಹುದ್ದೆ • ‘ಸ್ಥಳ ನಿರೀಕ್ಷೆ’ಯಲ್ಲಿ ಹಲವರು!

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯದಲ್ಲಿ ಐಎಎಸ್ (ಭಾರತೀಯ ನಾಗರಿಕ ಸೇವೆ) ಅಧಿಕಾರಿಗಳ ಪೈಕಿ ಕೆಲವರು ಮಹತ್ವದ, ಆಯಕಟ್ಟಿನ 2–3 ಹುದ್ದೆಗಳನ್ನು ಅಲಂಕರಿಸಿದ್ದರೆ, ಹುದ್ದೆ ಖಾಲಿ ಇದ್ದರೂ ಕೆಲವು ಅಧಿಕಾರಿಗಳು ಹಲವು ತಿಂಗಳುಗಳಿಂದ ‘ಸ್ಥಳ ನಿರೀಕ್ಷೆ’ಯಲ್ಲಿ ಕಾಲ ಕಳೆಯುತ್ತಿದ್ದಾರೆ.

ಇಷ್ಟ ಇಲ್ಲದವರನ್ನು ‘ವರ್ಗಾವಣೆ’ ಅಸ್ತ್ರ ಬಳಸಿ ಹುದ್ದೆಯನ್ನೇ ತೋರಿಸದೆ ಬದಲಿಸುವ ಸರ್ಕಾರ, ಬೇಕಾದವರನ್ನು ಆಯಕಟ್ಟಿನ ಹುದ್ದೆಗಳಿಗೆ ನಿಯೋಜಿಸುತ್ತಿದೆ ಎಂಬ ಅಸಮಾಧಾನ ಹಲವು ಅಧಿಕಾರಿಗಳಲ್ಲಿದೆ. ಕೆಲವರ ಬಳಿ ಇರುವ ‘ಹೆಚ್ಚುವರಿ’ ಹೊಣೆಗಳು ಇಂಥ ಅನುಮಾನಗಳಿಗೆ ಪುಷ್ಟಿ ನೀಡುತ್ತಿವೆ.

ಸರ್ಕಾರ, ಮುಖ್ಯಮಂತ್ರಿ ಬದಲಾಗುತ್ತಿದ್ದಂತೆ ಐಎಎಸ್, ಐಪಿಎಸ್, ಐಎಫ್‌ಎಸ್, ಕೆಎಎಸ್ ವೃಂದದ ಅಧಿಕಾರಿಗಳ ಸ್ಥಾನವೂ ಪಲ್ಲಟವಾಗುತ್ತದೆ. ಕೆಲವು ಅಧಿಕಾರಿಗಳು ಎಲ್ಲ ಕಾಲಕ್ಕೂ ಸಲ್ಲುವುದು ‘ಲಾಭಕಟ್ಟೆ’ನ ವಿಶೇಷ.

ರಾಜ್ಯದಲ್ಲಿ ಮಂಜೂರಾದ ಒಟ್ಟು 314 ಐಎಎಸ್ ಹುದ್ದೆಗಳಿವೆ. ಈ ಪೈಕಿ, 35ಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇವೆ ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಮೂಲಗಳು ತಿಳಿಸಿವೆ.

ರಾಜ್ಯ ಸರ್ಕಾರದ ‘ನಿಯುಕ್ತಿ’ (ಡಿಪಿಎಆರ್- ಸರ್ವೀಸಸ್) ವೆಬ್‌ಸೈಟ್‌ನಲ್ಲಿ 270 ಐಎಎಸ್ ಅಧಿಕಾರಿಗಳು ಬಗ್ಗೆ ಸಮಗ್ರ ಮಾಹಿತಿಯಿದೆ. ಅದರ ಪ್ರಕಾರ, 26 ಐಎಎಸ್ ಅಧಿಕಾರಿಗಳು ಕೇಂದ್ರ ಸೇವೆಗೆ ನಿಯೋಜನೆಗೊಂಡಿದ್ದಾರೆ. ಐವರು ರಜೆಯಲ್ಲಿದ್ದಾರೆ. 12 ಅಧಿಕಾರಿಗಳು ತರಬೇತಿಯಲ್ಲಿದ್ದಾರೆ.

ರಾಕೇಶ್ ಸಿಂಗ್, ರಜನೀಶ್ ಗೋಯಲ್, ಗೌರವ್ ಗುಪ್ತ, ಉಮಾ ಮಹದೇವನ್, ಎನ್. ಜಯರಾಮ್, ಜಿ.ಸಿ. ಪ್ರಕಾಶ್, ಕೆ. ಹರೀಶ್ ಕುಮಾರ್ ಅವರ ಬಳಿ ತಲಾ ಮೂರು ಹುದ್ದೆಗಳಿವೆ. ಜಾವೇದ್ ಅಖ್ತರ್, ವಿ. ಮಂಜುಳಾ, ಸೆಲ್ವ ಕುಮಾರ್, ಅಂಜುಂ ಪರ್ವೇಜ್, ಟಿ.ಕೆ. ಅನಿಲ್‌ಕುಮಾರ್, ಎನ್. ಮಂಜುನಾಥ ಪ್ರಸಾದ್, ಅನ್ಬು ಕುಮಾರ್, ದಯಾನಂದ ಸೇರಿದಂತೆ 30ಕ್ಕೂ ಹೆಚ್ಚು ಐಎಎಸ್ ಅಧಿಕಾರಿಗಳ ಬಳಿ ಎರಡು ಹುದ್ದೆಗಳಿವೆ. ಕೆ.ಪಿ. ಮೋಹನ್ ರಾಜ್, ವಾಸಿ ರೆಡ್ಡಿ ವಿಜಯ ಜ್ಯೋತ್ಸ್ನಾ, ಶಿವಾನಂದ ಕಾಪಸಿ, ಟಿ. ವೆಂಕಟೇಶ್, ಎಸ್. ಪೂವಿತ ಅವರು ಹುದ್ದೆ ನಿರೀಕ್ಷೆಯಲ್ಲಿದ್ದಾರೆ. ಕಿರಿಯ ಶ್ರೇಣಿಯ ಐಎಎಸ್ ಅಧಿಕಾರಿಗಳ ಪೈಕಿ ಕೆಲವರು ಉಪ ವಿಭಾಗಾಧಿಕಾರಿ ಹುದ್ದೆಯಲ್ಲಿದ್ದರೆ, ಇನ್ನೂ ಕೆಲವರು ತರಬೇತಿಯಲ್ಲಿದ್ದಾರೆ.

ಕೆಲವು ಅಧಿಕಾರಿಗಳು 2–3 ಮಹತ್ವದ ಹುದ್ದೆಗಳಲ್ಲಿರುವುದು ಇತರ ಕೆಲವು ಐಎಎಸ್ ಅಧಿಕಾರಿಗಳ ಕಣ್ಣು ಕೆಂಪಾಗಿಸಿದೆ. ಸರ್ಕಾರದ ಈ ನೀತಿಯ ವಿರುದ್ಧ ತಮ್ಮ ಮಧ್ಯೆ ಮಾತನಾಡಿಕೊಳ್ಳುವ ಈ ಅಧಿಕಾರಿಗಳು, ಬಹಿರಂಗವಾಗಿ ಅಸಮಾಧಾನ ವ್ಯಕ್ತಪಡಿಸಲು ತಯಾರಿಲ್ಲ.

ಪ್ರಜಾವಾಣಿ ವಿಶೇಷ

‘ಸರ್ಕಾರ ಬದಲಾದಾಗ ಅಧಿಕಾರಿಗಳ ಸ್ಥಾನಗಳಲ್ಲೂ ಬದಲಾಗುವುದು ಸಹಜ ಪ್ರಕ್ರಿಯೆ ಎಂಬಂತಾಗಿದೆ. ಕೆಲವರನ್ನು ವರ್ಷಗಳಿಂದ ಒಂದೇ ಹುದ್ದೆಯಲ್ಲಿ ಮುಂದುವರಿಸಿದರೆ, ಇನ್ನೂ ಕೆಲವರನ್ನು ಕೆಲವೇ ತಿಂಗಳಲ್ಲಿ ವರ್ಗಾವಣೆ ಮಾಡಲಾಗುತ್ತಿದೆ. ಜಾತಿ, ಆಯಕಟ್ಟಿನ ಹುದ್ದೆ, ‘ಆದಾಯ’ದ ಮೂಲ ಈ ಎಲ್ಲ ಅಂಶಗಳು ಅಧಿಕಾರಿಗಳ ವರ್ಗಾವಣೆಯಲ್ಲೂ ಮಹತ್ವದ ಪಾತ್ರ ವಹಿಸುತ್ತವೆ’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಅಧಿಕಾರಿಯೊಬ್ಬರು ಹೇಳಿದರು.

‘ಕೆಲವು ಅಧಿಕಾರಿಗಳು ಜಾತಿ ಬಲ, ಹಣ ಬಲದ ಮೂಲಕವೂ ಹುದ್ದೆಗಳನ್ನು ಗಿಟ್ಟಿಸಿಕೊಳ್ಳುತ್ತಾರೆ. ಐಎಎಸ್ ಅಧಿಕಾರಿಗಳ ವಲಯದಲ್ಲಿ ಉತ್ತರ ಭಾರತ, ತಮಿಳುನಾಡು, ಆಂಧ್ರಪ್ರದೇಶ ಮೂಲದವರ ಬಣ ಎಂಬ ಲಾಬಿಯೂ ಬಲವಾಗಿದೆ. ತಮ್ಮವರನ್ನು ಮಹತ್ವದ ಹುದ್ದೆಗಳಿಗೆ ನಿಯೋಜಿಸಿಕೊಳ್ಳುವ ವಿಚಾರದಲ್ಲಿ ಈ ‘ಬಣ’ಗಳು ಕೆಲಸ ಮಾಡುತ್ತವೆ. ಅವರ ಮಧ್ಯೆ, ಕೆಎಎಸ್‌ನಿಂದ ಐಎಎಸ್‌ಗೆ ಬಡ್ತಿ ಪಡೆದವರು ಸ್ಥಿತಿ ಕೇಳುವವರಿಲ್ಲ’ ಎಂದು ಮತ್ತೊಬ್ಬ ಅಧಿಕಾರಿಯೊಬ್ಬರು ಹೇಳಿದರು.

‘ಸಚಿವರು, ಶಾಸಕರು ತಮ್ಮ ತಾಳಕ್ಕೆ ಕುಣಿಯುವಂಥ ಅಧಿಕಾರಿಗಳನ್ನು ಹುದ್ದೆಗಳಿಗೆ, ಕ್ಷೇತ್ರಗಳಿಗೆ ನೇಮಿಸಿಕೊಳ್ಳುವ ಪರಿಪಾಟ ಹಿಂದಿನಿಂದಲೂ ಇದೆ. ಆದರೆ, ಇತ್ತೀಚೆಗೆ ಇದು ಹೆಚ್ಚಿದೆ’ ಎಂದು ಮತ್ತೊಬ್ಬ ಅಧಿಕಾರಿ ಹೇಳಿದರು.

ಇತ್ತೀಚೆಗೆ ನಿವೃತ್ತರಾದವರು: ಹಿರಿಯ ಐಎಎಸ್ ಅಧಿಕಾರಿಗಳಾಗಿದ್ದ ಐ.ಎಸ್. ಎನ್ ಪ್ರಸಾದ್, ಇ.ವಿ. ರಮಣರೆಡ್ಡಿ, ಕಪಿಲ್ ಮೋಹನ್, ಕುಮಾರ ನಾಯಕ್, ಎಂ.ಜಿ. ಹಿರೇಮಠ, ಶಿವಯೋಗಿ ಕಳಸದ.

ರಾಜ್ಯದಲ್ಲಿ 2–3 ಹುದ್ದೆ ಹೊಂದಿರುವ ಐಎಎಸ್ ಅಧಿಕಾರಿಗಳು

ಅಧಿಕಾರಿ	ಹೊಂದಿರುವ ಹುದ್ದೆ	ಹೆಚ್ಚುವರಿ
ರಾಕೇಶ್ ಸಿಂಗ್	ಎಸಿಎಸ್ ನಗರಾಭಿವೃದ್ಧಿ ಇಲಾಖೆ	ಎಸಿಎಸ್ ಜಲಸಂಪನ್ಮೂಲ ಇಲಾಖೆ, ಆಡಳಿತಾಧಿಕಾರಿ, ಬಿಬಿಎಂಪಿ, ಬಿಡಿಎ ಅಧ್ಯಕ್ಷ(ಪದನಿಮಿತ್ತ)
ರಜನೀಶ್ ಗೋಯಲ್	ಎಸಿಎಸ್ ಗೃಹ ಇಲಾಖೆ	ಸರ್ಕಾರದ ಎಸಿಎಸ್, ಸಿಎಂ ಎಸಿಎಸ್
ಗೌರವ್ ಗುಪ್ತ	ಎಸಿಎಸ್ ಇಂಧನ	ಎಂಡಿ ಕೆಪಿಸಿಎಲ್,ಎಸಿಎಸ್ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ. ಎಂ.ಡಿ. ಕ್ರೆಡೆಲ್
ಉಮಾ ಮಹದೇವನ್	ಎಸಿಎಸ್ ಪಂಚಾಯತ್‌ರಾಜ್ (ಆರ್‌ಡಿಪಿಆರ್)	ಎಸಿಎಸ್ ಕೌಶಲಾಭಿವೃದ್ಧಿ ಇಲಾಖೆ, ನಿರ್ದೇಶಕಿ, ಆರ್ಥಿಕ ನೀತಿ ಸಂಸ್ಥೆ, ಆರ್ಥಿಕ ಇಲಾಖೆ
ಜಿ.ಸಿ. ಪ್ರಕಾಶ್	ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ	ಕಾರ್ಯದರ್ಶಿ, ಆಹಾರ ಇಲಾಖೆ,ಪ್ರಾದೇಶಿಕ ಆಯುಕ್ತ, ಮೈಸೂರು ವಿಭಾಗ
ಕೆ. ಹರೀಶ್ ಕುಮಾರ್	ವಿಶೇಷ ಆಯುಕ್ತ (ಆಡಳಿತ) ಬಿಬಿಎಂಪಿ	ವಿಶೇಷ ಆಯುಕ್ತ (ಘನ ತ್ಯಾಜ್ಯ ನಿರ್ವಹಣೆ) ಬಿಬಿಎಂಪಿ,ಸಿಇಒ, ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ.
ಎನ್. ಜಯರಾಮ್	ಬಿಡಿಎ ಆಯುಕ್ತ	ಸಿಎಂ ಕಾರ್ಯದರ್ಶಿ, ವಾರ್ತಾ ಇಲಾಖೆ ಕಾರ್ಯದರ್ಶಿ
ಅಂಜುಂ ಪರ್ವೇಜ್	ಎಂಡಿ, ಬಿಎಂಆರ್‌ಸಿಎಲ್	ಪ್ರಧಾನ ಕಾರ್ಯದರ್ಶಿ, ಆರ್‌ಡಿಪಿಆರ್
ಜಾವೇದ್ ಅಖ್ತರ್	ಎಸಿಎಸ್ ಅರಣ್ಯ ಇಲಾಖೆ	ಎಸಿಎಸ್ ಆರೋಗ್ಯ (ವೈದ್ಯಕೀಯ ಶಿಕ್ಷಣ)
ಎನ್. ಮಂಜುನಾಥ ಪ್ರಸಾದ್	ಪ್ರಧಾನ ಕಾರ್ಯದರ್ಶಿ ಸಹಕಾರ ಇಲಾಖೆ	ಪ್ರಧಾನ ಕಾರ್ಯದರ್ಶಿ ಯುವ ಸಬಲೀಕರಣ, ಕ್ರೀಡಾ ಇಲಾಖೆ
ಅನಿಲ್‌ಕುಮಾರ್ ಟಿ.ಕೆ	ಪ್ರಧಾನ ಕಾರ್ಯದರ್ಶಿ,ಆರೋಗ್ಯ ಇಲಾಖೆ	ಪ್ರಧಾನ ಕಾರ್ಯದರ್ಶಿ ಪ್ರವಾಸೋದ್ಯಮ ಇಲಾಖೆ

ಮಾಹಿತಿ ಮೂಲ: ‘ನಿಯುಕ್ತಿ’ (ಡಿಪಿಎಆರ್– ಸರ್ವೀಸಸ್)

ಮುಂದಿನ ಸಿಎಸ್ ರಜನೀಶ್ ಗೋಯಲ್?

ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಅವರ ಅಧಿಕಾರ ಅವಧಿ ನ. 30ಕ್ಕೆ ಕೊನೆಯಾಗಲಿದೆ. ನ. 30 ಸರ್ಕಾರಿ ರಜಾ ದಿನ ಆಗಿರುವುದರಿಂದ 29ರಂದೇ ಅವರು ನಿವೃತ್ತರಾಗಲಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಗೃಹ ಇಲಾಖೆಯ ಎಸಿಎಸ್ ಆಗಿರುವ ರಜನೀಶ್ ಗೋಯಲ್ ಅವರು ಸೇವಾ ಜ್ಯೇಷ್ಠತೆ ಆಧಾರದಲ್ಲಿ ಈ ಹುದ್ದೆಗೆ ನಿಯೋಜನೆಗೊಳ್ಳುವುದು ಖಚಿತ. ಅವರ ಅಧಿಕಾರಾವಧಿ ಕೇವಲ ಏಳು ತಿಂಗಳು. ಗೋಯಲ್ ನಿವೃತ್ತಿಯಿಂದ ತೆರವಾದ ಹುದ್ದೆಗೆ ಅವರ ಪತ್ನಿ, ಸದ್ಯ ಅಭಿವೃದ್ಧಿ ಆಯುಕ್ತೆ ಆಗಿರುವ ಶಾಲಿನಿ ರಜನೀಶ್ ನೇಮಕಗೊಳ್ಳಲಿದ್ದಾರೆ. ಆ ಮೂಲಕ, ರಾಜ್ಯದ ಕಾರ್ಯಾಂಗದ ಅತ್ಯುನ್ನತ ಹುದ್ದೆಯನ್ನು ಪತಿಯ ನಂತರ ಪತ್ನಿ ವಹಿಸಿಕೊಳ್ಳುವುದು ಎರಡನೇ ಬಾರಿ ಆಗಲಿದೆ. 2000ರ ಡಿಸೆಂಬರ್‌ನಲ್ಲಿ ಬಿ.ಕೆ. ಭಟ್ಟಾಚಾರ್ಯ ಅವರ ನಂತರ ಅವರ ಪತ್ನಿ ಥೆರೇಸಾ ಭಟ್ಟಾಚಾರ್ಯ ಅವರು ಸಿಎಸ್ ಆಗಿದ್ದರು.

ಕೇಂದ್ರ ಸೇವೆಗೆ ‘ಗುಳೆ’

ತಮ್ಮ ಕೆಲಸಗಳ ಮೂಲಕವೇ ಜನರ ಮಧ್ಯೆ ಗುರುತಿಸಿಕೊಂಡ ಹಲವು ಐಎಎಸ್ ಅಧಿಕಾರಿಗಳು ಕೇಂದ್ರ ಸರ್ಕಾರದ ಸೇವೆಗೆ ತೆರಳಿದ್ದಾರೆ.

ಸುಬೋಧ್ ಯಾದವ್, ಹರ್ಷ ಗುಪ್ತಾ, ಅನಿಲ್ ಕುಮಾರ್ ಝಾ, ಅಜಯ್ ಸೇಠ್, ಅತುಲ್ ಕುಮಾರ್ ತಿವಾರಿ, ನಿಲಯ ಮಿತಾಶ್, ಅರವಿಂದ್ ಶ್ರೀವಾಸ್ತವ, ಎಂ. ಮಹೇಶ್ವರ ರಾವ್, ರಿತ್ವಿಕ್ ರಂಜನ್ ಪಾಂಡೆ, ಪಿ. ಹೇಮಲತಾ, ವಿ. ಪೊನ್ನುರಾಜ್, ದರ್ಪಣ್ ಜೈನ್, ಸಮೀರ್ ಶುಕ್ಲಾ, ಕೆ.ಜಿ. ಜಗದೀಶ್, ವಿಪುಲ್ ಬನ್ಸಾಲ್, ಬಗಾದಿ ಗೌತಮ್, ಎಸ್.ಎಸ್. ನಕುಲ್, ಕೆ.ಬಿ. ಶಿವಕುಮಾರ್, ಅಭಿರಾಮ್ ಜಿ. ಶಂಕರ್, ಅನಿರುದ್ಧ ಶ್ರವಣ್, ಚಾರುಲತಾ ಸೋಮಲ್ ಮುಂತಾದವರು ಕೇಂದ್ರದಲ್ಲಿ ವಿವಿಧ ಹುದ್ದೆಗಳಲ್ಲಿದ್ದಾರೆ. ಕೇಂದ್ರ ಸೇವೆಗೆ ತೆರಳಿದ ಕೆಲವರು ಮರಳಿ ರಾಜ್ಯ ಸೇವೆಗೆ ಒಲವು ತೋರಿಸುತ್ತಿಲ್ಲ ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

ಪೊಲೀಸರ ಮಧ್ಯಸ್ಥಿಕೆಯಲ್ಲಿ ಹೋರಾಟ ಅಂತ್ಯ

ಭುವನೇಶ್ವರಿ ನಗರ: ‘ದಲಿತ ಕೇರಿ’ ಎಂದು ಬಿಂಬಿಸಿದ್ದಕ್ಕೆ ಆಕ್ರೋಶ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿಯ ಹೆಗ್ಗೇರಿಯ ಭುವನೇಶ್ವರಿ ನಗರದಲ್ಲಿ ವಿವಿಧ ದಲಿತ ಸಂಘ ಸಂಸ್ಥೆಗಳ ಮಹಾಮಂಡಳದ ಸದಸ್ಯರು ಯಲ್ಲಪ್ಪ ಬಾಗಲಕೋಟಿ ಅವರೊಂದಿಗೆ ಚರ್ಚಿಸಿದರು

ಹುಬ್ಬಳ್ಳಿ: ಇಲ್ಲಿನ ಹೆಗ್ಗೇರಿಯ ಭುವನೇಶ್ವರಿ ನಗರದಲ್ಲಿ ಉಡುಪಿಯ ಪೇಜಾವರ ಮಠದ ವಿಶ್ವಪ್ರಸನ್ನತೀರ್ಥ ಶ್ರೀ ಈಚೆಗೆ ಪಾದಯಾತ್ರೆ ನಡೆಸಿದ್ದನ್ನು ಖಂಡಿಸಿ, ಆ ಸ್ಥಳದಲ್ಲಿ ಸೋಮವಾರ ಕೋಣದ ಗಂಜಲ ಹಾಕಿ ಶುದ್ಧೀಕರಿಸುವ ಹೋರಾಟ ಹಮ್ಮಿಕೊಂಡಿದ್ದ ವಿವಿಧ ದಲಿತ ಸಂಘ ಸಂಸ್ಥೆಗಳ ಮಹಾಮಂಡಳದ ಸದಸ್ಯರು ಪೊಲೀಸರ ಮಧ್ಯಸ್ಥಿಕೆಯಲ್ಲಿ ನಡೆದ ರಾಜಿ ಸಂಧಾನದ ನಂತರ ಹೋರಾಟ ಕೈಬಿಟ್ಟರು.

ಹೋರಾಟಕ್ಕೆ ಕರೆ ನೀಡಿದ್ದರಿಂದ ಭುವನೇಶ್ವರಿ ನಗರದಲ್ಲಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಸ್ವಾಮೀಜಿ ಅವರನ್ನು ತಮ್ಮ ಮನೆಗೆ ಆಹ್ವಾನಿಸಿದ್ದ ವಿಶ್ವ ಹಿಂದೂ ಪರಿಷತ್ ಮಹಾನಗರದ ಧರ್ಮಚಾರಿ ಸಂಪರ್ಕ ಪ್ರಮುಖ ಯಲ್ಲಪ್ಪ ಬಾಗಲಕೋಟಿ ಅವರೊಂದಿಗೆ ಮಹಾಮಂಡಳದ ಸದಸ್ಯರು ವಾಗ್ವಾದ ನಡೆಸಿದರು. ಈ ಸಂದರ್ಭದಲ್ಲಿ ಹಳೆ ಹುಬ್ಬಳ್ಳಿ ಠಾಣೆಯ ಇನ್‌ಸ್ಪೆಕ್ಟರ್ ಸುರೇಶ ಎಚ್.ಯಳ್ಳೂರ ಮಧ್ಯಪ್ರವೇಶಿಸಿ ಅವರ ಮನವೊಲಿಸಿದರು. ಬಳಿಕ ಮಹಾಮಂಡಳದ ಸದಸ್ಯರು ಹೋರಾಟ ಮೊಟಕುಗೊಳಿಸಿದರು.

ಈ ವೇಳೆ ಮಹಾಮಂಡಳದ ಅಧ್ಯಕ್ಷ ಗುರುನಾಥ ಉಳ್ಳಿಕಾಶಿ ಮಾತನಾಡಿ, ‘ಪೇಜಾವರ ಸ್ವಾಮೀಜಿ ಅ.12ರಂದು ವಿಶ್ವ ಹಿಂದೂ ಪರಿಷತ್ ಹುಬ್ಬಳ್ಳಿ ಮಹಾನಗರದ ಧರ್ಮಚಾರಿ ಸಂಪರ್ಕ ಪ್ರಮುಖ ಯಲ್ಲಪ್ಪ ಬಾಗಲಕೋಟಿ ಅವರ ಮನೆಗೆ ಭೇಟಿ ನೀಡಿದ್ದರು. ಅವರ ಮನೆ ಭುವನೇಶ್ವರ ನಗರದಲ್ಲಿದ್ದು, ಇದು ‘ದಲಿತರ ಕೇರಿ’ ಎಂದು ಎಲ್ಲಿಯೂ ನಮೂದಾಗಿಲ್ಲ. ಇಲ್ಲಿ ಎಲ್ಲ ಜಾತಿ, ಧರ್ಮದ ಜನರು ವಾಸವಾಗಿದ್ದಾರೆ. ಹೀಗಿರುವಾಗ ‘ದಲಿತ ಕೇರಿ’ ಎಂದು ಬಿಂಬಿಸಿ ಸ್ವಾಮೀಜಿ ಇಲ್ಲಿಗೆ ಭೇಟಿ ನೀಡುವ ಅಗತ್ಯ ಏನಿತ್ತು?’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಹೇಳಿಕೆ ಬದಲಿಸಿದ ಯಲ್ಲಪ್ಪ: ಪೇಜಾವರ ಶ್ರೀ ನಗರದ ಭೇಟಿ ಕುರಿತು ಅ.9ರಂದು ಪತ್ರಿಕಾಗೋಷ್ಠಿ ನಡೆಸಿದ್ದ ಅಖಿಲ ಭಾರತ ಮಾಧ್ವ ಮಹಾಮಂಡಲದವರು, ಭುವನೇಶ್ವರಿ ನಗರದ ‘ದಲಿತರ ಕೇರಿ’ಯಲ್ಲಿ ಶ್ರೀಗಳು ಪಾದಯಾತ್ರೆ ನಡೆಸಲಿದ್ದಾರೆ ಎಂದು ತಿಳಿಸಿದ್ದರು. ಮಾಧ್ಯಮಗಳಲ್ಲಿ ಇದು ಪ್ರಸಾರವಾದ ನಂತರವೂ ಸುಮ್ಮನಿದ್ದ ಯಲ್ಲಪ್ಪ ಬಾಗಲಕೋಟಿ, ದಲಿತ ಸಂಘ ಸಂಸ್ಥೆಗಳ ಮಹಾಮಂಡಳದವರು ಹೋರಾಟಕ್ಕೆ ಕರೆ ನೀಡಿದ ನಂತರ ತಮ್ಮ ಹೇಳಿಕೆ ಬದಲಿಸಿದ್ದಾರೆ.

‘ಪೇಜಾವರ ಶ್ರೀ ನಮ್ಮ ಮನೆಗೆ ಮತ್ತು ದೇವಸ್ಥಾನಕ್ಕೆ ಖಾಸಗಿ ಆಹ್ವಾನದ ಮೇರೆಗೆ ಭೇಟಿ ನೀಡಿದ್ದರು. ಮಾಧ್ಯಮಗಳಲ್ಲಿ ಭುವನೇಶ್ವರಿ ನಗರದ ಬದಲಾಗಿ ‘ದಲಿತ ಕೇರಿ’ ಎಂದು ಪ್ರಕಟವಾಗಿದ್ದು, ಇದರಿಂದ ಪರಿಶಿಷ್ಟ ಜಾತಿ ಸಮುದಾಯದಲ್ಲಿ ಅಸಮಾಧಾನ ಉಂಟಾಗಿದೆ. ದಲಿತ ಕೇರಿ ಎಂದು ತಪ್ಪಾಗಿ ಅರ್ಥಮಾಡಿಕೊಳ್ಳದೆ ‘ಭುವನೇಶ್ವರಿ ನಗರ’ ಎಂದು ಪರಿಗಣಿಸಿ ಮುಂದಿನ ಯಾವುದೇ ನಡೆಗೆ ಅವಕಾಶ ಕೊಡಬಾರದು’ ಎಂದು ವಿಶ್ವ ಹಿಂದೂ ಪರಿಷತ್ ಹಾಗೂ ಭುವನೇಶ್ವರಿ ಸೇವಾ ಸಂಘದ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ಪೋಕ್ಸೊ ಆರೋಪಿ ಜಾಮೀನು: ಮಾಹಿತಿ ಕಡ್ಡಾಯ

ಬೆಂಗಳೂರು: ‘ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ–2012) ಕಾಯ್ದೆ ಆರೋಪಿಗಳು ಜಾಮೀನು ಕೋರಿದ ಸಂದರ್ಭದಲ್ಲಿ ವಿಚಾರಣೆ ನಡೆಸುವಾಗ ಸಂತ್ರಸ್ತರು ಬದುಕುಳಿದಿದ್ದರೆ ಅವರು ಅಥವಾ ದೂರುದಾರರಿಗೆ ಕಡ್ಡಾಯವಾಗಿ ಮಾಹಿತಿ ನೀಡಬೇಕು’ ಎಂದು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಮಂಡ್ಯದ ಆರೋಪಿಯೊಬ್ಬರು ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿರುವ ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ನ್ಯಾಯಪೀಠ, ಅಪರಾಧ ಪ್ರಕ್ರಿಯಾ ಸಂಹಿತೆ–1973ರ ಕಲಂ 439(1ಎ) ಅಡಿ ವಿಚಾರಣಾ ನ್ಯಾಯಾಲಯಗಳಿಗೆ ನಿರ್ದೇಶನಗಳನ್ನು ನೀಡಿದೆ.

‘ಆರೋಪಿಯು ನಿಯಮಿತ ಅಥವಾ ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಿದರೆ ಆಗ ಕೋರ್ಟ್ ರಿಜಿಸ್ಟ್ರಿಯು ಸಂತ್ರಸ್ತರು ಅಥವಾ ದೂರುದಾರರಿಗೆ ಆ ಕುರಿತು ಮಾಹಿತಿ ನೀಡಬೇಕು. ವಿಚಾರಣಾ ದಿನಾಂಕದ ಬಗ್ಗೆ ಸಂತ್ರಸ್ತರು ಅಥವಾ ದೂರುದಾರರಿಗೆ ಕೋರ್ಟ್ ಮತ್ತು ಪ್ರಾಸಿಕ್ಯೂಷನ್ ಮಾಹಿತಿ ಒದಗಿಸಬೇಕು‘ ಎಂಬುದೂ ಸೇರಿದಂತೆ ಕೆಲವು ನಿರ್ದೇಶನ ನೀಡಿದೆ.

ಆರೋಪಿ ಅಥವಾ ಆರೋಪಿ ಪರ ವಕೀಲರು ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದಾಗ ಸಂತ್ರಸ್ತರು ಅಥವಾ ದೂರುದಾರರನ್ನು ಪ್ರತಿವಾದಿ ಮಾಡಿಲ್ಲ ಎಂದಾದರೆ ಅಂತಹ ಸಂದರ್ಭದಲ್ಲಿ ಕೋರ್ಟ್ ನೋಟಿಸ್ ತಲುಪಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆಯೂ ನ್ಯಾಯಪೀಠ ನಿರ್ದೇಶಿಸಿದೆ.

ಗಗನಯಾನ: ಪರೀಕ್ಷಾ ಉಡಾವಣೆ 21ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾನವ ಸಹಿತ ‘ಗಗನಯಾನ’ಕ್ಕೆ ಪೂರ್ವಭಾವಿಯಾಗಿ ನಡೆಯುವ ಸರಣಿ ಪರೀಕ್ಷಾ ಉಡಾವಣೆಗಳ ಪೈಕಿ ಮೊದಲ ಮಾನವರಹಿತ ಪರೀಕ್ಷಾ ವಾಹನದ ಉಡಾವಣೆ ಇದೇ 21 ರಂದು ಶ್ರೀಹರಿಕೋಟದಿಂದ ನಡೆಯಲಿದೆ.

ಅಂದು ಬೆಳಿಗ್ಗೆ 7ರಿಂದ 9ರ ಮಧ್ಯೆ ಈ ಉಡಾವಣೆ ನಡೆಯಲಿದೆ. ಈ ಪರೀಕ್ಷೆಯಲ್ಲಿ ಗಗನಯಾನಿಗಳು ಪಾರಾಗುವ ವ್ಯವಸ್ಥೆಯ(ಕ್ರೂ ಎಸ್ಕೇಪ್ ಸಿಸ್ಟಂ) ಪ್ರಾತ್ಯಕ್ಷಿಕೆಯೂ ಇರಲಿದೆ. ಈ ಮಾಹಿತಿಯನ್ನು ಭಾರತೀಯ ಬಾಹ್ಯಾಕಾಶ ವಿಜ್ಞಾನ ಸಂಸ್ಥೆಯು (ಇಸ್ರೊ) ‘ಎಕ್ಸ್’ ಮೂಲಕ ಹಂಚಿಕೊಂಡಿದೆ.

ಈ ಕುರಿತು ಮಾತನಾಡಿರುವ ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್, ಒಟ್ಟು ಮೂರು ಸರಣಿ ಪರೀಕ್ಷಾ ಉಡಾವಣೆಗಳು ನಡೆಯಲಿವೆ. ಇವುಗಳನ್ನು ಗಗನಯಾನ ಕಾರ್ಯಕ್ರಮದಡಿ ನಡೆಸಲಾಗುವುದು. ಗಗನಯಾನದ ಮೂಲಕ ಗಗನಯಾನಿಗಳನ್ನು ಭೂಮಿಯ 400 ಕಿ.ಮೀ ಕಕ್ಷೆಗೆ ಕಳುಹಿಸಿ ವಾಪಸ್ ಭೂಮಿಗೆ ಸುರಕ್ಷಿತವಾಗಿ ಕರೆತರಲಾಗುವುದು. ಈ ಮೂಲಕ ಮಾನವಸಹಿತ ಬಾಹ್ಯಾಕಾಶ ಯಾನದ ಸಾಮರ್ಥ್ಯವನ್ನು ಪ್ರದರ್ಶಿಸಲಾಗುವುದು ಎಂದು ಹೇಳಿದ್ದಾರೆ.

ಮಾನವ ಸಹಿತ ‘ಗಗನಯಾನ’ಕ್ಕೆ ಪೂರ್ವ ಭಾವಿಯಾಗಿ ನಡೆಯುವ ಸರಣಿ ಪರೀಕ್ಷಾ ಉಡಾವಣೆ ಗಳ ಮೊದಲ ಮಾನವರಹಿತ ಪರೀಕ್ಷಾ ವಾಹನ ಪಿಟಿಐ

ಮುಂದಿನ ವರ್ಷದ ಕೊನೆಯ ವೇಳೆಗೆ ಭಾರತೀಯ ಗಗನಯಾನಿಗಳನ್ನು ಬಾಹ್ಯಾಕಾಶ ನೌಕೆಯು ಹೊತ್ತೊಯ್ಯಲಿದೆ. ಇದಕ್ಕಾಗಿ ಗಗನಯಾನಿಗಳು ಕುಳಿತು ಪಯಣಿಸುವ ಕೋಶ ಅಥವಾ ‘ಕ್ರೂ ಮಾಡ್ಯೂಲ್’ನ ಪರೀಕ್ಷೆಯನ್ನು ಟಿವಿ–ಡಿ1 (ಟೆಸ್ಟ್ ವೆಹಿಕಲ್ ಡೆವಲಪ್‌ಮೆಂಟ್ ಫ್ಲೈಟ್)ಮೂಲಕ ನಡೆಸಲಾಗುವುದು ಎಂದು ಅವರು ವಿವರಿಸಿದರು.

ಪರೀಕ್ಷೆಯಲ್ಲಿ ಕ್ರೂ ಮಾಡ್ಯೂಲ್ ಅನ್ನು ಬಾಹ್ಯಾಕಾಶಕ್ಕೆ ಒಯ್ದು ಅದನ್ನು ವಾಪಸ್ ಭೂಮಿಗೆ ತರಲಾಗುವುದು. ಇದು ಬಂಗಾಳಕೊಲ್ಲಿಗೆ ಬಂದು ಇಳಿಯಲಿದೆ. ಅಲ್ಲಿಂದ ಕ್ರೂ ಮಾಡ್ಯೂಲ್ ಅನ್ನು ವಶಕ್ಕೆ ಪಡೆಯಲಾಗುತ್ತದೆ.

ಮಂಗಳವಾರ, ಅಕ್ಟೋಬರ್ 17, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 288 | ಪುಟ 20

● www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಪದೇ ಪದೇ ಸ್ಕ್ಯಾನಿಂಗ್, ಎಕ್ಸ್‌–ರೇಗಳನ್ನು ಮಾಡಿಸುವ ಮುನ್ನ ಯೋಚಿಸಿ

ಆಳ-ಅಗಲ
ಹಮಾಸ್–ಇಸ್ರೇಲ್ ಸಂಘರ್ಷ ಯುದ್ಧ ಮುಂದುವರಿದರೆ ಭಾರತಕ್ಕೂ ನಷ್ಟ

35 ಗ್ರಾಮ ಪಂಚಾಯಿತಿಗಳಲ್ಲಿ 'ಡಿಜಿಟಲ್ ಸಾಕ್ಷರತೆ' 5

'ಇಸ್ರೇಲ್ ಬಗ್ಗೆಯೇ ಮೋದಿಗೆ ಕಾಳಜಿ' 12

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
66,166 ▼	19,731 ▼	₹60,650 (ಬೆಂಗಳೂರು)	₹73,200 (ಬೆಂಗಳೂರು)	83.27 ▲

ಆದಾಯ ತೆರಿಗೆ ಅಧಿಕಾರಿಗಳ ಕಾರ್ಯಾಚರಣೆ ಅಂತ್ಯ ● ಅಧಿಕಾರಸ್ಥರ ಆಪ್ತರ ಮೇಲೆ ಕಣ್ಣು

ಐ.ಟಿ ದಾಳಿ: 'ಕೈ' ದಿಗಿಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯ ತೆರಿಗೆ (ಐ.ಟಿ) ಇಲಾಖೆ ಅಧಿಕಾರಿಗಳು ಕರ್ನಾಟಕವೂ ಸೇರಿದಂತೆ ನಾಲ್ಕು ರಾಜ್ಯಗಳಲ್ಲಿ ಸತತ ನಾಲ್ಕು ದಿನಗಳ ಕಾಲ ನಡೆಸಿರುವ ಕಾರ್ಯಾಚರಣೆಯು ಕಾಂಗ್ರೆಸ್ ಪಾಳೆಯದಲ್ಲಿ ದಿಗಿಲು ಹುಟ್ಟಿಸಿದೆ. ₹ 94 ಕೋಟಿ ನಗದು ವಶಕ್ಕೆ ಪಡೆದಿರುವ ಪ್ರಕರಣವು 'ಕೈ' ನಾಯಕರನ್ನು ಇಕ್ಕಟ್ಟಿಗೆ ಸಿಲುಕಿಸುವ ಸಾಧ್ಯತೆ ದಟ್ಟವಾಗುತ್ತಿದೆ.

ರಾಜ್ಯದ ವಿವಿಧೆಡೆ, ತೆಲಂಗಾಣ, ಆಂಧ್ರಪ್ರದೇಶ ಮತ್ತು ದೆಹಲಿಯಲ್ಲಿ ಐ.ಟಿ ಅಧಿಕಾರಿಗಳು ಗುರುವಾರ ಆರಂಭಿಸಿದ್ದ ಕಾರ್ಯಾಚರಣೆ ಭಾನುವಾರ ಅಂತ್ಯಗೊಂಡಿದೆ. ಭಾರಿ ಪ್ರಮಾಣದ ದಾಖಲೆ ಇಲ್ಲದ ನಗದು ದಾಸ್ತಾನು ಮಾಡಿದ್ದ ಗುತ್ತಿಗೆದಾರ ಪ್ರದೀಪ್, ರಿಯಲ್ ಎಸ್ಟೇಟ್ ಉದ್ಯಮಿ ಸಂತೋಷ್ ಕೃಷ್ಣಪ್ಪ, ಅವರ ನಿಕಟವರ್ತಿಯಾಗಿರುವ ವಾಸ್ತುಶಿಲ್ಪಿಯೊಬ್ಬರ ಜತೆಗೆ ನಂಟು ಹೊಂದಿರುವವರ ಪತ್ತೆಗೆ ಆದಾಯ ತೆರಿಗೆ ಅಧಿಕಾರಿಗಳು ತನಿಖೆ ಚುರುಕುಗೊಳಿಸಿದ್ದಾರೆ.

ಐ.ಟಿ ಅಧಿಕಾರಿಗಳ ಕಾರ್ಯಾಚರಣೆಯ ಬೆನ್ನಲ್ಲೇ ಸೋಮವಾರ ಬೆಳಿಗ್ಗೆ ಬೆಂಗಳೂರಿಗೆ ದೌಡಾಯಿಸಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಜತೆ ರಹಸ್ಯ ಸಭೆ ನಡೆಸಿದರು. ಪಕ್ಷದ ಇತರ ಮುಖಂಡರನ್ನು ಹೊರಗಿಟ್ಟು ಗೋಪ್ಯ ಸಭೆ ನಡೆಸಿದ ನಾಯಕರು, ಐ.ಟಿ ಅಧಿಕಾರಿಗಳು ನಾಲ್ಕು ದಿನಗಳಿಂದ ನಡೆಸಿದ ಕಾರ್ಯಾಚರಣೆ ಕುರಿತು ಸಮಾಲೋಚನೆ ನಡೆಸಿದ್ದಾರೆ.

ಮಲ್ಲಿಕಾರ್ಜುನ ಖರ್ಗೆ ಮತ್ತು ವೇಣುಗೋಪಾಲ್ ಅವರ ಬೆಂಗಳೂರು ಭೇಟಿ ನಿಗದಿಯಾಗಿರಲಿಲ್ಲ. ಇಬ್ಬರೂ ದಿಢೀರ್ ರಾಜಧಾನಿಗೆ ದೌಡಾಯಿಸಿರುವುದಕ್ಕೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳ ದಾಳಿಯೇ ಕಾರಣ. ನಗದು ಪತ್ತೆ ಪ್ರಕರಣವನ್ನು ರಾಜ್ಯದ ಸರ್ಕಾರದ ಪ್ರಮುಖರಿಗೆ ತಳುಕು ಹಾಕುವ ಪ್ರಯತ್ನ ನಡೆದಲ್ಲಿ ಅದನ್ನು ಎದುರಿಸುವ ಕಾರ್ಯತಂತ್ರದ ಕುರಿತು ಚರ್ಚಿಸಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.

ರಾಜ್ಯ ಗುತ್ತಿಗೆದಾರರ ಸಂಘದ ಉಪಾಧ್ಯಕ್ಷ ಅಂಬಿಕಾಪತಿ ಅವರ ಮಗ ಪ್ರದೀಪ್ ಮನೆಯಲ್ಲಿ ₹42 ಕೋಟಿ ನಗದು ಪತ್ತೆಯಾಗಿತ್ತು. ಗುತ್ತಿಗೆದಾರ ಸಂತೋಷ್ ಕೃಷ್ಣಪ್ಪ ಮನೆಯಲ್ಲಿ ₹45 ಕೋಟಿ ಸಿಕ್ಕಿದೆ. ಇತರ ಕೆಲವರ ಮನೆಗಳಲ್ಲಿ ₹7 ಕೋಟಿ ಸಿಕ್ಕಿದೆ. ರಾಜ್ಯದ ಕೆಲವು ಪ್ರಭಾವಿ ರಾಜಕಾರಣಿಗಳ ನಿಕಟವರ್ತಿಗಳೇ ಈ ಇಬ್ಬರ ಮನೆಗಳಲ್ಲಿ ನಗದು ಇಟ್ಟಿದ್ದರು ಎಂಬ ಸಂಶಯ ಆದಾಯ ತೆರಿಗೆ ಅಧಿಕಾರಿಗಳಿಗೆ ಇದೆ. ಕೆಲವರಿಗೆ ಈಗಾಗಲೇ ನೋಟಿಸ್ ಜಾರಿ ಮಾಡಲಾಗಿದೆ.

ಮಲ್ಲಿಕಾರ್ಜುನ ಖರ್ಗೆ ನಿವಾಸಕ್ಕೆ ಬಂದ ಕೆ.ಸಿ. ವೇಣುಗೋಪಾಲ್ ಮತ್ತು ಡಿ.ಕೆ. ಶಿವಕುಮಾರ್

ನಕಲಿ ಸ್ವಾಮಿಗೆ ತಕ್ಕ ಉತ್ತರ: ಡಿಕೆಶಿ

'ಯಾರ್‍ಯಾರಿಗೆ ಏನೇನು ಉತ್ತರ ಕೊಡಬೇಕೋ ಖಂಡಿತ ಕೊಡುತ್ತೇನೆ. ಹೈ ವೋಲ್ಟೇಜ್‌ಗೂ ಕೊಡುತ್ತೇನೆ, ಲೋ ವೋಲ್ಟೇಜ್‌ಗೂ ಕೊಡುತ್ತೇನೆ. ನಕಲಿಗಳಿಗೂ ಕೊಡುತ್ತೇನೆ, ಲೂಟಿಗಳಿಗೂ ಕೊಡುತ್ತೇನೆ, ಎಲ್ಲರಿಗೂ ಕೊಡುತ್ತೇನೆ. ಸ್ವಲ್ಪ ಕಾಯಿರಿ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಿಡಿಮಿಡಿಗೊಂಡರು.

ಮಲ್ಲಿಕಾರ್ಜುನ ಖರ್ಗೆ ಮತ್ತು ಕೆ.ಸಿ. ವೇಣುಗೋಪಾಲ್ ಜತೆಗಿನ ಸಭೆಯ ಬಳಿಕ ಸಿಟ್ಟಿನಿಂದಲೇ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ನಾಯಕರು ಮತ್ತು ಸಚಿವರಿಗೆ ಕಾಂಗ್ರೆಸ್ ಹೈಕಮಾಂಡ್ ಹಣ ಸಂಗ್ರಹಿಸುವ ಗುರಿ ನೀಡಿದೆ' ಎಂಬ ಬಿಜೆಪಿ, ಜೆಡಿಎಸ್ ನಾಯಕರ ಆರೋಪಕ್ಕೆ ಸಿಟ್ಟಿನಿಂದಲೇ ಪ್ರತಿಕ್ರಿಯಿಸಿದರು. 'ನಾನು ಹೇಡಿ ಅಲ್ಲ. ಹೆದರಿ ಎಲ್ಲಿಯೂ ಓಡಿ ಹೋಗಲ್ಲ. ಮಾಜಿ ಮುಖ್ಯಮಂತ್ರಿ, ನಕಲಿ ಸ್ವಾಮಿ, ಬ್ಲ್ಯಾಕ್‌ಮೇಲರ್, ಲೂಟಿ ರವಿ ಎಲ್ಲರಿಗೂ ತಕ್ಕ ಉತ್ತರ ಕೊಡುತ್ತೇನೆ. ಅವರದೆಲ್ಲ ಬಿಚ್ಚಿಡುತ್ತೇನೆ' ಎಂದರು.

'ಅವರಿಗೆ (ಬಿಜೆಪಿ, ಜೆಡಿಎಸ್) ಆದಾಯ ತೆರಿಗೆ ಇಲಾಖೆಯ ಪ್ರಕ್ರಿಯೆ ಗೊತ್ತಿಲ್ಲ. ಅವರು ಏಜೆಂಟರಂತೆ ಮಾತನಾಡುತ್ತಿದ್ದಾರೆ. ಜವಾಬ್ದಾರಿಯುತ ಸ್ಥಾನದಲ್ಲಿರುವ ನಾನು ಅವರಂತೆ ಮಾತನಾಡಲು ಸಾಧ್ಯವಿಲ್ಲ' ಎಂದು ಹೇಳಿದರು.

₹ 102 ಕೋಟಿ ಮೌಲ್ಯದ ಆಸ್ತಿ ಜಪ್ತಿ

ಬೆಂಗಳೂರು: ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ ಮತ್ತು ದೆಹಲಿಯ 55 ಸ್ಥಳಗಳ ಮೇಲೆ ಆದಾಯ ತೆರಿಗೆ (ಐ.ಟಿ) ಇಲಾಖೆ ಅಧಿಕಾರಿಗಳು ದಾಳಿಮಾಡಿ, ನಾಲ್ಕು ದಿನಗಳ ಕಾಲ ನಡೆಸಿದ ಶೋಧದಲ್ಲಿ ₹ 94 ಕೋಟಿ ನಗದು ಸೇರಿದಂತೆ ₹ 102 ಕೋಟಿ ಮೌಲ್ಯದ ಆಸ್ತಿಗಳನ್ನು ಜಪ್ತಿ ಮಾಡಲಾಗಿದೆ.

ಗುರುವಾರ ಬೆಳಿಗ್ಗೆಯಿಂದ ಆರಂಭವಾಗಿದ್ದ ಕಾರ್ಯಾಚರಣೆ ಭಾನುವಾರ ಪೂರ್ಣಗೊಂಡಿದೆ. ಈ ಅವಧಿಯಲ್ಲಿ ಗುತ್ತಿಗೆದಾರರು, ಅವರ ಸಹಚರರು ಮತ್ತು ಉದ್ಯಮಿಗಳಿಗೆ ಸೇರಿದ ಸ್ಥಳಗಳಲ್ಲಿ ಶೋಧ ನಡೆಸಲಾಗಿದೆ ಎಂದು ಕೇಂದ್ರೀಯ ನೇರ ತೆರಿಗೆ ಮಂಡಳಿ (ಸಿಬಿಡಿಟಿ) ಪ್ರಕಟಣೆ ತಿಳಿಸಿದೆ.

₹ 8 ಕೋಟಿ ಮೌಲ್ಯದ ಚಿನ್ನ ಹಾಗೂ ವಜ್ರದ ಆಭರಣಗಳು ಹಾಗೂ ವಿದೇಶಿ ನಿರ್ಮಿತ 30 ದುಬಾರಿ ಬೆಲೆಯ ಕೈ ಗಡಿಯಾರಗಳು ವಶಪಡಿಸಿಕೊಂಡ ಆಸ್ತಿಗಳಲ್ಲಿ ಸೇರಿವೆ.

6ನೇ ಪುಟ ನೋಡಿ

ಸಿಕ್ಕಿದ್ದು ಎಸ್‌.ಎಸ್‌.ಟಿ., ವೈ.ಎಸ್‌.ಟಿ ಹಣ: ಕುಮಾರಸ್ವಾಮಿ ಆರೋಪ

ಮೈಸೂರು: 'ಈಚೆಗೆ ನಡೆದ ಐಟಿ ದಾಳಿ ವೇಳೆ ಮೊದಲ ದಿನ ಸಿಕ್ಕಿದ್ದು ಎಸ್‌ಎಸ್‌ಟಿ ಹಾಗೂ 2ನೇ ದಿನದ್ದು ವೈಎಸ್‌ಟಿ ಹಣ. ರಾಜ್ಯದಲ್ಲಿ ಜಿಎಸ್‌ಟಿಗಿಂತಲೂ ಈ ಟ್ಯಾಕ್ಸ್‌ಗಳ ಕಲೆಕ್ಷನ್ ಜೋರಾಗಿ ನಡೆಯುತ್ತಿದೆ. ಆ ಹಣಕ್ಕೆ ಮೈಸೂರಿನ ನಂಟಿದೆಯಾ ಎಂಬುದೂ ತನಿಖೆಯಾಗಲಿ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಆಗ್ರಹಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಹಣ ಸಿಕ್ಕವರು ದೊಡ್ಡ ಗುತ್ತಿಗೆದಾರರೇನಲ್ಲ. ಗುತ್ತಿಗೆದಾರನಿಗೂ -ವಾಸ್ತುಶಿಲ್ಪಿಗೂ ಏನು ಸಂಬಂಧ? ಮುಖ್ಯಮಂತ್ರಿಯವರ ಬೆಂಗಳೂರಿನ ಮನೆ ನವೀಕರಿಸುತ್ತಿರುವವರು ಯಾರು? ಅವರ ಮೈಸೂರಿನ ಮನೆಯ ವಾಸ್ತುಶಿಲ್ಪದ ಕೆಲಸ ಮಾಡುತ್ತಿರುವವರು. ಈ ವಾಸ್ತುಶಿಲ್ಪಿ ಯಾರೊಂದಿಗೆ ಹತ್ತಿರದಲ್ಲಿದ್ದಾರೆ? ಇದೆಲ್ಲವೂ ತನಿಖೆಯಾಗಬೇಕು. ಆಗ ಎಲ್ಲವೂ ಬಯಲಾಗುತ್ತದೆ' ಎಂದರು.

ಕೇಳಿದ್ದರೆ ಇನ್ನೆಷ್ಟು ಸಂಗ್ರಹಿಸುತ್ತಿದ್ದರು?: 'ಪಂಚ ರಾಜ್ಯಗಳ ಚುನಾವಣೆಗಾಗಿ ಹೈಕಮಾಂಡ್ ಹಣ ಕೇಳಿಲ್ಲವೆನ್ನುತ್ತಾರೆ. ಕೇಳದೆಯೇ ಇಷ್ಟೊಂದು ಕಲೆಕ್ಷನ್ ಮಾಡುತ್ತಿದ್ದಾರೆ, ಕೇಳಿದ್ದರೆ ಇನ್ನೆಷ್ಟು ಕಲೆಕ್ಷನ್ ಮಾಡುತ್ತಿದ್ದರು. ನಾನು ಸತ್ಯ ಹರಿಶ್ಚಂದ್ರ, ಸಿದ್ಧಿ ಪುರುಷ ಎಂದು ಹೇಳಿಕೊಳ್ಳುವ ಮುಖ್ಯಮಂತ್ರಿ ಐ.ಟಿ ದಾಳಿ ಬಗ್ಗೆ ಸರಿಯಾಗಿ ತನಿಖೆ ಮಾಡಿಸಲಿ. ಆಗ ಅವರ ಬಣ್ಣ ಬಯಲಾಗುತ್ತದೆ' ಎಂದರು. 'ಇವರು ತನಿಖೆ ನಡೆಸಿದರೆ ಏನಾಗುತ್ತದೆಂದೂ ಗೊತ್ತು. ರಾಜ್ಯಪಾಲರಿಗೆ ಕೃಷಿ ಅಧಿಕಾರಿಗಳ ಪತ್ರ ಪ್ರಕರಣ, ನಾಗಮಂಗಲ ಬಸ್ ಕಂಡಕ್ಟರ್ ವಿಷ ಕುಡಿದ ಪ್ರಕರಣದ ತನಿಖೆ ಏನಾಯಿತು? ಎಲ್ಲೆಲ್ಲಿ ಯಾರ್‍ಯಾರ ಜೊತೆ ಹೊಂದಾಣಿಕೆ ಮಾಡಿಕೊಳ್ಳಿದ್ದಾರೆ ಎನ್ನುವುದು ಗೊತ್ತಿದೆ' ಎಂದು ಹೇಳಿದರು.

6ನೇ ಪುಟ ನೋಡಿ

ದೇಸಿ ಸಾಹಸಿ ಮೈಸೂರಿನ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ದಸರಾ ನಾಡಕುಸ್ತಿಗಾಗಿ ನಿರ್ಮಿಸಿರುವ ಕುಸ್ತಿ ಅಖಾಡದಲ್ಲಿ ಸೋಮವಾರ ಬೆಳಗಾವಿಯ ಉಮೇಶ ಕುರಿ ಅವರು 200 ಕೆ.ಜಿ ತೂಕದ ಮೂಟೆಯಿದ್ದ ಗಾಡಿಯನ್ನು ಎತ್ತಿ, ಚಕ್ರ ಜೋಡಿಸಿ ಸಾಹಸ ಪ್ರದರ್ಶಿಸಿದರು

ಪ್ರಜಾವಾಣಿ ಚಿತ್ರ: ಅನೂಪ್ ರಾಘ್ ಟಿ.

26 ವಾರಗಳ ಗರ್ಭಪಾತಕ್ಕೆ ಸುಪ್ರೀಂ ಕೋರ್ಟ್ ನಕಾರ

ನವದೆಹಲಿ (ಪಿಟಿಐ): ಇಪ್ಪತ್ತಾರು ವಾರಗಳು ಪೂರ್ಣಗೊಂಡಿರುವ ಗರ್ಭಿಣಿಯ ಗರ್ಭಪಾತಕ್ಕೆ ಅನುಮತಿ ನೀಡಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ವೈದ್ಯಕೀಯ ವರದಿ ಪ್ರಕಾರ ಭ್ರೂಣಕ್ಕೆ 26 ವಾರ ಹಾಗೂ ಐದು ದಿನಗಳು ತುಂಬಿವೆ. ಭ್ರೂಣದಿಂದ ತಾಯಿಯ ಜೀವಕ್ಕೆ ಅಪಾಯವಿಲ್ಲ. ಭ್ರೂಣದ ಅಂಗಾಂಗಗಳ ಅಸಹಜ ಬೆಳವಣಿಗೆ ಇರುವುದು ಕೂಡ ಕಂಡುಬಂದಿಲ್ಲ ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರನ್ನು ಒಳಗೊಂಡ ತ್ರಿಸದಸ್ಯಪೀಠ ಸೋಮವಾರ ಹೇಳಿದೆ.

ಏನಿದು ಪ್ರಕರಣ?: 'ಈಗಾಗಲೇ, ನನಗೆ ಇಬ್ಬರು ಮಕ್ಕಳಿದ್ದಾರೆ. ಖಿನ್ನತೆ ಹಾಗೂ ಇತರ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿದ್ದೇನೆ. ಹಾಗಾಗಿ, ಮಕ್ಕಳನ್ನು ನೋಡಿಕೊಳ್ಳಲು ಕಷ್ಟವಾಗುತ್ತದೆ. ಮೂರನೆಯ ಮಗುವಿನ ಜನನವಾದರೆ ಉಳಿದ ಮಕ್ಕಳ ಪಾಲನೆಯು ಕಷ್ಟವಾಗುತ್ತದೆ. ಹಾಗಾಗಿ, ಗರ್ಭಪಾತಕ್ಕೆ ಅನುಮತಿ ನೀಡಬೇಕು' ಎಂದು ಕೋರಿ 27 ವರ್ಷದ ಮಹಿಳೆಯು, ಸುಪ್ರೀಂ ಕೋರ್ಟ್‌ನ ಮೊರೆ ಹೋಗಿದ್ದರು.

ಈ ಅರ್ಜಿಯ ವಿಚಾರಣೆ ನಡೆಸಿದ್ದ ನ್ಯಾಯಾಲಯವು, ಆಕೆಯನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಿ ವರದಿ ಸಲ್ಲಿಸುವಂತೆ ನವದೆಹಲಿಯ ಏಮ್ಸ್‌ನ ವೈದ್ಯರ ತಂಡಕ್ಕೆ ಸೂಚಿಸಿತ್ತು.

5ನೇ ಪುಟ ನೋಡಿ

ಕಾಯ್ದೆ ಏನು ಹೇಳುತ್ತದೆ?

ವೈದ್ಯಕೀಯ ಗರ್ಭಪಾತ ಕಾಯ್ದೆಯಡಿ ಅತ್ಯಾಚಾರ ಸೇರಿದಂತೆ ವಿಶೇಷ ಪ್ರಕರಣಗಳಲ್ಲಿ ಗರ್ಭಪಾತ ಮಾಡಿಸಬಹುದಾದ ಗರ್ಭಾವಸ್ಥೆಯ ಗರಿಷ್ಠ ಕಾಲಮಿತಿಯನ್ನು 24 ವಾರಗಳಿಗೆ ನಿಗದಿಪಡಿಸಲಾಗಿದೆ.

ಒಳ ಪುಟಗಳು

ದಸರಾ ಕವಿಗೋಷ್ಠಿ: ಕವಿಗಳ ಆಯ್ಕೆಗೆ 'ಅಪಸ್ವರ' 6

ಚಿನಕುರಳಿ

ಪ್ರಕಾಶ್ ಶೆಟ್ಟಿ



ಸಿಕೆಸಿ ಗ್ರೂಪ್

155 ವರ್ಷಗಳು

ಈ ದಸರಾ ಹಬ್ಬವು ನಿಮಗೆ ಜ್ಞಾನ, ಶಕ್ತಿ ಮತ್ತು ಸಂತೋಷವನ್ನು ದಯಪಾಲಿಸಲಿ.
ದುಷ್ಟ ಶಕ್ತಿ ಕಾರ್ಮೋಡ ಸರಿದು ಬೆಳಕು ತುಂಬಲಿ.

ಪರಿಚಯಿಸಲಾಗುತ್ತಿದೆ
ಪಂಚ ಶಕ್ತಿ ಸಂಯುಕ್ತ©

ಈ ವರ್ಷದ ನವರಾತ್ರಿ ಹಬ್ಬದ ಸಂಭ್ರಮವನ್ನು ಇನ್ನಷ್ಟು ಹೆಚ್ಚಿಸಲು, ಆದಿಶಕ್ತಿ ಲಲಿತಾಂಬಿಕೆಯೊಂದಿಗೆ ತನ್ನ ನಾಲ್ಕು ಮಂತ್ರಿಣಿಯರ ಸೈನ್ಯದೊಡನೆ ಸನ್ನದ್ಧಳಾಗಿರುವ ಮನಮೋಹಕ ಪ್ರತಿಮೆಯ ರೂಪದಲ್ಲಿ ಸಿದ್ಧರಾಗಿದ್ದಾರೆ. ಈ ಪಂಚ ಶಕ್ತಿ ಸಂಯುಕ್ತ ಪ್ರತಿಮೆಯನ್ನು 92.5% ಪರಿಶುದ್ಧ ಬೆಳ್ಳಿಯಿಂದ ರೂಪಿಸಿ, ಚಿನ್ನದ ಲೇಪನ ಮಾಡಲಾಗಿದೆ.

ಈ ಪ್ರತಿಮೆಯಲ್ಲಿರುವ ಪರಮ ದೇವತೆ ಲಲಿತಾಂಬಿಕೆಯ ಸುತ್ತಲೂ ಅಶ್ವಾರೂಢ ದೇವಿ, ಸಂಪತ್ಕರಿ ದೇವಿ, ಶ್ಯಾಮಲ ದೇವಿ ಮತ್ತು ವರಾಹಿ ದೇವಿ ಆಸೀನರಾಗಿರುವ 5 ಅತ್ಯಂತ ಸುಂದರ ಮೂರ್ತಿಗಳು ಅಡಕಗೊಂಡಿವೆ.

ಆಕರ್ಷಕವಾಗಿ ಕುಸುರಿ ಕೆತ್ತನೆಯಿಂದ ರೂಪಿಸಲಾಗಿರುವ ಈ ಪ್ರತಿಮೆಯನ್ನು ನಿಮ್ಮದಾಗಿಸಿಕೊಳ್ಳಿ ಮತ್ತು ಅನಂತ ಜ್ಞಾನ, ಆಗರ್ಭ ಸಿರಿ, ಸಂಪತ್ತು ಹಾಗೂ ಶಾಂತಿ ನೆಮ್ಮದಿಗಳನ್ನು ಈ ಶಕ್ತಿಶಾಲಿ ದೇವತೆಗಳು ದಯಪಾಲಿಸುವ ಮೂಲಕ ಆಶೀರ್ವಾದ ನೀಡುವಂತಾಗಲಿ.

ಸೀಮಿತ ಆವೃತ್ತಿ

ಸಾಮಾನ್ಯ ದರ : Rs.~~82,000/-~~*
ವಿಶೇಷ ದರ : 77,000/- ONWARDS*
(*ಈ ಕೊಡುಗೆ ಅಕ್ಟೋಬರ್ 31, 2023 ರವರೆಗೆ ಲಭ್ಯ)

ಆನ್‌ಲೈನ್ ಖರೀದಿಗಾಗಿ:
www.ckcjewellers.com/Pancha-Shakti-Samyukta

ಖರೀದಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ

ಸಿ. ಕೃಷ್ಣಯ್ಯ ಚೆಟ್ಟಿ™ ಗ್ರೂಪ್ ಆಫ್ ಜ್ಯುವೆಲರ್ಸ್

ಬೆಂಗಳೂರಿನಾದ್ಯಂತ 5 ಬೃಹತ್ ಶೋರೂಮ್‌ಗಳು ಮತ್ತು ಬೊಟೀಕ್‌ಗಳು: ಕಮರ್ಷಿಯಲ್ ಸ್ಟ್ರೀಟ್ • ಮೇನ್ ಗಾರ್ಡ್ ಕ್ರಾಸ್ ರೋಡ್ • ಜಯನಗರ • ಮಲ್ಲೇಶ್ವರಂ • ಫೀನಿಕ್ಸ್ ಮಾರ್ಕೆಟ್ ಸಿಟಿ
Dedicated relationship manager: +91 95131 31869 | Tel: 080-4000 1869 / 4100 1869 | www.ckcjewellers.com

*ಷರತ್ತು ಮತ್ತು ನಿಬಂಧನೆಗಳು ಅನ್ವಯ. ಎಲ್ಲಾ ಟ್ರೇಡ್‌ಮಾರ್ಕ್ಸ್ ಹಾಗೂ ಲೋಗೋಗಳು ಸಂಬಂಧಿತ ಸಂಸ್ಥೆಯದ್ದಾಗಿರುತ್ತವೆ ಮತ್ತು ಇವನ್ನು ದುರುಪಯೋಗ ಮಾಡಿಕೊಳ್ಳುವುದನ್ನು ನಿರ್ಬಂಧಿಸಲಾಗಿದೆ. | ಸಿಕೆಸಿ ಸಮೂಹ ಕಂಪನಿಗಳು C. KRISHNIAH CHETTY & SONS™ C. KRISHNIAH CHETTY JEWELLERS® THE 1869 GUILD C. Krishniah Chetty & Sons C. KRISHNIAH CHETTY CHARITABLE TRUST

*ಎಚ್ಚರಿಕೆ ಸೂಚನೆ – ಸಾರ್ವಜನಿಕ ಹಿತಾಸಕ್ತಿಯಲ್ಲಿ: * ಪ್ರಸ್ತುತ ನಮ್ಮ ಕಂಪನಿಯ ನಿರ್ದೇಶಕರು ಆಗಿರುವ ಶ್ರೀ ಸಿ. ಗಣೇಶ್ ನಾರಾಯಣ್ ಮತ್ತು ಅವರ ಪತ್ನಿಯೊಂದಿಗೆ ನಡೆಸುತ್ತಿರುವ ದೀಪಾಲಿ ಕಂ. ಪ್ರೈ. ಲಿ., ಎಂಬ ಕಂಪನಿಯ ಹೆಸರನ್ನು ಮೋಸತನದಿಂದ ನಮ್ಮ ಹೆಸರಿನಂತೆಯೇ ಬದಲಾಯಿಸಿ ನಮಗೆ ಸಂಬಂಧವಿಲ್ಲದ ಒಂದು ವ್ಯಾಪಾರ ಸಂಸ್ಥೆಯನ್ನು ಆರಂಭ ಮಾಡಿರುತ್ತಾರೆ. ಈ ನೂತನ ಅನಧಿಕೃತ ಮಳಿಗೆಯು ಟಚ್‌ಸ್ಟೋನ್ (ನಮ್ಮ ಪ್ರಮುಖ ಶೋರೂಮ್‌ನ ಪಕ್ಕ) ಎಡಭಾಗದಲ್ಲಿ ತೆರೆಯಲಾಗಿದೆ. ಈ ಸಂಸ್ಥೆಯು, ನ್ಯಾಯಾಲಯದ ಆದೇಶಗಳ ಉಲ್ಲಂಘನೆಯ ಅಡಿಯಲ್ಲಿ ನಿರ್ಬಂಧಗಳಿಗೆ ಒಳಪಟ್ಟಿರುತ್ತದೆ. ಆದ್ದರಿಂದ, ನಮ್ಮ ಎಲ್ಲಾ ಗ್ರಾಹಕರಿಗೆ/ಸಾರ್ವಜನಿಕರಿಗೆ ತಿಳಿಸುವ ಎಚ್ಚರಿಕೆ ಸೂಚನೆ ಏನೆಂದರೆ, ದಯವಿಟ್ಟು ಮತ್ತೊಂದು ಅಧಿಕೃತ ಸಿ. ಕೃಷ್ಣಯ್ಯ ಚೆಟ್ಟಿ ಶೋರೂಮ್ ಇದೆಯೆಂಬ ತಪ್ಪು ಕಲ್ಪನೆಗೆ ಒಳಗಾಗದಿರಿ. ವಾಸ್ತವವಾಗಿ ಅದು ಸಿಕೆಸಿ ಹೆಸರು ಅಥವಾ ಸಿಕೆಸಿ ಗ್ರೂಪ್ ಲೋಗೋ ಬಳಸಿಕೊಳ್ಳಲು ಅಧಿಕೃತ ಸಂಸ್ಥೆಯಲ್ಲ. ವಿಷಯಗಳು ನ್ಯಾಯಾಲಯಗಳಲ್ಲಿ ತೀವ್ರ ಆದ್ಯತೆಯ ಮೇರೆಗಿನ ವಿಚಾರಣೆಗೆ ಬಾಕಿ ಇರುತ್ತವೆ.
ಗಮನಿಸಿ: *ಒಂದು ವೇಳೆ, ಕಾನೂನಿನ ಪ್ರಕಾರ ಅವರ ವ್ಯವಹಾರ ಸ್ಥಗಿತವಾದಲ್ಲಿ, ಅವರಿಂದ ಮಾರಾಟ ಮಾಡಲಾಗಿರುವ ಉತ್ಪನ್ನಗಳನ್ನು (ಅವರ ಸಂಘರ್ಷಮಯ ವ್ಯಾಪಾರ ಆರಂಭವಾದ ದಿನಾಂಕ 15.03.2023 ರಿಂದ), ನಮ್ಮ ಸಿಕೆಸಿ ನಿಯಮಗಳ ಅಡಿಯಲ್ಲಿ ಮರು–ಖರೀದಿಗೆ/ವಿನಿಮಯ ಯೋಜನೆಯಲ್ಲಿ ಪರಿಗಣಿಸಲಾಗುವುದಿಲ್ಲ.*

ಸುಧಾ, ಮಯೂರ ಓದಿ

Dr. AMBEDKAR INSTITUTE OF TECHNOLOGY
BDA Outer Ring Road, Mallathahally, Bengaluru - 560 056
Tel: 080-23211232 & Mob No: 9986003865

AIT/SS/1443 /2023-24 Date: 16-10-2023

SHORT - TERM TENDER NOTIFICATION

Sealed quotations are invited from Reputed/ Authorized firms for supply of **1:1 Dedicated 1500 MBPS (1.5 GBPS) Centralized Internet Leased Line Connectivity with 50 Public-IPS for 1 year and 3 years term to Dr. AIT Campus.** Details and specification of requirements can be downloaded from college website **www.drait.edu.in** or collect from the college store section. The filled Quotation shall be attached with a DD of Rs.500/- drawn in favor of the Principal Dr.AIT, Bangalore-560056.
Last date for downloading or collecting tender forms along with specifications from college website or store section is on or before **30.10.2023** and submit the sealed quotations on or before **31.10.2023 by 1.00 PM.** Quotations will be opened on the same day i.e. **31.10.2023 at 4.00 PM in the principal's office**

Principal Secretary, PVPWT

ರೈಲು ಭೂಮಿ ಅಭಿವೃದ್ಧಿ ಪ್ರಾಧಿಕಾರ
(ಭಾರತ ಸರ್ಕಾರದ ರೈಲ್ವೆ ಸಚಿವಾಲಯ ಅಡಿಯಲ್ಲಿನ ಒಂದು ಶಾಸನಬದ್ಧ ಪ್ರಾಧಿಕಾರ)
ಯೂನಿಟ್ ನಂ. 702-ಬಿ, 7ನೇ ಮಹಡಿ, ಕನ್ಸೆಕ್ಸ್ ಟವರ್-2, ಡಿಎಂಆರ್‌ಸಿ ಬಿಲ್ಡಿಂಗ್, ಅಜ್ಮೇರಿ ಗೇಟ್, ನವದೆಹಲಿ-110002 ಫೋನ್: +91-11-23232854, ಫ್ಯಾಕ್ಸ್: +91-11-23232835

ಇ-ಟೆಂಡರ್ ಮುಖಾಂತರ ಪ್ರಸ್ತಾವಣೆಗೆ ಮನವಿ
(ಆರ್‌ಎಫ್‌ಪಿ ನೋಟಿಸ್ ನಂ. ಆರ್‌ಎಲ್‌ಡಿಎ/2023/ಆರ್‌ಎಫ್‌ಪಿ/ಸಿಎಎಸ್-56 ದಿನಾಂಕ: 11-10-2023)
ತಿರುಪತಿ ರೈಲ್ವೆ ಸ್ಟೇಷನ್‌ನ ದಕ್ಷಿಣದ ಕಡೆಗೆ ಇತ್ತೀಚೆಗಷ್ಟೆ ಅಭಿವೃದ್ಧಿಪಡಿಸಲಾಗಿರುವ ಅಂದಾಜು ಪ್ಲೇನ್ ಏರಿಯಾ 3664 ಚ.ಮೀ. ಮತ್ತು ಬಿಲ್ಟಪ್ ಏರಿಯಾ 36,640 ಚ.ಮೀ. ವಿಸ್ತೀರ್ಣವುಳ್ಳ ವರ್ಟಿಕಲ್ ಏರ್ ಸ್ಪೇಸ್ ಭೂ ಪ್ರದೇಶದಲ್ಲಿ ವಾಣಿಜ್ಯ ಅಭಿವೃದ್ಧಿಗಾಗಿ 60 ವರ್ಷಗಳ ಲೀಸ್ ಹೋಲ್ಡ್ ರೈಟ್ಸ್ ಮಂಜೂರಾತಿ

ನಿವೇಶನದ ವಿವರ	ಪ್ಲೇನ್ ಏರಿಯಾ	ಬಿಲ್ಟಪ್ ಏರಿಯಾ	ಬಿಡ್ ಸೆಕ್ಯೂರಿಟಿ	ಮೀಸಲು ಬೆಲೆ
ತಿರುಪತಿ ರೈಲು ನಿಲ್ದಾಣದ ದಕ್ಷಿಣ ಭಾಗದಲ್ಲಿರುವ ಏರ್ ಸ್ಪೇಸ್	3664 ಚ.ಮೀ.	36,640 ಚ.ಮೀ	ರೂ.75 ಲಕ್ಷ	ರೂ. 22.68 ಕೋಟಿ

ವೆಬೆಕ್ಸ್‌ನಲ್ಲಿ ಬಿಡ್‌ಪೂರ್ವ ಆನ್‌ಲೈನ್ ಸಭೆ: 30ನೇ ಅಕ್ಟೋಬರ್, 2023 ರಂದು 11:30 ಗಂಟೆಗೆ
(ಬಿಡ್‌ಪೂರ್ವ ಆನ್‌ಲೈನ್ ಸಭೆಯ ವಿವರಗಳನ್ನು ಮ್ಯಾನೇಜರ್/ಪ್ರಾಜೆಕ್ಟ್/ಎಕ್ಸ್‌ಪರ್ಟ್/ಎಸ್‌ಸಿ/ಆರ್‌ಎಲ್‌ಡಿಎ ಇವರಿಂದ ಪಡೆಯಿರಿ)
ಆನ್‌ಲೈನ್‌ನಲ್ಲಿ ಇ-ಬಿಡ್ ಸಲ್ಲಿಸುವ ಕೊನೆಯ ದಿನಾಂಕ: 12.12.2023 ರಂದು 15:00 ಗಂಟೆವರೆಗೆ
ಯೋಜನೆಯ ಕುರಿತಾದ ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ನಮ್ಮ www.rlda.indianrailways.gov.in ವೆಬ್‌ಸೈಟ್‌ಗೆ ಭೇಟಿ ಕೊಡಿ ಅಥವಾ ಇ-ಪ್ರೊಕ್ಯೂರ್‌ಮೆಂಟ್‌ನ www.tenderwizard.in/RLDA ಪೋರ್ಟಲ್‌ನಲ್ಲಿರುವ 'ಇ-ಟೆಂಡರ್' ಶೀರ್ಷಿಕೆಯನ್ನು ಪರಿಶೀಲಿಸಿರಿ. ಯಾವುದೇ ಸ್ಪಷ್ಟೀಕರಣಗಳಿಗಾಗಿ, ದಯವಿಟ್ಟು ಇವರನ್ನು ಸಂಪರ್ಕಿಸಿರಿ:-

ಜಾ. ಜನರಲ್ ಮ್ಯಾನೇಜರ್/ಪ್ರಾಜೆಕ್ಟ್/ಎಸ್‌ಸಿ	ಚೀಫ್ ಪ್ರಾಜೆಕ್ಟ್ ಮ್ಯಾನೇಜರ್/ಸಿಕಂದರಾಬಾದ್	ಮ್ಯಾನೇಜರ್/ಪ್ರಾಜೆಕ್ಟ್/ಎಕ್ಸ್‌ಪರ್ಟ್/ಎಸ್‌ಸಿ/ಆರ್‌ಎಲ್‌ಡಿಎ	ಕನ್ಸಲ್ಟೆಂಟ್/ಆರ್‌ಎಲ್‌ಡಿಎ ಶ್ರೀ. ಕರಣ್ ಶರ್ಮಾ
ಮೊ: 94404 67999 ksraorlda@gmail.com	ಮೊ: 63054 89280 cpmrldasc22@gmail.com	ಮೊ: 73375 50024 rorldasc@gmail.com	ಮೊ: 99996 90805 karan.sharma@anarock.com

ಸೂಚನೆ:- ತಿದ್ದುಪಡಿ ಅಥವಾ ಮಾರ್ಪಾಡು ಉಂಟಾದಲ್ಲಿ, ಅಂತಹುದನ್ನು ಮೇಲ್ಕಂಡ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ. ಎಎಂ/ಟೆಂಡರ್, (ಮೊ) 87505 54811

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ
ಮಾನವ ಬಾಹ್ಯಾಕಾಶ ಹಾರಾಟ ಕೇಂದ್ರ (ಹೆಚ್‌ಎಸ್‌ಎಫ್‌ಸಿ)
ನಿರ್ಮಾಣ ಮತ್ತು ನಿರ್ವಹಣೆ ಸಮೂಹ (ಸಿಎಂಜಿ), ಅಂತರಿಕ್ಷ ಭವನ, ಬೆಂಗಳೂರು - 560 094.
ದೂ: (080)22172614/2613

ಇ-ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಯವರ ಪರವಾಗಿ ಕೆಳಕಂಡ ಕಾಮಗಾರಿಗಳಿಗೆ ಇ-ಟೆಂಡರಿಂಗ್ ಮೂಲಕ ಆನ್‌ಲೈನ್ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿ ಹೆಸರು ಮತ್ತು ಎನ್‌ಐಟಿ ಸಂಖ್ಯೆ	ಟೆಂಡರ್‌ಗಿಟ್ಟ ಅಂದಾಜು ಮೊತ್ತ ರೂ.	ಪೂರ್ಣಗೊಳಿಸುವ ಕಾಲಾವಧಿ	ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಅವಧಿ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ	ಇಎಂಡಿ ರೂ.ಗಳಲ್ಲಿ
01	ಬೆಂಗಳೂರು, ದೇವನಹಳ್ಳಿ, ಹೆಚ್‌ಎಸ್‌ಎಫ್‌ಸಿ ಕ್ಯಾಂಪಸ್‌ನಲ್ಲಿ 2 ಸಂಖ್ಯೆಯ 750ಕೆವಿಎ ಡಿಜಿ ಸೆಟ್‌ಗಳ ಸರಬರಾಜು, ಅಳವಡಿಕೆ, ಪರೀಕ್ಷೆ ಮತ್ತು ಕಾರ್ಯಾಚರಣೆ. **ಹೆಚ್‌ಎಸ್‌ಎಫ್‌ಸಿ/ಸಿಎಂಜಿ/2(7)/ಇ/83/2023-24 ದಿನಾಂಕ: 16.10.2023**	186.24 ಲಕ್ಷಗಳು	04 ತಿಂಗಳು	17.10.2023 ರ (11.00 ಗಂಟೆ) ಇಂದ 31.10.2023 (23.30 ಗಂಟೆ)ವರೆಗೆ	03.11.2023 14.30 ಗಂಟೆವರೆಗೆ	03.11.2023 15.00 ಗಂಟೆಗೆ	3,72,480/-

ಟೆಂಡರ್ ದಸ್ತಾವೇಜುಗಳನ್ನು ಟೆಂಡರ್ ವಿಜಾರ್ಡ್‌ನಲ್ಲಿ ನೋಂದಣಿಯಾಗುವ ಮೂಲಕ ವೆಬ್‌ಸೈಟ್: **www.tenderwizard.com/ISRO**ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಟೆಂಡರ್ ಪ್ರಕ್ರಿಯೆ ಶುಲ್ಕವನ್ನು ಪಾವತಿಸಬಹುದು. ಮಾರಾಟಗಾರರ ನೋಂದಣಿ ವಿಧಾನವನ್ನು ಮೇಲ್ಕಂಡ ವೆಬ್‌ಸೈಟ್‌ನಲ್ಲಿ ತಿಳಿಸಲಾಗಿದೆ. ಆಸಕ್ತಿಯುಳ್ಳ ಟೆಂಡರ್‌ದಾರರು ಇತರೆ ವಿವರಗಳಿಗೆ ಟೆಂಡರ್ ಪ್ರಕಟಣೆಯನ್ನು ಪರಿವೀಕ್ಷಿಸಲು ವೆಬ್‌ಸೈಟ್: **www.isro.gov.in**ಗೆ ಭೇಟಿನೀಡಿ ಮತ್ತು ಟೆಂಡರ್ ದಸ್ತಾವೇಜುಗಳನ್ನು ಖರೀದಿಸಲು **www.tenderwizard.com/ISRO**ಗೆ ಭೇಟಿನೀಡಿ.

ಸಹಿ/- ಮುಖ್ಯಸ್ಥರು ಸಿಎಂಡಿ, ಸಿಎಂಜಿ, ಹೆಚ್‌ಎಸ್‌ಎಫ್‌ಸಿ

ರಾಜ್ಯದಲ್ಲಿ 1500 ಮೆಗಾವಾಟ್ ವಿದ್ಯುತ್ ಕೊರತೆ: ಸಚಿವ ಕೆ.ಜೆ. ಜಾರ್ಜ್

'ಖಾಸಗಿ ಸಂಸ್ಥೆಗಳಿಂದ ಖರೀದಿ'

ಪ್ರಜಾವಾಣಿ ವಾರ್ತೆ

ಕೆ.ಜೆ.ಜಾರ್ಜ್

ಬೆಂಗಳೂರು: ಖಾಸಗಿ ವಲಯದಿಂದ ಖರೀದಿಸುವ ಮೂಲಕ ರಾಜ್ಯದಲ್ಲಿ ತಲೆದೋರಿರುವ ವಿದ್ಯುತ್ಸಮಸ್ಯೆಯನ್ನು ಪರಿಹರಿಸುವುದಾಗಿ ಇಂಧನ ಸಚಿವ ಕೆ.ಜೆ. ಜಾರ್ಜ್ ಭರವಸೆ ನೀಡಿದರು.

ಸೋಮವಾರ ಎಲ್ಲ ಎಸ್ಕಾಂಗಳ ಪ್ರಗತಿಪರಿಶೀಲನಾ ಸಭೆಯ ನಂತರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,'ಸದ್ಯ ರಾಜ್ಯದಲ್ಲಿ 1500 ಮೆಗಾವಾಟ್ ವಿದ್ಯುತ್ ಕೊರತೆ ಇದೆ. ವಿಜಯಪುರದ ಕೂಡಗಿ ವಿದ್ಯುತ್ ಸ್ಥಾವರದಿಂದ 150-200 ಮೆ.ವಾ. ಸಿಗಲಿದೆ. ಕೇಂದ್ರ ವಿದ್ಯುತ್ ಜಾಲದಿಂದ ನೆರವು ಕೇಳಿದ್ದೇವೆ. ಈ ಕುರಿತು ಕೇಂದ್ರ ಇಂಧನ ಸಚಿವರ ಜತೆಗೂ ಮಾತುಕತೆ ನಡೆಸಿದ್ದು, ನೆರವಿನ ಭರವಸೆ ನೀಡಿದ್ದಾರೆ. ಈ ಕ್ರಮಗಳ ಮೂಲಕ ರಾಜ್ಯದ ವಿದ್ಯುತ್ ಕೊರತೆಯನ್ನು ನೀಗಿಸುತ್ತೇವೆ' ಎಂದು ವಿವರಿಸಿದರು.

'ವಿದ್ಯುತ್ ಕೊರತೆಯಿದ್ದರೂ ಕೃಷಿ ಪಂಪ್ ಸೆಟ್‌ಗಳಿಗೆ ನಿತ್ಯ ಪಾಳಿ ಆಧಾರದಲ್ಲಿ 5 ಗಂಟೆ ವಿದ್ಯುತ್ ಪೂರೈಸುವ ಮೂಲಕ ಕೃಷಿ ಚಟುವಟಿಕೆಗಳಿಗೆ ಅಡಚಣೆಯಾಗದಂತೆ ಕ್ರಮಕೈಗೊಳ್ಳಲಾಗುವುದು' ಎಂದು ಹೇಳಿದ ಅವರು, 'ಬೆಳಿಗ್ಗೆ, ಸಂಜೆ ಮತ್ತು ರಾತ್ರಿ ಅವಧಿಯಲ್ಲಿ ಪಾಳಿ ಅನುಸಾರ ಕೃಷಿ ಪಂಪ್‌ಸೆಟ್‌ಗಳಿಗೆ ಐದು ಗಂಟೆ ವಿದ್ಯುತ್ ಪೂರೈಸಲಾಗುತ್ತದೆ.

ರಾತ್ರಿ ಪಾಳಿಯಲ್ಲಿ ಐದು ಗಂಟೆ ವಿದ್ಯುತ್ ಪಡೆಯುವ ರೈತರಿಗೆ ಮುಂದಿನ ಮೂರು ವಾರಗಳ ನಂತರ ಹಗಲಿನಲ್ಲಿ ಪೂರೈಕೆ ಆಗಲಿದೆ. ಅದೇ ರೀತಿ, ಹಗಲಿನಲ್ಲಿ ಪಡೆಯುತ್ತಿದ್ದವರಿಗೆ ರಾತ್ರಿ ಸಿಗಲಿದೆ' ಎಂದು ವಿವರಿಸಿದರು.

'ಪೂರೈಕೆಯ ಅವಧಿಗಳನ್ನು ಪತ್ರಿಕೆಗಳಲ್ಲಿ ಜಾಹೀರಾತು ಮೂಲಕ ಪ್ರಕಟಿಸುತ್ತೇವೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಈ ವರ್ಷದ ಏಪ್ರಿಲ್ 23ರಿಂದ ಅಕ್ಟೋಬರ್ 15 ಅವಧಿಯಲ್ಲಿ ರಾಜ್ಯದಲ್ಲಿನ ವಿದ್ಯುತ್ ಪರಿಸ್ಥಿತಿ ನಿಭಾಯಿಸಲು ₹1,102 ಕೋಟಿ ವೆಚ್ಚದಲ್ಲಿ 1,627 ದಶಲಕ್ಷ ಯೂನಿಟ್ ವಿದ್ಯುತ್ ಖರೀದಿಸಲಾಗಿದೆ. ಇದೇ ಅವಧಿಯಲ್ಲಿ 'ವಿದ್ಯುತ್ ವಿನಿಮಯ'ದ ಅಡಿ ನಮ್ಮ ರಾಜ್ಯದಿಂದ 636 ದಶಲಕ್ಷ ಯೂನಿಟ್ ವಿದ್ಯುತ್ ಮಾರಾಟ ಮಾಡಲಾಗಿದೆ. ಇದರಿಂದ ₹265 ಕೋಟಿ ಆದಾಯ ಬಂದಿದೆ' ಎಂದು ಅವರು ಅಂಕಿ ಅಂಶ ನೀಡಿದರು.

'ಮಳೆ ಕೊರತೆಯಿಂದಾಗಿ ಜಲಾಶಯಗಳಲ್ಲಿ ನೀರಿಲ್ಲ. ಜಲವಿದ್ಯುತ್ ಉತ್ಪಾದನೆ ಕುಂಠಿತವಾಗಿದೆ. ಮಳೆಯ ಕೊರತೆ ಕಾಣ ಪವನ ವಿದ್ಯುತ್ ಉತ್ಪಾದನೆಯೂ ಕಡಿಮೆಯಾಯಿತು. ಮೋಡ ಕವಿದ ವಾತಾವರಣದಿಂದಾಗಿ ಸೌರವಿದ್ಯುತ್ ಉತ್ಪಾದ ನೆಯೂ ಕುಸಿಯಿತು. ಈ ಸಮಸ್ಯೆಗಳ ನಡುವೆಯೂ ಬೇರೆ ಕಡೆಯಿಂದ ವಿದ್ಯುತ್ ಖರೀದಿಸಿ, ನಿರ್ವಹಣೆ ಮಾಡಿದ್ದೇವೆ' ಎಂದರು.

ತಿಂಗಳಿಗೆ 2 ಲಕ್ಷ ಟನ್ ಹೆಚ್ಚುವರಿ ಕಲ್ಲಿದ್ದಲಿಗೆ ಬೇಡಿಕೆ: 'ರಾಜ್ಯದ ಉಷ್ಣ ವಿದ್ಯುತ್ ಸ್ಥಾವರಗಳಿಗೆ ತಿಂಗಳಿಗೆ 15 ಲಕ್ಷ ಟನ್ ಕಲ್ಲಿದ್ದಲು ಪೂರೈಕೆ ಆಗುತ್ತಿದೆ. ಹೆಚ್ಚುವರಿಯಾಗಿ 2 ಲಕ್ಷ ಲಕ್ಷ ಟನ್ ಪೂರೈಸಲು ಕೇಂದ್ರಕ್ಕೆ ಬೇಡಿಕೆ ಇಟ್ಟಿದ್ದೇವೆ' ಎಂದು ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ತಿಳಿಸಿದರು.

ಪೂರೈಕೆಯಾಗುತ್ತಿರುವ ಎಲ್ಲ ಕಲ್ಲಿದ್ದಲನ್ನು ಸಮರ್ಪಕವಾಗಿ ಬಳಕೆ ಮಾಡಲಾಗುತ್ತಿದೆ. 2024ರ ಜೂನ್‌ವರೆಗೆ ಪ್ರತಿ ತಿಂಗಳು ಇನ್ನೂ 2 ಲಕ್ಷ ಟನ್ ಹೆಚ್ಚುವರಿ ನೀಡುವಂತೆ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಪೂರಕ ಸ್ಪಂದನೆ ದೊರಕಿದೆ ಎಂದರು.

ಸೀಳು ತುಟಿ ಉಚಿತ ಶಸ್ತ್ರಚಿಕಿತ್ಸೆ

ಕೆ.ಆರ್.ಪುರ: ವೈಟ್‌ಫೀಲ್ಡ್‌ನ ಕಿಂಡರ್ ಆಸ್ಪತ್ರೆಯು ಆಪರೇಷನ್ ಸ್ಮೈಲ್ ಮತ್ತು ಇಂಗಾ ಹೆಲ್ತ್ ಫೌಂಡೇಶನ್ ಸಹಯೋಗದಲ್ಲಿ 'ದಿ ಫ್ಯೂಚರ್ ಆಫ್ ಸ್ಮೈಲ್ಸ್ ಮಿಷನ್' ಕಾರ್ಯಕ್ರಮ ನಡೆಯಿತು.

76 ಮಕ್ಕಳಿಗೆ ಸೀಳು ತುಟಿ ಮತ್ತು ಸೀಳು ಅಂಗುಳಿನ ಶಸ್ತ್ರಚಿಕಿತ್ಸೆ ಉಚಿತವಾಗಿ ನಡೆಸಲಾಯಿತು. 140 ಮಕ್ಕಳು ಸಮಗ್ರ ವೈದ್ಯಕೀಯ ಪರೀಕ್ಷೆಗೆ ಒಳಗಾದರು.

ಬೆನ್ನುಹುರಿ ಸಮಸ್ಯೆ: ಯಶಸ್ವಿ ಚಿಕಿತ್ಸೆ

ಮಹಾವೀರ ಜೈನ್ ಆಸ್ಪತ್ರೆ: ಬಡಕುಟುಂಬದ ಮಕ್ಕಳಿಗೆ ಶಸ್ತ್ರಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಜೈನ್ ಆಸ್ಪತ್ರೆಯಲ್ಲಿ ನಡೆದ ಕಾರ್ಯಕ್ರಮವನ್ನು ಸಚಿವ ದಿನೇಶ್ ಗುಂಡೂರಾವ್ ಉದ್ಘಾಟಿಸಿದರು. ಶಾಸಕ ರಿಜ್ವಾನ್ ಅರ್ಷದ್, ಕಿಶನ್ ಲಾಲ್ ಕೊಠಾರಿ ಇದ್ದರು

ಬೆಂಗಳೂರು: ಎಲ್ಲರಂತೆ ಆಟವಾಡುತ್ತಿದ್ದ, ಶಾಲೆಗೆ ತೆರಳುತ್ತಿದ್ದ ವಿದ್ಯಾರ್ಥಿನಿಗೆ ದಿಢೀರ್ ಬೆನ್ನು ಮೂಳೆಯಲ್ಲಿ ನೋವು ಕಾಣಿಸಿಕೊಂಡಿತ್ತು. ಆಕೆ ಹಾಗೂ ಇಡೀ ಕುಟುಂಬವೇ ಆಘಾತಕ್ಕೆ ಒಳಗಾಯಿತು. ನೋವಿಗೆ ಕಾರಣ ತಿಳಿಯಲಿಲ್ಲ. ಕೊನೆಗೆ ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ತಪಾಸಣೆ ನಡೆಸಿದಾಗ ಅದು ಬೆನ್ನುಹುರಿ ಸಮಸ್ಯೆ ಎಂಬುದು ಖಚಿತವಾಯಿತು. ಅಲ್ಲಿ ಶಸ್ತ್ರಚಿಕಿತ್ಸೆ ಸೌಲಭ್ಯ ಇರಲಿಲ್ಲ.

ಅಲ್ಲಿನ ವೈದ್ಯರ ಸೂಚನೆಯಂತೆ ಬೆಂಗಳೂರಿನ ವಸಂತನಗರದಲ್ಲಿರುವ ಮಹಾವೀರ ಜೈನ್ ಆಸ್ಪತ್ರೆಗೆ ಕರೆತಂದು ಯಶಸ್ವಿಯಾಗಿ ಬೆನ್ನುಹುರಿ ಶಸ್ತ್ರಚಿಕಿತ್ಸೆ ಮಾಡಿಸಲಾಗಿದೆ. ಈಗ ಆ ವಿದ್ಯಾರ್ಥಿನಿ ಎಲ್ಲರಂತೆ ಓಡಾಡುತ್ತಿದ್ದು, ಶಾಲೆಗೂ ಹೋಗುತ್ತಿದ್ದಾಳೆ. ಇದು ಚಾಮರಾಜನಗರ ಜಿಲ್ಲೆಯ ಹಳ್ಳಿಯೊಂದರ ವಿದ್ಯಾರ್ಥಿನಿಯ ಕಥೆ.

ಹನೂರಿನ 8 ವರ್ಷ, 6 ವರ್ಷದ ಇಬ್ಬರು ಅಕ್ಕತಂಗಿಯರೂ ಬೆನ್ನುಹುರಿ ಸಮಸ್ಯೆ ಇತ್ತು, ಶಸ್ತ್ರಚಿಕಿತ್ಸೆ ಬಳಿಕ ಅವರು ಗುಣವಾಗಿದ್ದಾರೆ.

ನಗರದ ಭಗವಾನ್ ಮಹಾವೀರ್ ಜೈನ್ ಆಸ್ಪತ್ರೆಯಲ್ಲಿ ವಿಶ್ವ ಬೆನ್ನುಹುರಿ ದಿನದ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾಗಿ ಗುಣವಾದ ಮಕ್ಕಳು ಹಾಗೂ ಪೋಷಕರು ಸಂತಸ ಹಂಚಿಕೊಂಡ ಪರಿ ಇದು. ಮಕ್ಕಳಲ್ಲಿನ ಬದಲಾವಣೆ ಕಂಡು ಪೋಷಕರೂ ಸಂಭ್ರಮಿಸುತ್ತಿದ್ದಾರೆ.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, 'ಕೆಲವು ವರ್ಷಗಳಿಂದ ಈ ಆಸ್ಪತ್ರೆಯಲ್ಲಿ 750 ಮಕ್ಕಳಿಗೆ ಯಶಸ್ವಿಯಾಗಿ ಬೆನ್ನುಹುರಿ ಶಸ್ತ್ರಚಿಕಿತ್ಸೆ ನಡೆದಿದೆ. ಸ್ಕೋಲಿಯೋಸಿಸ್‌ನಿಂದ ಬಳಲುತ್ತಿದ್ದವರು ಹೊಸ ಜೀವನ ಕಟ್ಟಿಕೊಳ್ಳುವಂತಾಗಿದೆ' ಎಂದರು.

'ಮಹಾವೀರ ಜೈನ್ ಆಸ್ಪತ್ರೆಯಲ್ಲಿ ಉಚಿತವಾಗಿ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ಇದು ಅಭಿನಂದನೀಯ' ಎಂದರು.

'ಆರೋಗ್ಯ ಕರ್ನಾಟಕ ಯೋಜನೆ ವ್ಯಾಪ್ತಿಗೆ ಸ್ಕೋಲಿಯೋಸಿಸ್ ಸೇರಿಸಿದರೆ ಬಡ ಕುಟುಂಬದ ಮಕ್ಕಳಿಗೆ ಅನುಕೂಲ ಎಂದು ವೈದ್ಯರು ಕೋರಿದ್ದಾರೆ. ಆ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುವುದು' ಎಂದು ಹೇಳಿದರು.

ಬೆನ್ನುಹುರಿ ಮತ್ತು ಜಂಟಿ ಶಸ್ತ್ರಚಿಕಿತ್ಸಾ ವಿಭಾಗದ ಮುಖ್ಯಸ್ಥ ಬಿ.ಎಚ್. ಮಹೇಶ್ ಅವರು, '2010ರಿಂದ ಈವರೆಗೂ 750 ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ಅದರಲ್ಲಿ 300 ಮಕ್ಕಳಿಗೆ ಆರ್ಥಿಕ ನೆರವು ಸಿಕ್ಕಿದ್ದು, ಉಚಿತವಾಗಿ ಚಿಕಿತ್ಸೆ ನೀಡಲಾಗಿದೆ' ಎಂದು ಹೇಳಿದರು.

'ನವಜಾತ ಶಿಶು ಅಥವಾ ಮಗುವಿಗೆ 10 ವರ್ಷದೊಳಗೆ, ಪೋಲಿಯೊ ಪೀಡಿತ ಮಕ್ಕಳಲ್ಲಿ ಈ ಬೆನ್ನುಹುರಿ ತೊಂದರೆ ಕಾಣಿಸಿಕೊಳ್ಳುವ ಸಾಧ್ಯತೆಯಿದೆ. ಲಕ್ಷದಲ್ಲಿ ಒಂದು ಮಗುವಿಗೆ ಬೆನ್ನುಹುರಿ ಸಮಸ್ಯೆ ಕಾಡಲಿದೆ' ಎಂದು ಹೇಳಿದರು.

ಭಗವಾನ್ ಮಹಾವೀರ್ ಜೈನ್ ಗ್ರೂಪ್ ಆಫ್ ಹಾಸ್ಪಿಟಲ್‌ನ ಅಧ್ಯಕ್ಷ ಕಿಶನ್ ಲಾಲ್ ಕೊಠಾರಿ, ಬೆಂಗಳೂರು ನಗರ ಜಿಲ್ಲಾ ಆರೋಗ್ಯಾಧಿಕಾರಿ ರವೀಂದ್ರನಾಥ್ ಮೇಟಿ ಇದ್ದರು.

ನೈಋತ್ಯ ರೈಲ್ವೆ
ಟೆಂಡರ್ ಸೂಚನೆ ಸಂ. CAO/CN/BNC/18/2023 ದಿನಾಂಕ: 25.05.2023 ಕ್ಕೆ ತಿದ್ದುಪಡಿ-5

ಕಾಮಗಾರಿಯ ವಿವರಣೆ: ಮಧ್ಯ ವಿಭಾಗ (ಕಿಮೀ:5.72) ಮತ್ತು ಕುಪ್ಪಂ (ಕಿಮೀ:23.7) ನಡುವೆ ಮಾರಿಕುಪ್ಪಂ - ಕುಪ್ಪಂ ಹೊಸ ಮಾರ್ಗ ಯೋಜನೆಗಾಗಿ ಸಿಗ್ನಲ್ ಮತ್ತು ಟೆಲಿಕಮ್ಯುನಿಕೇಶನ್, ಎಲೆಕ್ಟ್ರಿಫಿಕೇಶನ್ ಮತ್ತು ಎಲೆಕ್ಟ್ರಿಕಲ್ ಜನರಲ್ ಸರ್ವಿಸ್ ಕೆಲಸಗಳು ಸೇರಿದಂತೆ ಹೊಸ ಬ್ರಾಡ್ ಗೇಜ್ ಮಾರ್ಗದ ನಿರ್ಮಾಣ.
(ಟೆಂಡರ್ ಉಲ್ಲೇಖ ಸಂಖ್ಯೆ: W.496/MKM-KPN-EPC-PHASE-2).

ಅಸ್ತಿತ್ವದಲ್ಲಿರುವ ಬಿಡ್ ಅಂತಿಮ ದಿನಾಂಕ: 30-10-2023, 11:00 ಗಂಟೆಯವರೆಗೆ
ಪರಿಷ್ಕೃತ ಬಿಡ್ ಅಂತಿಮ ದಿನಾಂಕ: 06-12-2023, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕಾಮಗಾರಿಗಳು ಬೆಂಗಳೂರು ಕಂಟೋನ್ಮೆಂಟ್
PUB/445/AAV/PRB/SWR/2023-24
S.W.Railways SWRRLY SWRRLY

PUBLIC NOTICE

The General public is hereby informed that my client intends to enter into Joint Development Agreement with the absolute owner of the Schedule Property **SRI. N. C. KRISHORE KUMAR,** Son of Late N. Y. Chinnaswamy Reddy having inherited the Schedule Property from his father Late N. Y. Chinnaswamy Reddy and mother Smt. Gowramma and now my client intends to develop the Schedule Properties by constructing apartment building.

Hence any person/s having objection /s asserting claim, right, title or interest, charge, lien, with respect to the Schedule Properties can contact the undersigned within **10 days** with all documentary proof. If no objections are received within the prescribed time my client shall proceed with to develop the properties by constructing apartment building as if no claims exist and that they have been waived or abandoned. Objection/s received thereafter shall not be binding on my client.

SCHEDULE PROPERTIES

Item No.1: All that piece and parcel of the Property bearing Sy No. 253/1 measuring 2 Acre 07 Guntas situated at Naraluru Village, Sarjapura Hobli, Anekal Taluk, Bangalore District and bounded on the:
East by : Property in Sy No. 252/1;
West by : Road;
North by : Property belongs to Smt. Nanjamma and Sons;
South by : Property bearing Sy No. 253/2;

Item No.2: All that piece and parcel of the Property bearing Sy No. 253/2 measuring 2 Acre 04 Guntas situated at Naraluru Village, Sarjapura Hobli, Anekal Taluk, Bangalore District, and bounded on the:
East by : Property belongs to Terracon Layout;
West by : Property bearing Sy No. 266;
North by : Property bearing Sy No. 253/1;
South by : Property belongs to Smt. Gowri Kanthesh and Terracon;

Item No.3: All that piece and parcel of the Property bearing Sy No. 266 measuring 36 Guntas, situated at Naraluru Village, Sarjapura Hobli, Anekal Taluk, Bangalore District, and bounded on the
East by : Property in Sy No. 253/2;
West by : Road;
North by : Road;
South by : Property belongs to Smt. Gowri Kanthesh;

Kavitha .A.B, Advocate
No. 2577, 13th Cross, 26th Main, 1st Sector, HSR layout, Bangalore 560102
Ph No. 9900546686

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ರಮೂಸೌ-ಟಿಇಸಿ ವಿಭಾಗ, ನೆಲ ಮಹಡಿ, ಅನೆಕ್ಸ್-3 ಕಟ್ಟಡ, ಎನ್.ಆರ್.ಚೌಕ, ಬೆಂಗಳೂರು- 560 002.

ಸಂ: ಕಾಪಾಅ/ಟಿಇಸಿ/ಟೆಂಡರ್/07/2023-24 ದಿನಾಂಕ: 16.10.2023

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕರೆ-8)
(ಜಿಓಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, (ರಮೂಸೌ-ಟಿಇಸಿ), ಬೃಬೆಂಮಪಾ, ಬೆಂಗಳೂರು, ಇವರು ಹೆಸರಾಂತ ಸಂಸ್ಥೆಗಳು/ಕಂಪನಿಗಳು/ಏಜೆನ್ಸಿಗಳು, ಇವರಿಂದ ಕೆಳಕಂಡ ಕಾಮಗಾರಿಗಳಿಗೆ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಇಎಂಡಿ (ರೂ. ಲಕ್ಷಗಳಲ್ಲಿ)
1	10 ವರ್ಷಗಳ ಅವಧಿಗೆ ಗಾಂಧಿನಗರದ ಸ್ವಾತಂತ್ರ್ಯ ಉದ್ಯಾನವನದ ಮಲ್ಟಿ-ಲೆವೆಲ್ ಕಾರ್ ಪಾರ್ಕಿಂಗ್ (ಎಂಎಲ್‌ಸಿಪಿ) ನ ಕಾರ್ಯಾಚರಣೆ ಹಾಗೂ ನಿರ್ವಹಣೆಯೊಂದಿಗೆ ಸ್ಮಾರ್ಟ್ ಪರಿಹಾರ ಒದಗಿಸುವುದು.	ರೂ. 6.75 ಲಕ್ಷಗಳು (ಒಂದು ಲಕ್ಷ ರೂ.ಗಳು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಹಾಗೂ ಉಳಿದದ್ದು ಬಿಡ್ ದಾಖಲೆಗಳಲ್ಲಿ ತಿಳಿಸಿರುವಂತೆ)

ವೇಳಾಪಟ್ಟಿ: (1) ಆರ್‌ಎಫ್‌ಪಿ ದಾಖಲೆಗಳನ್ನು ದೊರೆಯುವ ದಿನಾಂಕ: **17.10.2023ರಿಂದ.** (2) ಪ್ರಶ್ನಾವಳಿಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: **25.10.2023ರ ಅಪರಾಹ್ನ 3:00 ಗಂಟೆವರೆಗೆ.** 3) ಇಂಜಿನಿಯರ್-ಇನ್-ಚೀಫ್, ಬಿಬಿಎಂಪಿ ಕೇಂದ್ರ ಕಚೇರಿ ಆವರಣ, 1ನೇ ಮಹಡಿ, ಅನೆಕ್ಸ್-2 ಕಟ್ಟಡ, ಎನ್.ಆರ್.ಚೌಕ, ಬೆಂಗಳೂರು-560002 ಇಲ್ಲಿ ಪೂರ್ವಭಾವಿ ಸಭೆ ದಿನಾಂಕ: **26.10.2023ರ ಸಂಜೆ 4:00 ಗಂಟೆಗೆ.** 4) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆ ದಿನಾಂಕ: **03.11.2023 ರ ಸಂಜೆ 4:30 ಗಂಟೆಯವರೆಗೆ.** (5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **04.11.2023 ರ ಸಂಜೆ 5:00 ಗಂಟೆಗೆ.**
ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಚೇರಿಯನ್ನು ಕಚೇರಿಯ ವೇಳೆಯಲ್ಲಿ ಎಲ್ಲಾ ಕೆಲಸದ ದಿನದಂದು ಅಥವಾ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ನಿಂದ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ರಮೂಸೌ-ಟಿಇಸಿ ವಿಭಾಗ, ಬೃಬೆಂಮಪಾ

ಪುರಸಭೆ ಕಾರ್ಯಾಲಯ, ಹುಣಸಮಾರನಹಳ್ಳಿ
ಬೆಂಗಳೂರು ನಗರ ಜಿಲ್ಲೆ-562157
ಇ-ಮೇಲ್: itstaff.ulb.hmhalli@gmail.com ದೂ.ಸಂ: 080-23901864

ಕ್ರ.ಸಂ: ಹು.ಪು/ತಾ.ಶಾ/ಸಿ.ಆರ್/03/2023-24 ದಿನಾಂಕ: 16.10.2023

ಟೆಂಡರ್ ಪ್ರಕಟಣೆ

ಹುಣಸಮಾರನಹಳ್ಳಿ ಪುರಸಭಾ ವ್ಯಾಪ್ತಿಯಲ್ಲಿನ 2023-24 ನೇ ಸಾಲಿನ ಎಸ್.ಎಫ್.ಸಿ/2023-24 ನೇ ಸಾಲಿನ 15ನೇ ಹಣಕಾಸು ಮತ್ತು ಪುರಸಭಾ ನಿಧಿ ಅನುದಾನದಲ್ಲಿ ಕುಡಿಯುವ ನೀರು ಮತ್ತು ಸಿವಿಲ್ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಲೋಕೋಪಯೋಗಿ ಇಲಾಖೆಯ ನೊಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಮೊಹರಾದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.	ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ವರ್ಗ	ಯೋಜನೆ
1	DMA/2023-24/OW/WORK_INDENT4964/Call-2	40.13	Others	SFC
2	DMA/2023-24/RD/WORK_INDENT4966/Call-2	16.27	SC	SFC
3	DMA/2023-24/OW/WORK_INDENT4967/Call-2	41.80	ST	15ನೇ ಹಣಕಾಸು
4	DMA/2023-24/RD/WORK_INDENT4968/Call-2	15.80	SC	15ನೇ ಹಣಕಾಸು
5	DMA/2023-24/WS/WORK_INDENT5001/Call-2	43.20	Others	15ನೇ ಹಣಕಾಸು
6	DMA/2023-24/BD/WORK_INDENT5226/Call-2	2.235	Others	SFC
7	DMA/2023-24/OW/WORK_INDENT990 /Call-2	10.00	SC	ಪುರಸಭಾ ನಿಧಿ
8	DMA/2023-24/OW/WORK_INDENT992/Call-2	15.00	ST	ಪುರಸಭಾ ನಿಧಿ
9	DMA/2023-24WS/WORK_INDENT 1019/Call-2	29.90	Others	ಪುರಸಭಾ ನಿಧಿ

ಟೆಂಡರ್ ಸಲ್ಲಿಸುವ ವಿವರಗಳು: 1. ಕಾಮಗಾರಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **31/10/2023 ಸಂಜೆ 5.00 ಗಂಟೆವರೆಗೆ.** 2. ಆಕ್ಷೇಪಣೆ/ಮಾಹಿತಿಯನ್ನು ಸಲ್ಲಿಸಲು ದಿನಾಂಕ: **20/10/2023 ಸಂಜೆ 5.30 ಗಂಟೆವರೆಗೆ** 3. ಟೆಂಡರ್ ನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **02/11/2023 ಸಂಜೆ 5.30 ಗಂಟೆಗೆ.** 4. ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **04/11/2023 ರಂದು ಬೆಳಿಗ್ಗೆ 11.00 ಗಂಟೆಗೆ** 5. ಹೆಚ್ಚಿನ ಮಾಹಿತಿಯನ್ನು KPPP Portal ನಲ್ಲಿ ಪಡೆಯಬಹುದಾಗಿದೆ. 6. ದೂರವಾಣಿ ಸಂಖ್ಯೆ: 080-23901684 ಇ ಮೇಲ್: itstaff.ulb.hmhalli@gmail.com

ಸಹಿ/- ಮುಖ್ಯಾಧಿಕಾರಿಗಳು ಪುರಸಭೆ, ಹುಣಸಮಾರನಹಳ್ಳಿ | ಸಹಿ/- ಆಡಳಿತಾಧಿಕಾರಿಗಳು ಪುರಸಭೆ, ಹುಣಸಮಾರನಹಳ್ಳಿ
DIPR/CP/1688/SPAN/2023-24

ಸಂಕ್ಷಿಪ್ತ ಸುದ್ದಿ

ಅಂತರರಾಜ್ಯ ವಾಹನಗಳಿಗೆ ತೆರಿಗೆ ವಿನಾಯಿತಿ

ಮೈಸೂರು: ನಾಡಹಬ್ಬ ಮೈಸೂರು ದಸರಾ ಅಂಗವಾಗಿ ಅಂತರರಾಜ್ಯದಿಂದ ಬರುವ ಪ್ರವಾಸಿ ವಾಹನಗಳಿಗೆ ತೆರಿಗೆ ಪಾವತಿಯಿಂದ ವಿನಾಯಿತಿ ನೀಡಲಾಗಿದೆ. ನಗರ ಹಾಗೂ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಕೆಆರ್‌ಎಸ್ ವೀಕ್ಷಿಸಲು ಬರುವವರಿಗೆ ಮಾತ್ರ ಅ.24ರವರೆಗೆ ಅನ್ವಯವಾಗಲಿದೆ ಎಂದು ಸರ್ಕಾರ ತಿಳಿಸಿದೆ.

ವಿದ್ಯುತ್ ವ್ಯತ್ಯಯ ಇಂದು, ನಾಳೆ

ಬೆಂಗಳೂರು: ಆಡುಗೋಡಿ ವಿದ್ಯುತ್ ನಿರ್ವಹಣಾ ಕೇಂದ್ರದಲ್ಲಿ ನಿರ್ವಹಣೆ ಕಾಮಗಾರಿ ಕೈಗೊಂಡಿರುವುದರಿಂದ ಇದೇ 17ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 3ಗಂಟೆವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

5ನೇ ಬ್ಲಾಕ್ ಇಂಡಸ್ಟ್ರಿಯಲ್ ಲೇಔಟ್, ಕೋರಮಂಗಲ, ಮಡಿವಾಳ, ವೆಂಕಟೇಶ್ವರ ಬಡಾವಣೆ, ಚಿಕ್ಕ ಆಡುಗೋಡಿ, ಜೋಗಿ ಕಾಲೊನಿ, ಈಸ್ಟ್ ಲ್ಯಾಂಡ್ ಹೊಲ್ಡಿಂಗ್ ಬಿಲ್ಡಿಂಗ್, ಮಾರುತಿನಗರ, ಸೈಂಟ್‌ಜಾನ್ ಆಸ್ಪತ್ರೆ, ಡಾಲರ್ಸ್ ಕಾಲೊನಿ, ಕೆ.ಎಚ್.ಬಿ. ಕಾಲೊನಿ, ಮೈಕೊ ಲೇಔಟ್, ಕೃಷ್ಣಾನಗರ, ಎಸ್.ಜಿ. ಪಾಳ್ಯ, ಸಿದ್ಧಾರ್ಥ ಕಾಲೊನಿ, ಹ್ಯಾಪಿಮೈಂಡ್ ಕಂಪನಿ ಮತ್ತು ಸುತ್ತಮುತ್ತಿಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

18ಕ್ಕೆ ವ್ಯತ್ಯಯ: ಸೇಂಟ್‌ಜಾನ್ ವುಡ್ ನಿರ್ವಹಣಾ ಕೇಂದ್ರದಲ್ಲಿ ನಿರ್ವಹಣೆ ಕಾಮಗಾರಿ ಕೈಗೊಂಡಿರುವುದರಿಂದ ಇದೇ 18ರಂದುಬೆಳಿಗ್ಗೆ 10ರಿಂದ ಸಂಜೆ 4ಗಂಟೆವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

ಸೇಂಟ್ ಜಾನ್‌ವುಡ್ ಅಪಾರ್ಟ್‌ಮೆಂಟ್ ಮತ್ತು ಆಸ್ಪತ್ರೆ, ತಾವರೆಕೆರೆ, ಅಕ್ಸೆಂಚರ್, ಒರೆಕಲ್, ಕ್ರೈಸ್ಟ್ ಕಾಲೇಜು, ಬಿಟಿಎಂ ಲೇಔಟ್, ಮೆಜೆಸ್ಟಿಕ್ ಅಪಾರ್ಟ್‌ಮೆಂಟ್, ಎಕ್ಸಾ, ಆಕ್ಸಿಸ್, ಸುದ್ದಗುಂಟೆ ಪಾಳ್ಯ, ಗುರಪ್ಪನ ಲೇಔಟ್ ಮತ್ತು ಸುತ್ತಮುತ್ತಲಿನ ಸ್ಥಳಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

General

A BUILDER requires 50 Lakhs investment on a property for 15 months with good returns. Call 9611937546

PERSONAL

Change of Name

CHANGE OF NAME
I, **MOKTHIYAR BASHA GULAB JAN,** R/at Ojili Meadows Apt No. 172, 5th Floor, P2 Seppings Road, Shivajinagar, Bangalore-01 have changed my name to **MUKTHIYAR BASHA,** and declare that my father name is wrongly mentioned in Passport Gulab Jan Gaffar instead of **Gulab Jan** vide affidavit dated 16-10-2023, before Notary K. Venkateshan, Bangalore.

JC681814N, SUB/HONY LT, JEEUT CHAUHAN, Vill- Kikodha, Pandah, Sikandarpur, Ballia, Uttar Pradesh, changed daughter's name KUMARI VANDANA to VANDANA KUMARI, 16/10/2023 Notary K.V. Mani, Bangalore

JC681790P, RIS/HONY LT, SAHADEV SINGH, Vill- Kanchanpur, Nakau (Karhal), Karhal, Mainpuri, Uttar Pradesh, changed daughter's name KUMARI SONI to SONY YADAV, 14/10/2023, Notary B.M. Chandrashekar, Bangalore

SHEELA, WIFE/O, JC681814N, SUB/ HONY LT, JEEUT CHAUHAN, Vill- Kikodha, Pandah, Sikandarpur, Ballia, Uttar Pradesh changed name SHEELA to SHEELA DEVI, 16/10/2023 Notary K.V. Mani, Bangalore.

CHANGE OF NAME
I, **AKSHATH PRASAD NAIR** S/o Prasad C Nair, R/o 202, 2nd Floor, Plot No. 206/1, 5th Main, 3rd Block, Jayanagar, Bangalore-560011 have changed my name and shall hereafter be known as **AKSHATH NAIR** vide affidavit dt.22-08-2023, before Notary B.K.R. Krishnamurthy, Bangalore.

I,MOHAMMED JUNED R/at No.143,Rajeev Gandhi Nagar, Opp.Sambram College, Chikkabettahalli, Bengaluru-560097 have_changed my-name-to MOHAMMED JUNAID vide_affidavit dtd:16.10.2023 sworn_before notary H.S.Sakalesh Aradhya, Bengaluru.

CHANGE OF NAME
I, **SURESH D R** R/at # L-3-202,Godrej Eternity, Near Kumaran School, Mallasandra, Talaghattapura, Bangalore-560062 have changed my name to **SURESH RAO** vide affidavit dated 16-10-2023, before Notary C.V. Earappa, Bangalore. Henceforth I shall be called **SURESH RAO** only.

JC681814N, SUB/HONY LT, JEEUT CHAUHAN, Vill- Kikodha, Pandah, Sikandarpur, Ballia, Uttar Pradesh, changed daughter's name KUMARI RANJANA to RANJANA KUMARI, 16/10/2023 Notary K.V. Mani, Bangalore

NANDU BEN, Mother/o, 6499006A, SEP/ASH, SOLANKI NAGARBHAI MANAJIBHAI, Vill- Limli, Kherali, Muli, Surendra Nagar, Gujarat changed name NANDU BEN to SOLANKI NANDUBEN MANJIBHAI 14/10/2023 Notary B.M. Chandrashekar, Bangalore

MANAJI BHAI, Father/o, 6499006A, SEP/ASH, SOLANKI NAGARBHAI MANAJIBHAI, Vill- Limli, Kherali, Muli, Surendra Nagar, Gujarat changed name MANAJI BHAI to SOLANKI MANJIBHAI UKABHAI 14/10/2023 Notary B.M. Chandrashekar, Bangalore

ಭಾರತೀಯ ಸ್ವರ್ಣಪ್ರಿಯಾಗೆ L'Oreal - UNESCO ಪ್ರಶಸ್ತಿ 'ಗರಿ'

ಯುನೆಸ್ಕೊದಲ್ಲಿ ಪ್ರತಿ ವರ್ಷ ವಿಜ್ಞಾನ ಕ್ಷೇತ್ರದಲ್ಲಿ ಅಪಾರ ಕೊಡುಗೆ ನೀಡಿದ ಪ್ರತಿಭಾವಂತ ಯುವ ಮಹಿಳಾ ಸಂಶೋಧಕರಿಗೆ ಪ್ರಶಸ್ತಿಗಳನ್ನು ನೀಡುತ್ತಾ ಬರುತ್ತಿದೆ, ಯುನಿವರ್ಸಿಟಿ ಕೋಟ್ ಡಿ ಅಜುರ್‌ನಲ್ಲಿರುವ ಇನ್ರಿಯಾ ಸೆಂಟರ್‌ನಲ್ಲಿ ಸ್ಟಾಂಪ್ ಪ್ರಾಜೆಕ್ಟ್ ತಂಡದಲ್ಲಿ ಡಾಕ್ಟರೇಟ್ ಸಂಶೋಧಕರಾಗಿರುವ ಸ್ವರ್ಣಪ್ರಿಯಾ ಯುವ ಪ್ರತಿಭೆ ಯುನೇಸ್ಕೋ ಲೋರಿಯಲ್ ಫ್ರಾನ್ಸ್ 2023 ರ ಬಹುಮಾನ ವಿಜೇತರಲ್ಲಿ ಒಬ್ಬರಾಗಿದ್ದಾರೆ, ಇವರ ಪ್ರತಿಭಾ ಕೌಶಲಗಳನ್ನು ಗುರುತಿಸಿ L'Oreal UNESCO Foundation ಸಂಸ್ಥೆಯು ಸ್ವರ್ಣಪ್ರಿಯಾ ಅವರ ಸಂಶೋಧನಾ ವೃತ್ತಿಯನ್ನು ಬೆಂಬಲಿಸಲು 15000 ಯೂರೋಗಳನ್ನು (13 Lakhs) ನೀಡಿದೆ.

ಇವರು ಕಂಪ್ಯೂಟರ್ ಸೈನ್ಸ್ ಡೊಮೇನ್‌ನಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಇವರ ಸಂಶೋಧನೆಯು ಔಪಚಾರಿಕ ವಿಧಾನಗಳನ್ನು ಬಳಸಿಕೊಂಡು ಸುರಕ್ಷಿತ ಮತ್ತು ವಿಶ್ವಾಸಾರ್ಹ ಸಾಫ್ಟ್‌ವೇರ್ ಅನ್ನು ರಚಿಸುವುದನ್ನು ಒಳಗೊಂಡಿರುತ್ತದೆ ಮತ್ತು ಯಂತ್ರ ಪರಿಶೀಲಿಸಿದ ಪುರಾವೆಗಳನ್ನು ಬಳಸಿಕೊಂಡು ಸೂಕ್ಷ್ಮ ಮಾಹಿತಿಯನ್ನು ಪರೋಕ್ಷವಾಗಿ ಸೋರಿಕೆಯಾಗುವುದಿಲ್ಲ ಎಂದು ಖಚಿತಪಡಿಸುವ ಮೂಲಕ ಸಾಫ್ಟ್‌ವೇರ್‌ನ ಸರಿಯಾದ ಸುರಕ್ಷತೆ ಮತ್ತು ವಿಶ್ವಾಸಾರ್ಹತೆಯನ್ನು ಪ್ರಾಮಾಣಿಕರಿಸುವಲ್ಲಿ ಅತ್ಯುತ್ತಮವಾಗಿ ಕೆಲಸ ಮಾಡುತ್ತಿದ್ದಾರೆ, ಶ್ರೀಮತಿ ಸ್ವರ್ಣಪ್ರಿಯಾರವರು ಮೂಲತಃ ಭಾರತದ ಬಿಹಾರ್ ರಾಜ್ಯದ ಬೇಗುಸರಾಯ್ ಜಿಲ್ಲೆಯವರಾಗಿದ್ದು ಇವರು ಜರ್ಮನಿಯ ಮ್ಯಾಕ್ಸ್ - ಪ್ಲಾಂಕ್ ಇನ್ಸ್‌ಟಿಟ್ಯೂಟ್ ಫಾರ್ ಸೆಕ್ಯೂರಿಟಿ ಅಂಡ್ ಪ್ರೈವಸಿಯಲ್ಲಿ ಡಾಕ್ಟರೇಟ್ ಸಂಶೋಧಕರಾಗಿರುವ ಭಾರತೀಯ ಮೂಲದ ಬಸವೇಶ್ ಅಮ್ಮನಘಟ್ಟ ಶಿವಕುಮಾರ್ ಅವರನ್ನು ವಿವಾಹವಾಗಿದ್ದಾರೆ. ಭಾರತದ ಬೆಂಗಳೂರು ಜಿಲ್ಲೆಯ ಚಂದಾಪುರ ನಿವಾಸಿಯಾಗಿರುವ ಬಸವೇಶ್ ಎ.ಎಸ್. ಮಾತನಾಡುತ್ತ ತನ್ನ ಶ್ರೀಮತಿ ಸ್ವರ್ಣಪ್ರಿಯಾ ಮಹಿಳಾ ವಿಜ್ಞಾನಿಯಾಗಿ ವಿಜ್ಞಾನದಲ್ಲಿ ತಮ್ಮ ವೃತ್ತಿಜೀವನವನ್ನು ಮುಂದುವರಿಸಲು ಭಾರತದಲ್ಲಿನ ಹೆಚ್ಚಿನ ಯುವತಿಯರನ್ನು ಪ್ರೇರೇಪಿಸಲು ಬಯಸುತ್ತಾರೆ ಎಂದರು, ಸ್ವರ್ಣಪ್ರಿಯಾ ಅವರ ಮಾತುಗಳಲ್ಲಿ ಎಲ್ಲ ತೊಂದರೆಗಳು ಮತ್ತು ಸಾಂಸ್ಕೃತಿಕ ಮಾನದಂಡಗಳ ಹೊರತಾಗಿಯೂ ನಾವು ನಿಜವಾಗಿಯೂ ಬಯಸಿದರೆ ಇನ್ನೂ ಮಹಿಳಾ ವಿಜ್ಞಾನಿಗಳಾಗಿ ಅರಳಬಹುದು, ವಿಜ್ಞಾನದಲ್ಲಿ ವೃತ್ತಿಜೀವನವನ್ನು ಹೊಂದಲು ಬಯಸುವ ಎಲ್ಲಾ ಯುವತಿಯರಿಗೆ ಸಹಾಯ ಹಸ್ತವನ್ನು ನೀಡಲು ಸ್ವರ್ಣಪ್ರಿಯಾ ಸಿದ್ಧರಿದ್ದಾರೆ, ಅವರ ಸಂಶೋಧನಾ ವೆಬ್‌ಸೈಟ್ : https://swarnpriya.github.io/ ಮೂಲಕ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದು ಎಂಬುದಾಗಿ ತಿಳಿಸಿದ್ದಾರೆ

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

DH DECCAN HERALD ಪ್ರಜಾವಾಣಿ **Classifieds** More value, more impact
JOB HUNT
JOB
Get your HIRING NEEDS answered
Get the right people for your company...Book your Ad with us now !
www.dhclassifieds.com BOOK NOW
For more details contact:
+91 9845114560 | +91 9886213331 | +91 9900428036 | +91 9731810277 | +91 9901641752 | 080-45557163/164

ಬೆಂಗಳೂರು ವಿಶ್ವವಿದ್ಯಾಲಯದ 58ನೇ ಘಟಿಕೋತ್ಸವ ಇಂದು

ವಿನುತಾಗೆ ಎಂಟು ಚಿನ್ನದ ಪದಕದ ಗರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ವೆ ಇಲಾಖೆಯ ದಿನ ಕೂಲಿ ನೌಕರರೊಬ್ಬರ ಪುತ್ರಿ ಜೆ.ವಿನುತಾ ಬೆಂಗಳೂರು ವಿಶ್ವವಿದ್ಯಾಲಯದಿಂದ ಎಂಟು ಚಿನ್ನದ ಪದಕ, ಮೂರು ನಗದು ಬಹುಮಾನಕ್ಕೆ ಭಾಜನರಾಗಿದ್ದಾರೆ.

ಸರ್ವೆ ಕಾರ್ಯದಲ್ಲಿ ಸಹಾಯಕರಾಗಿ ಕೆಲಸ ಮಾಡುವ ಆನೇಕಲ್ ತಾಲ್ಲೂಕಿನ ಜಯರಾಮ್, ಗೃಹಿಣಿ ಚಂದ್ರಿಕಾ ದಂಪತಿ ಮಗಳ ಶಿಕ್ಷಣಕ್ಕೆ ಸಾಕಷ್ಟು ಶ್ರಮಿಸಿದ್ದಾರೆ. ಅವರ ಶ್ರಮಕ್ಕೆ ತಕ್ಕ ಫಲ ನೀಡಿರುವ ಪುತ್ರಿ ಆಕ್ಸ್‌ಫರ್ಡ್ ಕಾಲೇಜಿನ ರಸಾಯನ ವಿಜ್ಞಾನ ಸ್ನಾತಕೋತ್ತರ ಪದವಿಯಲ್ಲಿ ಮೊದಲ ರ‍್ಯಾಂಕ್ ಪಡೆದಿದ್ದಾರೆ.

‘ರ‍್ಯಾಂಕ್ ಪಡೆಯುವ ನಿರೀಕ್ಷೆ ಇತ್ತು. ಆದರೆ, 8 ಚಿನ್ನದ ಪದಕ ಸಿಕ್ಕಿದ್ದು ಖುಷಿಕೊಟ್ಟಿದೆ. ಬಿ.ಇಡಿ ಮಾಡುತ್ತಿರುವೆ. ಅಪ್ಪನ ಆಸೆಯಂತೆ ಸರ್ಕಾರಿ ಪ್ರೌಢಶಾಲಾ ಶಿಕ್ಷಕಿಯಾಗುವೆ’ ಎನ್ನುತ್ತಾರೆ ವಿನುತಾ.

ವಿನುತಾ

ಅಸ್ಮಾ ಬಾನು

ಭವಿಷ್ಯ

ನಮ್ರತಾ

ಬೆಂಗಳೂರು ವಿಶ್ವವಿದ್ಯಾಲಯದ ಭೌತ ವಿಜ್ಞಾನ ವಿಭಾಗದಲ್ಲಿ 6 ಚಿನ್ನದ ಪದಕ ಪಡೆದಿರುವ ಅಸ್ಮಾಬಾನು ಅದೇ ವಿಶ್ವವಿದ್ಯಾಲಯದಲ್ಲಿ ಪಿ.ಎಚ್‌ಡಿ ಅಧ್ಯಯನಕ್ಕೆ ಆಯ್ಕೆಯಾಗಿದ್ದಾರೆ. ಅಸ್ಮಾ ಮೂಲತಃ ಕೋಲಾರ ಜಿಲ್ಲೆ ಮುಳಬಾಗಿಲಿನ ನಿವೃತ್ತ ಮುಖ್ಯಶಿಕ್ಷಕ ಅಬ್ದುಲ್ ರೆಹಮಾನ್ ಅವರ ಪುತ್ರಿ. ಭವಿಷ್ಯದಲ್ಲಿ ಭೌತ ವಿಜ್ಞಾನಿಯಾಗುವ ಕನಸು ಕಟ್ಟಿಕೊಂಡಿದ್ದಾರೆ.

ಪ್ರಾಣಿ ವಿಜ್ಞಾನ ವಿಭಾಗದಲ್ಲಿ 6 ಚಿನ್ನದ ಪದಕ ಪಡೆದಿರುವ ಬೆಂಗಳೂರಿನ ಲಗ್ಗೆರೆಯ ನಮ್ರತಾ ಪದವಿ ಕಾಲೇಜು ಪ್ರಾಧ್ಯಾಪಕಿಯಾಗುವ ನಿರೀಕ್ಷೆ ಇಟ್ಟುಕೊಂಡಿದ್ದಾರೆ.

ಸಂಸ್ಕೃತ ಸ್ನಾತಕೋತ್ತರ ಪದವಿಯಲ್ಲಿ 6 ಚಿನ್ನದ ಪದಕ ಪಡೆದಿರುವ ಭವಿಷ್ಯ ಅವರು ಖಾಸಗಿ ಕಂಪನಿ ಉದ್ಯೋಗಿ ಸಂಜಯ್ ಎಸ್.ಮಲ್ಯಾ ಅವರ ಪತ್ನಿ. ಪಿ.ಎಚ್‌ಡಿಗಾಗಿ ಸಿದ್ಧತೆ ನಡೆಸಿದ್ದಾರೆ.

ಸ್ನಾತಕೋತ್ತರದ 13 ಪದವಿಗಳಲ್ಲಿ 12 ವಿಭಾಗಗಳಲ್ಲಿ ವಿದ್ಯಾರ್ಥಿನಿಯರೇ ರ‍್ಯಾಂಕ್ ಪಡೆದಿದ್ದಾರೆ. ಸ್ನಾತಕ ಪದವಿಯ 11ರಲ್ಲಿ 6ರಲ್ಲಿ ಮೇಲುಗೈ ಸಾಧಿಸಿದ್ದಾರೆ.

ಸ್ನಾತಕ ಪದವಿಯಲ್ಲಿ ಎಎಸ್‌ಸಿ ಪದವಿ ಕಾಲೇಜಿನ ದೀಕ್ಷಿತ ಆರ್. ನಾಯಕ್, ವಿಶ್ವಚೇತನ ಪದವಿ ಕಾಲೇಜಿನ ಎಸ್.ಎಂ. ರವಿಕುಮಾರ್, ಯುವಿಸಿಇಯ ಜಿ.ಯೋಗೇಶ್ವರನ್ ತಲಾ ಐದು ಚಿನ್ನದ ಪದಕ ಪಡೆದಿದ್ದಾರೆ.

ದೇವೇಗೌಡ, ಸೋಮನಾಥ್‌ಗೆ ಗೌರವ ಡಾಕ್ಟರೇಟ್

ಸೆಂಟ್ರಲ್ ಕಾಲೇಜು ಆವರಣದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ 58ನೇ ಘಟಿಕೋತ್ಸವ ಅ.17ರಂದು ಬೆಳಿಗ್ಗೆ 10.30ಕ್ಕೆ ಆರಂಭವಾಗಲಿದೆ.

28,871 ವಿದ್ಯಾರ್ಥಿಗಳು ಪದವಿಗೆ ಅರ್ಹರಾಗಿದ್ದಾರೆ. 299 ವಿದ್ಯಾರ್ಥಿಗಳು ಚಿನ್ನದ ಪದಕ, 113 ವಿದ್ಯಾರ್ಥಿಗಳು ನಗದು ಬಹುಮಾನ ಪಡೆಯಲಿದ್ದಾರೆ. 204 ಅಭ್ಯರ್ಥಿಗಳಿಗೆ ಪಿ.ಎಚ್‌ಡಿ ಪ್ರದಾನ ಮಾಡಲಾಗುವುದು. ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ, ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್ ಅವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಲಾಗುವುದು ಎಂದು ಕುಲಪತಿ ಎಸ್.ಎಂ. ಜಯಕರ್ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಅಧ್ಯಕ್ಷತೆ ವಹಿಸುವರು. ಝೆರೋದಾ ಸಹ ಸಂಸ್ಥಾಪಕ ನಿಖಿಲ್ ಕಾಮತ್ ಘಟಿಕೋತ್ಸವ ಭಾಷಣ ಮಾಡುವರು. ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಉಪಸ್ಥಿತರಿರುವರು ಎಂದು ಮಾಹಿತಿ ನೀಡಿದರು.

ದೇಸಿ ಸಮ್ಮೇಳನ ನಾಳೆ

ಬೆಂಗಳೂರು: ಇದೇ ಮೊದಲ ಬಾರಿಗೆ ದೇಸಿ ಸಮ್ಮೇಳನವನ್ನು ಅ.18ರಂದು ಜಿಕೆವಿಕೆಯ ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಮಾವೇಶ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ದೇಸಿ–ಸಮ್ಮೇತ್ (ದಕ್ಷಿಣ), ಕೃಷಿ ವಿಶ್ವವಿದ್ಯಾಲಯ, ಜಿಕೆವಿಕೆ, ರಾಷ್ಟ್ರೀಯ ಕೃಷಿ ನಿರ್ವಹಣಾ ಸಂಸ್ಥೆ, ಕೃಷಿ ಇಲಾಖೆ ಸಹಯೋಗದಲ್ಲಿ ನಡೆಯಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸುವರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೃಷಿ ಸಚಿವ ಎನ್. ಚಲುವರಾಯಸ್ವಾಮಿ, ಕಂದಾಯ ಸಚಿವ ಕೃಷ್ಣ ಬೈರೇಗೌಡ, ಕೃಷಿ ವಿ.ವಿ. ಸಹಕುಲಾಧಿಪತಿ ಭಾಗವಹಿಸಲಿದ್ದಾರೆ.

ದಕ್ಷಿಣ ಕರ್ನಾಟಕದ 16 ಜಿಲ್ಲೆಗಳ ಕೃಷಿ ಪರಿಕರ ಮಾರಾಟಗಾರರಿಗೆ ಒಂದು ವೇದಿಕೆ ಕಲ್ಪಿಸುವುದು ಇದರ ಉದ್ದೇಶ. 3000 ಕೃಷಿ ಪರಿಕರ ಉದ್ದಿಮೆದಾರರು ಭಾಗವಹಿಸಲಿದ್ದಾರೆ. ವಿವಿಧ ವಸ್ತು ಪ್ರದರ್ಶನ ನಡೆಯಲಿದೆ ಎಂದು ಹೇಳಿಕೆ ತಿಳಿಸಿದೆ.

ಶುಶ್ರೂಷಕ ಸಿಬ್ಬಂದಿ ನೇಮಕಕ್ಕೆ ತಡೆ

ಬೆಂಗಳೂರು: ಜಯದೇವ ಹೃದ್ರೋಗ ವಿಜ್ಞಾನಗಳು ಮತ್ತು ಸಂಶೋಧನಾ ಸಂಸ್ಥೆ ಕೋರಿಕೆಯಂತೆ 100 ಶುಶ್ರೂಷಕ ಸಿಬ್ಬಂದಿಯ ನೇಮಕಾತಿ ಪ್ರಕ್ರಿಯೆ ತಡೆಹಿಡಿಯಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಹೇಳಿದೆ.

ಆನ್‌ಲೈನ್ ಅರ್ಜಿ ಸಲ್ಲಿಕೆ ಮತ್ತು ಹಣ ಪಾವತಿ ನಿಲ್ಲಿಸಲಾಗಿದೆ. ಮುಂದಿನ ಮಾಹಿತಿಗೆ ಪ್ರಾಧಿಕಾರದ ಜಾಲತಾಣ http://kea.kar.nic.in ಸಂಪರ್ಕಿಸಬಹುದು ಎಂದು ಕೆಇಎ ಹೇಳಿಕೆ ತಿಳಿಸಿದೆ.

ಭಗವಾನ್ ಬಂಧನಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಒಕ್ಕಲಿಗ ಸಮುದಾಯದ ಬಗ್ಗೆ ಸಾಹಿತಿ ಕೆ.ಎಸ್. ಭಗವಾನ್ ಅವರು ಅಸಂಬದ್ಧ ಹೇಳಿಕೆ ನೀಡಿದ್ದಾರೆ’ ಎಂದು ಆರೋಪಿಸಿರುವ ರಾಜ್ಯ ಒಕ್ಕಲಿಗರ ಸಂಘದ ಪದಾಧಿಕಾರಿಗಳು ಸೋಮವಾರ ಪ್ರತಿಭಟನೆ ನಡೆಸಿದರು.

‘ಪ್ರಚಾರದ ಆಸೆಯಿಂದ ಹೇಳಿಕೆ ನೀಡಿದ್ದಾರೆ. ಅವರು ಸಮುದಾಯದ ಕ್ಷಮೆ ಕೇಳಬೇಕು. ಭಗವಾನ್ ಅವರಿಂದ ಇಂತಹ ಹೇಳಿಕೆ ನಿರೀಕ್ಷೆ ಮಾಡಿರಲಿಲ್ಲ. ರಾಜ್ಯ ಸರ್ಕಾರ ಅವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು. ಇಲ್ಲದಿದ್ದರೆ ಸಂಘದ ಆಡಳಿತ ಮಂಡಳಿಯಲ್ಲಿ ಚರ್ಚಿಸಿದ ನಂತರ ಮುಂದಿನ ನಿರ್ಧಾರ ತೆಗೆದುಕೊಳ್ಳುತ್ತೇವೆ’ ಎಂದು ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಡಿ. ಹನುಮಂತಯ್ಯ ಹೇಳಿದರು.

ಬೆಂಗಳೂರು ನಿರ್ಮಾತೃ ಕೆಂಪೇಗೌಡ, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರೂ ಒಕ್ಕಲಿಗರ ಸಮುದಾಯದವರೇ. ನಾಡನ್ನು ಕಟ್ಟಿದವರಲ್ಲಿ ಒಕ್ಕಲಿಗರ ಪಾತ್ರ ಪ್ರಮುಖವಾಗಿದೆ ಎಂದರು.

ಸಾಹಿತಿ ಭಗವಾನ್ ಹೇಳಿಕೆ ಖಂಡಿಸಿ ಬೆಂಗಳೂರಿನಲ್ಲಿ ಸೋಮವಾರ ರಾಜ್ಯ ಒಕ್ಕಲಿಗರ ಸಂಘದ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು

ಕಾಂತರಾಜು ಅವರು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಸಿದ್ಧಪಡಿಸಿದ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯೇ ಅವೈಜ್ಞಾನಿಕವಾಗಿದೆ ಎಂದು ಅವರು ದೂರಿದರು.

ಸಂಘದ ಗೌರವಾಧ್ಯಕ್ಷ ಬಿ.ಕೆಂಚಪ್ಪಗೌಡ, ಉಪಾಧ್ಯಕ್ಷ ಎಲ್. ಶ್ರೀನಿವಾಸ್, ಕಾರ್ಯಾಧ್ಯಕ್ಷ ಎಲುವಳಿ ರಮೇಶ್, ಸಂಘದ ನಿರ್ದೇಶಕ ಬಿ.ಪಿ. ಮಂಜೇಗೌಡ, ಕೆಂಪೇಗೌಡ ಆಸ್ಪತ್ರೆ ಅಭಿವೃದ್ಧಿ ಸಮಿತಿ ಅಧ್ಯಕ್ಷ ನೆಲ್ಲಿಗೆರೆ ಬಾಲು ಮತ್ತಿತರರು ಇದ್ದರು.

ವಿಶೇಷ ಮಕ್ಕಳಿಗೆ ಪರೀಕ್ಷಾ ವಿನಾಯಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 1ರಿಂದ 9ನೇ ತರಗತಿಯ ವಿಶೇಷ ಅಗತ್ಯವುಳ್ಳ ವಿದ್ಯಾರ್ಥಿಗಳಿಗೆ ಪರೀಕ್ಷಾ ವಿನಾಯಿತಿ ನೀಡಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆದೇಶ ಹೊರಡಿಸಿದೆ.

ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ಶಾಲೆಗಳಲ್ಲಿ ಓದುತ್ತಿರುವ ವಿವಿಧ ನ್ಯೂನತೆ ಇರುವ 94,254 ವಿದ್ಯಾರ್ಥಿಗಳಿಗೆ ಈ ನಿಯಮ ಅನ್ವಯವಾಗಲಿದೆ. ಇದುವರೆಗೂ ಇಂತಹ ಸೌಲಭ್ಯ 10ನೇ ತರಗತಿ ಹಾಗೂ ದ್ವಿತೀಯ ಪಿಯು ವಿದ್ಯಾರ್ಥಿಗಳಿಗೆ ಇತ್ತು. ಈ ಸೌಲಭ್ಯವನ್ನು ಇತರೆ ತರಗತಿಗಳ ಪರೀಕ್ಷೆಗೂ ವಿಸ್ತರಿಸುವಂತೆ ಸಮಗ್ರ ಶಿಕ್ಷಣ ಕರ್ನಾಟಕ ಈಚೆಗೆ ಆಯೋಜಿಸಿದ್ದ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿತ್ತು.

ನ್ಯೂನತೆ ಇರುವ ಮಕ್ಕಳಿಗೆ ಪರೀಕ್ಷೆಗಳಲ್ಲಿ ಪರ್ಯಾಯ ಬರಗಾರರ ಸೌಲಭ್ಯ, ಹೆಚ್ಚುವರಿ ಸಮಯ, ಭಾಷಾ ವಿನಾಯಿತಿ, ಪ್ರತ್ಯೇಕ ಪ್ರಶ್ನೆಗಳು, ಉಚ್ಚಾರಣಾ ದೋಷಗಳ ವಿನಾಯಿತಿ, ವಿಷಯಗಳ ಆಯ್ಕೆಯಲ್ಲಿ ಸಡಿಲತೆ ಪಡೆಯಬಹುದು.

ಕ್ಷೇಮ ಕುಶಲ



ಸ್ಕ್ಯಾನಿಂಗ್‌ನ ಮೊದಲು...

ಡಾ. ಕುಶ್ವಂತ್ ಕೋಳಿಬೈಲು

ಆರೋಗ್ಯ ಮತ್ತು ಕಾಯಿಲೆಗಳ ಕುರಿತಾದ ಸ್ಪಷ್ಟ ಮಾಹಿತಿಗಳು ಇಂದಿನ ಮಾಹಿತಿ ತಂತ್ರಜ್ಞಾನದ ಯುಗದಲ್ಲಿ ಪ್ರತಿಯೊಬ್ಬರಿಗೂ ಸುಲಭವಾಗಿ ಲಭ್ಯವಾಗುತ್ತವೆ. ಈ ಮಾಹಿತಿಗಳನ್ನು ಜನರು ಕಾಯಿಲೆಗಳ ಬಗ್ಗೆ ತಿಳಿದುಕೊಳ್ಳಲು ಮತ್ತು ತಮ್ಮ ಜೀವನಶೈಲಿಯನ್ನು ಬದಲಾಯಿಸಿಕೊಳ್ಳಲು ಬಳಸಿಕೊಂಡರೆ ಅದರಿಂದ ರೋಗಿಗಳಿಗೆ ಮಾತ್ರವಲ್ಲದೆ ವೈದ್ಯರಿಗೂ ಅನುಕೂಲವಾಗುತ್ತಿತ್ತು. ಅದರೆ ಇತ್ತೀಚಿನ ವರ್ಷಗಳಲ್ಲಿ ಅಂತರ್ಜಾಲದಲ್ಲಿ ಲಭ್ಯವಿರುವ ಮಾಹಿತಿಯಿಂದ ಜನರು ತಮ್ಮ ಕಾಯಿಲೆಯನ್ನು ಪತ್ತೆ ಹಚ್ಚಲು ಮತ್ತು ಸ್ವಯಂ ಚಿಕಿತ್ಸೆ ಪಡೆದುಕೊಳ್ಳಲು ಯತ್ನಿಸುವುದರಿಂದ ಅನೇಕ ಅಪಾಯಗಳು ಸಂಭವಿಸುತ್ತಿವೆ. ಶಿಕ್ಷಿತ ಮತ್ತು ಶ್ರೀಮಂತ ವರ್ಗದವರು ತಮ್ಮ ಮನಸ್ಸಿನಲ್ಲಿ ತಮ್ಮ ಆರೋಗ್ಯದ ಕುರಿತು ಅನುಮಾನಗಳು ಬಂದಾಗಲೆಲ್ಲ ಅಂತರ್ಜಾಲದಲ್ಲಿ ತಡಕಾಡಿ ತಾವೇ ಸ್ವಯಂ ಅನೇಕ ಪರೀಕ್ಷೆಗಳನ್ನು ಮಾಡಿಸಿಕೊಳ್ಳುತ್ತಾರೆ. ಜನರ ಈ ಸಂಶಯಗಳ ಮತ್ತು ಅಲ್ಪಜ್ಞಾನದ ಲಾಭವನ್ನು ಉಪಯೋಗಿಸಿಕೊಂಡು ಕಾರ್ಪೊರೇಟ್ ಆರೋಗ್ಯ ಸಂಸ್ಥೆಗಳು ಇಂತಹ ಪರೀಕ್ಷೆಗಳನ್ನು ಮಾಡಿಸಿಕೊಳ್ಳಲು ರೋಗಿಗಳನ್ನು ಪ್ರೋತ್ಸಾಹಿಸುತ್ತ ಬಂದಿವೆ. ಅತಿ ದುಬಾರಿಯಾದ ಪರೀಕ್ಷೆಗಳು ಕಾಯಿಲೆಗಳನ್ನು ಪತ್ತೆ ಹಚ್ಚುವಲ್ಲಿ ಹೆಚ್ಚು ಉಪಯುಕ್ತವೆಂಬ ತಪ್ಪು ನಂಬಿಕೆ ಜನಸಾಮಾನ್ಯರ ಮನಸ್ಸಿನಲ್ಲಿದೆ. ಹಾಗಾಗಿ ಅವರಲ್ಲಿ ರೋಗಲಕ್ಷಣಗಳು ಕಾಣಿಸಿಕೊಂಡಾಗ ಅವರು ವೈದ್ಯರ ಸಲಹೆಯನ್ನು ಪಡೆದು ಅಗತ್ಯ ಪರೀಕ್ಷೆಗಳನ್ನು ಮಾಡಿಸಿಕೊಳ್ಳದೆ ಯಾವುದೋ ದುಬಾರಿ ಪರೀಕ್ಷೆಗಳ ಮೊರೆ ಹೋಗುತ್ತಾರೆ.

> ಹೆಚ್ಚಿನ ಸಂದರ್ಭದಲ್ಲಿ ಯಾವುದೇ ಸ್ಕ್ಯಾನಿಂಗ್ ಅಗತ್ಯವಿಲ್ಲದಿದ್ದರೂ ಜನರು ತಮ್ಮ ಮನಸ್ಸಿನ ನೆಮ್ಮದಿಗಾಗಿ ಸ್ಕ್ಯಾನಿಂಗ್ ಮೊರೆ ಹೋಗುತ್ತಾರೆ. ಎಕ್ಸ್-ರೇ ಮತ್ತು ಸಿಟಿ ಸ್ಕ್ಯಾನ್‌ಗಳ ಸಮಯದಲ್ಲಿ ಹೊರಬರುವ ವಿಕಿರಣಗಳು ದೇಹದ ಮೇಲೆ ಮಾರಕ ಪರಿಣಾಮಗಳನ್ನು ಉಂಟುಮಾಡಬಹುದು.



ಇಂದಿನ ದಿನಗಳಲ್ಲಿ ನಮ್ಮ ಜನಸಾಮಾನ್ಯರು ಅವರ ದೇಹದ ಯಾವ ಅಂಗಾಂಗಗಳಲ್ಲಿ ಸಮಸ್ಯೆ ಕಾಣಿಸಿಕೊಂಡರೂ, ಕೂಡಲೇ ಅವರು ಆ ಅಂಗಾಂಗದ ಸ್ಕ್ಯಾನಿಂಗ್ ಮಾಡಿಸಿಕೊಳ್ಳಲು ಬಯಸುತ್ತಾರೆ. ಹೆಚ್ಚಿನ ಸಂದರ್ಭದಲ್ಲಿ ಯಾವುದೆ ಸ್ಕಾನಿಂಗ್ ಅಗತ್ಯವಿಲ್ಲದಿದ್ದರೂ ತಮ್ಮ ಮನಸ್ಸಿನ ನೆಮ್ಮದಿಗಾಗಿ ಸ್ಕ್ಯಾನಿಂಗ್ ಮೊರೆ ಹೋಗುವವರು ಇದ್ದಾರೆ. ಇಂದು ಒಂದು ಎಕ್ಸ್-ರೇ ಮಾಡಿಸಲು ಸುಮಾರು ಮುನ್ನೂರು ರೂಪಾಯಿ ಖರ್ಚು ಮಾಡಬೇಕಾಗಿ ಬಂದರೆ ದೇಹದ ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಮಾಡಿಸಿಕೊಳ್ಳಲು ಸಾವಿರ ರೂಪಾಯಿಗೂ ಹೆಚ್ಚು ಖರ್ಚಾಗುತ್ತದೆ. ‘ಸಿಟಿ ಸ್ಕ್ಯಾನ್’ (ಕಂಪ್ಯೂಟರೈಸ್ಡ್ ಟೊಮೊಗ್ರಫಿ) ಮಾಡಿಸಿಕೊಳ್ಳಲು ಸುಮಾರು ಮೂರರಿಂದ ನಾಲ್ಕು ಸಾವಿರ ಖರ್ಚು ಬಂದರೆ ದೇಹದ ಯಾವುದೇ ಭಾಗದ ‘ಎಂಆರ್‌ಐ’ (ಮ್ಯಾಗ್ನೆಟಿಕ್ ರೆಸನೆನ್ಸ್ ಇಮೇಜಿಂಗ್) ಮಾಡಿಸಿಕೊಳ್ಳಲು ಸುಮಾರು ಏಳರಿಂದ ಎಂಟು ಸಾವಿರ ರೂಪಾಯಿಗಳಷ್ಟು ಖರ್ಚು ಬರುತ್ತದೆ. ಈ ವಿವಿಧ ಸ್ಕ್ಯಾನಿಂಗ್ ಮಾಡಿಸುವ ಯಂತ್ರಗಳು ಕೋಟ್ಯಂತರ ರೂಪಾಯಿಗಳಷ್ಟು ಬೆಲೆ ಬಾಳುತ್ತದೆ. ಕೆಲವು ದಶಕಗಳ ಹಿಂದೆ ಆಸ್ಪತ್ರೆಯ ಪ್ರತಿಷ್ಠೆಯು ಅಲ್ಲಿ ಕೆಲಸ ಮಾಡುವ ಹೆಸರಾಂತ ವೈದ್ಯರಿಂದ ನಿರ್ಧಾರವಾಗುತ್ತಿತ್ತು. ಆದರೆ ಇಂದಿನ ದಿನಗಳಲ್ಲಿ ದುಬಾರಿ ಯಂತ್ರಗಳನ್ನು ಹೊಂದಿರುವ ಆಸ್ಪತ್ರೆಯು ಹೆಚ್ಚು ಪ್ರತಿಷ್ಠಿತ ಎಂದೆನಿಸಿಕೊಳ್ಳುತಿದೆ. ಈ ಸ್ಕ್ಯಾನಿಂಗ್ ಪರೀಕ್ಷೆಗಳ ವಿಚಾರಕ್ಕೆ ಬಂದಾಗ ದೇಹದ ವಿವಿಧ ಭಾಗಗಳಲ್ಲಿ ಕಂಡುಬರುವ ವಿವಿಧ ರೋಗಗಳನ್ನು ಪತ್ತೆ ಹಚ್ಚುವಲ್ಲಿ ಯಾವ ಮಾದರಿಯ ಸ್ಕ್ಯಾನಿಂಗ್ ಹೆಚ್ಚು ಉಪಯುಕ್ತವೆಂದು ವೈದ್ಯರು ಮಾತ್ರ ಸರಿಯಾದ ನಿರ್ಧಾರಕ್ಕೆ ಬರಬಲ್ಲರು. ಪರೀಕ್ಷೆ ದುಬಾರಿಯಾಗಿರುವ ಏಕೈಕ ಕಾರಣದಿಂದಾಗಿ ಅದು ಉಪಯುಕ್ತ ಪರೀಕ್ಷೆ ಎಂದೆನಿಸಿಕೊಳ್ಳದು.

ಉದಾಹರಣೆಗೆ, ಎಲುಬುಗಳ ಸಮಸ್ಯೆಗಳನ್ನು, ಎಕ್ಸ್-ರೇ ಮತ್ತು ಸಿಟಿ ಸ್ಕ್ಯಾನಿಂಗ್ ಹೆಚ್ಚು ಸಮರ್ಪಕವಾಗಿ ಪತ್ತೆ ಹಚ್ಚಬಲ್ಲದು ಮತ್ತು ಮೃದು ಅಂಗಾಂಗಗಳು ಎಂಆರ್‌ಐ ಮತ್ತು ಅಲ್ಟ್ರಾಸೌಂಡ್ ಸ್ಕ್ಯಾನಿನಲ್ಲಿ ಉತ್ತಮವಾಗಿ ಕಾಣಿಸುತ್ತದೆ. ಕರುಳಿನಲ್ಲಿ ಛೇದವಾಗಿರುವ ಕಾರಣದಿಂದ ಹೊಟ್ಟೆಯೊಳಗೆ ಗಾಳಿ ತುಂಬಿಕೊಂಡಿದ್ದರೆ ಅದರ ಲಕ್ಷಣಗಳು ಸರಳವಾದ ಎಕ್ಸ್-ರೇಯಲ್ಲಿ ಕಾಣಸಿಗುವಷ್ಟು ಉತ್ತಮವಾಗಿ ಹೊಟ್ಟೆಯ ಸ್ಕ್ಯಾನಿಂಗ್‌ನಲ್ಲಿ ಕಾಣಿಸುವುದಿಲ್ಲ. ಅತ್ಯಂತ ಅಗ್ಗದಲ್ಲಿ ಲಭ್ಯವಿರುವ ‘ಇಸಿಜಿ’ ಪರೀಕ್ಷೆಯು ‘ಎಕೋ ಸ್ಕ್ಯಾನಿಂಗ್’ಗಿಂತ ಹೆಚ್ಚು ನಿಖರವಾಗಿ ಹೃದಯ ಬಡಿತದ ಸಮಸ್ಯೆಗಳನ್ನು ಪತ್ತೆ ಹಚ್ಚಬಲ್ಲದು. ತಲೆಗೆ ಏಟು ಬಿದ್ದಾಗ ಮಿದುಳಿನೊಳಗಡೆ ಉಂಟಾಗುವ ರಕ್ತಸ್ರಾವವನ್ನು ಸಿಟಿ ಸ್ಕ್ಯಾನ್ ಕೆಲವೇ ನಿಮಿಷಗಳಲ್ಲಿ ಪತ್ತೆ ಹಚ್ಚಬಲ್ಲದು. ಎಂಆರ್‌ಐ ಸ್ಕ್ಯಾನ್ ಮಿದುಳಿನ ಬಗ್ಗೆ ಹೆಚ್ಚು ಸ್ಪಷ್ಟವಾದ ಮಾಹಿತಿಯನ್ನು ನೀಡಬಲ್ಲದು, ನಿಜ. ಆದರೆ ಈ ಪರೀಕ್ಷೆಯನ್ನು ನಡೆಸಲು ಹಲವು ಗಂಟೆಗಳು ತಗಲುವುದರಿಂದ ರೋಗಿಯ ತಲೆಗೆ ಪೆಟ್ಟು ಬಿದ್ದ ತುರ್ತುಸ್ಥಿತಿಯಲ್ಲಿ ಎಂಆರ್‌ಐ ಸ್ಕ್ಯಾನಿಂಗ್ ಮಾಡುತ್ತ ಕಾಲಹರಣವನ್ನು ಮಾಡಲಾಗುವುದಿಲ್ಲ. ಸುಮಾರು ಐವತ್ತು ರುಪಾಯಿಗೆ ಲಭ್ಯವಿರುವ ಮೂತ್ರಪರೀಕ್ಷೆಯು ಕಿಡ್ನಿಯ ಆರೋಗ್ಯ ಮತ್ತು ಕಾಯಿಲೆಗಳ ಬಗ್ಗೆ ನೀಡಬಲ್ಲ ಮಾಹಿತಿಯನ್ನು ಯಾವ ದುಬಾರಿ ಸ್ಕ್ಯಾನಿಂಗ್ ಕೂಡ ನೀಡಲಾರದು. ಮೆದುಳಿನ ಜ್ವರ ಮತ್ತು ಸೋಂಕಿನ ಸಂದರ್ಭದಲ್ಲಿ ಬೆನ್ನಿನ ಹುರಿಯಿಂದ ಸೂಜಿಯ ಮೂಲಕ ದ್ರವವನ್ನು ತೆಗೆದು ಅದರಲ್ಲಿ ಸೂಕ್ಷ್ಮಜೀವಿಗಳನ್ನು ಪತ್ತೆ ಹಚ್ಚಬೇಕಾಗಿ ಬರುತ್ತದೆ. ರೋಗವನ್ನು ಪತ್ತೆ ಹಚ್ಚುವಲ್ಲಿ ಮತ್ತು ಮುಂದಿನ ಚಿಕಿತ್ಸೆ ನೀಡುವ ಬಗ್ಗೆ ಈ ಪರೀಕ್ಷೆ ಕೊಡುವಷ್ಟು ನಿಖರ ಮಾಹಿತಿ ಸ್ಕ್ಯಾನಿಂಗ್‌ನಿಂದ ಲಭ್ಯವಾಗದು. ಗ್ಯಾಸ್ಟ್ರಿಕ್ ಸಮಸ್ಯೆಯಿಂದ ಉಂಟಾಗುವ ಹೊಟ್ಟೆಯೊಳಗಿನ ಹುಣ್ಣನ್ನು ಯಾವ ಸ್ಕ್ಯಾನಿಂಗ್ ಮೂಲಕವೂ ನೋಡಲಾಗದು. ಹೊಟ್ಟೆಯಲ್ಲಿ ಆ್ಯಸಿಡ್ ಉತ್ಪಾದನೆಯನ್ನು ಕಡಿಮೆ ಮಾಡಬಲ್ಲ ಔಷಧಗಳನ್ನು ಬಳಸಿದಾಗ ರೋಗಿಯು ಗುಣಮುಖವಾಗುವ ಆಧಾರದಲ್ಲಿ ಈ ರೋಗವನ್ನು ಪತ್ತೆ ಮಾಡಬೇಕಾಗುತ್ತದೆ.

ಎಕ್ಸ್-ರೇ ಮತ್ತು ಸಿಟಿ ಸ್ಕ್ಯಾನ್‌ಗಳ ಸಮಯದಲ್ಲಿ ಹೊರಬರುವ ವಿಕಿರಣಗಳು ದೇಹದ ಮೇಲೆ ಮಾರಕ ಪರಿಣಾಮಗಳನ್ನು ಉಂಟುಮಾಡಬಹುದು. ಒಂದು ಸಿಟಿ ಸ್ಕ್ಯಾನಿನ ಸಮಯದಲ್ಲಿ ಹೊರಬರುವ ವಿಕಿರಣಗಳು ಸುಮಾರು ನೂರು ಎಕ್ಸ್-ರೇ ಮಾಡಿಸಿದಾಗ ಹೊರಬರುವ ವಿಕಿರಣಗಳಿಗೆ ಸಮವಾಗಿರುವ ಕಾರಣದಿಂದ ಯಾವುದೇ ರೋಗಿಯು ವೈದ್ಯರ ಸಲಹೆ ಪಡೆಯದೆ ಸಿಟಿ ಸ್ಕ್ಯಾನ್ ಮಾಡಿಸಿಕೊಳ್ಳಬಾರದು. ಈ ವಿಕಿರಣಗಳು ದೇಹದೊಳಗೆ ವಿವಿಧ ದುಷ್ಪರಿಣಾಮಗಳನ್ನು ಬೀರುವುದರ ಜೊತೆಗೆ ಕ್ಯಾನ್ಸರ್ ರೋಗಕ್ಕೂ ಕಾರಣವಾಗುತ್ತದೆ. ಗರ್ಭಿಣಿಯರಲ್ಲಿ ಬೆಳೆಯುತ್ತಿರುವ ಶಿಶುವಿಗೆ ವಿಕಿರಣದಿಂದ ಅತಿ ಹೆಚ್ಚು ಅಪಾಯವಾಗುವ ಸಾಧ್ಯತೆಯಿರುವುದರಿಂದ ಗರ್ಭಿಣಿಯರು ಯಾವುದೇ ಪರೀಕ್ಷೆ ಮಾಡಿಸಿಕೊಳ್ಳುವ ಮೊದಲು ಅಥವಾ ಯಾವುದೇ ಔಷಧವನ್ನು ಸೇವಿಸುವ ಮೊದಲು ವೈದ್ಯರ ಸಲಹೆಯನ್ನು ಪಡೆಯುವುದು ಅತ್ಯಗತ್ಯ. ಮಾಹಿತಿ ತಂತ್ರಜ್ಞಾನದ ಯುಗದಲ್ಲಿ ಮಾಹಿತಿಯನ್ನು ತಜ್ಞವೈದ್ಯರ ಸಲಹೆಯನ್ನು ಪಡೆಯದೆ ಮತ್ತು ವಿವೇಕವನ್ನು ಉಪಯೋಗಿಸದೆ ಬಳಸಿದಲ್ಲಿ ಅಪಾಯ ಕಟ್ಟಿಟ್ಟ ಬುತ್ತಿ!

❖

ಅತಿಬಾಯಾರಿಕೆಯೆ? ಹೆದರಬೇಡಿ

ಡಾ. ಪಲ್ಲವಿ ಹೆಗಡೆ

ಬಾಯಾರಿಕೆ - ದೇಹದ ಸಹಜಕ್ರಿಯೆ; ಚಯಾಪಚಯಕ್ರಿಯೆಗಳು ನಡೆಯುವಾಗ ದ್ರವಾಂಶವು ಅಗತ್ಯ. ಆಯಾ ವ್ಯಕ್ತಿಯ ಹತ್ತು ಬೊಗಸೆಯಷ್ಟು ದ್ರವಾಂಶವು ಶರೀರದಲ್ಲಿರುತ್ತದೆ. ಬಾಯಾರಿಕೆಯು, ದ್ರವಾಂಶವು ಕಡಿಮೆಯಾಗಿ, ಶರೀರಕ್ಕೆ ಅಗತ್ಯವಿರುವಾಗ ಅನುಭವಕ್ಕೆ ಬರುವ ಸೂಚನೆ. ಹಸಿವೆಯಾಗುವುದು ಶರೀರಕ್ಕೆ ಘನಾಹಾರದ ಅಗತ್ಯವಿದೆ ಎಂದು ಸೂಚಿಸುತ್ತದೆ. ಹಸಿವು ಮತ್ತು ಬಾಯಾರಿಕೆ ಒಟ್ಟೊಟ್ಟಿಗೆ ಆಗುವುದು ಸ್ವಾಸ್ಥ್ಯ ಲಕ್ಷಣ. ಆಹಾರವನ್ನು ತಿನ್ನುತ್ತಾ, ನೀರು ಅಥವಾ ಇತರ ದ್ರವಾಹಾರಗಳನ್ನು ಕುಡಿಯುವುದು ದೇಹದ ಅವಶ್ಯಕತೆಯನ್ನು ಸರಿದೂಗಿಸುತ್ತದೆ. ಒಂದೇ ವ್ಯಕ್ತಿಯಲ್ಲಿ ವಾತಾವರಣ, ಶಾರೀರಕ ಚಟುವಟಿಕೆ, ಆಹಾರಕ್ಕೆ ಅನುಗುಣವಾಗಿ ಬಾಯಾರಿಕೆಯೂ ವ್ಯತ್ಯಾಸವಾಗುತ್ತದೆ. ಹೆಚ್ಚು ಬೆವರುವ, ಉಷ್ಣಮೈಯುಳ್ಳ ಪಿತ್ತಪ್ರಕೃತಿಯ ವ್ಯಕ್ತಿಗಳಿಗೆ ಬಾಯಾರಿಕೆ ಹೆಚ್ಚು, ಇವರಿಗೆ ದ್ರವಾಹಾರದ ಅಗತ್ಯವೂ ಹೆಚ್ಚು.



ನೀರು, ಬಾಯಾರಿಕೆಯನ್ನು ನಿವಾರಿಸುವ ಅತ್ಯುತ್ತಮ ದ್ರವಾಹಾರ. ಬಾಯಾರಿಕೆಯಾದಾಗಲೂ ನೀರು ಅಥವಾ ಯಾವುದೇ ದ್ರವಾಹಾರವನ್ನು ಸೇವಿಸದೆ ಇದ್ದರೆ ಹಲವು ತೊಂದರೆಗಳಾಗಬಹುದು. ಯಾವಾಗಲೂ ಬಾಯಾರಿಕೆಯನ್ನು ನಿವಾರಿಸಿಕೊಳ್ಳದೆ ಹಾಗೆಯೇ ಇದ್ದರೆ ಗಂಟಲು-ಬಾಯಿ ಒಣಗುವುದು, ಕಿವಿಮಂದವಾಗುವುದು, ಆಯಾಸಗೊಳ್ಳುವುದು, ಸೋತುಬರುವುದು, ಎದೆಯು ಹಿಡಿದಂತೆ, ಹಿಂಡಿದಂತಾಗುವುದು. ಆದ್ದರಿಂದ ಬಾಯಾರಿಕೆಯನ್ನು ಸಕಾಲದಲ್ಲಿ ತಣಿಸಿಕೊಳ್ಳಬೇಕು.

ಅತಿಯಾದ ಬಾಯಾರಿಕೆಗೆ ಕಾರಣಗಳು

ನೀರು ಅಥವಾ ಯಾವುದೇ ದ್ರವವನ್ನು ಕುಡಿದಷ್ಟೂ ಬಾಯಾರಿಕೆಯಾಗುವುದು, ಇನ್ನೂ ಮತ್ತಷ್ಟು ನೀರು ಬೇಕೆನಿಸುವುದು, ಗಂಟಲು-ಬಾಯಿ-ತುಟಿ ಒಣಗಿಕೊಂಡೇ ಇರುವುದು ಅತಿಯಾದ ಬಾಯಾರಿಕೆ ಅಥವಾ ‘ತೃಷ್ಣಾರೋಗ’ದ ಲಕ್ಷಣ. ಇದು ಮತ್ತೊಂದು ರೋಗದ ಲಕ್ಷಣವೂ ಆಗಿರಬಹುದು. ಉದಾಹರಣೆಗೆ ಜ್ವರ, ರಕ್ತಪಿತ್ತ, ಶ್ವಾಸರೋಗ, ಕೆಮ್ಮು, ಜಲೋದರ, ಪ್ರಮೇಹ, ಸ್ಥೌಲ್ಯ ಅಥವಾ ಪಿತ್ತದೋಷದ ವೃದ್ಧಿಯಿಂದ ಅತಿಯಾದ ಬಾಯಾರಿಕೆಯಾಗಬಹುದು. ಕೆಲವು ಸಾಮಾನ್ಯ ಕಾರಣಗಳು ಹೀಗಿವೆ:

- ಶಾರೀರಿಕ-ಮಾನಸಿಕ ಆಘಾತ, ಭಯ, ಶಾರೀರಿಕಶ್ರಮ, ದುಃಖ, ಸಿಟ್ಟು ಮೊದಲಾದ ಸ್ಥಿತಿಗಳಲ್ಲಿ.
- ಸಂಪೂರ್ಣವಾಗಿ ಆಹಾರವನ್ನು ತ್ಯಜಿಸಿ ಉಪವಾಸದಲ್ಲಿ ತೊಡಗಿಕೊಳ್ಳುವುದು.
- ಮದ್ಯಸೇವನೆಯ ವ್ಯಸನದಿಂದ.
- ಕ್ಷಾರ/ಉಪ್ಪು, ಹುಳಿ, ಖಾರ, ಉಷ್ಣ ಆಹಾರಗಳ ಸೇವನೆ, ಜಿಡ್ಡುರಹಿತ, ಒಣಕಲು ಆಹಾರಸೇವನೆ.
- ಬಹುಕಾಲದಿಂದ ಯಾವುದೋ ಕಾಯಿಲೆಗೆ ತುತ್ತಾಗಿ ದೇಹವು ಸೊರಗಿದ್ದಾಗ.
- ವಮನ, ವಿರೇಚನ ಮೊದಲಾದ ಆಯುರ್ವೇದದ ಶೋಧನಚಿಕಿತ್ಸೆಯು ತಪ್ಪಾದಾಗ, ಅತಿಯಾದಾಗ.
- ಸದಾ ಬಿಸಿಲಿನಲ್ಲಿ ಬಳಲುವಿಕೆ.
- ದೇಹದಲ್ಲಿ ಪಿತ್ತ-ವಾತದೋಷಗಳು ಹೆಚ್ಚಿ, ತಂಪಿನಂಶವನ್ನು ಕಡಿಮೆಮಾಡಿ, ನಾಲಿಗೆ, ಗಂಟಲು, ಬಾಯಿ, ತುಟಿ, ಶ್ವಾಸಕೋಶಗಳನ್ನು ಒಣಗಿಸಿ ಅತಿಯಾದ ಬಾಯಾರಿಕೆಯನ್ನು ಉಂಟುಮಾಡುತ್ತವೆ.

ಪರಿಹಾರಗಳು

- ಶುದ್ಧವಾದ ಮಳೆಯ ನೀರಿನಲ್ಲಿ ಅಥವಾ ತಣ್ಣೀರಿನಲ್ಲಿ ಜೇನುತುಪ್ಪವನ್ನು ಬೆರೆಸಿ ಕುಡಿಯುವುದು.
- ಕಾಯಿಸಿ ಆರಿಸಿದ ನೀರಿನಲ್ಲಿ ಕಲ್ಲುಸಕ್ಕರೆಯನ್ನು ಬೆರೆಸಿ ಕುಡಿಯುವುದು.
- ಬೆಲ್ಲವನ್ನು ತಿಂದು ತಣ್ಣೀರನ್ನು ಕುಡಿಯುವುದು.
- ಕಬ್ಬಿನ ರಸವನ್ನು ಕುಡಿಯುವುದು.
- ದ್ರಾಕ್ಷಿಯಿಂದ ಮಾಡಿದ ಮದ್ಯವನ್ನು ಸೇವಿಸುವುದು.
- ಭತ್ತದ ಅರಳಿನ ಪುಡಿ, ಕಲ್ಲುಸಕ್ಕರೆ, ಜೇನುತುಪ್ಪವನ್ನು ತಣ್ಣೀರಿನಲ್ಲಿ ಬೆರೆಸಿ ಕುಡಿಯುವುದು.
- ಜವೆಗೋಧಿಯನ್ನು ಬೇಯಿಸಿ ಗಂಜಿ ಬಸಿದು ಜೇನುತುಪ್ಪವನ್ನು ಬೆರೆಸಿ ಕುಡಿಯುವುದು.
- ಹಾಲಿನ ಖೀರು, ಕೆಂಪಕ್ಕಿಯ ಗಂಜಿ ಅಥವಾ ಪಾಯಸ ಆಹಾರವಾಗಿ ಸೇವಿಸುವುದು.
- ತಣ್ಣೀರಿನಲ್ಲಿ ಮುಳುಗಿ ಅಥವಾ ಟಬ್‌ಬಾತ್ ಮಾಡಿ ತುಪ್ಪ ಬೆರೆಸಿದ ಹೂಬಿಸಿಯಾದ ಹಾಲನ್ನು ಕುಡಿಯುವುದು.
- ಹೆಸರುಬೇಳೆ, ಮಸೂರ್‌ದಾಲ್, ಕಡಲೆಬೇಳೆ ಬೇಯಿಸಿದ ತಿಳಿಗೆ ತುಪ್ಪ ಬೆರೆಸಿ ಕುಡಿಯುವುದು.
- ಮೂಗಿಗೆ ಎದೆಹಾಲು ಅಥವಾ ಹಸುವಿನ ಹಾಲು ಅಥವಾ ಕಬ್ಬಿನ ರಸವನ್ನು ಹನಿಸುವುದು. ಗಂಟಲಿಗೆ ಬರುವಷ್ಟಾದರೂ ಹನಿಗಳನ್ನು ಬಿಡುವುದು.
- ಕೋಕಂ/ ಮುರುಗಲು ಹಣ್ಣಿನರಸ ಅಥವಾ ಮಾದಲಕಾಯಿ ಅಥವಾ ಲಿಂಬೆಜಾತಿಯ ಹಣ್ಣಿನ ರಸಗಳಿಂದ ಬಾಯಿಯನ್ನು ತುಂಬಿಕೊಂಡು, ಮುಕ್ಕಳಿಸುವುದು – ಇದರಿಂದ ಅತಿಯಾಗಿ ಬಾಯಿಯು ಒಣಗುವುದು ಸರಿಯಾಗುತ್ತದೆ.
- ತಲೆಗೆ ಮೊಸರು ಮತ್ತು ನೆಲ್ಲಿಪುಡಿಯ ಕಲ್ಕವನ್ನು ಲೇಪಿಸಿ ಒಣಗದಂತೆ ಒಂದೆರಡು ಗಂಟೆ ತೇವ ಮಾಡುತ್ತಾ ಇಟ್ಟುಕೊಳ್ಳುವುದು.
- ತಲೆಗೆ, ಎದೆಗೆ ಚಂದನದ ಶೀತಲೇಪನ, ತಣ್ಣೀರಿನಲ್ಲಿ ಅದ್ದಿದ ಬಟ್ಟೆಯನ್ನು ತಲೆಗೆ, ಎದೆಗೆ ಹೊದೆದುಕೊಳ್ಳುವುದು.
- ತಣ್ಣೀರಿನಲ್ಲಿ ಪಾದವನ್ನು ಮುಳುಗಿಸಿಟ್ಟುಕೊಳ್ಳುವುದು.
- ಮದ್ಯಸೇವನೆಯಿಂದ, ರಕ್ತವು ಒಸರುವ ಕಾಯಿಲೆ, ಪಿತ್ತವೃದ್ಧಿ, ವಿಷಸೇವನೆಯಿಂದ ಬಾಯಾರಿಕೆಯಾಗುತ್ತಿದ್ದರೆ ಸ್ವಭಾವತಃ ಶೀತವಾದ ನೀರು ಹಿತ.
- ದಮ್ಮು, ಕೆಮ್ಮು, ಬಿಕ್ಕಳಿಕೆ, ಜ್ವರ, ನೆಗಡಿ, ಗಂಟಲು, ಎದೆಗೂಡಿನ ರೋಗಗಳಲ್ಲಿ, ಜಿಡ್ಡುಳ್ಳ ಆಹಾರಸೇವನೆಯಿಂದಾಗುವ ಬಾಯಾರಿಕೆಯಲ್ಲಿ ಬಿಸಿನೀರು ಹಿತಕರ.
- ಪ್ರಮೇಹ, ಜಲೋದರ, ಹೊಟ್ಟೆಯಲ್ಲಿ ಗಡ್ಡೆ ಮೊದಲಾದ ರೋಗದಲ್ಲಿ, ಹಸಿವೆಯೇ ಇಲ್ಲದೆ ಬಾಯಾರಿಕೆ ಮಾತ್ರ ಆಗುತ್ತಿರುವಾಗ ನೀರು ಹಿತಕರವಲ್ಲ. ಬದಲಿಗೆ ನೆಲ್ಲಿ, ತ್ರಿಫಲಾ, ನೆಲನೆಲ್ಲಿ ಮೊದಲಾದವುಗಳನ್ನು ಕುದಿಸಿದ, ಆರಿಸಿದ ನೀರು, ಜೇನು ಬೆರೆಸಿದ ನೀರು, ಆಯಾ ರೋಗದ ಚಿಕಿತ್ಸೆಯಲ್ಲಿ ಬಳಸಲಾಗುವ ಔಷಧಗಳ ನೀರನ್ನು ಸೇವಿಸಬಹುದು.

❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಸಮಾಜ ವಿಜ್ಞಾನ : ಇತಿಹಾಸ

ಅಧ್ಯಾಯ:1 ಭಾರತಕ್ಕೆ ಯುರೋಪಿಯನ್ನರ ಆಗಮನ

II. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ಕಾಲಾನುಕ್ರಮದಲ್ಲಿ ಜೋಡಿಸಿ

1) ಇಂಗ್ಲೆಂಡಿನ ರಾಜ ಒಂದನೆಯ ಜೇಮ್ಸ್‌ನ ರಾಯಭಾರಿಯಾಗಿ ಜಹಾಂಗೀರನ ಆಸ್ಥಾನಕ್ಕೆ ಬಂದನು

2) ಇಂಗ್ಲೆಂಡಿನ ರಾಜಕುಮಾರ ಎರಡನೇ ಚಾರ್ಲ್ಸ್ ಬಾಂಬೆಯನ್ನು ಕಂಪನಿಗೆ ವಾರ್ಷಿಕ 10 ಪೌಂಡುಗಳ ಬಾಡಿಗೆಗೆ ವಹಿಸಿಕೊಟ್ಟನು.

3) ಲಿಸ್ಬನ್‌ನಿಂದ ಹೊರಟ ಪೋರ್ಚುಗಲ್ ನಾವಿಕ ವಾಸ್ಕೋಡಗಾಮನು ಭಾರತದ ಪಶ್ಚಿಮ ಕರಾವಳಿ ತೀರದ ಕಲ್ಲಿಕೋಟೆ ಸಮೀಪ ಬಂದು ತಲುಪಿದನು.

4) ಮೀರ್ ಖಾಸಿಂ ನೇತೃತ್ವದ ಮೂರೂ ಸಂಯುಕ್ತ ಸೇನೆಗಳು ಹೆಕ್ಟರ್ ಮನ್ರೋ ನೇತೃತ್ವದ ಬ್ರಿಟಿಷ್ ಸೇನೆಯನ್ನು ಬಕ್ಸರ್ ಎಂಬಲ್ಲಿ ಮುಖಾಮುಖಿಯಾದವು.

ಕಾಲಾನುಕ್ರಮದಲ್ಲಿ ಜೋಡಿಸಿ

ಉತ್ತರ:- 1) ಲಿಸ್ಬನ್‌ನಿಂದ ಹೊರಟ ಪೋರ್ಚುಗಲ್ ನಾವಿಕ ವಾಸ್ಕೊಡಗಾಮನು 1498ರಲ್ಲಿ ಭಾರತದ ಪಶ್ಚಿಮ ಕರಾವಳಿ ತೀರದ ಕಲ್ಲಿಕೋಟೆ ಸಮೀಪ ಬಂದು ತಲುಪಿದನು

2) 1617ರಲ್ಲಿ ಇಂಗ್ಲೆಂಡಿನ ರಾಜ ಒಂದನೆಯ ಜೇಮ್ಸ್‌ನ ರಾಯಭಾರಿಯಾಗಿ ಜಹಾಂಗೀರನ ಆಸ್ಥಾನಕ್ಕೆ ಬಂದನು

3) ಇಂಗ್ಲೆಂಡಿನ ರಾಜಕುಮಾರ ಎರಡನೇ ಚಾರ್ಲ್ಸ್ ಬಾಂಬೆಯನ್ನು 1668ರಲ್ಲಿ ಕಂಪನಿಗೆ ವಾರ್ಷಿಕ 10 ಪೌಂಡುಗಳ ಬಾಡಿಗೆಗೆ ವಹಿಸಿಕೊಟ್ಟನು.

4) ಮೀರ್ ಖಾಸಿಂ ನೇತೃತ್ವದ ಮೂರೂ ಸಂಯುಕ್ತ ಸೇನೆಗಳು ಹೆಕ್ಟರ್ ಮನ್ರೋ ನೇತೃತ್ವದ ಬ್ರಿಟಿಷ್ ಸೇನೆಯನ್ನು 1764ರಲ್ಲಿ ಬಕ್ಸರ್ ಎಂಬಲ್ಲಿ ಮುಖಾಮುಖಿಯಾದವು.

2) ಕಾಲಾನುಕ್ರಮದಲ್ಲಿ ಜೋಡಿಸಿ

1) ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯು ಆರಂಭವಾಯಿತು.

2) ಯುವ ನವಾಬನಾದ ಸಿರಾಜ್-ಉದ್-ದೌಲನಿಗೂ ಮತ್ತು ಬ್ರಿಟಿಷರಿಗೂ ಇತಿಹಾಸ ಪ್ರಸಿದ್ಧ ಪ್ಲಾಸಿ ಕದನ ನಡೆಯಿತು.

3) ಡೂಪ್ಲೆ ಪಾಂಡಿಚೇರಿಯ ಗವರ್ನರ್ ಆಗಿ ಬಂದನು.

4) ಬಿಜಾಪುರದ ಸುಲ್ತಾನನಿಂದ ಗೋವಾವನ್ನು ಆಲ್ಫೋನ್ಸೊ-ಡಿ-ಅಲ್ಬುಕರ್ಕ್ ಗೆದ್ದುಕೊಂಡು ಪೋರ್ಚುಗೀಸರ ಆಡಳಿತ ಕೇಂದ್ರವಾಗಿ ಪರಿವರ್ತಿಸಿದವನು.

ಉತ್ತರ:-

1) 1510ರಲ್ಲಿ ಬಿಜಾಪುರದ ಸುಲ್ತಾನನಿಂದ ಗೋವಾವನ್ನು ಆಲ್ಫೋನ್ಸೊ-ಡಿ-ಅಲ್ಬುಕರ್ಕ್ ಗೆದ್ದುಕೊಂಡು ಪೋರ್ಚುಗೀಸರ ಆಡಳಿತ ಕೇಂದ್ರವಾಗಿ ಪರಿವರ್ತಿಸಿದವನು.

2) ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯು ಆರಂಭವಾಯಿತು. (1664)

3) ಡೂಪ್ಲೆ ಪಾಂಡಿಚೇರಿಯ ಗವರ್ನರ್ ಆಗಿ ಬಂದನು (1746)

4) ಯುವ ನವಾಬನಾದ ಸಿರಾಜ್-ಉದ್-ದೌಲನಿಗೂ ಮತ್ತು ಬ್ರಿಟಿಷರಿಗೂ 1757ರಲ್ಲಿ ಇತಿಹಾಸ ಪ್ರಸಿದ್ಧ ಪ್ಲಾಸಿ ಕದನ ನಡೆಯಿತು.

ಬಿಟ್ಟ ಸ್ಥಳ ತುಂಬಿರಿ

1) ಭಾರತದಲ್ಲಿ ಪೋರ್ಚುಗೀಸ್ ಸಾಮ್ರಾಜ್ಯದ ನಿಜವಾದ ಸ್ಥಾಪಕ..................................

ಉತ್ತರ:- ಆಲ್ಫೋನ್ಸೊ-ಡಿ-ಅಲ್ಬುಕರ್ಕ್

2) 1510ರಲ್ಲಿ ಬಿಜಾಪುರದ ಸುಲ್ತಾನನಿಂದ ಗೋವಾವನ್ನು ಗೆದ್ದುಕೊಂಡು ಪೋರ್ಚುಗೀಸರ ಆಡಳಿತ ಕೇಂದ್ರವಾಗಿ ಪರಿವರ್ತಿಸಿದವನು ....

ಉತ್ತರ:- ಆಲ್ಫೋನ್ಸೊ-ಡಿ-ಅಲ್ಬುಕರ್ಕ್

3) ....ರಲ್ಲಿ ಡಚ್ ಈಸ್ಟ್ ಇಂಡಿಯಾ ಕಂಪೆನಿಯು ಭಾರತಕ್ಕೆ ವ್ಯಾಪಾರಕ್ಕಾಗಿ ಬಂತು.

ಉತ್ತರ:- 1602

4) ಕರಿಮೆಣಸಿನ ಆಸೆಯಿಂದ ವಿದೇಶಿಯರು ನಡೆಸಿದ್ದ ನಿರಂತರ ಆಕ್ರಮಣವನ್ನು ಮತ್ತು ಸಾಮ್ರಾಜ್ಯದಾಹವನ್ನು ಮೆಟ್ಟನಿಂತ ವೈನಾಡ್ ಅರಸ ....

ಉತ್ತರ:- ಮಾರ್ತಾಂಡ ವರ್ಮ

5) ಮಾರ್ತಾಂಡ ವರ್ಮನು ವೈನಾಡ್ ಸಂಸ್ಥಾನದ ಗಡಿಯನ್ನು ವಿಸ್ತರಿಸಲು .... ಸಾವಿರ ಸೈನಿಕರ ಸೈನ್ಯವನ್ನು ಕಟ್ಟಿದನು.

ಉತ್ತರ:- 50

6) ....ನು ‘ನಾವೆಂದೂ ಮೆಣಸಿನ ವ್ಯಾಪಾರದ ಹಕ್ಕನ್ನು ಪರಕೀಯರಿಗೆ ಬಿಟ್ಟು ಕೊಡೆವು’ ಎಂದು ಡಚ್ಚರಿಗೆ ಖಾರವಾಗಿ ಪತ್ರ ಬರೆದನು

ಉತ್ತರ:- ಮಾರ್ತಾಂಡ ವರ್ಮ

7) ಇಂಗ್ಲೆಂಡಿನ ಎಲಿಜಬೆತ್ ರಾಣಿಯು ಸಾ.ಶ. 1600 ಡಿಸೆಂಬರ್ 31ರಂದು ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಗೆ ....ಗಳೊಂದಿಗೆ ವ್ಯಾಪಾರ ನಡೆಸಲು 15 ವರ್ಷಗಳ ಪರವಾನಗಿ ನೀಡಿದಳು.

ಉತ್ತರ:- ಪೂರ್ವದೇಶ

8) ಇಂಗ್ಲಿಷರು............................ಎಂಬಲ್ಲಿ ಸೆಂಟ್ ಜಾರ್ಜ್ ಫೋರ್ಟ್ ಎಂಬ ಬಲಿಷ್ಠ ಕೋಟೆಯನ್ನು ಕಟ್ಟಿದರು

ಉತ್ತರ:- ಮದ್ರಾಸ್

9) ಹೂಗ್ಲಿ ನದಿ ದಂಡೆಯ ಮೇಲೆ ಸುತನುತಿ, ಕೋಲ್ಕತ್ತ ಮತ್ತು ....ಎಂಬ ಮೂರು ಹಳ್ಳಿಗಳನ್ನು ಇಂಗ್ಲಿಷರು ಖರೀದಿಸಿ ಫೋರ್ಟ್ ವಿಲಿಯಂ ಎಂಬ ಕೋಟೆಯನ್ನು ಕಟ್ಟಿದರು. ಇದರ ಸುತ್ತ ಕೋಲ್ಕತ್ತ ನಗರ ಬೆಳೆಯಿತು.

ಉತ್ತರ:- ಗೋವಿಂದಪುರ

10) ಡೂಪ್ಲೆಯ ಕೋರಿಕೆಯ ಮೇರೆಗೆ ಲಾಬೋರ್ಡಿನಾ ಎಂಬ ಫ್ರೆಂಚ್ ಸೇನಾ ಮುಖ್ಯಸ್ಥನು ಮಾರಿಷಸ್‌ನಿಂದ ಬಂದು .... ರಿಂದ ಮದ್ರಾಸನ್ನು ವಶಪಡಿಸಿಕೊಂಡನು.

ಉತ್ತರ:- ಬ್ರಿಟಿಷ್

11) ಎರಡನೆಯ ಕಾರ್ನಾಟಿಕ್ ಯುದ್ಧವು .... ಒಪ್ಪಂದದೊಂದಿಗೆ ಮುಕ್ತಾಯವಾಯಿತು.

ಉತ್ತರ:- ಪಾಂಡಿಚೇರಿ

12)............................ವರ್ಷ ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯು ಆರಂಭವಾಯಿತು.

ಉತ್ತರ:- 1664

14)..................ವರ್ಷ ಡೂಪ್ಲೆ ಪಾಂಡಿಚೇರಿಯ ಗವರ್ನರ್ ಆಗಿ ಬಂದ

ಉತ್ತರ:- 1746

15) 1724ರಲ್ಲಿ ಹೈದರಾಬಾದ್ ಸಂಸ್ಥಾನವನ್ನು ಸ್ಥಾಪಿಸಿದನು ....

ಉತ್ತರ:- ‘ಅಸಫ್ ಜಾ’

16) .... ಒಪ್ಪಂದದೊಂದಿಗೆ ಮೊದಲ ಕಾರ್ನಾಟಿಕ್ ಯುದ್ಧ ಅಂತ್ಯವಾಯಿತು?

ಉತ್ತರ:- ‘ಏಕ್ಸ್-ಲಾ-ಚಾಪೆಲ್’

17) ಅಸಫ್‌ಜಾನ ಮತ್ತೊಬ್ಬ ಮಗನಾದ ಸಲಾಬತ್ ಜಂಗನನ್ನು ಹೈದರಾಬಾದಿನ ನಿಜಾಮನಾಗಿ ಮಾಡಿದವರು ....

ಉತ್ತರ:- ಫ್ರೆಂಚರು (ಮುಂದುವರಿಯುವುದು..)

II PUC PHYSICS

Chapter – 1

ELECTRIC CHARGES AND FIELDS

5. A pendulum bob of mass 80 mg and carrying charge of 2×10^{-8} C is at rest at a certain angle with the vertical in a horizontal uniform electric field of 20,000 Vm^{-1}. Find the tension in thread of the pendulum and the angle, it makes with the vertical.

Soln:- (.........Contd)

$$\therefore \tan\theta = \frac{2\times10^{-8} \times 20,000}{8\times10^{-5} \times 9.8} = 0.5102$$

$$\Rightarrow \theta = \tan^{-1}(0.5102) = 27.02^0$$

STEP - 3 Find Tension T

From eqn. (ii),

$$T = \frac{qE}{\sin\theta} = \frac{2\times10^{-8} \times 20,000}{\sin 27.02^0} = 8.8 \times 10^{-4}\ N.$$

6. Infinite number of identical charges each of charge q are placed along the x-axis at a distance a, 2a, 3a, 4a, …….. from the origin. Calculate the magnitude of the electric field at the origin due to this distribution of charges.

Soln:- Various charges placed along x-axis are shown in figure.



According to superposition principle, electric field at O due to the given distribution of charges is given by

$$E_1 = E_2 + E_3 + E_4 + \ldots\ldots$$

$$= \frac{1}{4\pi\epsilon_0}\frac{q}{a^2} + \frac{1}{4\pi\epsilon_0}\frac{q}{4a^2} + \frac{1}{4\pi\epsilon_0}\frac{q}{9a^2} + \frac{1}{4\pi\epsilon_0}\frac{q}{16a^2} + \ldots\ldots$$

$$= \frac{1}{4\pi\epsilon_0}\frac{q}{a^2}\left[1+\frac{1}{4}+\frac{1}{9}+\frac{1}{16}+\ldots\right]$$

$$= \frac{1}{4\pi\epsilon_0}\frac{q}{a^2}\left[1+\frac{1}{2^2}+\frac{1}{3^2}+\frac{1}{4^2}+\ldots\right]$$

$$\text{But}\left[1+\frac{1}{2^2}+\frac{1}{3^2}+\frac{1}{4^2}+\ldots\right] = \frac{\pi^2}{6}$$

$$\therefore E = \frac{1}{4\pi\epsilon_0}\frac{q}{a^2} \times \frac{\pi^2}{6} = \frac{1}{4\pi\epsilon_0}\left[\frac{\pi^2 q}{6a^2}\right]$$

Answer the following :-

1. A small metallic ball is suspended through an insulating thread in a uniform electric field. If high energy X-ray beam falls on the ball, what will happen to the ball?

Ans:- Falling of high energy X-ray beam on the metal ball will result into emission of electrons from it. Thus the ball acquires positive charge and is deflected by the uniform electric field.

2. What is the role of electric field in microwave cooking?

Ans:- Foods that contain water can be cooked better in a microwave oven because water molecules are electric dipoles which oscillate due to the electric field of microwaves generated in the oven. The bonded molecules of water are broken because of these oscillations, thus transferring their energy into thermal, thus transferring their energy into thermal energy. This thermal energy cooks the food in a microwave oven.

3. Let two charged particles have similar curved paths in a uniform electrostatic field. Then pick the false statements

(1) They have same specific charge i.e., $\frac{e}{m}$ ratio

(2) Their masses must be same

(3) Their charges are of same sign

(4) Magnitudes of their charges must be same.

Ans:- (2) and (4) are false statements because in these cases their $\frac{e}{m}$ ratios will be same and the charges will be of same sign.

4. Give a rough plot of field lines in the electric field around two charges +3 unit and -1 unit.

Ans:- Field lines are directly proportional to the magnitude of electric field. On the other hand, electric field is directly proportional to the magnitude of charge. Thus, the field lines starting or ending on a charge are proportional to the magnitude of charge. It means, field lines starting from a large charge are more than starting from a small charge. The plot is given as ahead:



5. A pendulum consisting of an insulating bob of mass *m* and charge *q* hung as shown in the figure. What is the time period of the pendulum if uniform electric field $\vec{E}$ is set up between the plates.



Soln:- Let the pendulum be at an angle θ with the vertical.

Net force acting on the bob = $(mg - qE)$.

(Contd…)

16ರಿಂದ 60 ವರ್ಷದವರಿಗೆ ತಂತ್ರಜ್ಞಾನ ಕುರಿತು ಉಚಿತ ತರಬೇತಿ • 1706 ಮಂದಿ ಆಯ್ಕೆ

ಗ್ರಾಮ ಪಂಚಾಯಿತಿಗಳಲ್ಲಿ 'ಡಿಜಿಟಲ್ ಸಾಕ್ಷರತೆ'

• ಸಿದ್ದು ಆರ್.ಜಿ.ಹಳ್ಳಿ

ಹಾವೇರಿ ಜಿಲ್ಲೆಯ ನೆಲೋಗಲ್ ಗ್ರಾಮ ಪಂಚಾಯಿತಿಯ ಗ್ರಂಥಾಲಯದಲ್ಲಿ 'ಡಿಜಿಟಲ್ ಸಾಕ್ಷರತೆ' ತರಬೇತಿ ಪಡೆಯುತ್ತಿರುವ ಮಹಿಳೆಯರು – ಪ್ರಜಾವಾಣಿ ಚಿತ್ರ: ಮಾಲತೇಶ ಇಚ್ಚಂಗಿ

ಹಾವೇರಿ: ಗ್ರಾಮಗಳು ಅಭಿವೃದ್ಧಿ ಆಗುವುದರ ಜೊತೆಗೆ ಗ್ರಾಮಸ್ಥರು ನಿತ್ಯದ ಚಟುವಟಿಕೆಗಳಿಗೆ ಡಿಜಿಟಲ್ ಜ್ಞಾನ ಹೊಂದಬೇಕು ಎಂಬ ಉದ್ದೇಶದಿಂದ ಸರ್ಕಾರ ರಾಜ್ಯದ ಆಯ್ದ 35 ಗ್ರಾಮ ಪಂಚಾಯಿತಿಗಳಲ್ಲಿ 'ಡಿಜಿಟಲ್ ಸಾಕ್ಷರತೆ ತರಬೇತಿ ಕಾರ್ಯಕ್ರಮ'ವನ್ನು ಅನುಷ್ಠಾನಗೊಳಿಸಿದೆ.

ಕೇರಳದ ಕೆಲ ಗ್ರಾಮ ಪಂಚಾಯಿತಿಗಳಲ್ಲಿ ಸಂಪೂರ್ಣ ತಂತ್ರಜ್ಞಾನ ಸಾಕ್ಷರತೆ ಘೋಷಣೆಯಾಗಿದೆ. ಇದೇ ಮಾದರಿ ಇಲ್ಲಿ ಅನುಸರಿಸಿ ಈ ವರ್ಷದ ಡಿಸೆಂಬರ್ ಅಂತ್ಯದೊಳಗೆ 35 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ ಎಲ್ಲ ಗ್ರಾಮಗಳಲ್ಲಿ 'ಸಂಪೂರ್ಣ ಡಿಜಿಟಲ್ ಸಾಕ್ಷರತೆ' ಸಾಧಿಸಲು ರಾಜ್ಯ ಸರ್ಕಾರ ಗುರಿ ಹೊಂದಿದೆ.

ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಇಲಾಖೆಯು ಡೆಲ್ ಸಂಸ್ಥೆ ಮತ್ತು ಶಿಕ್ಷಣ ಫೌಂಡೇಷನ್ ಸಹಯೋಗದಲ್ಲಿ 'ಗ್ರಾಮ ಡಿಜಿ ವಿಕಸನ' ಕಾರ್ಯಕ್ರಮದಡಿ, ಗ್ರಾಮಸ್ಥರಿಗೆ ಡಿಜಿಟಲ್ ಸಾಧನ ಬಳಸುವ ಕುರಿತು ಉಚಿತ ತರಬೇತಿ ನೀಡಲಾಗುತ್ತಿದೆ. ಸ್ಮಾರ್ಟ್ ಫೋನ್ ಬಳಕೆ, ಸರ್ಚ್, ಅಂತರ್ಜಾಲ ಸುರಕ್ಷತೆ, ವಾಟ್ಸ್ಆ್ಯಪ್, ಬ್ಯಾಂಕಿಂಗ್ ಆ್ಯಪ್‌ಗಳ ಬಳಕೆ, ಆನ್‌ಲೈನ್ ಸೇವೆ ಪಡೆಯುವಿಕೆ ಮತ್ತು ಡಿಜಿಟಲ್ ಪೇಮೆಂಟ್ಸ್ ಕುರಿತು ಅರಿವು ಮೂಡಿಸಲಾಗುತ್ತಿದೆ.

1706 ಮಂದಿ ಆಯ್ಕೆ: 'ಹಾವೇರಿ ಜಿಲ್ಲೆಯ ನೆಲೋಗಲ್ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮನೆ-ಮನೆ ಸಮೀಕ್ಷೆ ನಡೆಸಿ, ಡಿಜಿಟಲ್ ಸಾಕ್ಷರತೆ ತರಬೇತಿಗೆ 1706 ಫಲಾನುಭವಿಗಳನ್ನು ಆಯ್ಕೆ ಮಾಡಿಕೊಂಡಿದ್ದೇವೆ. ರೈತರು, ಕೂಲಿ ಕಾರ್ಮಿಕರು, ಅಂಗವಿಕಲರು, ಮಹಿಳೆಯರು ಸೇರಿ ಅಕ್ಷರಸ್ಥರು ಮತ್ತು ಅನಕ್ಷರಸ್ಥರು ಈ ಎರಡೂ ವರ್ಗದವರಿಗೂ ಗ್ರಾಮ ಪಂಚಾಯಿತಿಯ ಗ್ರಂಥಾಲಯದಲ್ಲಿ ಸೆಪ್ಟೆಂಬರ್ 1ರಿಂದ ತರಬೇತಿ ಆರಂಭಿಸಿದ್ದೇವೆ. ರೈತರಿಗೆ ಅನುಕೂಲವಾಗುವ ಸಮಯಕ್ಕೆ ವಾರದಲ್ಲಿ ಎರಡು ತರಗತಿ ನಡೆಸುತ್ತೇವೆ' ಎಂದು ಶಿಕ್ಷಣ ಫೌಂಡೇಷನ್ ಜಿಲ್ಲಾ ಸಂಯೋಜಕ ಮಲ್ಲಿಕಾರ್ಜುನಗೌಡ ಫಕ್ಕೀರಗೌಡ್ರ ತಿಳಿಸಿದರು.

> **16ರಿಂದ 60 ವರ್ಷ ವಯಸ್ಸಿನ ಎಲ್ಲ ಗ್ರಾಮಸ್ಥರು ಡಿಜಿಟಲ್ ಸಾಕ್ಷರರಾದರೆ 'ಸಂಪೂರ್ಣ ಡಿಜಿಟಲ್ ಸಾಕ್ಷರತಾ ಗ್ರಾಮ' ಎಂದು ಘೋಷಿಸಲಾಗುತ್ತದೆ**
> **ಅಕ್ಷಯ ಶ್ರೀಧರ,** ಮುಖ್ಯಕಾರ್ಯನಿರ್ವಹಣಾಧಿಕಾರಿ, ಹಾವೇರಿ ಜಿಲ್ಲಾ ಪಂಚಾಯಿತಿ

> **7ನೇ ತರಗತಿ ಓದಿದ ನಾನು ಊದುಬತ್ತಿ ತಯಾರಿಕೆಯ ಸ್ವ-ಉದ್ಯೋಗ ಮಾಡುತ್ತಿದ್ದೇನೆ. ಡಿಜಿಟಲ್ ತರಬೇತಿ ಪಡೆದು ಸ್ಮಾರ್ಟ್‌ಫೋನ್‌ನಲ್ಲಿ ವ್ಯವಹರಿಸುವ ಉದ್ದೇಶವಿದೆ**
> **ನಾಗವ್ವ ಲಮಾಣಿ,** ಡಿಜಿಟಲ್ ಸಾಕ್ಷರತೆ ಫಲಾನುಭವಿ, ನೆಲೋಗಲ್

ಸ್ವಯಂ ಸೇವಕರ ಆಯ್ಕೆ: 'ಗ್ರಾಮದ ಪದವೀಧರರನ್ನು ಗುರುತಿಸಿ, ವಾರ್ಡ್ ಹಂತದಲ್ಲಿ ಸ್ವಯಂ ಸೇವಕರನ್ನಾಗಿ ನೇಮಿಸಿಕೊಂಡು, ಕಾರ್ಯಕ್ರಮದ ಕುರಿತು ಮಾಹಿತಿ ನೀಡಿದ್ದೇವೆ. ಸ್ವಯಂ ಸೇವಕರು ತಮ್ಮ ಗ್ರಾಮಸ್ಥರಿಗೆ ಪ್ರಾಯೋಗಿಕ ತರಬೇತಿ ನೀಡುತ್ತಾರೆ. ಸ್ಮಾರ್ಟ್‌ಫೋನ್, ಲ್ಯಾಪ್‌ಟಾಪ್, ಕ್ರೋಮ್‌ಬುಕ್, ಮಾನಿಟರ್, ಇಂಟರ್‌ನೆಟ್ ಸೌಲಭ್ಯವನ್ನು ಗ್ರಂಥಾಲಯಗಳಿಗೆ ಕಲ್ಪಿಸಲಾಗಿದೆ' ಎಂದು ಸಂಪನ್ಮೂಲ ವ್ಯಕ್ತಿಗಳಾದ ವಿದ್ಯಾ ಕುರುಬಗೊಂಡ, ಬಸವರಾಜ ಕೊಟ್ರಳ್ಳಿ ತಿಳಿಸಿದರು.

'8ನೇ ತರಗತಿ ಓದಿರುವ ನಾನು ಡಿಜಿಟಲ್ ಸಾಕ್ಷರತೆ ತರಬೇತಿ ಪಡೆಯುತ್ತಿದ್ದು, ವಾಟ್ಸ್ಆ್ಯಪ್‌ನಲ್ಲಿ ಮೆಸೇಜ್ ಮಾಡುವುದು, ವಾಯ್ಸ್ ಮೆಸೇಜ್ ಕಳುಹಿಸುವುದು, ಹೆಸರು ಮತ್ತು ಫೋನ್ ನಂಬರ್ ಸೇವ್ ಮಾಡುವುದನ್ನು ಕಲಿತಿದ್ದೇನೆ. ಅಪ್ಲಿಕೇಶನ್‌ಗಳ ಬಳಕೆ ಮತ್ತು ಆನ್‌ಲೈನ್ ಮೂಲಕ ಬ್ಯಾಂಕಿಂಗ್ ವ್ಯವಹಾರ ಮಾಡುವುದನ್ನು ಕಲಿತುಕೊಂಡು ಸಂಜೀವಿನಿ ಒಕ್ಕೂಟದ ಮಹಿಳಾ ಸದಸ್ಯರಿಗೆ ಅರಿವು ಮೂಡಿಸುತ್ತೇನೆ' ಎಂದು ನೆಲೋಗಲ್ ಗ್ರಾಮದ ಸವಿತಾ ದೊಡ್ಡತಳವಾರ ತಿಳಿಸಿದರು.

ಆಯ್ಕೆಯಾದ ಗ್ರಾಮ ಪಂಚಾಯಿತಿಗಳು

1.ಸುನಗ (ಬಾಗಲಕೋಟೆ), 2.ಮಾರಿಹಾಳ (ಬೆಳಗಾವಿ), 3.ನಾಗರಾಳ (ಬೆಳಗಾವಿ), 4.ಶ್ರೀಧರಗಡ್ಡೆ (ಬಳ್ಳಾರಿ), 5.ದೊಡ್ಡಜಾಲ (ಬೆಂಗಳೂರು ಗ್ರಾ.), 6.ಸೋಲದೇವನಹಳ್ಳಿ (ಬೆಂಗಳೂರು ಗ್ರಾ.), 7;ಬಿದರಗುಪ್ಪೆ (ಬೆಂಗಳೂರು ನಗರ), 8;ಕಾಡವಾಡ (ಬೀದರ್), 9.ಮುಳ್ಳೂರು (ಚಾಮರಾಜನಗರ), 10.ಮುದ್ದೇನಹಳ್ಳಿ (ಚಿಕ್ಕಬಳ್ಳಾಪುರ), 11.ಇಂದಾವರ (ಚಿಕ್ಕಮಗಳೂರು), 12.ನಗರಂಗೆರೆ (ಚಿತ್ರದುರ್ಗ), 13.ಕೇಪು (ದಕ್ಷಿಣಕನ್ನಡ), 14.ಚೀಲೂರು (ದಾವಣಗೆರೆ), 15.ಕುರುಬಗಟ್ಟಿ (ಧಾರವಾಡ), 16.ಬಿಂಕದಕಟ್ಟಿ (ಗದಗ), 17.ಕಟ್ಟೇಪುರ (ಹಾಸನ), 18.ನೆಲೋಗಲ್ (ಹಾವೇರಿ), 19.ದಂಡೋತಿ (ಕಲಬುರ್ಗಿ), 20.ಟಿ.ಶೆಟ್ಟಿಗೇರಿ (ಕೊಡಗು), 21.ಬಲ್ಲ (ಕೋಲಾರ), 22.ಇಂದರಗಿ (ಕೊಪ್ಪಳ), 23.ಉಮ್ಮಡಹಳ್ಳಿ (ಮಂಡ್ಯ), 24.ಅಣ್ಣೂರು (ಮೈಸೂರು), 25.ಚಿಕ್ಕಸೂಗೂರು (ರಾಯಚೂರು), 26.ಶಿವನಹಳ್ಳಿ (ರಾಮನಗರ), 27.ಮಂಚಿಕೊಪ್ಪ (ಶಿವಮೊಗ್ಗ), 28.ಶೆಟ್ಟಿಕೆರೆ (ತುಮಕೂರು), 29.ದಬ್ಬೇಘಟ್ಟ (ತುಮಕೂರು), 30.ಕೋಟತಟ್ಟು (ಉಡುಪಿ), 31. ಕೊಡಕಣಿ (ಉತ್ತರ ಕನ್ನಡ), 32. ಮಲಪನಗುಡಿ (ವಿಜಯನಗರ), 33.ಹೆಬ್ಬಾಳ (ವಿಜಯಪುರ), 34.ಬಂಡಳ್ಳಿ (ಯಾದಗಿರಿ), 35. ಮುರ್ಕ್ವಾಡ (ಉತ್ತರ ಕನ್ನಡ)

ನರೇಗಲ್ ಗಜೇಂದ್ರಗಡ ಮಾರ್ಗಮಧ್ಯದ ಗಡ್ಡಿ ಹಳ್ಳದ ಸಮೀಪ ಸೋಮವಾರ ನಡೆದ ಅಪಘಾತದಲ್ಲಿ ಟಾಟಾ ಸುಮೊ ಪೂರ್ಣವಾಗಿ ಜಖಂಗೊಂಡಿದೆ

ಅಪಘಾತ: ಆರು ಸಾವು

ಪ್ರಜಾವಾಣಿ ವಾರ್ತೆ

ನರೇಗಲ್ (ಗದಗ ಜಿಲ್ಲೆ): ವಾಯುವ್ಯ ಕರ್ನಾಟಕ ಸಾರಿಗೆ ಸಂಸ್ಥೆ ಬಸ್ ಹಾಗೂ ಟಾಟಾ ಸುಮೋ ವಾಹನದ ನಡುವೆ ಸೋಮವಾರ ಗಜೇಂದ್ರಗಡ-ನರೇಗಲ್ ಮಾರ್ಗಮಧ್ಯೆ ಗಡ್ಡಿಹಳ್ಳದ ಸಮೀಪ ಸಂಭವಿಸಿದ ಅಪಘಾತದಲ್ಲಿ ಆರು ಜನರು ಮೃತಪಟ್ಟಿದ್ದು, ಮೂವರು ಮಕ್ಕಳು ಗಂಭೀರವಾಗಿ ಗಾಯಗೊಂಡಿದ್ದಾರೆ.

ಅಪಘಾತದಲ್ಲಿ ಕಲಬುರಗಿ ಜಿಲ್ಲೆ ಆಳಂದ ತಾಲ್ಲೂಕಿನ ಮಾದನಹಿಪ್ಪರಗಾ ಗ್ರಾಮದ ನಿವಾಸಿ ಶಿವಕುಮಾರ್ ಸುಭಾಷ್ ಕಲಶೆಟ್ಟಿ (48), ಅವರ ಪತ್ನಿ ಚಂದ್ರಕಲಾ ಕಲಶೆಟ್ಟಿ (42), ಅವರ ತಂಗಿ ಚಿತ್ತರಗಿ ಗ್ರಾಮದ ರಾಣಿ ಕಲಶೆಟ್ಟಿ (25) ಹಾಗೂ ಅಫಜಲಪುರದ ನಿವಾಸಿ ಸಚಿನ್ ಮಲ್ಲಿಕಾರ್ಜುನ ಕತ್ತಿ (32) ಹಾಗೂ ಅವರ ಪತ್ನಿ ದಾಕ್ಷಾಯಿಣಿ ಕತ್ತಿ (29) ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಶಿವಕುಮಾರ್ ಕಲಶೆಟ್ಟಿ ಅವರ ಮಗ ದಿಂಗಾಲೇಶ ಕಲಶೆಟ್ಟಿ (6) ಗದಗ ಜಿಲ್ಲಾ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾನೆ.

ಅನುಶ್ರೀ (8), ಮಹೇಶ (7) ಮತ್ತು ಪ್ರಭುದೇವ (9) ಗಂಭೀರವಾಗಿ ಗಾಯಗೊಂಡಿದ್ದು, ಹುಬ್ಬಳ್ಳಿಯ ಖಾಸಗಿ ಆಸ್ಪತ್ರೆಗೆ ಕಳುಹಿಸಿಕೊಡಲಾಗಿದೆ.

'ಎರಡೂ ಕುಟುಂಬಸ್ಥರು ಇಪ್ಪತ್ತು ವರ್ಷಗಳಿಂದ ದಿಂಗಾಲೇಶ್ವರ ಶ್ರೀಗಳ ಸಂಪರ್ಕದಲ್ಲಿದ್ದರು. ಪ್ರತಿ ಕಾರ್ಯಕ್ರಮಕ್ಕೂ ಶ್ರೀಗಳನ್ನು ಮನೆಗೆ ಆಹ್ವಾನಿಸಿ ಗೌರವಿಸುತ್ತಿದ್ದರು. ಮೃತ ಸಚಿನ್ ದಂಪತಿ ಶಿರಹಟ್ಟಿಯಲ್ಲಿ ಶ್ರೀಗಳನ್ನು ಭೇಟಿಯಾಗಿ ಹಾಗೂ ಅಲ್ಲಿಂದ ಹೊಸಪೇಟೆಗೆ ತೆರಳಿ ಅಗತ್ಯ ವಸ್ತುಗಳನ್ನು ಖರೀದಿಸುವ ಉದ್ದೇಶದಿಂದ ಟಾಟಾ ಸುಮೋದಲ್ಲಿ ತೆರಳುತ್ತಿದ್ದ ವೇಳೆ ಈ ದುರ್ಘಟನೆ ನಡೆದಿದೆ' ಎಂದು ಮೃತರ ಸಂಬಂಧಿಕರು ತಿಳಿಸಿದ್ದಾರೆ.

'ಮಠದ ಆಪ್ತ ಭಕ್ತರ ಸಾವು ಅಳಿಸಲಾರದಷ್ಟು ನೋವುಂಟು ಮಾಡಿದೆ. ಅವರ ಕುಟುಂಬದ ಜೊತೆಯಲ್ಲಿ ನಾವೆಲ್ಲರೂ ಇದ್ದೇವೆ' ಎಂದು ಶಿರಹಟ್ಟಿ ಫಕ್ಕಿರೇಶ್ವರ ಮಠದ ದಿಂಗಾಲೇಶ್ವರ ಶ್ರೀಗಳು ತಿಳಿಸಿದರು.

26 ವಾರಗಳ ಗರ್ಭಪಾತಕ್ಕೆ ಸುಪ್ರೀಂ ಕೋರ್ಟ್ ನಕಾರ

ಒಂದನೇ ಪುಟದಿಂದ...

ಆದರೆ, ಭ್ರೂಣವು ಬದುಕುಳಿಯುವ ಸಾಧ್ಯತೆ ದಟ್ಟವಾಗಿದೆ ಎಂದು ತಪಾಸಣೆಯ ತಂಡದಲ್ಲಿದ್ದ ವೈದ್ಯರೊಬ್ಬರು ಅಕ್ಟೋಬರ್ 10ರಂದು ನ್ಯಾಯಾಲಯಕ್ಕೆ ಇ-ಮೇಲ್ ರವಾನಿಸಿದ್ದರು. ಈ ನಡುವೆಯೇ ಗರ್ಭಪಾತಕ್ಕೆ ಅನುಮತಿ ನೀಡಿರುವ ಆದೇಶವನ್ನು ಹಿಂಪಡೆಯುವಂತೆ ಕೇಂದ್ರ ಸರ್ಕಾರವು, ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿತ್ತು.

ಅಕ್ಟೋಬರ್ 11ರಂದು ನ್ಯಾಯಮೂರ್ತಿಗಳಾದ ಹಿಮಾ ಕೊಹ್ಲಿ ಹಾಗೂ ಬಿ.ವಿ. ನಾಗರತ್ನ ಅವರಿದ್ದ ವಿಭಾಗೀಯ ಪೀಠವು ಇದರ ವಿಚಾರಣೆ ನಡೆಸಿತು. ಆ ವೇಳೆ ವೈದ್ಯರೊಬ್ಬರು ಸಲ್ಲಿಸಿರುವ ಇ-ಮೇಲ್ ಬಗ್ಗೆಯೂ ಪ್ರಸ್ತಾಪವಾಯಿತು. ಇಬ್ಬರೂ ನ್ಯಾಯಮೂರ್ತಿಗಳಿಂದ ಭಿನ್ನ ಅಭಿಪ್ರಾಯ ವ್ಯಕ್ತವಾದ್ದರಿಂದ ವಿಸ್ತೃತ ಪೀಠಕ್ಕೆ ವಿಚಾರಣೆಯನ್ನು ವರ್ಗಾಯಿಸಲಾಗಿತ್ತು.

ಮಹಿಳೆಯ ಸ್ವಾಯತ್ತೆ ಹಾಗೂ ಇನ್ನೂ ಜನಿಸಿರದ ಮಗುವಿನ ಹಕ್ಕುಗಳನ್ನು ಸಮಾನ ನೆಲೆಯಲ್ಲಿ ಕಾಣುವುದಕ್ಕೆ ಸಂಬಂಧಿಸಿದಂತೆ ನ್ಯಾಯಪೀಠವು, ಸಂದಿಗ್ಧ ಪರಿಸ್ಥಿತಿಗೆ ಸಿಲುಕಿತ್ತು.

ಅರ್ಜಿಯ ವಿಚಾರಣೆ ನಡೆಸಿದ ಚಂದ್ರಚೂಡ್ ಅಧ್ಯಕ್ಷತೆಯ ತ್ರಿಸದಸ್ಯ ಪೀಠವು, 'ಭ್ರೂಣವನ್ನು ಹತ್ಯೆ ಮಾಡಲು ಆಗುವುದಿಲ್ಲ. ಗರ್ಭಪಾತ ಮಾಡಿಸಿಕೊಳ್ಳುವ ತನ್ನ ನಿರ್ಧಾರವನ್ನು ಗರ್ಭಿಣಿಯು ಮರುಪರಿಶೀಲಿಸಬೇಕಿದೆ' ಎಂದು ಹೇಳಿತ್ತು.

ಅಲ್ಲದೇ, ಭ್ರೂಣದ ಬೆಳವಣಿಗೆ ಕುರಿತಂತೆ ಆಕೆಯನ್ನು ಮತ್ತೊಮ್ಮೆ ವೈದ್ಯಕೀಯ ತಪಾಸಣೆಗೆ ಒಳಪಡಿಸುವಂತೆ ಏಮ್ಸ್ ವೈದ್ಯರಿಗೆ ಸೂಚಿಸಿತ್ತು. ಹೊಸ ವರದಿಯನ್ನು ಪರಿಶೀಲಿಸಿದ ನ್ಯಾಯಪೀಠವು, ಮಹಿಳೆ ಸಲ್ಲಿಸಿದ್ದ ಮನವಿಯನ್ನು ತಿರಸ್ಕರಿಸಿದೆ.

ಅರಣ್ಯ ಇಲಾಖೆಯ ನೇಮಕಾತಿಗಳಲ್ಲಿ ಶೇ 25ರಷ್ಟು ಮೀಸಲಾತಿ ಕಡಿತಗೊಳಿಸಿದ ಸರ್ಕಾರ

ಅರಣ್ಯ ವಿಜ್ಞಾನ ಪದವೀಧರರ 'ಅರಣ್ಯರೋದನ'

• ಸಂತೋಷ ಈ. ಚಿನಗುಡಿ

ಬೆಳಗಾವಿ: ಬಿಎಸ್‌ಸಿ ಅರಣ್ಯ ವಿಜ್ಞಾನ ಪದವಿ ಪಡೆದವರಿಗೆ ಅರಣ್ಯ ಇಲಾಖೆಯ ನೇಮಕಾತಿಗಳಲ್ಲಿ ಶೇ 100ರಷ್ಟು ಮೀಸಲಾತಿ ನೀಡಬೇಕು ಎಂಬ ಹೋರಾಟ ಆರಂಭಿಸಿ ದಶಕ ಕಳೆದಿದೆ. ವ್ಯತಿರಿಕ್ತವಾಗಿ ರಾಜ್ಯ ಸರ್ಕಾರ ಇದ್ದ ಮೀಸಲಾತಿಯಲ್ಲೇ ಶೇ 25ರಷ್ಟು ಕಡಿತ ಮಾಡಿರುವುದರಿಂದ ಅರಣ್ಯ ವಿಜ್ಞಾನ ಪದವೀಧರರ ಹೋರಾಟ 'ಅರಣ್ಯ ರೋದನ'ವಾಗಿದೆ.

ಅರಣ್ಯ ವಿಜ್ಞಾನ ಪದವಿಯ ಪ್ರಾಯೋಗಿಕ ತರಗತಿಯಲ್ಲಿ ಪಾಲ್ಗೊಂಡ ಶಿರಸಿ ಅರಣ್ಯ ಕಾಲೇಜಿನ ವಿದ್ಯಾರ್ಥಿಗಳು (ಸಂಗ್ರಹ ಚಿತ್ರ)

ಅರಣ್ಯ ವಿಜ್ಞಾನ ಪದವೀಧರರಿಗೆ ವಲಯ ಅರಣ್ಯಾಧಿಕಾರಿ (ಆರ್‌ಎಫ್‌ಒ) ಹುದ್ದೆಯಲ್ಲಿ ಶೇ 75ರಷ್ಟು ಮೀಸಲಾತಿ ಇತ್ತು. ಇದನ್ನು ಸರ್ಕಾರ ಶೇ 50ಕ್ಕೆ ಕಡಿಮೆ ಮಾಡಿದೆ. ಶೇ 25ರಷ್ಟು ಮೀಸಲಾತಿಯನ್ನು ಏಕಾಏಕಿ ಕಡಿತ ಮಾಡಿದ್ದರಿಂದ ಅರ್ಹತೆ ಇದ್ದರೂ ಅವಕಾಶ ವಂಚಿತರಾಗುತ್ತೇವೆ ಎಂಬ ಆತಂಕ ಪದವೀಧರರದ್ದು.

ಉಪ ವಲಯ ಅರಣ್ಯಾಧಿಕಾರಿ (ಡಿಆರ್‌ಎಫ್‌ಒ), ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ಎಸಿಎಫ್) ಸೇರಿದಂತೆ ವಿವಿಧ ಹುದ್ದೆಗಳಿಗೆ ಶೇ 50ರಷ್ಟು ಮೀಸಲಾತಿ ಇದೆ. ಅದರಲ್ಲೂ ಶೇ 25ರಷ್ಟು ಕಡಿತ ಮಾಡುವ ಯತ್ನ ಸರ್ಕಾರದ ಹಂತದಲ್ಲಿ ನಡೆಯುತ್ತಿದೆ. ಈ ನಡೆಯಿಂದ ಅರಣ್ಯ ವಿಜ್ಞಾನ ಪದವೀಧರರಿಗೆ ಭಾರಿ ಅನ್ಯಾಯವಾಗುತ್ತದೆ ಎಂಬ ಕೂಗು ಕೇಳಿಬಂದಿದೆ.

> **ನೇಮಕಾತಿಗೆ ಬೇಕಾದಷ್ಟು ಅರಣ್ಯ ವಿಜ್ಞಾನ ಪದವೀಧರರು ಸಂಖ್ಯೆಯ ಪದವೀಧರರು ಇಲ್ಲದ ಕಾರಣ, ಕಳೆದ ವರ್ಷ ಮೀಸಲಾತಿ ಪ್ರಮಾಣ ಕಡಿತಗೊಳಿಸಲಾಗಿದೆ**
> **ಬ್ರಿಜೇಶ್‌ಕುಮಾರ್ ದೀಕ್ಷಿತ ಪ್ರಧಾನ** ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಪಡೆ ಮುಖ್ಯಸ್ಥ

> **ಪದವೀಧರರ ಸಂಖ್ಯೆ ಕಡಿಮೆ ಇದೆ ಎನ್ನುವುದು ಸುಳ್ಳು. ಬೇರೆ ರಾಜ್ಯಗಳಲ್ಲಿ ಪದವಿ ಮುಗಿಸಿದ ಕರ್ನಾಟಕದ ಅಭ್ಯರ್ಥಿಗಳಿಗೂ ಅವಕಾಶವಿದೆ**
> **ಸಿದ್ಧಾರ್ಥ ಹಳಕಲ್ಲ,** ಅರಣ್ಯ ವಿಜ್ಞಾನ ಪದವೀಧರ, ರಾಯಬಾಗ

'ವೈದ್ಯಕೀಯ, ಕೃಷಿ, ತೋಟಗಾರಿಕೆ, ಎಂಜಿನಿಯರಿಂಗ್ ಸೇರಿದಂತೆ ಯಾವುದೇ ವೃತ್ತಿಪರ ಕೋರ್ಸ್ ಪಡೆದವರಿಗೆ ಆಯಾ ಇಲಾಖೆಗಳಲ್ಲಿ ಶೇ 100ರಷ್ಟು ಮೀಸಲಾತಿ ಇದೆ. ಆದರೆ, ಅರಣ್ಯ ಇಲಾಖೆಯಲ್ಲಿ ಅರಣ್ಯ ಪದವೀಧರರ ಹೊರತಾಗಿ ಇತರ 15 ಪದವಿಗಳನ್ನೂ ಪರಿಗಣಿಸಲಾಗುತ್ತಿದೆ. ಇದರಿಂದ ನಾಲ್ಕು ವರ್ಷಗಳವರೆಗೆ ಅರಣ್ಯ ವಿಜ್ಞಾನ ಓದಿದವರಿಗೆ ಅವಕಾಶಗಳು ಕಡಿಮೆಯಾಗುತ್ತವೆ' ಎನ್ನುವುದು ಅವರ ಆತಂಕ.

'ನೇಮಕಾತಿಗೆ ಬೇಕಾದ ಹುದ್ದೆಗಳಿಗಿಂತ ಅರಣ್ಯ ಪದವೀಧರರ ಸಂಖ್ಯೆ ಕಡಿಮೆ ಇದೆ' ಎಂಬ ಕಾರಣಕ್ಕೆ ಸರ್ಕಾರ 2012ರಲ್ಲಿ ಮೀಸಲಾತಿ ಕಡಿತ ಮಾಡಿತ್ತು. ನಿರಂತರ ಹೋರಾಟದ ಬಳಿಕ ಕೆಲ ಹುದ್ದೆಗಳಲ್ಲಿ ಶೇ 50 ಹಾಗೂ ಶೇ 75ರಷ್ಟು ಮೀಸಲಾತಿ ನೀಡಿದೆ. ಈಗ ಹೆಚ್ಚು ಪದವೀಧರರು ಇದ್ದರೂ ಮೀಸಲಾತಿಗೆ ಕತ್ತರಿ ಹಾಕಲು ಮುಂದಾಗಿದೆ.

ಉತ್ತರಕನ್ನಡ ಜಿಲ್ಲೆಯ ಶಿರಸಿ ಹಾಗೂ ಕೊಡಗು ಜಿಲ್ಲೆಯ ಪೊನ್ನಂಪೇಟೆಯಲ್ಲಿ ಒಂದೊಂದು ಅರಣ್ಯ ವಿಜ್ಞಾನ ಪದವಿ ಕಾಲೇಜು ಇವೆ. ಪ್ರತಿವರ್ಷ ತಲಾ 60 ಪದವೀಧರರು; ಅಂದರೆ 120 ಪದವೀಧರರು ಹೊರಬರುತ್ತಾರೆ. ಕಳೆದ ಐದು ವರ್ಷಗಳಿಂದ ಇಲಾಖೆಯಲ್ಲಿ ಯಾವುದೇ ನೇಮಕಾತಿ ನಡೆದಿಲ್ಲ. ಇದರಿಂದ ರಾಜ್ಯದಲ್ಲೇ ಪದವಿ ಮುಗಿಸಿದ 600 ಜನ ಇನ್ನೂ ನಿರುದ್ಯೋಗಿ ಆಗಿದ್ದಾರೆ. ಹೊಸದಾಗಿ ಶಿವಮೊಗ್ಗದಲ್ಲಿ ಮತ್ತೊಂದು ಕಾಲೇಜು ಆರಂಭಿಸಲಾಗಿದೆ.

'ನಾವು ಎಲ್ಲಾ ಅರ್ಹತೆ ಹೊಂದಿದ್ದೇವೆ. ಶೇ 100ರಷ್ಟು ಮೀಸಲಾತಿ ಜಾರಿ ಮಾಡಿ ನ್ಯಾಯ ಒದಗಿಸಬೇಕು' ಎಂಬುದು ಪದವೀಧರರ ಆಗ್ರಹ.

ಮುಂಬರುವ ಲೋಕಸಭಾ ಚುನಾವಣೆ ಮೇಲೆ ಕಣ್ಣಿಟ್ಟು ಪಕ್ಷ ಸಂಘಟನೆಗೆ ಮುಂದಾಗಿರುವ ಕಾಂಗ್ರೆಸ್ ವರಿಷ್ಠರು

ಕೆಪಿಸಿಸಿಗೆ ಹೊಸ ಕಾರ್ಯಾಧ್ಯಕ್ಷರು?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ಲೋಕಸಭಾ ಚುನಾವಣೆ ಮೇಲೆ ಕಣ್ಣಿಟ್ಟು ಪಕ್ಷ ಸಂಘಟನೆಗೆ ಮುಂದಾಗಿರುವ ಕಾಂಗ್ರೆಸ್ ವರಿಷ್ಠರು, ಕೆಪಿಸಿಸಿಗೆ ನೂತನ ಕಾರ್ಯಾಧ್ಯಕ್ಷರುಗಳು ಸೇರಿದಂತೆ ಹೊಸದಾಗಿ ಪದಾಧಿಕಾರಿಗಳನ್ನು ನೇಮಕ ಮಾಡಲು ನಿರ್ಧರಿಸಿದ್ದಾರೆ.

ಹಾಲಿ ಕಾರ್ಯಾಧ್ಯಕ್ಷರನ್ನು ಬದಲಿಸಿ, ಶಾಸಕ ವಿನಯ ಕುಲಕರ್ಣಿ (ಪಂಚಮಸಾಲಿ), ಕಳೆದ ಚುನಾವಣೆಯಲ್ಲಿ ಕಾಪು ವಿಧಾನಸಭಾ ಕ್ಷೇತ್ರದಿಂದ ಕಣಕ್ಕಿಳಿದು ಸೋಲು ಕಂಡಿದ್ದ ವಿನಯ್‌ಕುಮಾರ್ ಸೊರಕೆ (ಬಿಲ್ಲವ), ರಾಜ್ಯಸಭೆ ಸದಸ್ಯ ಜಿ.ಸಿ. ಚಂದ್ರಶೇಖರ್ (ಒಕ್ಕಲಿಗ), ರಾಯಚೂರಿನ ಜಿಲ್ಲಾ ಕಾಂಗ್ರೆಸ್ ಮಾಜಿ ಅಧ್ಯಕ್ಷ ಮುಖಂಡ ವಸಂತಕುಮಾರ್ (ಪರಿಶಿಷ್ಟ ಜಾತಿ) ಅವರಿಗೆ ಹೊಣೆಗಾರಿಕೆ ನೀಡಲು ಪಕ್ಷದ ಮುಖಂಡರು ಚರ್ಚೆ ನಡೆಸಿದ್ದಾರೆ.

ಸಚಿವ ಸಂಪುಟದಲ್ಲಿರುವ ರಾಮಲಿಂಗಾ ರೆಡ್ಡಿ, ಸತೀಶ ಜಾರಕಿಹೊಳಿ ಮತ್ತು ಈಶ್ವರ ಖಂಡ್ರೆ ಅವರನ್ನು ಕಾರ್ಯಾಧ್ಯಕ್ಷ ಸ್ಥಾನದಿಂದ ಕೈಬಿಟ್ಟು, ಆ ಸ್ಥಾನಗಳಿಗೆ ಸಮುದಾಯ ಪ್ರಾತಿನಿಧ್ಯ ನೀಡಿ ನೇಮಕ ಮಾಡಲು ಪಕ್ಷದ ವಲಯದಲ್ಲಿ ಚರ್ಚೆ ನಡೆದಿದೆ. ಆ ಮೂಲಕ, ಜಾತಿ ಸಮೀಕರಣದಲ್ಲಿ ಸಮತೋಲನ ಸಾಧಿಸಿ ಲೋಕಸಭೆ ಚುನಾವಣೆಯಲ್ಲಿ ಮತ ಸೆಳೆಯುವ ತಂತ್ರಗಾರಿಕೆಯೂ ಇದೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ರಾಮಲಿಂಗಾ ರೆಡ್ಡಿ ಮತ್ತು ಈಶ್ವರ ಖಂಡ್ರೆ ಅವರ ಜಾಗಕ್ಕೆ ಜಿ.ಸಿ. ಚಂದ್ರಶೇಖರ್ ಮತ್ತು ವಿನಯ ಕುಲಕರ್ಣಿ ಹೆಸರು ಚರ್ಚೆಯಲ್ಲಿದೆ. ಹಾಲಿ ಕಾರ್ಯಾಧ್ಯಕ್ಷ, ಚಿತ್ರದುರ್ಗದ ಮಾಜಿ ಸಂಸದ ಬಿ.ಎನ್. ಚಂದ್ರಪ್ಪ (ಪರಿಶಿಷ್ಟ ಜಾತಿ ಎಡ) ಅವರು ಲೋಕಸಭಾ ಚುನಾವಣೆಯಲ್ಲಿ ಕಣಕ್ಕಿಳಿಯುವ ಸಾಧ್ಯತೆಯಿದೆ. ಹೀಗಾಗಿ ಅವರ ಸ್ಥಾನಕ್ಕೆ ಮಲ್ಲಿಕಾರ್ಜುನ ಖರ್ಗೆ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ವಸಂತಕುಮಾರ್ ಅವರ ಹೆಸರು ಚರ್ಚೆಯಲ್ಲಿದೆ. ಹಿಂದುಳಿದ ವರ್ಗಕ್ಕೆ ಪ್ರಾತಿನಿಧ್ಯ ನೀಡಬೇಕೆಂಬ ಕಾರಣಕ್ಕೆ ವಿನಯ್‌ಕುಮಾರ್ ಸೊರಕೆ ಹೆಸರು ಕೂಡಾ ಕಾರ್ಯಾಧ್ಯಕ್ಷ ಸ್ಥಾನಕ್ಕೆ ಪರಿಗಣನೆಯಲ್ಲಿದೆ ಎಂದೂ ಮೂಲಗಳು ಹೇಳಿವೆ.

ಕಾರ್ಯಾಧ್ಯಕ್ಷರಾಗಿರುವ ವಿಧಾನ ಪರಿಷತ್ತಿನಲ್ಲಿ ಸರ್ಕಾರದ ಮುಖ್ಯ ಸಚೇತಕರಾಗಿರುವ ಸಲೀಂ ಅಹಮದ್ ಅವರನ್ನು ಬದಲಿಸಿ, ತನ್ವೀರ್ ಸೇಠ್ ಅವರನ್ನು ನೇಮಿಸುವ ಬಗ್ಗೆಯೂ ಮಾತುಕತೆ ನಡೆಯುತ್ತಿದೆ.

ಜಿಲ್ಲಾ ಘಟಕಗಳ ಅಧ್ಯಕ್ಷರ ಬದಲಾವಣೆ: ನೂತನ ಕಾರ್ಯಾಧ್ಯಕ್ಷರ ನೇಮಕದ ಜೊತೆಗೆ, ಕೆಪಿಸಿಸಿಗೆ ನೂತನ ಉಪಾಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳ ನೇಮಕವೂ ನಡೆಯಲಿದೆ. ಕೆಲವು ಜಿಲ್ಲೆಗಳ ಅಧ್ಯಕ್ಷರನ್ನೂ ಬದಲಿಸುವ ಸಾಧ್ಯತೆ ಇದೆ.

'ಲೋಕಸಭಾ ಚುನಾವಣೆಯನ್ನು ಗಮನದಲ್ಲಿಟ್ಟು ಕೆಪಿಸಿಸಿ ಪುನರ್ ರಚನೆಗೆ ಉದ್ದೇಶಿಸಲಾಗಿದೆ. ಹೊಸ ಪದಾಧಿಕಾರಿಗಳ ಪಟ್ಟಿಯಲ್ಲಿ ಎಲ್ಲ ಜಾತಿ, ಸಮುದಾಯಗಳಿಗೆ ಪ್ರಾತಿನಿಧ್ಯ ಸಿಗಲಿದೆ. ದಸರಾ ನಂತರ ನಿಗಮ ಮಂಡಳಿಗಳಿಗೆ ಅಧ್ಯಕ್ಷ- ಉಪಾಧ್ಯಕ್ಷರ ನೇಮಕದ ಜತೆಗೆ ಕೆಪಿಸಿಸಿಗೂ ನೂತನ ಪದಾಧಿಕಾರಿಗಳ ನೇಮಕ ನಡೆಯುವ ಸಾಧ್ಯತೆಯಿದೆ' ಎಂದೂ ಮೂಲಗಳು ಹೇಳಿವೆ.

ಜಾತಿ ಗಣತಿ ವರದಿ ಸಲ್ಲಿಕೆಗೆ ಹರಿಪ್ರಸಾದ್ ಆಗ್ರಹ



ಹರಿಪ್ರಸಾದ್

ರಾಜ್ಯದ ಎಲ್ಲ ಕುಟುಂಬಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ (ಜಾತಿ ಜನ ಗಣತಿ) ವರದಿಯನ್ನು ತ್ವರಿತವಾಗಿ ರಾಜ್ಯ ಸರ್ಕಾರಕ್ಕೆ ಸಲ್ಲಿಸುವಂತೆ ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಅವರು ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಕೆ. ಜಯಪ್ರಕಾಶ್ ಹೆಗ್ಡೆ ಅವರನ್ನು ಆಗ್ರಹಿಸಿದ್ದಾರೆ.

ಜಯಪ್ರಕಾಶ್ ಹೆಗ್ಡೆ ಅವರನ್ನು ಸೋಮವಾರ ಭೇಟಿಮಾಡಿದ ಅವರು, ಜಾತಿ ಜನ ಗಣತಿ ವರದಿ ಕುರಿತು ಚರ್ಚೆ ನಡೆಸಿದರು. ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಹರಿಪ್ರಸಾದ್, 'ಹಿಂದೆ ಕಾಂಗ್ರೆಸ್ ಸರ್ಕಾರ ಇದ್ದಾಗಲೇ ಕಾಂತರಾಜ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗವು ಜಾತಿ ಜನ ಗಣತಿ ನಡೆಸಿತ್ತು. 2017ರಲ್ಲೇ ಸಮೀಕ್ಷೆ ಮುಗಿದು, ವರದಿ ಸಿದ್ಧವಾಗಿತ್ತು. ಆಗಲೇ ಸಲ್ಲಿಕೆಯಾಗಿದ್ದರೆ ಬಿಹಾರಕ್ಕಿಂತಲೂ ಮೊದಲು ನಮ್ಮ ರಾಜ್ಯವೇ ಜಾತಿ ಜನ ಗಣತಿಯ ವರದಿಯನ್ನು ಬಹಿರಂಗಪಡಿಸುವ ಅವಕಾಶ ಇತ್ತು' ಎಂದರು.

'₹ 158 ಕೋಟಿ ವೆಚ್ಚ ಮಾಡಿ ಗಣತಿ ನಡೆಸಲಾಗಿತ್ತು. ತಾಂತ್ರಿಕ ಕಾರಣಗಳಿಂದ ವರದಿ ಸಲ್ಲಿಕೆಯಾಗಿಲ್ಲ ಎಂಬ ಮಾಹಿತಿ ಇದೆ. ಈಗ ಕಾಂತರಾಜ ಅವರ ಬದಲಿಗೆ ಜಯಪ್ರಕಾಶ್ ಹೆಗ್ಡೆ ಆಯೋಗದ ಅಧ್ಯಕ್ಷರಾಗಿದ್ದಾರೆ. ಹೆಸರು ಮುಖ್ಯವಲ್ಲ, ವರದಿ ಮುಖ್ಯ. ಆದ್ದರಿಂದ ಆದಷ್ಟು ಬೇಗ ವರದಿ ಸಲ್ಲಿಸಿ ಎಂದು ಹೆಗ್ಡೆ ಅವರಲ್ಲಿ ಆಗ್ರಹಿಸಿದ್ದೇನೆ' ಎಂದರು.

ರಾಜ್ಯದ ಆರು ಕೋಟಿ ಜನರ ಭವಿಷ್ಯದ ವಿಚಾರ ಈ ವರದಿಯಲ್ಲಿದೆ. ವರದಿಯಲ್ಲಿ ಲೋಪಗಳಿವೆ ಎಂಬ ಕಾರಣವೊಡ್ಡಿ ಅದನ್ನು ಸಲ್ಲಿಸಲು ವಿರೋಧಿಸುವುದು ಸರಿಯಲ್ಲ. ಲೋಪಗಳಿದ್ದರೂ ಬಹಿರಂಗಪಡಿಸಿದ ಬಳಿಕ ಸರಿಪಡಿಸಲು ಅವಕಾಶಗಳಿವೆ. ಎಲ್ಲ ಸಂದರ್ಭಗಳಲ್ಲೂ ಹಿಂದುಳಿದ ವರ್ಗಗಳ ಆಯೋಗದ ವರದಿಯನ್ನು ಮೇಲು ಜಾತಿಗಳವರು ವಿರೋಧಿಸಿದ ಉದಾಹರಣೆಗಳಿವೆ. ಅದಕ್ಕೆ ತಲೆ ಕೆಡಿಸಿಕೊಳ್ಳುವ ಅಗತ್ಯವಿಲ್ಲ ಎಂದರು.

ಜಾತಿ ಜನ ಗಣತಿ ವರದಿ ಕೇವಲ ಮೀಸಲಾತಿ ನಿಗದಿಗೆ ಬಳಕೆ ಆಗುವುದಿಲ್ಲ. ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಕಲ್ಪಿಸಿದರೆ ಒಳ್ಳೆಯದು. ಈಗ ಅಭಿವೃದ್ಧಿ ಯೋಜನೆಗಳಲ್ಲಿ ವಿವಿಧ ಸಮುದಾಯಗಳಿಗೆ ನ್ಯಾಯ ಒದಗಿಸಲು ಈ ವರದಿ ಸಹಕಾರಿಯಾಗಲಿದೆ ಎಂದು ಹೇಳಿದರು.

ಸುದ್ದಿ 2 ನಿಮಿಷ

ಸಚ್ಚಿದಾನಂದಶ್ರೀ ಸೇರಿ 6 ಮಂದಿಗೆ ಸಂಗೀತ ವಿ.ವಿ ಗೌರವ ಡಾಕ್ಟರೇಟ್

ಮೈಸೂರು: ಗಣಪತಿ ಸಚ್ಚಿದಾನಂದ ಸ್ವಾಮೀಜಿ, ವಿದುಷಿ ಡಿ.ಶಶಿಕಲಾ ಸೇರಿ 6 ಮಂದಿಗೆ ಇಲ್ಲಿನ ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ನೀಡುತ್ತಿದೆ.

ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಅ.18ರಂದು ಸಂಜೆ 4ಕ್ಕೆ ವಿಶ್ವವಿದ್ಯಾಲಯದ ಐದು ಮತ್ತು ಆರನೇ ಘಟಿಕೋತ್ಸವ ನಡೆಯಲಿದ್ದು, ರಾಜ್ಯಪಾಲ ಥಾವರಚಂದ್ ಗೆಹಲೋತ್ ಪ್ರದಾನ ಮಾಡುವರು.

ಬಿಬಿಎಂಪಿ ಶಾಲೆಯಲ್ಲಿ 40 ವರ್ಷ ಶಿಕ್ಷಕಿಯಾಗಿ ಕರ್ತವ್ಯ ನಿರ್ವಹಿಸುತ್ತಾ, ಕರ್ನಾಟಕ ಸಂಗೀತ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವ ವಿದುಷಿ ಡಿ.ಶಶಿಕಲಾ, ಕಲಬುರಗಿಯ ಸತ್ಯಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾಲಯ ಸ್ಥಾಪಕರಾದ ಮಧುಸೂದನ ಸಾಯಿ ಹಾಗೂ ಹಿಂದೂಸ್ತಾನಿ ಸಂಗೀತ ಗಾಯಕ ಪಂಡಿತ್ ವಿನಾಯಕ ತೊರವಿ ಅವರಿಗೆ 2019–20ನೇ ಸಾಲಿನ ಐದನೇ ಘಟಿಕೋತ್ಸವ ಪ್ರಯುಕ್ತ ಗೌರವ ಡಾಕ್ಟರೇಟ್ ನೀಡಲಾಗುತ್ತಿದೆ.

ಸಂಗೀತ ಸಂಶೋಧನೆಯಲ್ಲಿ ನೀಡಿದ ಕೊಡುಗೆ ಪರಿಗಣಿಸಿ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಪಂಡಿತ್ ಶ್ರೀಪಾದ ಹೆಗಡೆ ಕಂಪ್ಲಿ ಹಾಗೂ ಪ್ರೊ.ಎಸ್.ಸಿ.ಶರ್ಮಾ ಅವರನ್ನು 2020–21ನೇ ಸಾಲಿನ ಆರನೇ ಘಟಿಕೋತ್ಸವದ ಗೌರವ ಡಾಕ್ಟರೇಟ್‌ಗೆ ಆಯ್ಕೆ ಮಾಡಲಾಗಿದೆ. ಸಂಗೀತ ನಿರ್ದೇಶಕ ಹಂಸಲೇಖ ಸೇರಿದಂತೆ 6 ಮಂದಿ ಸಲ್ಲಿಸಿದ ಪ್ರಬಂಧಗಳಿಗೆ ಪಿಎಚ್‌ಡಿ ಪದವಿ ನೀಡಲಾಗುತ್ತಿದೆ ಎಂದು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ತಿಳಿಸಿದರು.

ಜಾವಗಲ್ ಶ್ರೀನಾಥ್ ಸೇರಿ ಮೂವರಿಗೆ ಮೈಸೂರು ವಿ.ವಿ ಗೌರವ ಡಾಕ್ಟರೇಟ್

ಮೈಸೂರು: ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕ ಡಾ.ಪಿ.ಎಸ್.ಶಂಕರ್, ಮಾಜಿ ಕ್ರಿಕೆಟಿಗ ಜಾವಗಲ್ ಶ್ರೀನಾಥ್ ಹಾಗೂ ಪತ್ರಕರ್ತ ಕೆ.ಬಿ.ಗಣಪತಿ ಅವರಿಗೆ ಮೈಸೂರು ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ನೀಡಲು ನಿರ್ಧರಿಸಿದೆ.

'ಅ.18ರಂದು ನಡೆಯಲಿರುವ ವಿಶ್ವವಿದ್ಯಾಲಯದ 103ನೇ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಗುವುದು' ಎಂದು ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಸಮಾರಂಭ ಬೆಳಿಗ್ಗೆ 10.30ಕ್ಕೆ ಕ್ರಾಫರ್ಡ್ ಭವನದಲ್ಲಿ ನಡೆಯಲಿದೆ. ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಅಧ್ಯಕ್ಷತೆ ವಹಿಸಲಿದ್ದಾರೆ. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಉಪಸ್ಥಿತರಿರಲಿದ್ದು, ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ ವಿಶ್ರಾಂತ ಮಹಾ ನಿರ್ದೇಶಕ ವಾಸುದೇವ್ ಕೆ.ಆತ್ರೆ ಘಟಿಕೋತ್ಸವ ಭಾಷಣ ಮಾಡಲಿದ್ದಾರೆ' ಎಂದರು.

'ಬಿಜೆಪಿಯದ್ದು ರಾಜಕೀಯಪ್ರೇರಿತ ಆರೋಪ'

'ಕಾಂಗ್ರೆಸ್ ಸರ್ಕಾರ ದುಡ್ಡು ವಸೂಲಿ ಮಾಡುತ್ತಿದೆ' ಎಂಬ ಬಿಜೆಪಿ ಆರೋಪಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಿರುಗೇಟು

ಪ್ರಜಾವಾಣಿ ವಾರ್ತೆ

ಮೈಸೂರು: 'ಲೋಕಸಭೆ ಚುನಾವಣೆಯಲ್ಲಿ ಲಾಭ ಪಡೆಯಲು ಬಿಜೆಪಿಯವರು ನಮ್ಮ ವಿರುದ್ಧ ಮಾಡುತ್ತಿರುವ ಆರೋಪಗಳು ರಾಜಕೀಯಪ್ರೇರಿತ ಹಾಗೂ ಆಧಾರರಹಿತ. ಅವರು ಯಾವುದೇ ಪ್ರತಿಭಟನೆ ನಡೆಸಿದರೂ ಜನ ನಂಬುವುದಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿರುಗೇಟು ನೀಡಿದರು.

'ಗುತ್ತಿಗೆದಾರರ ಮನೆಯಲ್ಲಿ ಹಣ ಪತ್ತೆಯಾಗಿರುವ ಕಾರಣ, ಕಾಂಗ್ರೆಸ್ ಸರ್ಕಾರ ದುಡ್ಡು ವಸೂಲಿ ಮಾಡುತ್ತಿದೆ' ಎಂಬ ಬಿಜೆಪಿ ಆರೋಪಕ್ಕೆ ಸೋಮವಾರ ಪ್ರತಿಕ್ರಿಯಿಸಿ, 'ನಮಗೆ ಈವರೆಗೂ ಹೈಕಮಾಂಡ್ ನಯಾ ಪೈಸೆ ಹಣವನ್ನ ಕೇಳಿಲ್ಲ' ಎಂದು ಪ್ರತಿಪಾದಿಸಿದರು.

'ಆದಾಯ ತೆರಿಗೆ ಇಲಾಖೆ ತನ್ನ ಕೆಲಸ ಮಾಡಿದೆ. ಯಾರದೋ ಮನೆಯಲ್ಲಿ ಹಣ ಪತ್ತೆಯಾದರೆ, ರಾಜಕೀಯದ ನಂಟು ಹಾಕುವುದು ಸರಿಯಲ್ಲ' ಎಂದರು.

'ನಗದು ಪತ್ತೆ ಕುರಿತು ರಾಜ್ಯ ಸರ್ಕಾರದಿಂದ ತನಿಖೆ ಅಗತ್ಯವಿಲ್ಲ. ಪಂಚರಾಜ್ಯಗಳ ಚುನಾವಣೆ ಇರುವುದರಿಂದ ಕಾಂಗ್ರೆಸ್‌ನ ಮೇಲೆ ಆಧಾರರಹಿತ ಆರೋಪ ಮಾಡುತ್ತಿದ್ದಾರೆ. ಅಲ್ಲಿನ ಚುನಾವಣೆಗೂ ನಮ್ಮ ರಾಜ್ಯಕ್ಕೂ ಸಂಬಂಧವಿಲ್ಲ' ಎಂದರು.

'ಕಾಂಗ್ರೆಸ್ ನಾಯಕರಿಗೆ ದುಡ್ಡು ಸಂಗ್ರಹಿಸುವ ಗುರಿ ನೀಡಲಾಗಿದೆ' ಎಂಬ ಬಿಜೆಪಿ ಮುಖಂಡ ಸಿ.ಟಿ.ರವಿ ಆರೋಪಕ್ಕೆ ಪ್ರತಿಕ್ರಿಯಿಸಿ, 'ಅವರ ಸುಳ್ಳು ಹೇಳಿಕೆಗೆ ಪ್ರತಿಕ್ರಿಯಿಸಬೇಕಾಗಿಲ್ಲ' ಎಂದರು.

ವಿದ್ಯುತ್ ವ್ಯತ್ಯಯ: 'ಮಳೆ ಅಭಾವದಿಂದ ಪಂಪಸೆಟ್‌ಗಳಿಗೆ ವಿದ್ಯುತ್ ಪೂರೈಸುವಲ್ಲಿ ವ್ಯತ್ಯಯವಾಗಿದೆ. ಸಾಧಾರಣವಾಗಿ, ಅಕ್ಟೋಬರ್ ತಿಂಗಳವರೆಗೆ 10 ಸಾವಿರ ಮೆಗಾ ವಾಟ್ ವಿದ್ಯುತ್ ಖರ್ಚಾಗುತ್ತಿತ್ತು. ಆದರೆ, ಈ ಬಾರಿ 16 ಸಾವಿರ ಮೆಗಾ ವಾಟ್ ಖರ್ಚಾಗುತ್ತಿದೆ. ಸುಮಾರು 2 ಸಾವಿರ ಮೆಗಾ ವಾಟ್ ಕೊರತೆಯಿದೆ' ಎಂದರು.

'ಕುಡಿಯುವ ನೀರಿಗಾಗಿ ಖಾಸಗಿ ಕೊಳವೆಬಾವಿಗಳನ್ನು ಬಳಸಬೇಕು. ಅಗತ್ಯವಿದ್ದಲ್ಲಿ ಹೊಸ ಕೊಳವೆ ಬಾವಿಗಳನ್ನು ಕೊರೆಯಬೇಕು ಎಂದು ಸೂಚಿಸಲಾಗಿದೆ. ಮೇವಿನ ಕೊರತೆ ಇಲ್ಲ. ಆದರೂ ಮೇವು ಬೆಳೆಸಿ ಶೇಖರಿಸಿಡಲು ಸೂಚಿಸಲಾಗಿದೆ. 216 ತಾಲ್ಲೂಕುಗಳು ಬರಪೀಡಿತವಾಗಿದ್ದು, 42 ಸಾವಿರ ಹೆಕ್ಟೇರ್ ಬೆಳೆ ಹಾನಿಯಾಗಿದೆ. ₹30 ಸಾವಿರ ಕೋಟಿ ನಷ್ಟವಾಗಿದೆ. ₹4,860 ಕೋಟಿ ಪರಿಹಾರ ಮೊತ್ತ ಕೋರಲಾಗಿದೆ' ಎಂದರು.

'ಚಾಮುಂಡಿ ಬೆಟ್ಟಕ್ಕೆ ಶಾಶ್ವತ ದೀಪಾಲಂಕಾರ ಮಾಡಬೇಕು ಎಂದು ಚಲನಚಿತ್ರ ಸಂಗೀತ ನಿರ್ದೇಶಕ ಹಂಸಲೇಖ ದಸರಾ ಉದ್ಘಾಟನೆ ಭಾಷಣದಲ್ಲಿ ಹೇಳಿದ್ದಾರೆ. ಆ ಬಗ್ಗೆ ಪರಿಶೀಲಿಸಲಾಗುವುದು' ಎಂದರು.

ಸಿಬಿಐ ತನಿಖೆಗೆ ಬಿಎಸ್‌ವೈ ಒತ್ತಾಯ

ಬೆಂಗಳೂರು: ಇತ್ತೀಚೆಗೆ ನಡೆದಿರುವ ಆದಾಯ ತೆರಿಗೆ ಇಲಾಖೆ ದಾಳಿಯಲ್ಲಿ ₹100 ಕೋಟಿಗೂ ಹೆಚ್ಚು ಹಣವನ್ನು ವಶಪಡಿಸಿಕೊಳ್ಳಲಾಗಿದೆ. ಇದು ಯಾರಿಗೆ ಸೇರಿದ ಹಣ ಎಂಬುದು ಗೊತ್ತಾಗಬೇಕಾದರೆ ಇಡಿ ಅಥವಾ ಸಿಬಿಐನಿಂದಲೇ ತನಿಖೆ ಆಗಬೇಕು ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಒತ್ತಾಯಿಸಿದ್ದಾರೆ.

ಕಾಂಗ್ರೆಸ್ ಪಕ್ಷ ಚುನಾವಣೆಗೆ ಬಳಸಲೆಂದೇ ಹಣವನ್ನು ಸಂಗ್ರಹಿಸಿದೆ ಎಂದು ಅವರು ಆರೋಪಿಸಿದರು.

ಕಾಂಗ್ರೆಸ್ ಸರ್ಕಾರ ರಾಜ್ಯದ ಅಭಿವೃದ್ಧಿ ಕಾರ್ಯಗಳಿಗೆ ಹಣ ಬಿಡುಗಡೆ ಮಾಡುತ್ತಿಲ್ಲ. ಅದರ ಬದಲು ಅನ್ಯ ರಾಜ್ಯಗಳ ವಿಧಾನಸಭಾ ಚುನಾವಣೆಗಳು ಮತ್ತು ಲೋಕಸಭೆ ಚುನಾವಣೆಗಾಗಿ ಭಾರಿ ಪ್ರಮಾಣದಲ್ಲಿ ಹಣ ಸಂಗ್ರಹಿಸುವ ಕೆಲಸ ಮಾಡುತ್ತಿದೆ. ಹೀಗಾಗಿ ಜನರಿಂದಲೇ ಲೂಟಿ ಮಾಡಲಾರಂಭಿಸಿದೆ ಎಂದು ಅವರು ಹರಿಹಾಯ್ದರು.

'₹ 1,000 ಕೋಟಿ 'ಕಲೆಕ್ಷನ್' ಗುರಿ'

'ಕಾಂಗ್ರೆಸ್ ಹೈಕಮಾಂಡ್ ರಾಜ್ಯ ಸರ್ಕಾರಕ್ಕೆ ಮೊದಲ ಹಂತದಲ್ಲಿ ₹1,000 ಕೋಟಿ ಕಲೆಕ್ಷನ್‌ಗೆ ಗುರಿ ನಿಗದಿ ಮಾಡಿದೆ' ಎಂದು ಬಿಜೆಪಿ 'ಎಕ್ಸ್' ಮೂಲಕ ಆರೋಪಿಸಿದೆ.

'ಹೈಕಮಾಂಡ್ ಗುರಿ ಮುಟ್ಟಲು ಸಿದ್ದರಾಮಯ್ಯ ಸರ್ಕಾರ ವಿವಿಧ ಸಚಿವರಿಗೂ ಗುರಿ ನಿಗದಿ ಮಾಡಿದೆ. ಡಿ.ಕೆ.ಶಿವಕುಮಾರ್(ಬೆಂಗಳೂರು ನಗರಾಭಿವೃದ್ಧಿ)₹250 ಕೋಟಿ, ಸತೀಶ ಜಾರಕಿಹೊಳಿ(ಲೋಕೋಪಯೋಗಿ ಇಲಾಖೆ)₹115 ಕೋಟಿ, ಪ್ರಿಯಾಂಕ್ ಖರ್ಗೆ(ಗ್ರಾಮೀಣಾಭಿವೃದ್ಧಿ ಇಲಾಖೆ)₹100 ಕೋಟಿ, ದಿನೇಶ್ ಗುಂಡೂರಾವ್(ಆರೋಗ್ಯ ಇಲಾಖೆ) ₹75 ಕೋಟಿ, ಚಲುವರಾಯಸ್ವಾಮಿ(ಕೃಷಿ ಇಲಾಖೆ)₹125 ಕೋಟಿ, ಎಚ್.ಸಿ.ಮಹದೇವಪ್ಪ (ಸಮಾಜ ಕಲ್ಯಾಣ ಇಲಾಖೆ)₹95 ಕೋಟಿ, ಕೃಷ್ಣಬೈರೇಗೌಡ (ಕಂದಾಯ ಇಲಾಖೆ),₹90 ಕೋಟಿ. ಎರಡನೇ ಹಂತದ ಪಟ್ಟಿಯನ್ನು ಕಲೆಕ್ಷನ್ ಏಜೆಂಟ್ ಸುರ್ಜೇವಾಲ ಅವರಿಂದಲೇ ಬಿಡುಗಡೆ ಆಗಲಿದೆ' ಎಂದು ಎಕ್ಸ್‌ನಲ್ಲಿ ಟೀಕಿಸಿದೆ.

'ಸರ್ಕಾರವನ್ನು ಹೊಡೆದೋಡಿಸುತ್ತಾರೆ'

ಬೆಳಗಾವಿ: 'ಗುತ್ತಿಗೆದಾರರ ಬಳಿ ಕೋಟ್ಯಂತರ ಹಣ ಸಿಕ್ಕಿದ್ದರಿಂದ ಕಾಂಗ್ರೆಸ್ ಸರ್ಕಾರದ ಮುಖವಾಡ ಬಯಲಾಗಿದೆ. ಇಂಥ ಸರ್ಕಾರವನ್ನು ಜನರೇ ಹುಚ್ಚುನಾಯಿಗೆ ಕಲ್ಲು ಹೊಡೆದಂತೆ ಹೊಡೆದು ಉರುಳಿಸುತ್ತಾರೆ' ಎಂದು ಮಾಜಿ ಸಚಿವ ಗೋವಿಂದ ಕಾರಜೋಳ ಹೇಳಿದರು.

ಸಮೀಪದ ಸಾಂಬ್ರಾ ವಿಮಾನ ನಿಲ್ದಾಣದಲ್ಲಿ ಸೋಮವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರ ಸಹಕಾರ ಇಲ್ಲದೇ ಗುತ್ತಿಗೆದಾರ ₹42 ಕೋಟಿ ಹಣ ಸಂಗ್ರಹಿಸಲು ಸಾಧ್ಯವಿಲ್ಲ. ಇದರ ನೈತಿಕ ಹೊಣೆ ಹೊತ್ತು ಇಬ್ಬರೂ ರಾಜೀನಾಮೆ ನೀಡಬೇಕು' ಎಂದು ಆಗ್ರಹಿಸಿದರು.

'ಗುತ್ತಿಗೆದಾರರ ಅಸೋಸಿಯೇಷನ್ ಮುಂದೆ ಬಿಟ್ಟು ನಮ್ಮ ಸರ್ಕಾರದ ಮೇಲೆ ಶೇ 40ರ ಕಮಿಷನ್ ಆರೋಪ ಮಾಡಿದರು. ಅದರ ಲಾಭ ಮಾಡಿಕೊಂಡು ಗೆದ್ದರು. ಆದರೆ, ಈಗ ಅವರದೇ ಸರ್ಕಾರದಲ್ಲಿ ಮೂಟೆಗಟ್ಟಲೇ ದುಡ್ಡು ಹೊರಬೀಳುತ್ತಿದೆ. ಬಿಜೆಪಿ ಸರ್ಕಾರದ ಮೇಲೆ ಗೂಬೆ ಕೂರಿಸಿದ ಗುತ್ತಿಗೆದಾರರ ಸಂಘದ ಅಧ್ಯಕ್ಷ ಈಗ ಬಾಯಿಬಿಡಬೇಕು' ಎಂದೂ ಒತ್ತಾಯಿಸಿದರು.

'ಹಣ ಯಾರದ್ದೆಂದು ತನಿಖೆಯಾಗಲಿ'

'ಬಿಜೆಪಿಯವರು ಕೀಳುಮಟ್ಟದ ರಾಜಕೀಯಕ್ಕಾಗಿ ಆರೋಪ ಮಾಡುತ್ತಾರೆ. ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ವಶಕ್ಕೆ ಪಡೆದ ಹಣ ಯಾರದ್ದೆಂದು ತನಿಖೆಯಾಗಲಿ. ಯಾರು ಹಾಲಲ್ಲಿದ್ದಾರೆ? ಯಾರು ನೀರಲ್ಲಿದ್ದಾರೆ? ಎಂಬುದು ಗೊತ್ತಾಗಲಿ' ಎಂದು ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಹೇಳಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, 'ಹಣ ಸಂಗ್ರಹಕ್ಕೆ ಕಾಂಗ್ರೆಸ್ ಹೈಕಮಾಂಡ್ ಗುರಿ ನೀಡಿದೆ ಎಂಬುದನ್ನು ನಾನು ಒಪ್ಪುವುದಿಲ್ಲ. ಭ್ರಷ್ಟಾಚಾರವನ್ನು ಎಳ್ಳಷ್ಟೂ ಸಹಿಸುವುದಿಲ್ಲ ಎಂದು ಎಐಸಿಸಿ ಎರಡು ತಿಂಗಳ ಹಿಂದೆ ರಾಜ್ಯ ಸರ್ಕಾರಕ್ಕೆ ಸ್ಪಷ್ಟ ನಿರ್ದೇಶನ ನೀಡಿದೆ. ಚುನಾವಣೆ ಬಂದಾಗ ಕೇಂದ್ರ ಸರ್ಕಾರ ಐ.ಟಿ, ಇ.ಡಿ, ಸಿಬಿಐ ಬಳಸಿ ದಾಳಿ ನಡೆಸುವುದು ಮಾಮೂಲಿಯಾಗಿದೆ' ಎಂದರು.

ಕಾಂಗ್ರೆಸ್ ವಿರುದ್ಧ ಬಿಜೆಪಿ ಪ್ರತಿಭಟನೆ:ಹೆಬ್ಬಾರ ಗೈರು

ಕಾರವಾರ: 'ರಾಜ್ಯ ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ' ಎಂದು ಆರೋಪಿಸಿ ಬಿಜೆಪಿ ಯಲ್ಲಾಪುರ ಸೇರಿದಂತೆ ಜಿಲ್ಲೆಯಾದ್ಯಂತ ಸೋಮವಾರ ಪ್ರತಿಭಟನೆ ನಡೆಸಿದ್ದು, ಯಲ್ಲಾಪುರ ಬಿಜೆಪಿ ಶಾಸಕ ಶಿವರಾಮ ಹೆಬ್ಬಾರ ಪ್ರತಿಭಟನೆಗೆ ಗೈರಾಗಿದ್ದರು.

ಹೆಬ್ಬಾರ ಕಾಂಗ್ರೆಸ್ ಸೇರ್ಪಡೆಗೆ ತಯಾರಿ ನಡೆಸುತ್ತಿದ್ದಾರೆ ಎಂಬ ವದಂತಿಗಳು ಹಬ್ಬುತ್ತಿರುವ ಬೆನ್ನಲ್ಲೆ ರಾಜ್ಯ ಸರ್ಕಾರದ ವಿರುದ್ಧದ ಪ್ರತಿಭಟನೆಯಿಂದ ದೂರ ಉಳಿದಿರುವುದು ಯಲ್ಲಾಪುರ ಕ್ಷೇತ್ರದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಅಲ್ಲದೆ, ಹೆಬ್ಬಾರ ಬೆಂಬಲಿಗರೂ ಪ್ರತಿಭಟನೆಯಲ್ಲಿ ಪಾಲ್ಗೊಳ್ಳದಿರುವುದು ಮತ್ತಷ್ಟು ಪ್ರಶ್ನೆ ಮೂಡಲು ಎಡೆಮಾಡಿಕೊಟ್ಟಿದೆ.

'ಪಟ್ಟಾ ವಿತರಣೆ, ಪಟ್ಟಣ ಪಂಚಾಯ್ತಿಯಲ್ಲಿ ಸಭೆ ನಡೆಸಬೇಕಿದ್ದ ಕಾರಣ ಮುಂಜಾನೆಯೇ ಮುಂಡಗೋಡಕ್ಕೆ ತೆರಳಿದ್ದೆ. ಇದರಿಂದ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ಸಾಧ್ಯವಾಗಿಲ್ಲ' ಎಂದು ಶಿವರಾಮ ಹೆಬ್ಬಾರ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ್ದಾರೆ.

ಪಿ.ಆರ್‌ಕೆ ಸ್ಟುಡಿಯೊಸ್ ಸಹಯೋಗದಲ್ಲಿ ಎನ್‌3ಕೆ ಸ್ಟುಡಿಯೊಸ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನಟ ದಿವಂಗತ ಪುನೀತ್ ರಾಜ್‌ಕುಮಾರ್ ಅವರ ಕಿರುಪ್ರತಿಮೆಯನ್ನು ಲೋಕಾರ್ಪಣೆ ಮಾಡಿ ಪುನೀತ್ ಅವರ ಪುತ್ರಿ ವಂದಿತಾಗೆ ಆಶೀರ್ವಾದ ಮಾಡಿದರು. ಅಶ್ವಿನಿ ಪುನೀತ್ ರಾಜ್‌ಕುಮಾರ್ ಮತ್ತು ನಟ ಯುವ ರಾಜ್‌ಕುಮಾರ್ ಇದ್ದರು
ಪ್ರಜಾವಾಣಿ ಚಿತ್ರ: ರಂಜು ಪಿ

₹ 102 ಕೋಟಿ ಮೌಲ್ಯದ ಆಸ್ತಿ ಜಪ್ತಿ

ಒಂದನೇ ಪುಟದಿಂದ...

ವಾಚ್‌ಗಳನ್ನು ಖಾಸಗಿ ಕಂಪನಿಯೊಂದರ ನೌಕರನಿಂದ ವಶಪಡಿಸಿಕೊಳ್ಳಲಾಗಿದೆ ಎಂದು ಮಂಡಳಿ ಮಾಹಿತಿ ನೀಡಿದೆ. 'ಗುತ್ತಿಗೆದಾರರು ನಕಲಿ ಖರೀದಿ ಮತ್ತು ವೆಚ್ಚದ ದಾಖಲೆಗಳನ್ನು ಸೃಷ್ಟಿಸಿ ಆದಾಯವನ್ನು ಕಡಿಮೆ ತೋರಿಸಿ, ತೆರಿಗೆ ವಂಚಿಸುತ್ತಿರುವುದಕ್ಕೆ ಸಂಬಂಧಿಸಿದ ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ. ಉಪ ಗುತ್ತಿಗೆದಾರರಿಂದ ಹೆಚ್ಚಿನ ದರದಲ್ಲಿ ಖರೀದಿ ಮಾಡಿದ ದಾಖಲೆಗಳನ್ನೂ ಸೃಷ್ಟಿಸಿರುವುದು ಪತ್ತೆಯಾಗಿದೆ' ಎಂದು ತಿಳಿಸಿದೆ.

ಕಾಮಗಾರಿಗಳ ಗುತ್ತಿಗೆಯನ್ನು ಬಳಸಿಕೊಂಡು ಅಪಾರ ಪ್ರಮಾಣದ ಲೆಕ್ಕಪತ್ರವಿಲ್ಲದ ನಗದನ್ನು ಸಂಗ್ರಹಿಸಲಾಗಿದೆ. ಅಲ್ಲದೇ ಅಘೋಷಿತ ಆದಾಯವನ್ನು ಹೊಂದಲಾಗಿದೆ. ಸರಕುಗಳ ಸ್ವೀಕೃತಿಗೆ ಸಂಬಂಧಿಸಿದ ದಾಖಲೆಗಳಲ್ಲೂ ಅಕ್ರಮ ಪತ್ತೆಯಾಗಿದೆ. ದಾಖಲೆಯಲ್ಲಿರುವ ಖರೀದಿ ಪ್ರಮಾಣ ಮತ್ತು ಸಾಗಣೆಯ ಪ್ರಮಾಣದಲ್ಲಿ ವ್ಯತ್ಯಾಸ ಕಂಡುಬಂದಿದೆ ಎಂದು ಸಿಬಿಡಿಟಿ ಹೇಳಿದೆ.

ಕೆಲವು ಗುತ್ತಿಗೆದಾರರು ಉಪ ಗುತ್ತಿಗೆದಾರರ ಜತೆ ವಹಿವಾಟು ನಡೆಸಿದಂತೆ ಬೋಗಸ್ ದಾಖಲೆಗಳನ್ನು ಸೃಷ್ಟಿಸಿದ್ದಾರೆ. ಕೆಲವರು ಕಾಮಗಾರಿಯೇತರ ವೆಚ್ಚವನ್ನು ಲೆಕ್ಕಪತ್ರದಲ್ಲಿ ತೋರಿಸಿದ್ದಾರೆ. 'ಸಂಪರ್ಕ' ವೆಚ್ಚವನ್ನೂ ಲೆಕ್ಕಪತ್ರಗಳಲ್ಲಿ ಉಲ್ಲೇಖಿಸಿರುವುದು ಪತ್ತೆಯಾಗಿದೆ ಎಂದು ತಿಳಿಸಿದೆ.

ಈ ಗುತ್ತಿಗೆದಾರರು, ಉದ್ಯಮಿಗಳು ಮತ್ತು ಅವರ ಸಹಚರರು ಭಾರಿ ಪ್ರಮಾಣದ ನಗದು ವಹಿವಾಟನ್ನು ಅಘೋಷಿತವಾಗಿ ನಡೆಸಿರುವುದಕ್ಕೆ ದಾಖಲೆಗಳು ಸಿಕ್ಕಿವೆ. ಅಂತಹ ವಹಿವಾಟಿನ ಕುರಿತು ಲೆಕ್ಕಪತ್ರಗಳಲ್ಲಿ ಯಾವುದೇ ಉಲ್ಲೇಖವಿಲ್ಲ. ತೆರಿಗೆದಾರರು, ಉಪ ಗುತ್ತಿಗೆದಾರರು ಮತ್ತು ಕೆಲವು ನಗದು ನಿರ್ವಾಹಕರ ಬಳಿ ಈ ರೀತಿಯ ಅಕ್ರಮಕ್ಕೆ ಸಾಕ್ಷ್ಯಗಳು ಲಭಸಿವೆ ಎಂದು ಮಾಹಿತಿ ನೀಡಿದೆ. ತೆರಿಗೆ ವಂಚನೆ, ಅಘೋಷಿತ ನಗದು ವಹಿವಾಟು, ಗುತ್ತಿಗೆಗಳಲ್ಲಿನ ಅಕ್ರಮಗಳಿಗೆ ಸಂಬಂಧಿಸಿದಂತೆ ಲೆಕ್ಕಪತ್ರದ ಹಾಳೆಗಳು, ಪುಸ್ತಕಗಳು, ಡಿಜಿಟಲ್ ಡೇಟಾ ಸೇರಿದಂತೆ ಅಪಾರ ಪ್ರಮಾಣದ ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಸಿಬಿಡಿಟಿ ತಿಳಿಸಿದೆ.

ಸಿಕ್ಕಿದ್ದು ಎಸ್‌.ಎಸ್‌.ಟಿ., ವೈ.ಎಸ್‌.ಟಿ. ಹಣ: ಕುಮಾರಸ್ವಾಮಿ ಆರೋಪ

ಒಂದನೇ ಪುಟದಿಂದ...

'ಐ.ಟಿ ದಾಳಿ ಮಾಡುವಾಗ ರಾಜ್ಯದ ಅಧಿಕಾರಿಗಳಿರುವುದಿಲ್ಲವೇ? ಅವರಿಗೂ ಮಾಹಿತಿ ಇರುತ್ತದೆ. ಅವರಿಂದಲಾದರೂ ಮಾಹಿತಿ ಪಡೆದು ಸತ್ಯಾಂಶ ಹೇಳಿ. ದಾಳಿಯಲ್ಲಿ ಸಿಕ್ಕ ₹100 ಕೋಟಿ ಜನರ ತೆರಿಗೆ ಹಣ' ಎಂದು ಪ್ರತಿಪಾದಿಸಿದರು.

ದಸರಾದಲ್ಲಿ ಕಾರ್ಯಕ್ರಮ ಕೊಡಿಸಲು ಖ್ಯಾತ ಸರೋದ್ ವಾದಕ ಪಂಡಿತ್ ರಾಜೀವ್ ತಾರಾನಾಥ ಅವರ ಬಳಿ ₹3 ಲಕ್ಷ ಕಮಿಷನ್ ಕೇಳಿದ ಪ್ರಕರಣದ ಬಗ್ಗೆ ಪ್ರಸ್ತಾಪಿಸಿದ ಅವರು, 'ಅಧಿಕಾರಿ ಲಂಚ ಕೇಳಲು ಕಾರಣ ಯಾರು? ಆ ಅಧಿಕಾರಿ ಭಾರಿ ಲಂಚ ಕೊಟ್ಟು ಇಲ್ಲಿಗೆ ಬಂದಿದ್ದಾನೆ. ಅದಕ್ಕಾಗಿಯೇ ಲಂಚ ಕೇಳಿದ್ದಾನೆ. ಈ ಸರ್ಕಾರದಲ್ಲಿ ಭ್ರಷ್ಟಾಚಾರ ಯಾವ ಹಂತ ತಲುಪಿದೆ ಎನ್ನುವುದಕ್ಕೆ ಇದಕ್ಕಿಂತ ಸಾಕ್ಷ್ಯ ಬೇಕಾ' ಎಂದು ಪ್ರಶ್ನಿಸಿದರು.

'ರಾಜ್ಯ ಕಂಡ ಅತ್ಯಂತ ಭ್ರಷ್ಟ ಸರ್ಕಾರವಿದು. ಭಾರಿ ನಿರೀಕ್ಷೆಯಿಂದ ಇವರನ್ನು ಗೆಲ್ಲಿಸಿದ ಜನರೇ ತಿರುಗಿ ಬೀಳುವ ಕಾಲ ದೂರವಿಲ್ಲ. ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದೇವೆ ಎನ್ನುತ್ತಾರಲ್ಲಾ ರಾಜ್ಯದಲ್ಲಿ ಬೇರೆ ಅಭಿವೃದ್ಧಿ ಕೆಲಸಗಳೇನಾದರೂ ಆಗುತ್ತಿವೆಯಾ? ಹೊಸ ಶಾಸಕರು ಕ್ಷೇತ್ರದತ್ತ ತಲೆಹಾಕುತ್ತಿಲ್ಲ. ಜನರ ಪ್ರಶ್ನೆಗೆ ಉತ್ತರಿಸಲಾಗುತ್ತಿಲ್ಲ ಎಂದು ಗೋಳಾಡುತ್ತಿದ್ದಾರೆ' ಎಂದು ದೂರಿದರು.

ಸಿ.ಎಂ ಸಿದ್ದರಾಮಯ್ಯ ಭರವಸೆ

'ರಾಜ್‌ಕುಮಾರ್ ಸ್ಮಾರಕ ಪುನರಾಭಿವೃದ್ಧಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ವರನಟ ರಾಜ್‌ಕುಮಾರ್ ಅವರ ಸ್ಮಾರಕ ಪುನರಾಭಿವೃದ್ಧಿ ಮಾಡಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಘೋಷಿಸಿದರು.

ನಗರದ ರ‍್ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ನಟ ದಿವಂಗತ ಪುನೀತ್ ರಾಜ್‌ಕುಮಾರ್ ಅವರ 3ಡಿ ಮುದ್ರಿತ ಕಿರುಪ್ರತಿಮೆ ಅನಾವರಣ ಕಾರ್ಯಕ್ರಮದಲ್ಲಿ, ಪುನೀತ್ ಅವರ ಪತ್ನಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರು ನೀಡಿದ ಮನವಿಯನ್ನು ಸ್ವೀಕರಿಸಿ ಸಿದ್ದರಾಮಯ್ಯ ಈ ಭರವಸೆ ನೀಡಿದರು. ಜೊತೆಗೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ಘೋಷಣೆಯಾಗಿದ್ದ ಸ್ಫೂರ್ತಿ ದಿನಾಚರಣೆಯನ್ನು(ಮಾರ್ಚ್ 17) ಕಾರ್ಯರೂಪಕ್ಕೆ ತರುವುದಾಗಿ ತಿಳಿಸಿದರು.

'ಪುನೀತ್ ಅಪರೂಪದ ವ್ಯಕ್ತಿತ್ವ ಇದ್ದ ನಟ. ಅವರಲ್ಲಿ ಸ್ವಲ್ಪವೂ ಅಹಂ ಇರಲಿಲ್ಲ. ಬಡವರಿಗೆ ಸ್ಪಂದಿಸುವ ಮನೋಭಾವ ಹೊಂದಿದ್ದ ಅವರು ಅತಿ ಹೆಚ್ಚು ಅಭಿಮಾನಿಗಳನ್ನು ಹೊಂದಿದ್ದರು ಎಂದರೆ ಅತಿಶಯೋಕ್ತಿಯಲ್ಲ. ನಾವು ಇನ್ನೊಬ್ಬ ಪುನೀತ್ ಅವರನ್ನು ನೋಡಲು ಸಾಧ್ಯವಿಲ್ಲ' ಎಂದರು.

ಸ್ಫೂರ್ತಿ ದಿನ ಜಾರಿಗೆ ಬರಲಿ: ನಟ ರಾಘವೇಂದ್ರ ರಾಜ್‌ಕುಮಾರ್ ಮಾತನಾಡಿ, 'ವ್ಯಕ್ತಿಯೊಬ್ಬ ಹೇಗೆ ಬದುಕಬೇಕು ಎಂದು ತೋರಿಸಿಕೊಟ್ಟವನು ಪುನೀತ್. ಪುನೀತ್ ಮೊದಲು ಕುಟುಂಬದ ಜೊತೆ ಬದುಕಿದ್ದ. ಇದೀಗ ಎಲ್ಲರ ಮನಸ್ಸಿನಲ್ಲೂ ಬದುಕಿದ್ದಾನೆ. ಈ ಕಿರುಪ್ರತಿಮೆಯನ್ನು ಕಷ್ಟಪಟ್ಟು ಮಾಡಿಲ್ಲ, ಬದಲಾಗಿ ಇಷ್ಟಪಟ್ಟು ಮಾಡಿದ್ದಾರೆ. ಕೈಯಲ್ಲೊಂದು ಕ್ಯಾಮೆರಾ ಹಿಡಿದ ಪ್ರತಿಮೆಯಿದು. ಆವಾಗ ಅಪ್ಪಾಜಿ ಬಳಿ ಒಂದು ಪೆಂಟಾಕ್ಸ್ ಎಂಬ ಕ್ಯಾಮೆರಾ ಇತ್ತು. ಅದರಲ್ಲಿ ಅಪ್ಪಾಜಿ ಫೋಟೊ ತೆಗೆಯುತ್ತಿದ್ದ. ಆತನ ಕೊನೆಯ ಸಿನಿಮಾದಲ್ಲೂ ಆತ ಕ್ಯಾಮೆರಾ ಹಿಡಿದಿದ್ದ. ಜೀವಂತವಾಗಿರುವ ಪುನೀತ್‌ನನ್ನು ಮನೆಗೆ ಕರೆದೊಯ್ಯುತ್ತಿರುವ ರೀತಿ ಭಾವನೆ ಮೂಡಿದೆ. ಪುನೀತ್ ಜನ್ಮದಿನವಾದ ಮಾರ್ಚ್ 17ನ್ನು ಸ್ಫೂರ್ತಿ ದಿನ ಎಂದು ಘೋಷಣೆ ಮಾಡಿದರು. ಆದರೆ ಅದು ಜಾರಿಗೆ ಬರಲಿಲ್ಲ. ಸರ್ಕಾರ ಅದನ್ನು ಕಾರ್ಯರೂಪಕ್ಕೆ ತರಬೇಕು' ಎಂದು ಆಗ್ರಹಿಸಿದರು.

ಯುವ ಕವಿಗೋಷ್ಠಿಯಲ್ಲಿ ಹೆಚ್ಚು ವಯಸ್ಸಾದವರಿಗೆ ಅವಕಾಶ; ಸಾಹಿತ್ಯ ವಲಯದಲ್ಲಿ ವ್ಯಾಪಕ ಟೀಕೆ

ದಸರಾ ಕವಿಗೋಷ್ಠಿ: ಕವಿಗಳ ಆಯ್ಕೆಗೆ 'ಅಪಸ್ವರ'

• ಎಂ. ಮಹೇಶ

ಮೈಸೂರು: ದಸರಾ ಪ್ರಯುಕ್ತ ಇಲ್ಲಿ ಅ.17ರಿಂದ 21ರವರೆಗೆ ಆಯೋಜಿಸಿರುವ ವಿವಿಧ ಕವಿಗೋಷ್ಠಿಗಳಿಗೆ ಕವಿಗಳನ್ನು ಆಯ್ಕೆ ಮಾಡಿರುವ ಕ್ರಮದ ಬಗ್ಗೆ ಸಾಹಿತ್ಯಿಕ ವಲಯದಿಂದ ಆಕ್ಷೇಪ ವ್ಯಕ್ತವಾಗಿದೆ. ಸಾಮಾಜಿಕ ಜಾಲತಾಣ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದ ವಾಟ್ಸ್‌ಆ್ಯಪ್ ಗ್ರೂಪ್‌ಗಳಲ್ಲಿ ತೀವ್ರ ಚರ್ಚೆ ನಡೆಯುತ್ತಿದೆ.

'ದಸರಾ ಕವಿಗೋಷ್ಠಿಯಲ್ಲಿ ಈ ಮೊದಲು ಓದಿದವರು ಬಹಳ ಜನ ಕವಿತೆ ಓದೋದು? ಆಯ್ಕೆಗಾರರ ಕುರುಡುತನವೋ ಅಥವಾ ಓದುವವರ ಚಮಚಾಗಿರಿಯೋ?' ಎಂದು ರೇಣುಕ ವೆಂಕಟಯ್ಯ ಕೇಳಿದ್ದಾರೆ. 'ದಸರಾ ಕವಿಗೋಷ್ಠಿ ಏನು ಘಜ್ನಿ ಮಹಮದ್ ದಂಡಯಾತ್ರೆನಾ? ಭಾಗವಹಿಸಿದವರೇ ಎಷ್ಟು ಬಾರಿ ಭಾಗವಹಿಸುತ್ತಾರೆ? ಇವರಿಗೆ ತೃಪ್ತಿ ಯಾವಾಗ ಸಿಗುತ್ತದೋ?' ಎಂದು ಕವಯತ್ರಿ ವಿಶಾಲಾ ಆರಾಧ್ಯ ಅವರು ಫೇಸ್‌ಬುಕ್‌ನಲ್ಲಿ ಪೋಸ್ಟ್ ಹಾಕಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಇಲ್ಲಿ ಕಂಡಿರೇ ಇಲ್ಲಿ ಕಂಡಿರೆ ದಸರಾ ಕವಿಗೋಷ್ಠಿಯ ಕವಿಗಳನು ಇಲ್ಲಿ ಕಂಡಿರೇ?' ಎಂದು ಬರಹಗಾರ ಅರವಿಂದ ಚೊಕ್ಕಾಡಿ ಟೀಕಿಸಿ ಪೋಸ್ಟ್ ಹಾಕಿದ್ದಾರೆ. ಪರ್ಯಾಯ ಕವಿಗೋಷ್ಠಿ ಮಾಡೋಣವೇ ಎಂದು ಕೇಳಿದವರಿಗೆ, 'ಕವಿಗೋಷ್ಠಿಗಾಗಿ ಪರ್ಯಾಯ ದಸರಾ ಯಾಕೆ? ಆಲ್ರೆಡಿ ಇಲ್ವಾ, ನಾವು ಹೋಗಿ ಮಹಿಷ ದಸರಾದೊಟ್ಟಿಗೆ ಸೇರಿಕೊಳ್ಳುವ' ಎಂದು ಪ್ರತಿಕ್ರಿಯಿಸಿದ್ದಾರೆ.

'ಹೀಗೊಂದು ಆಸೆ... ದಸರಾ ಕವಿಗೋಷ್ಠಿಯಲ್ಲಿ ಕವನ ಓದಬೇಕೆನ್ನು... ಈ ವರುಷವೂ...' ಎಂದು ಕವಯತ್ರಿ ರೋಹಿಣಿ ಸತ್ಯ ಅಸಮಾಧಾನದಿಂದ ಬರೆದುಕೊಂಡಿದ್ದಾರೆ. 'ಅಷ್ಟೊಂದು ಕವಿಗಳಿದ್ದಾರೆ, ಅವರಿಗೂ ಪರ್ಸಂಟೇಜ್ ಇದ್ಯಾ' ಎಂದು ಹುಲಿಕುಂಟೆ ಮೂರ್ತಿ ಕೇಳಿದ್ದಾರೆ.

ಅಕ್ಕ–ತಂಗಿಗೆ: ಹೋದ ವರ್ಷ ಪತಿಗೆ, ಈ ಬಾರಿ ಪತ್ನಿಗೆ ಅವಕಾಶ ಕೊಡಲಾಗಿದೆ. ಮಹಿಳಾ ಕವಿಗೋಷ್ಠಿಯಲ್ಲಿ ಅಕ್ಕ–ತಂಗಿಗೆ (ಸುಚಿತ್ರಾ ಹೆಗಡೆ–ಕವಿತಾ ಹೆಗಡೆ) ಅವಕಾಶ ಸಿಕ್ಕಿದೆ. ಡಾಕ್ಟರೇಟ್ ಪದವೀಧರರೂ 'ಚಿಗುರು ಕವಿಗೋಷ್ಠಿ'ಯಲ್ಲಿ ಕವಿತೆ ವಾಚಿಸಲಿದ್ದಾರೆ. ಸಾಮಾನ್ಯವಾಗಿ ಇದರಲ್ಲಿ ಪ್ರಾಥಮಿಕ, ಪ್ರೌಢಶಾಲೆ, ಪದವಿ ಪೂರ್ವ ಮತ್ತು ಪದವಿ ವಿದ್ಯಾರ್ಥಿಗಳಿರುತ್ತಿದ್ದರು. ಈ ಬಾರಿ 35ರಿಂದ 40 ವರ್ಷವಾದವರನ್ನೂ ಸೇರಿಸಲಾಗಿದೆ!

ಈ ಹಿಂದೆ ಪ್ರಧಾನ ಕವಿಗೋಷ್ಠಿಯಲ್ಲಿ ಕವನ ಓದಿದ ಕವಿಗಳಿಗೆ ಹಿಂಬಡ್ತಿ ನೀಡಿ, ಮಹಿಳಾ ಮತ್ತು ಪ್ರಾದೇಶಿಕ ಕವಿಗೋಷ್ಠಿಯಲ್ಲಿ ಸೇರಿಸಲಾಗಿದೆ. 'ಹಿಂಬಡ್ತಿಗೆ ಅವರು ಹೇಗೆ ಒಪ್ಪಿದರು, ಅವಕಾಶಕ್ಕೆ ಹಾತೊರೆದರೇ, ಪ್ರಾದೇಶಿಕ ಕವಿಗೋಷ್ಠಿಗೆ ಇರುವ ಮಾನದಂಡಗಳೇನು' ಎಂಬ ಪ್ರಶ್ನೆ ಕೇಳಿಬಂದಿವೆ.

'ಎಲ್ಲ ಕಂದಾಯ ವಿಭಾಗದಿಂದಲೂ ಆಯ್ಕೆ ಮಾಡಿಲ್ಲ, ಮನಸ್ಸೋ ಇಚ್ಛೆ ಪ್ರಕ್ರಿಯೆ ನಡೆಸಲಾಗಿದೆ ಎಂದು ದೂರಲಾಗಿದೆ. ಆಯ್ಕೆಯಲ್ಲಿ ಸಮಗ್ರ ಕರ್ನಾಟಕದ ಆಶಯ ಕಾಣಿಸುತ್ತಿಲ್ಲ' ಎಂದು ದೂರಲಾಗಿದೆ.

'ಯುವ ಕವಿಗೋಷ್ಠಿಯಲ್ಲಿ 40 ವರ್ಷ ವಯಸ್ಸು ದಾಟಿದವರಿಗೆ ಅವಕಾಶ ನೀಡಲಾಗಿದೆ. ಯುವ ಕವಿಗಳು ಸಿಗಲಿಲ್ಲವೇ' ಎಂಬ ಪ್ರಶ್ನೆ ಕೇಳಿಬಂದಿದೆ.

ಈ ಬಾರಿ ಹಿಂಬಡ್ತಿ!

ಎಂ.ಎಸ್. ಶೇಖರ್, ಎಲ್. ಹನುಮಂತಯ್ಯ, ಪ್ರತಿಭಾ ನಂದಕುಮಾರ್, ಮೀನಾ ಪಾಟೀಲ, ರವೀಂದ್ರನಾಥ ನಾಯಕ್ ಈ ಹಿಂದೆ ಪ್ರಧಾನ ಕವಿಗೋಷ್ಠಿಗಳಲ್ಲಿದ್ದರು ಎನ್ನಲಾಗಿದೆ. ಈಗ ಮತ್ತೆ ಪಟ್ಟಿಯಲ್ಲಿದ್ದಾರೆ. ಇದರಿಂದ, ಕವಿತೆ ಓದಲು ಅವಕಾಶಕ್ಕಾಗಿ ಕಾಯುತ್ತಿರುವವರಿಗೆ ಅನ್ಯಾಯವಾಗಿದೆ ಎಂಬ ಅಸಮಾಧಾನ ವ್ಯಕ್ತವಾಗಿದೆ. 'ಹೊಸ ತಲೆಮಾರಿನ ಪ್ರತಿಭಾವಂತ ಕವಿಗಳನ್ನು ಗುರುತಿಸುವಲ್ಲಿ ಉಪ ಸಮಿತಿಯು ಗಮನಹರಿಸಿಲ್ಲ' ಎಂದು ದೂರಲಾಗುತ್ತಿದೆ.

ಕೆ.ಪಿ. ಮೃತ್ಯುಂಜಯ ಅವರು ಹಿಂದೆ ಪ್ರಧಾನ ಕವಿಗೋಷ್ಠಿಯಲ್ಲಿ ಎರಡು ಬಾರಿ ಕವನ ವಾಚಿಸಿದ್ದರು. ಅವರನ್ನು ಈಗ ಪ್ರಾದೇಶಿಕ ಕವಿಗೋಷ್ಠಿಗೆ ಸೇರಿಸಿ ಹಿಂಬಡ್ತಿ ನೀಡಲಾಗಿದೆ!

ಈ ಹಿಂದೆ ಕವಿಗೋಷ್ಠಿ ಉಪ ಸಮಿತಿಯ ಕಾರ್ಯಾಧ್ಯಕ್ಷರಾಗಿದ್ದ ಎಂ.ಎಸ್. ಶೇಖರ್, ನೀಲಗಿರಿ ತಳವಾರ ಅವರಿಗೆ ಪ್ರಧಾನ ಕವಿಗೋಷ್ಠಿಯಲ್ಲಿ, ಎನ್.ಕೆ. ಲೋಲಾಕ್ಷಿ ಅವರಿಗೆ ಚಿಗುರು ಕವಿಗೋಷ್ಠಿಯ ಅಧ್ಯಕ್ಷತೆ ನೀಡಲಾಗಿದೆ.

'ಇದು ಗಂಗೋತ್ರಿ ಕವಿಗೋಷ್ಠಿಯೇ?'

ಎಲ್ಲ ಕವಿಗೋಷ್ಠಿಗಳಲ್ಲಿ ಮೈಸೂರು ವಿಶ್ವವಿದ್ಯಾಲಯದ ಹಿರಿಯ ಮತ್ತು ಪಿ.ಎಚ್‌ಡಿ ವಿದ್ಯಾರ್ಥಿಗಳೇ ತುಂಬಿದ್ದು, ಇದು 'ಗಂಗೋತ್ರಿ ಕವಿಗೋಷ್ಠಿ'ಯೇ ಎಂಬ ಅನುಮಾನಕ್ಕೂ ಕಾರಣವಾಗಿದೆ.

'ಕವಿಗಳಿಗೆ ಆಹ್ವಾನ ಪತ್ರಿಕೆ ತಲುಪಿಲ್ಲ. ಸಾಫ್ಟ್ ಕಾಪಿಯನ್ನಷ್ಟೆ ಕೊಡಲಾಗಿದೆ. ಎಲ್ಲ ಕವಿಗೋಷ್ಠಿಗಳನ್ನು ಗಮನಿಸಿದರೆ ಒಂದೇ ಸಮುದಾಯದವರಿಗೆ ಸಿಂಹಪಾಲು ದೊರೆತಿದೆ' ಎಂದು ವಿಶ್ಲೇಷಿಸಲಾಗುತ್ತಿದೆ.

ಈ ಹಿಂದಿನ ಎಲ್ಲ ಪ್ರಧಾನ ಕವಿಗೋಷ್ಠಿಯಲ್ಲಿ ತುಳು, ಕೊಂಕಣಿ, ಕೊಡವ, ಅರೆಭಾಷೆ ಮತ್ತು ಸಂಸ್ಕೃತ ಕವನಗಳನ್ನು ಓದುವವರನ್ನು ನಿರ್ದಿಷ್ಟವಾಗಿ ಆವರಣದಲ್ಲಿ ನಮೂದಿಸಲಾಗುತ್ತಿತ್ತು. ಈ ಬಾರಿ ಆಹ್ವಾನಪತ್ರಿಕೆಯಲ್ಲಿ ಕವಿಗಳ ಹೆಸರನ್ನಷ್ಟೆ ಹಾಕಲಾಗಿದೆ.

'ನೀವು ಕವಿಗೋಷ್ಠಿಗೆ ಆಯ್ಕೆಯಾಗಿದ್ದೀರಿ ಎಂದು ಕರೆ ಬಂದಿತ್ತು. ಆದರೆ, ಆಹ್ವಾನ ಪತ್ರಿಕೆಯಲ್ಲಿ ಹೆಸರಿಲ್ಲ. ವಿಚಾರಿಸಿದರೆ, 'ನೀವು ಬನ್ನಿ ಅಧಿಕೃತ ಪತ್ರ ಕಳುಹಿಸುತ್ತೇವೆ. ವಸತಿ ವ್ಯವಸ್ಥೆ ಮಾಡುತ್ತೇವೆ. ಆಹ್ವಾನಪತ್ರಿಕೆಯಲ್ಲಿ ಮಾತ್ರ ಹೆಸರನ್ನು ಹಾಕಲಾಗಿಲ್ಲ. ಕ್ಷಮಿಸಿ ಎನ್ನುತ್ತಾರೆ. ಇದು ಕವಿಗೆ ಮಾಡುವ ಅವಮಾನ ಅಲ್ಲವೇ' ಎಂದು ಕವಿಯೊಬ್ಬರು ಕೇಳಿದರು.

ನಾವು ಯಾರ ಶಿಫಾರಸು, ಪ್ರಭಾವಕ್ಕೂ ಒಳಗಾಗದೇ ಪ್ರತಿಭೆಯನ್ನಷ್ಟೆ ಆಧರಿಸಿ ಕವಿಗಳನ್ನು ಆಯ್ಕೆ ಮಾಡಿದ್ದೇವೆ. ಯಾವುದೇ ಲೋಪಗಳಾಗದಂತೆ ನಡೆಸುತ್ತೇವೆ

ಎಂ. ದಾಸೇಗೌಡ, ಉಪ ವಿಶೇಷಾಧಿಕಾರಿ, ದಸರಾ ಕವಿಗೋಷ್ಠಿ ಉಪ ಸಮಿತಿ

ದಸರಾ ಕವಿಗೋಷ್ಠಿ ನಿರ್ದಿಷ್ಟ ಮಾನದಂಡ ಪಾಲಿಸುತ್ತಿಲ್ಲ. ಸಮಿತಿಯವರು ಬದಲಾದಂತೆ ನಿಯಮಗಳನ್ನೂ ಬದಲಿಸಲಾಗುತ್ತಿದೆ. ಏಕರೂಪದ ನಿಯಮವನ್ನು ರೂಪಿಸಬೇಕು. ಆಯ್ಕೆಯು ಸಮಗ್ರ ಕರ್ನಾಟಕ ಪ್ರತಿನಿಧಿಸುವಂತಿರಬೇಕು

ಟಿ.ಸತೀಶ್ ಜವರೇಗೌಡ, ಕವಿ, ಮೈಸೂರು

ಸಾಕ್ಷ್ಯಾಧಾರದ ಕೊರತೆ • ಅಲಹಾಬಾದ್ ಹೈಕೋರ್ಟ್‌ನ ಮಹತ್ವದ ತೀರ್ಪು

ನಿಥಾರಿ ಸರಣಿ ಹತ್ಯೆ: ಇಬ್ಬರು ಖುಲಾಸೆ

ಪ್ರಯಾಗ್‌ರಾಜ್ (ಪಿಟಿಐ): 2006ರ 'ನಿಥಾರಿ ಸರಣಿ ಹತ್ಯೆ' ಪ್ರಕರಣದಲ್ಲಿ ಸಿಬಿಐ ವಿಶೇಷ ನ್ಯಾಯಾಲಯದಿಂದ ಮರಣ ದಂಡನೆಗೆ ಗುರಿಯಾಗಿದ್ದ ಸುರೇಂದ್ರ ಕೋಲಿ ಹಾಗೂ ಮೋನಿಂದರ್ ಸಿಂಗ್ ಪಂಧೇರ್ ಅವರನ್ನು ಅಲಹಾಬಾದ್ ಹೈಕೋರ್ಟ್ ಖುಲಾಸೆಗೊಳಿಸಿದೆ.

ಸುರೇಂದ್ರ ಕೋಲಿ, ಮೋನಿಂದರ್

ಅತ್ಯಾಚಾರ ಮತ್ತು ಹತ್ಯೆ ಆರೋಪದಡಿ ಈ ಇಬ್ಬರಿಗೆ ಗಾಜಿಯಾಬಾದ್‌ನ ಸಿಬಿಐ ನ್ಯಾಯಾಲಯ ಮರಣ ದಂಡನೆ ವಿಧಿಸಿತ್ತು. ಈ ಆದೇಶ ಪ್ರಶ್ನಿಸಿ ಕೋಲಿ ಹಾಗೂ ಪಂಧೇರ್ ಅಲಹಾಬಾದ್ ಹೈಕೋರ್ಟ್ ಮೊರೆ ಹೋಗಿದ್ದರು.

ಈ ಬಗ್ಗೆ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಅಶ್ವನಿ ಕುಮಾರ್ ಮಿಶ್ರಾ ಹಾಗೂ ಶಾ ರಿಜ್ವಿ ಅವರಿದ್ದ ವಿಭಾಗೀಯ ಪೀಠವು, ಈ ಇಬ್ಬರ ಮೇಲಿನ ಆರೋಪವನ್ನು ಸಾಬೀತುಪಡಿಸುವಲ್ಲಿ ಪ್ರಾಸಿಕ್ಯೂಷನ್ ವಿಫಲವಾಗಿದೆ ಎಂದು ಹೇಳಿತು.

ಈ ಪ್ರಕರಣದಲ್ಲಿ ಪಂಧೇರ್ ನೊಯ್ಡಾ ಜೈಲು ಮತ್ತು ಕೋಲಿ ಗಾಜಿಯಾಬಾದ್ ಕಾರಾಗೃಹದಲ್ಲಿದ್ದಾನೆ. ಉದ್ಯಮಿ ಪಂಧೇರ್ ಜೈಲಿನಿಂದ ಬಿಡುಗಡೆಯಾಗಲಿದ್ದಾರೆ. ಆದರೆ, ಪಂಧೇರ್ ಸಹಾಯಕನಾಗಿದ್ದ ಕೋಲಿ ಮತ್ತೊಂದು ಪ್ರಕರಣದಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವುದರಿಂದ, ಜೈಲಿನಿಂದ ಬಿಡುಗಡೆಯಾಗುವ ಸಾಧ್ಯತೆ ಇಲ್ಲ ಎಂದು ಉದ್ಯಮಿಯ ವಕೀಲರೊಬ್ಬರು ತಿಳಿಸಿದ್ದಾರೆ.

ನ್ಯಾಯಾಲಯದ ತೀರ್ಪಿನ ಪ್ರತಿ ಸಿಕ್ಕ ಬಳಿಕ ಮುಂದೆ ಯಾವ ಕ್ರಮ ಕೈಗೊಳ್ಳಬೇಕು ಎಂದು ಪರಿಶೀಲಿಸಲಾಗುತ್ತದೆ ಎಂದು ಸಿಬಿಐ ಅಧಿಕಾರಿಗಳು ಹೇಳಿದರು.

ಮೋನಿಂದರ್ ಸಿಂಗ್ ಪಂಧೇರ್ ನಿವಾಸದಲ್ಲಿ ಕೆಲಸ ಮಾಡುತ್ತಿದ್ದ ಕೋಲಿ, ಹೆಣ್ಣು ಮಕ್ಕಳಿಗೆ ಆಮಿಷವೊಡ್ಡಿ ಮನೆಗೆ ಕರೆತರುತ್ತಿದ್ದ. ಆ ಬಳಿಕ ಈ ಇಬ್ಬರು ಅತ್ಯಾಚಾರಗೈದು, ಕೊಲೆ ಮಾಡುತ್ತಿದ್ದರು. ಆ ಮೃತದೇಹಗಳನ್ನು ಚರಂಡಿಯಲ್ಲಿ ಬಿಸಾಡುತ್ತಿದ್ದರು ಎಂದು ಪ್ರಾಸಿಕ್ಯೂಷನ್ ಆರೋಪಿಸಿತ್ತು.

ಜೊತೆಗೆ ಈ ಇಬ್ಬರೂ ಸಂತ್ರಸ್ತರ ಮೃತದೇಹಗಳನ್ನು ಕತ್ತರಿಸಿ, ಚರಂಡಿಯಲ್ಲಿ ಬಿಸಾಕುತ್ತಿದ್ದರು. ಅಲ್ಲದೆ, ಪಂಧೇರ್ ಮತ್ತು ಕೋಲಿ ಅದೇ ಮಾಂಸವನ್ನು ತಿನ್ನುತ್ತಿದ್ದರು ಎಂದೂ ಪೊಲೀಸರು ಆರೋಪಿಸಿದ್ದರು.

ಪ್ರಕರಣ ಬೆಳಕಿಗೆ ಬಂದದ್ದು ಹೀಗೆ..

2005–06ರಲ್ಲಿ ವ್ಯಕ್ತಿಯೊಬ್ಬರು ಕೆಲಸ ಹುಡುಕಿಕೊಂಡು ಬರಲು ಹೋಗಿದ್ದ ತನ್ನ ಮಗಳು ವಾಪಸ್ ಮನೆಗೆ ಬಂದಿಲ್ಲ ಎಂದು ದೂರು ದಾಖಲಿಸಿದ್ದರು. ಈ ಕುರಿತು ತನಿಖೆ ನಡೆಸಿದಾಗ ಪಂಧೇರ್ ಮತ್ತು ಕೋಲಿ ನಿವಾಸವಿರುವ ಹಿಂಭಾಗದ ಚರಂಡಿಯಲ್ಲಿ ಎಂಟು ಮಕ್ಕಳ ಅಸ್ಥಿಪಂಜರಗಳು ಪತ್ತೆಯಾಗಿದ್ದವು.

ಈ ಮೂಲಕ ಈ ಕೊಲೆ ಪ್ರಕರಣವು ಬಯಲಿಗೆ ಬಂದಿತ್ತು. ಈ ಸಂಬಂಧ 2007ರಲ್ಲಿ ಸಿಬಿಐ, ಈ ಇಬ್ಬರೂ ಆರೋಪಿಗಳ ವಿರುದ್ಧ ಒಟ್ಟಾರೆ 19 ಪ್ರಕರಣಗಳನ್ನು ದಾಖಲಿಸಿತ್ತು. ಈ ಪ್ರಕರಣದ ಬಗ್ಗೆ 305 ದಿನಗಳ ಕಾಲ ತನಿಖೆ ನಡೆಸಿದ್ದ ಸಿಬಿಐ, 38 ಸಾಕ್ಷಿಗಳನ್ನು ವಿಚಾರಣೆ ನಡೆಸಿತ್ತು.

ಡಿಕೆಶಿ ವಿರುದ್ಧದ ಅಕ್ರಮ ಆಸ್ತಿ ಸಂಪಾದನೆ ಪ್ರಕರಣ

ತಡೆಯಾಜ್ಞೆ ತೆರವಿಗೆ 'ಸುಪ್ರೀಂ' ನಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಕ್ರಮ ಆಸ್ತಿ ಸಂಪಾದನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಸಿಬಿಐ ತನಿಖೆಗೆ ನೀಡಲಾಗಿದ್ದ ತಡೆಯಾಜ್ಞೆ ತೆರವುಗೊಳಿಸಲು ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿದೆ.

ಕರ್ನಾಟಕ ಹೈಕೋರ್ಟ್ ಜೂನ್ 12ರಂದು ನೀಡಿದ್ದ ಆದೇಶ ಪ್ರಶ್ನಿಸಿ ಸಿಬಿಐ ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಅನಿರುದ್ಧ ಬೋಸ್ ಹಾಗೂ ಬೇಲಾ ಎಂ. ತ್ರಿವೇದಿ ಅವರನ್ನು ಒಳಗೊಂಡ ಪೀಠವು ಶಿವಕುಮಾರ್ ಅವರಿಗೆ ನೋಟಿಸ್ ಜಾರಿ ಮಾಡಲು ಸೂಚಿಸಿತು. ಬಳಿಕ ವಿಚಾರಣೆಯನ್ನು ನವೆಂಬರ್ 7ಕ್ಕೆ ಮುಂದೂಡಿತು. ಸಿಬಿಐ ಪರ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು ವಾದ ಮಂಡಿಸಿ, ಈ ಪ್ರಕರಣದಲ್ಲಿ ಸಿಬಿಐ ಶೇ 90ರಷ್ಟು ತನಿಖೆ ಮುಗಿಸಿದೆ.

ಹೈಕೋರ್ಟ್ ಆದೇಶದಿಂದಾಗಿ ತನಿಖೆ ನಡೆಸಲು ಅಡ್ಡಿಯಾಗಿದೆ. ಈ ತಡೆಯಾಜ್ಞೆ ತೆರವುಗೊಳಿಸಬೇಕು ಎಂದು ಮನವಿ ಮಾಡಿದರು.

ಶಿವಕುಮಾರ್ ವಿರುದ್ಧ ಭ್ರಷ್ಟಾಚಾರ ನಿಗ್ರಹ ಕಾಯ್ದೆ-1988ರ ವಿವಿಧ ಕಲಂಗಳ ಅಡಿಯಲ್ಲಿ ಸಿಬಿಐ 2020ರ ಅಕ್ಟೋಬರ್ 3ರಂದು ಪ್ರಕರಣ ದಾಖಲಿಸಿತ್ತು. ಇದನ್ನು ಪ್ರಶ್ನಿಸಿದ್ದ ಶಿವಕುಮಾರ್, 'ಸಿಬಿಐ ದಾಖಲಿಸಿರುವ ಎಫ್‌ಐಆರ್ ಕಾನೂನು-ಬಾಹಿರವಾಗಿದ್ದು, ತನಿಖೆ ರದ್ದುಪಡಿಸಬೇಕು' ಎಂದು ಕೋರಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಈ ರಿಟ್ ಅರ್ಜಿಯ ಭಾಗಶಃ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ಸಿಬಿಐ ತನಿಖೆಗೆ 2023ರ ಫೆಬ್ರುವರಿ 10ರಂದು ತಡೆ ನೀಡಿತ್ತು. ಬಳಿಕ ವಿಭಾಗೀಯ ನ್ಯಾಯಪೀಠವು ವಿಚಾರಣೆಗೆ ತಡೆಯಾಜ್ಞೆ ನೀಡಿತ್ತು.

ಇಮ್ರಾನ್ ಖಾನ್ ಅರ್ಜಿ ತಿರಸ್ಕೃತ

ಇಸ್ಲಾಮಾಬಾದ್(ಪಿಟಿಐ): ಅಧಿಕೃತ ರಹಸ್ಯ ಕಾಯ್ದೆ ಉಲ್ಲಂಘನೆ ಆರೋಪದ ಪ್ರಕರಣದಲ್ಲಿ (ಸೈಫರ್) ಜೈಲು ಸೇರಿರುವ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ (71) ಅವರು ಜೈಲು ವಿಚಾರಣೆಗೆ ತಡೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಇಸ್ಲಾಮಾಬಾದ್ ಹೈಕೋರ್ಟ್ ಸೋಮವಾರ ತಿರಸ್ಕರಿಸಿದೆ.

ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ಭದ್ರತೆಗೆ ಸಂಬಂಧಿಸಿದ ವಿಚಾರಗಳನ್ನು ಗಮನದಲ್ಲಿರಿಸಿಕೊಂಡು, ಜೈಲಿನೊಳಗೆ ವಿಚಾರಣೆ ನಡೆಸುವ ನಿರ್ಧಾರ ಖಾನ್ ಅವರ ಪರವಾಗಿಯೇ ಇದೆ ಎಂದು ಇಸ್ಲಾಮಾಬಾದ್ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಅಮೀರ್ ಫಾರೂಕ್ ಅವರು ಪ್ರಕಟಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ. ಆದರೆ, ಮುಖ್ಯ ನ್ಯಾಯಮೂರ್ತಿ ಅವರು ಈ ವಿಚಾರದಲ್ಲಿ ಖಾನ್ ಅವರಿಗೆ ವಿಶೇಷ ನ್ಯಾಯಾಲಯ ಸಂಪರ್ಕಿಸಲು ಅನುವು ಮಾಡಿಕೊಟ್ಟಿದ್ದಾರೆ.

ಕಳೆದ ಸೆ. 26ರಂದು ಜಿಲ್ಲಾ ಕಾರಾಗೃಹ ಅಟಾಕ್‌ನಿಂದ ಸ್ಥಳಾಂತರಿಸಿ, ರಾವಲ್ಪಿಂಡಿಯ ಅಡಿಯಾಲಾ ಜೈಲಿನಲ್ಲಿರಿಸಲಾಗಿರುವ ಖಾನ್ ಅವರ ವಿರುದ್ಧದ ಪ್ರಕರಣದ ವಿಚಾರಣೆಯನ್ನು ವಿಶೇಷ ನ್ಯಾಯಾಲಯವು ನಡೆಸುತ್ತಿದೆ.

ಪಾಕಿಸ್ತಾನ್ ತೆಹ್ರೀಕ್-ಎ-ಇನ್ಸಾಫ್ (ಪಿಟಿಐ) ಅಧ್ಯಕ್ಷರೂ ಆದ ಇಮ್ರಾನ್, ಜೈಲಿನಲ್ಲಿ ವಿಚಾರಣೆ ನಡೆಸುವುದಕ್ಕೆ ತಡೆ ಕೋರಿ ಅ.4 ರಂದು ಇಸ್ಲಾಮಾಬಾದ್ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು.

ಇಸ್ರೇಲ್– ಹಮಾಸ್ ಯುದ್ಧದ ಹಿನ್ನಲೆಯಲ್ಲಿ ಹೆಚ್ಚಿದ ದ್ವೇಷಾಪರಾಧ

ಅಮೆರಿಕ: ಮುಸ್ಲಿಂ ಬಾಲಕ, ಮಹಿಳೆಗೆ ಇರಿತ

ಷಿಕಾಗೊ (ಎಪಿ): ಇಸ್ರೇಲ್ ಮತ್ತು ಹಮಾಸ್ ಬಂಡುಕೋರರ ನಡುವಿನ ಯುದ್ಧದಿಂದ ಪ್ರಚೋದನೆಗೊಳಗಾದ 71 ವರ್ಷ ವಯಸ್ಸಿನ ವ್ಯಕ್ತಿಯೊಬ್ಬರು ಪ್ಯಾಲೆಸ್ಟೀನ್ ಮೂಲದ ಅಮೆರಿಕನ್ ಬಾಲಕ (6 ವರ್ಷ) ಮತ್ತು ಆತನ ತಾಯಿಗೆ ಚೂರಿಯಿಂದ ಇರಿದ ದ್ವೇಷಾಪರಾಧ ಪ್ರಕರಣವು ಭಾನುವಾರ ನಡೆದಿದೆ.

ತೀವ್ರವಾಗಿ ಗಾಯಗೊಂಡಿದ್ದ ಬಾಲಕ ಮೃತಪಟ್ಟರೆ, ಮಹಿಳೆ ಚಿಕಿತ್ಸೆ ಪಡೆಯುತ್ತಿದ್ದಾರೆ.

ಷಿಕಾಗೋದ ಪ್ಲೇನ್‌ಫೀಲ್ಡ್ ಟೌನ್‌ಶಿಪ್‌ನಲ್ಲಿ ಈ ಘಟನೆ ನಡೆದಿದೆ. ಮನೆ ಮಾಲೀಕ ತಮ್ಮ ಮೇಲೆ ದಾಳಿ ನಡೆಸುತ್ತಿದ್ದಾನೆ ಎಂದು ಮಹಿಳೆಯು ವಿಪತ್ತು ಕರೆ ಸಂಖ್ಯೆಯಾದ 911ಗೆ ಕರೆ ಮಾಡಿದ್ದರು. ಪೊಲೀಸರು ಮನೆಗೆ ತಲುಪುವ ವೇಳೆ ಬಾಲಕ ಮತ್ತು ಮಹಿಳೆಯನ್ನು ಹಲವು ಬಾರಿ ಇರಿಯಲಾಗಿತ್ತು. ಬಾಲಕ ಆಸ್ಪತ್ರೆಯಲ್ಲಿ ಮೃತಪಟ್ಟ ಎಂದು ವಿಲ್ ಕೌಂಟಿಯ ಅಧಿಕಾರಿ ತಿಳಿಸಿದ್ದಾರೆ.

ಆರೋಪಿ ಜೋಸೆಫ್ ಎಂ. ಸಿಝುಬಾ ಅವರನ್ನು ಭಾನುವಾರ ವಶಕ್ಕೆ ತೆಗೆದುಕೊಳ್ಳಲಾಗಿದೆ. ಸದ್ಯದಲ್ಲೇ ನ್ಯಾಯಾಲಯಕ್ಕೆ ಹಾಜರುಪಡಿಸಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಕೃತ್ಯವನ್ನು ದಿ ಮುಸ್ಲಿಂ ಸಿವಿಲ್ ಲಿಬರ್ಟೀಸ್ ಆರ್ಗನೈಸೇಷನ್ ಖಂಡಿಸಿದೆ. ಇದು 'ನಮ್ಮ ಕಾಲದ ದುಃಸ್ವಪ್ನ'. ಇಸ್ರೇಲ್ ಮತ್ತು ಹಮಾಸ್ ನಡುವೆ ಯುದ್ಧ ಆರಂಭವಾದಾಗಿನಿಂದ ದ್ವೇಷಪೂರಿತ ಕರೆಗಳ ಮತ್ತು ಇ-ಮೇಲ್‌ಗಳ ಸಂಖ್ಯೆ ಹೆಚ್ಚಾಗಿದೆ. ಈ ಕೃತ್ಯವು ಅದರ ಒಂದು ಭಾಗ ಎಂದು ಹೇಳಿದೆ.

ಈ ಕೃತ್ಯವನ್ನು ಖಂಡಿಸಿ ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಪ್ರಕಟಣೆ ಹೊರಡಿಸಿದ್ದಾರೆ. 'ಈ ರೀತಿಯ ಭೀಕರ ಕೃತ್ಯಗಳಿಗೆ ಅಮೆರಿಕದಲ್ಲಿ ಜಾಗವಿಲ್ಲ ಮತ್ತು ಇದು ನಮ್ಮ ಮೂಲಭೂತ ತತ್ವಗಳಿಗೆ ವಿರುದ್ಧವಾಗಿದೆ' ಎಂದಿದ್ದಾರೆ. '

ಯಹೂದಿ ಮತ್ತು ಮುಸ್ಲಿಂ ವಿರೋಧಿ ಭಾವನೆಯಿಂದ ನಡೆಯುವ ಹಿಂಸಾಚಾರಗಳ ಕುರಿತು ಅಮೆರಿಕದ ನಗರಗಳ ಪೊಲೀಸರು ಈಚಿನ ದಿನಗಳಲ್ಲಿ ಅತ್ಯಂತ ಎಚ್ಚರಿಕೆ ಕಾಯ್ದುಕೊಂಡಿದ್ದಾರೆ. ತಮ್ಮ ಸಮುದಾಯದ ವಿರುದ್ಧ ದ್ವೇಷಪೂರಿತ ಮತ್ತು ಬೆದರಿಕೆಯೊಡ್ಡುವಂಥ ಹೇಳಿಕೆಗಳು ಈಚಿನ ದಿನಗಳಲ್ಲಿ ಹೆಚ್ಚಾಗಿವೆ ಎಂದು ಈ ಸಮುದಾಯಗಳ ಸದಸ್ಯರು ಬೇಸರ ವ್ಯಕ್ತಪಡಿಸಿದ್ದಾರೆ.

ವಿಶ್ವಸಂಸ್ಥೆಯಲ್ಲಿ ಭಾರತದ ಶಾಶ್ವತ ಪ್ರತಿನಿಧಿ ಬಾಗ್ಚಿ

ನವದೆಹಲಿ (ಪಿಟಿಐ): ವಿದೇಶಾಂಗ ಸಚಿವಾಲಯದ ವಕ್ತಾರರಾಗಿದ್ದ ಅರಿಂದಮ್ ಬಾಗ್ಚಿ ಅವರನ್ನು ವಿಶ್ವಸಂಸ್ಥೆಯಲ್ಲಿನ ಭಾರತದ ಶಾಶ್ವತ ಪ್ರತಿನಿಧಿಯಾಗಿ ಕೇಂದ್ರ ಸರ್ಕಾರವು ನೇಮಕ ಮಾಡಿದೆ.

1995ನೇ ತಂಡದ ಭಾರತೀಯ ವಿದೇಶಾಂಗ ಸೇವೆಯ ಅಧಿಕಾರಿಯಾಗಿರುವ ಬಾಗ್ಚಿ ಅವರು ಮಾರ್ಚ್ 2020ರಿಂದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರರಾಗಿದ್ದು, ಕೋವಿಡ್–19 ಸಂದರ್ಭ, ಭಾರತದ ಅಧ್ಯಕ್ಷತೆಯಲ್ಲಿ ನಡೆದಿದ್ದ ಜಿ20 ಶೃಂಗಸಭೆ, ಪೂರ್ವ ಈಶಾನ್ಯ ಗಡಿವಿವಾದ ಸಂದರ್ಭಗಳನ್ನು ನಿಭಾಯಿಸಿದ್ದರು.

ಜಿನೀವಾದಲ್ಲಿ ವಿಶ್ವಸಂಸ್ಥೆಯ ಭಾರತದ ಶಾಶ್ವತ ಪ್ರತಿನಿಧಿಯಾಗಿ ಅವರು ಶೀಘ್ರದಲ್ಲಿಯೇ ಅಧಿಕಾರ ವಹಿಸಿಕೊಳ್ಳಲಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಹೇಳಿಕೆ ತಿಳಿಸಿದೆ. ಬಾಗ್ಚಿ ಈ ಹಿಂದೆ ಕ್ರೊವೇಷಿಯಾದಲ್ಲಿ ಭಾರತದ ರಾಯಭಾರಿಯಾಗಿ ಕಾರ್ಯನಿರ್ವಹಿಸಿದ್ದರು.

ಮಣಿಪುರ ಹೈಕೋರ್ಟ್ ಸಿದ್ಧಾರ್ಥ ಸಿಜೆ

ನವದೆಹಲಿ (ಪಿಟಿಐ): ಮಣಿಪುರ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ಸಿದ್ಧಾರ್ಥ ಮೃದುಲ್ ಅವರು ನೇಮಕಗೊಂಡಿದ್ದಾರೆ. ಸುಪ್ರೀಂ ಕೋರ್ಟ್‌ನ ಕೊಲಿಜಿಯಂ ಮೂರು ತಿಂಗಳ ಹಿಂದೆ ಇವರ ಹೆಸರು ಶಿಫಾರಸು ಮಾಡಿತ್ತು.

ಮಣಿಪುರ ಹೈಕೋರ್ಟ್‌ನ ಸಿಜೆ ನೇಮಕಕ್ಕೆ ಕೊನೆಗೂ ಕೇಂದ್ರ ಗಮನಹರಿಸಿದೆ, ಶೀಘ್ರವೇ ಅಧಿಸೂಚನೆ ಹೊರಬೀಳಲಿದೆ ಎಂದು ಅಕ್ಟೋಬರ್ 9ರಂದು ಸುಪ್ರೀಂ ಕೋರ್ಟ್‌ನ ನ್ಯಾಯಪೀಠವು ಅಭಿಪ್ರಾಯಪಟ್ಟಿತ್ತು.

ವಿಯೆಟ್ನಾಂ ಜೊತೆ ಪಾಲುದಾರಿಕೆಗೆ ಒತ್ತು: ಜೈಶಂಕರ್

ಹನೋಯಿ (ಪಿಟಿಐ): ಹಿಂದೂ ಮಹಾಸಾಗರ–ಪೆಸಿಫಿಕ್ ಪ್ರದೇಶದಲ್ಲಿನ ಸಹಕಾರವು ಭಾರತ ಮತ್ತು ವಿಯೆಟ್ನಾಂ ದೇಶಗಳ ಪಾಲುದಾರಿಕೆಯನ್ನು ಒಳಗೊಂಡಿದೆ ಎಂದು ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಸೋಮವಾರ ತಿಳಿಸಿದ್ದಾರೆ.

ಈ ನಿಟ್ಟಿನಲ್ಲಿ ಆಸಿಯಾನ್ ಮಹತ್ವ ಮತ್ತು ಕ್ವಾಡ್ ರಾಷ್ಟ್ರಗಳ ಕೂಟದ ಕೊಡುಗೆಗಳ ಬಗ್ಗೆ ಒತ್ತಿ ಹೇಳಿದರು.

ನಾಲ್ಕು ದಿನಗಳ ವಿಯೆಟ್ನಾಂ ಪ್ರವಾಸಕ್ಕೆ ಭಾನುವಾರ ಇಲ್ಲಿಗೆ ಬಂದಿರುವ ಅವರು, ಹಿಂದೂ ಮಹಾಸಾಗರ–ಪೆಸಿಫಿಕ್ ವಿಚಾರದ ಕುರಿತು ವಿಯೆಟ್ನಾಂನ ರಾಜತಾಂತ್ರಿಕ ಅಕಾಡೆಮಿಯಲ್ಲಿ ಭಾಷಣ ಮಾಡಿದರು. ಇದಕ್ಕೂ ಮುನ್ನ ಜೈಶಂಕರ್ ಅವರು ವಿಯೆಟ್ನಾಂ ವಿದೇಶಾಂಗ ಸಚಿವ ಬುಯಿ ಥನ್ಹಾ ಸನ್ ಅವರನ್ನು ಭೇಟಿ ಮಾಡಿ, ವಾಣಿಜ್ಯ, ಇಂಧನ, ರಕ್ಷಣೆ ಮತ್ತು ಕಡಲ ತೀರದ ಭದ್ರತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಚರ್ಚೆ ನಡೆಸಿದರು.

ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ
ಅರಮನೆ ರಸ್ತೆ, ಬೆಂಗಳೂರು–01

ಸ್ನಾತಕೋತ್ತರ ಪದವಿ ಪ್ರವೇಶಾತಿ ಅಧಿಸೂಚನೆ 2023–24

Notification No: MCU/ AS-052/ 2023-24 date: 07.10.2023

ಲಭ್ಯವಿರುವ ಸ್ನಾತಕೋತ್ತರ ಕೋರ್ಸುಗಳು

M.A KANNADA	M.A ENGLISH	PG DIPLOMA in TRANSLATION. (Duration: One year)	PGDTE PG DIPLOMA IN TEACHING ENGLISH LANGUAGE & LITERATURE (Duration: One year)	
M.A. ECONOMICS	M.A. HISTORY	M.A. ANCIENT HISTORY & ARCHAEOLOGY	M.A. POLITICAL SCIENCE	M.A. SOCIOLOGY
M.Com (MASTER OF COMMERCE)	M.Com (BUSINESS ANALYTICS)	MTTM (MASTER IN TRAVELS AND TOURISM MANAGEMENT)		
M.Sc BIOCHEMISTRY	M.Sc BIOTECHNOLOGY	M.Sc CHEMISTRY	M.Sc COMPUTER SCIENCE	M.Sc LIFE SCIENCE
M.Sc MATHEMATICS	M.Sc MICROBIOLOGY	M.Sc PHYSICS	M.Sc PHYSICS (NANO SCIENCE and TECHNOLOGY)	
M.Sc PSYCHOLOGY	M.Sc PSYCHOLOGICAL COUNSELLING	PG DIPLOMA (PSYCHOLOGICAL COUNSELLING) (Duration: One year)	CERTIFICATE COURSE IN **EXPRESSIVE ART THERAPY IN PSYCHOLOGY FOR CHILDREN AND ADOLESCENTS.** (Duration: Six months)	
M.Sc FOOD & NUTRITION	M.Sc TEXTILES & CLOTHING	M.Sc HUMAN DEVELOPMENT		

ಮಹಿಳೆಯರು ಮಾತ್ರ ಅರ್ಜಿ ಸಲ್ಲಿಸಬಹುದು.

ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಯುಯುಸಿಎಂಎಸ್‌ನಲ್ಲಿ ನೋಂದಾಯಿಸಿಕೊಳ್ಳಬೇಕು ಮತ್ತು ಅರ್ಜಿಯನ್ನು ಸಲ್ಲಿಸಬೇಕು. ಒಬ್ಬ ಅಭ್ಯರ್ಥಿಯು ತಾನು ಅರ್ಹತೆ ಹೊಂದಿರುವ ಒಂದಕ್ಕಿಂತ ಹೆಚ್ಚು ಕೋರ್ಸುಗಳಿಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗಾಗಿ, ಸಂಪರ್ಕಿಸಿ Email ID : mcublr@gmail.com, Landline: 080-29555666

ವಾ.ಸಾ.ಸಂ.ಇ/ವಾಪ್ರ/1707/ಆಕಾರ್/2023–24

ಗೌರವಾನ್ವಿತ ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ ದಾಸ್ ವಿಚಾರಣಾ ಆಯೋಗ
3ನೇ ಮಹಡಿ, ಲೋಕೋಪಯೋಗಿ ಇಲಾಖೆ ಮುಖ್ಯ ಕಟ್ಟಡ, ಕೆ.ಆರ್. ವೃತ್ತ, ಬೆಂಗಳೂರು–560001.

ಅಧಿಸೂಚನೆ ಪ್ರಕಟಣೆ

ಘನ ಕರ್ನಾಟಕ ಸರ್ಕಾರವು ಗೌರವಾನ್ವಿತ ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ ದಾಸ್ ವಿಚಾರಣಾ ಆಯೋಗಕ್ಕೆ ಸಂಬಂಧಿಸಿದಂತೆ ಅಧಿಸೂಚನೆಗಳ ಸಂಖ್ಯೆ: ಓಇ 98 ಪಿಸಿಇ 2023, ದಿನಾಂಕ: 25.08.2023 ಮತ್ತು 06.10.2023ರಲ್ಲಿ ಹೊರಡಿಸಿದಂತೆ ಈ ಕೆಳಕಂಡ ಪ್ರಮುಖ ಅಂಶಗಳು ಒಳಗೊಂಡಿರುತ್ತದೆ.

1) **ತನಿಖೆಗೆ ಒಳಪಡುವ ಇಲಾಖೆಗಳು** : ಲೋಕೋಪಯೋಗಿ ಇಲಾಖೆ, ಜಲಸಂಪನ್ಮೂಲ ಇಲಾಖೆ, ನಗರಾಭಿವೃದ್ಧಿ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಮತ್ತು ಸಣ್ಣ ನೀರಾವರಿ ಇಲಾಖೆಗಳು.

2) ಪ್ರಥಮವಾಗಿ ಈ ವಿಚಾರಣೆಯನ್ನು **ದಿನಾಂಕ: 26.07.2019 ರಿಂದ 31.03.2023ರ ಅವಧಿಯಲ್ಲಿ** ನಡೆದಿರುವ ಕಾಮಗಾರಿಗಳನ್ನು ತನಿಖೆಗೆ ಒಳಪಡಿಸುವುದು.

3) **ಮಾನ್ಯ ಆಯೋಗದ ತನಿಖಾ ವ್ಯಾಪ್ತಿಗೆ (Terms of Reference) ವಹಿಸಲಾಗಿರುವ ಅಂಶಗಳು ಈ ಕೆಳಕಂಡಂತಿರುತ್ತದೆ.**

i) ಟೆಂಡರ್ ಪ್ರಕ್ರಿಯೆ, ಪ್ಯಾಕೇಜ್ ಪದ್ಧತಿ, ಪುನರ್ ಅಂದಾಜು (Revised Estimate), ಬಾಕಿ ಮೊತ್ತ ಬಿಡುಗಡೆ ಇತ್ಯಾದಿ ವಿಷಯಗಳಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರದ ಕುರಿತು ಸ್ಥಳ ಹಾಗೂ ದಾಖಲಾತಿಗಳ ಪರಿಶೀಲನೆ.

ii) ಮಾನ್ಯ ಆಯೋಗವು ಮೇಲಿನ ಕಾರ್ಯ ವ್ಯಾಪ್ತಿಯ ಜೊತೆಗೆ ಅಧ್ಯಕ್ಷರು, ಕರ್ನಾಟಕ ಸ್ಟೇಟ್ ಕಂಟ್ರ್ಯಾಕ್ಟರ್ ಅಸೋಸಿಯೇಷನ್ ಇವರ ಮನವಿಗಳು / ದೂರು ಅರ್ಜಿಗಳಲ್ಲಿನ ಎಲ್ಲಾ ಅಂಶಗಳನ್ನೂ ಸಹ ಸವಿವರವಾಗಿ ತನಿಖಾ ವ್ಯಾಪ್ತಿಯಲ್ಲಿ ಪರಿಶೀಲಿಸುವುದು.

ಅಲ್ಲದೆ, ತನಿಖೆಯ ವ್ಯಾಪ್ತಿಯಲ್ಲಿ ಪ್ರಮುಖವಾಗಿ ಕೆಳಕಂಡ ಅಂಶಗಳನ್ನೂ ಸಹ ಪರಾಮರ್ಶಿಸುವುದು.

I) ಯೋಜನೆ/ಕಾಮಗಾರಿಗಳಿಗೆ ನಿಯಮಾನುಸಾರ ಆಡಳಿತಾತ್ಮಕ ಅನುಮೋದನೆ ನೀಡಿರುವ ಬಗ್ಗೆ.

ii) ಅನುಷ್ಠಾನಗೊಳಿಸಲಾದ ಕಾಮಗಾರಿ/ ಯೋಜನೆಗಳ ಗುಣಮಟ್ಟ.

iii) ಕಾಮಗಾರಿಗಳ ಅಂದಾಜುಗಳನ್ನು ನಿಯಮಗಳ ಪ್ರಚಲಿತ ಅನುಸೂಚಿ ದರಗಳ ಅನುಸಾರವಾಗಿ ತಯಾರಿಸಿರುವ ಬಗ್ಗೆ.

iv) ಕಾಮಗಾರಿಗಳ ಅಂದಾಜಿನಲ್ಲಿನ ಪರಿಮಾಣ (Quantity) ವಾಸ್ತವಿಕವಾಗಿದೆಯೇ ಅಥವಾ ಕೃತಕವಾಗಿ ಹೆಚ್ಚಿಸಲಾಗಿದೆಯೇ? ಹೆಚ್ಚಿಸಿದ್ದಲ್ಲಿ, ಅವುಗಳ ಪ್ರಮಾಣ ಮತ್ತು ಹಣಕಾಸಿನ ಬದ್ಧತೆಯ ಜೊತೆಗೆ ಯಾವ ಹಂತದಲ್ಲಿ ಹೆಚ್ಚಿಸಲಾಗಿದೆ ಎಂಬುದನ್ನು ಪರೀಕ್ಷಿಸುವುದು.

v) ಕಾಮಗಾರಿಗಳ ಅನುಷ್ಠಾನದ ಸಂದರ್ಭದಲ್ಲಿ ಉಂಟಾಗಿರುವ ಹೆಚ್ಚುವರಿ ವ್ಯತ್ಯಾಸದ (Variation) ಅನಿವಾರ್ಯತೆ ಮತ್ತು ಅಗತ್ಯತೆ; ಅನಿವಾರ್ಯವಾಗಿದ್ದಲ್ಲಿ, ಮೂಲ ಅಂದಾಜಿನಲ್ಲಿ ಕೈಬಿಡಲು ಕಾರಣಗಳು ಹಾಗೂ ಇವುಗಳಿಗೆ ಸಕ್ಷಮ ಪ್ರಾಧಿಕಾರವು ಅನುಮೋದನೆ ನೀಡಿರುವ ಬಗ್ಗೆ.

vi) ಯಾವುದಾದರೂ ಕಾಮಗಾರಿಗಳನ್ನು ನಿರ್ವಹಿಸದೆಯೇ ಬಿಲ್ಲು ಪಾವತಿ ಮಾಡಲಾಗಿದೆಯೇ ಅಥವಾ ಅನುಷ್ಠಾನವಾದ ಕಾಮಗಾರಿಗಳ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ ಬಿಲ್ಲು ಪಾವತಿಸಲಾಗಿದೆಯೇ?

vii) ಈ ಕಾಮಗಾರಿಗಳ ಟೆಂಡರ್‌ಗಳನ್ನು ಕರೆಯುವಾಗ ಕೆಲವೇ ಗುತ್ತಿಗೆದಾರರಿಗೆ ಅನುಕೂಲವಾಗುವಂತೆ ಹಾಗೂ ಉಳಿದ ಗುತ್ತಿಗೆದಾರರು ಟೆಂಡರ್ ಪ್ರಕ್ರಿಯೆಗಳಲ್ಲಿ ಭಾಗವಹಿಸದಂತೆ ಷರತ್ತುಗಳನ್ನು ರೂಪಿಸಲಾಗಿತ್ತೇ ಎಂಬ ಅಂಶಗಳ ಬಗ್ಗೆ.

viii) ಕಾಮಗಾರಿಯನ್ನು ಪ್ರಾರಂಭಿಸುವ ಮೊದಲು ಸಾಮಗ್ರಿಗಳು, ಉಪಕರಣಗಳು, ಇತ್ಯಾದಿಗಳ ಗುಣಮಟ್ಟ ಪರೀಕ್ಷೆಯನ್ನು ನಿರ್ದಿಷ್ಟಪಡಿಸಿ ಅಧಿಕೃತ ಏಜೆನ್ಸಿಗಳಿಂದ ಮಾಡಿಸಲಾಗಿದೆಯೇ?

ix) ಒಟ್ಟಾರೆ ಕಾಮಗಾರಿಗಳ ಕುರಿತಾದ ಟೆಂಡರ್ ಪ್ರಕ್ರಿಯೆ ಮತ್ತು ಅನುಷ್ಠಾನ ಪ್ರಕ್ರಿಯೆಗಳಲ್ಲಿ ಉಂಟಾಗಿರಬಹುದಾದ ಇತರೆ ಯಾವುದಾದರೂ ಲೋಪ–ದೋಷಗಳು.

x) ಪರಿಶೀಲನೆಯ ಸಂದರ್ಭದಲ್ಲಿ ಆಯೋಗದ ಗಮನಕ್ಕೆ ಬರುವ ಇನ್ನಾವುದೇ ಗಂಭೀರ ವಿಷಯಗಳನ್ನು ವಿಚಾರಣಾ ಆಯೋಗವು ಪರಾಮರ್ಶಿಸುವುದು.

4) ಮೇಲ್ಕಂಡ ಅಂಶಗಳ ಕುರಿತು ವಿಚಾರಣಾ ಆಯೋಗವು Commissions of Inquiry Act 1952 ಹಾಗೂ Code of Civil Procedure ರಲ್ಲಿನ ಅವಕಾಶದಡಿ ತನಿಖೆ ನಡೆಸಲು ಎಲ್ಲಾ ಅಧಿಕಾರವನ್ನು ಹೊಂದಿರುತ್ತದೆ.

ಈ ಹಿನ್ನೆಲೆಯಲ್ಲಿ ಸಾರ್ವಜನಿಕರು ಯಾವುದೇ ರೀತಿಯ ಸಲಹೆ / ಆಕ್ಷೇಪಣೆ / ಅಹವಾಲು / ಹೇಳಿಕೆಗಳು / ದಾಖಲೆಗಳು ಇದ್ದಲ್ಲಿ ದಿನಾಂಕ: 10.11.2023 ರೊಳಗಾಗಿ ಕಛೇರಿಯ ವೇಳೆಯಲ್ಲಿ (ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.30 ವರೆಗೆ) ಈ ಕೆಳಸಹಿದಾರರ ಕಛೇರಿಗೆ ಖುದ್ದಾಗಿ ಅಥವಾ ಅಂಚೆಯ ಮೂಲಕ ಅಥವಾ ಇಮೇಲ್ : justicenmdasinquirycommission@gmail.com ರ ಮೂಲಕ ಸಲ್ಲಿಸುವಂತೆ ಕೋರಲಾಗಿದೆ.

ಸಹಿ/– ಸದಸ್ಯ ಕಾರ್ಯದರ್ಶಿಗಳು
ಗೌರವಾನ್ವಿತ ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ ದಾಸ್ ವಿಚಾರಣಾ ಆಯೋಗ
3ನೇ ಮಹಡಿ, ಲೋಕೋಪಯೋಗಿ ಇಲಾಖೆ ಮುಖ್ಯ ಕಟ್ಟಡ, ಕೆ.ಆರ್. ವೃತ್ತ, ಬೆಂಗಳೂರು–560001. ಇಮೇಲ್: justicenmdasinquirycommission@gmail.com
DIPR/CP/YC/1724/2023-24

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ
KSIIDC
(ಕೆಎಸ್‌ಐಐಡಿಸಿ) (ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ಖನಿಜ ಭವನ, 4ನೇ ಮಹಡಿ, ಪೂರ್ವ ಭಾಗ, ನಂ.49, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–01.

ವಿಜಯಪುರ ವಿಮಾನ ನಿಲ್ದಾಣಕ್ಕೆ ತಾಂತ್ರಿಕ ಸಿಬ್ಬಂದಿಯ ನೇಮಕಾತಿಗೆ (ಗುತ್ತಿಗೆ ಆಧಾರದ ಮೇಲೆ)–ಅಧಿಸೂಚನೆ

ಕರ್ನಾಟಕ ಸರ್ಕಾರದ ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತವು(ಕೆಎಸ್‌ಐಐಡಿಸಿ), ವಿಜಯಪುರ ವಿಮಾನ ನಿಲ್ದಾಣದ ಕಾರ್ಯಾಚರಣೆ ನಡೆಸುತ್ತಿದೆ. ನಿಗಮವು 01 ವರ್ಷದ ಅವಧಿಗೆ ಕ್ರೋಢೀಕೃತ ವೇತನದೊಂದಿಗೆ ಗುತ್ತಿಗೆ ಆಧಾರದ ಮೇಲೆ ಕೆಳಕಂಡ ಹುದ್ದೆಗಳಿಗೆ ನೇಮಕಮಾಡಲು ಪ್ರಸ್ತಾಪಿಸಲಾಗಿದೆ. ಅಭ್ಯರ್ಥಿಗಳ ಕಾರ್ಯಕ್ಷಮತೆಯ ಆಧಾರದ ಮೇಲೆ ಸಿಬ್ಬಂದಿಯನ್ನು ಗುತ್ತಿಗೆಯ ಅವಧಿಯನ್ನು ಅವಶ್ಯಕತೆಗೆ ಅನುಗುಣವಾಗಿ ಇನ್ನೊಂದು ವರ್ಷದ ಅವಧಿಗೆ ಅಥವಾ ಅದಕ್ಕಿಂತಲೂ ಹೆಚ್ಚಿನ ಅವಧಿಗೆ ವಿಸ್ತರಿಸಬಹುದಾಗಿದೆ.

ಕ್ರ. ಸಂ.	ಹುದ್ದೆಯ ಹೆಸರು	ವಿದ್ಯಾರ್ಹತೆ ಮತ್ತು ಅನುಭವದ ವಿವರಗಳು	ಕ್ರೋಢೀಕೃತ ವೇತನ ರೂ.	ವಯಸ್ಸಿನ ಮಿತಿ
01	ವಿಮಾನ ನಿಲ್ದಾಣದ ನಿರ್ದೇಶಕರು (ಒಂದು ಹುದ್ದೆ)	• ಅಭ್ಯರ್ಥಿಗಳು ಬಿಜಿನೆಸ್, ಏವಿಯೇಷನ್ ಅಡ್ಮಿನಿಸ್ಟ್ರೇಷನ್/ ಇಂಜಿನಿಯರಿಂಗ್ ಅಥವಾ ಸಂಬಂಧಿತ ಕ್ಷೇತ್ರದಲ್ಲಿ ಬ್ಯಾಚುಲರ್ಸ್ ಪದವಿಯನ್ನು ಹೊಂದಿರಬೇಕು. • ಕಾರ್ಯನಿರ್ವಾಹಕ, ವೃತ್ತಿಪರ ಮಟ್ಟದ ವಿಮಾನ ನಿಲ್ದಾಣ ನಿರ್ವಹಣೆಯಲ್ಲಿ 10 ವರ್ಷಗಳ ಅನುಭವ • ಜಿಎಂ–ಎಎಐ, ಜೆಜಿಎಂ–ಎಎಐ & ಡಿಜಿಎಂ–ಎಎಐ/ ಆಪರೇಷನ್ಸ್/ಎಟಿಸಿ ಗಳಿಂದ ನಿವೃತ್ತ ಸಿಬ್ಬಂದಿಗಳಿಗೆ ಸಹ ಆದ್ಯತೆ ನೀಡಲಾಗುವುದು • ಅಭ್ಯರ್ಥಿಯು ಅರ್ಹ ಚಾಲನಾ ದಾಖಲಾತಿಗಳೊಂದಿಗೆ ರಾಜ್ಯ ಚಾಲಕರ ಪರಿವಾನಿಗಿಯನ್ನು ಹೊಂದಿರಬೇಕು. • ಪೈಲೆಟ್ ಪರವಾನಿಗಿಗೆ ಆದ್ಯತೆ ನೀಡಲಾಗುತ್ತದೆ. • ಅಭ್ಯರ್ಥಿಗಳು ಕೆಳಗಿನ ಪರಿಶೀಲನೆಯಲ್ಲಿ ಪರಿಣಿತಿಯನ್ನು ಹೊಂದಿರಬೇಕು. - ಡಿಜಿಸಿಎ ಅನುಸಾರ ಫ್ಲೈಟ್ ಸೇಫ್ಟಿ ಡಾಕ್ಯುಮೆಂಟೇಶನ್ ಸಿಸ್ಟಮ್ ಅನ್ನು ಅನುಷ್ಠಾನಗೊಳಿಸುವುದು ಮತ್ತು ನಿರ್ವಹಿಸುವುದು. - ಪರಿಕಲ್ಪನೆ ವಿನ್ಯಾಸ ಏರ್‌ಸೈಡ್ ಇನ್ಫ್ರಾಸ್ಟ್ರಕ್ಚರ್, ಟರ್ಮಿನಲ್ ಸಿಸ್ಟಮ್ಸ್, ಲ್ಯಾಂಡ್‌ಸೈಡ್ ಸೌಲಭ್ಯಗಳಲ್ಲಿ ಜ್ಞಾನ ಮತ್ತು - ಗ್ರೌಂಡ್ ಟ್ರಾನ್ಸ್‌ಪೋರ್ಟೇಷನ್ ಟರ್ಮಿನಲ್ ಮತ್ತು ಏರ್‌ಸೈಡ್ ಕಾರ್ಯಾಚರಣೆಗಳ ಏಕೀಕರಣ. - ಏರೋಸ್ಪೇಸ್ ಡೊಮಿನಿಯನ್‌ನಲ್ಲಿ ಸಿಸ್ಟಮ್ಸ್ ಸುರಕ್ಷತೆ ಅಗತ್ಯತೆಗಳ ಅಭಿವೃದ್ಧಿ ಮತ್ತು ವಿಮರ್ಶೆ. - ಏರ್‌ಟ್ರಾಫಿಕ್ ನಿಯಂತ್ರಣ ಕಾರ್ಯವಿಧಾನದ ಕಾರ್ಯಾಚರಣೆಗಳು. - ಏರ್‌ಕ್ರಾಫ್ಟ್ ಮತ್ತು ವಿಮಾನ ನಿಲ್ದಾಣದ ಕಾರ್ಯಾಚರಣೆಯ ಕೈಪಿಡಿಗಳು, ಡಿಜಿಸಿಎ ಅನುಮೋದನೆಯನ್ನು ಪಡೆದ ನಂತರ ಪರಿಷ್ಕರಣೆ ತಿದ್ದುಪಡಿಗಳ ಸಂಯೋಜನೆ.	1,25,000/–	ಕನಿಷ್ಠ ವಯೋಮಿತಿ: 35 ವರ್ಷಗಳು
02	ಏರೋಡ್ರಂ ಸುರಕ್ಷತಾ/ ಭದ್ರತಾ ಅಧಿಕಾರಿ (ಒಂದು ಹುದ್ದೆ)	• ಅಭ್ಯರ್ಥಿಗಳು ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪದವಿ ಪಡೆದಿರಬೇಕು. • ಅಂತಾರಾಷ್ಟ್ರೀಯ, ಪ್ರಾದೇಶಿಕ ಮತ್ತು ರಾಷ್ಟ್ರೀಯ ವಾಯುಯಾನ ಭದ್ರತಾ ನಿಯಮಗಳ ಜ್ಞಾನ. • ವಿಮಾನ ನಿಲ್ದಾಣದ ವಾಯುಯಾನ ಭದ್ರತಾ ಕಾರ್ಯಾಚರಣೆಗಳಲ್ಲಿ ಸಾಕಷ್ಟು ಅನುಭವ • ಪೊಲೀಸ್ ಭದ್ರತೆ, ಗುಪ್ತಚರ, ತನಿಖಾ ಸಂಸ್ಥೆಗಳು ಮತ್ತು ಸೈಬರ್ ಭದ್ರತೆಯಂತಹ ಇತರೆ ಭದ್ರತೆ ಸಂಬಂಧಿತ ಜಾರಿ ಕ್ಷೇತ್ರದಲ್ಲಿ ಅನುಭವ. • ಭದ್ರತಾ ವ್ಯವಸ್ಥೆಗಳ ಜ್ಞಾನ ಮತ್ತು ಪ್ರವೇಶ ನಿಯಂತ್ರಣ, ಗ್ರೌಂಡ್ ಮತ್ತು ವಿಮಾನದೊಳಗಿನ ಭದ್ರತೆ. • ಕಂಪ್ಯೂಟರ್ ಸಾಕ್ಷರತೆ • ವಿಮಾನ ನಿಲ್ದಾಣದಿಂದ ಭದ್ರತಾ ಅಧಿಕಾರಿಯಾಗಿ 10 ವರ್ಷಗಳ ಅನುಭವ.	75000/–	ಕನಿಷ್ಠ ವಯೋಮಿತಿ: 35 ವರ್ಷಗಳು
03	ವಿಮಾನ ನಿಲ್ದಾಣದ ರಕ್ಷಣೆ ಮತ್ತು ಅಗ್ನಿಶಾಮಕ ಮುಖ್ಯಸ್ಥ (ಒಂದು ಹುದ್ದೆ)	• ಅಭ್ಯರ್ಥಿಗಳು ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪದವಿ ಪಡೆದಿರಬೇಕು. • ವಾಯುಯಾನ ಕ್ಷೇತ್ರದಲ್ಲಿ ಅಗ್ನಿಶಾಮಕ ಮತ್ತು ಸುರಕ್ಷತೆಯಲ್ಲಿ 10 ವರ್ಷಗಳ ಅನುಭವ • ಅಭ್ಯರ್ಥಿಯು ವಿಮಾನ ನಿಲ್ದಾಣ ಪ್ರಾಧಿಕಾರ ದೆಹಲಿ/ ಕೊಲ್ಕತ್ತಾದಿಂದ ಹಿರಿಯ ವ್ಯವಸ್ಥಾಪಕರು/ ಸಹಾಯಕ ಅಗ್ನಿಶಾಮಕ ಅಧಿಕಾರಿ ಕೋರ್ಸ್ ಪ್ರಮಾಣಪತ್ರ ಅಥವಾ ಖಾಸಗಿ ವಿಮಾನ ನಿಲ್ದಾಣ ಆಪರೇಟರ್ ಅವರಿಂದ ಯಾವುದೇ ತತ್ಸಮಾನ ಕೋರ್ಸ್‌ನ್ನು ಹೊಂದಿರಬೇಕು. • ಅಭ್ಯರ್ಥಿಯು ಭಾರಿ ಮೋಟಾರ್ ವಾಹನ (ಹೆಚ್‌ಎಂವಿ) ಚಾಲನಾ ಪರವಾನಗಿಯನ್ನು ಹೊಂದಿರಬೇಕು. • ಅಭ್ಯರ್ಥಿಯು ಕ್ರಾಷ್ ಫೈರ್ ವಾಹನವನ್ನು ಹೊಂದಿರಬೇಕು ಮತ್ತು ಚಾಲನಾ ಜ್ಞಾನವು ಅಪೇಕ್ಷಣೀಯವಾಗಿದೆ. • ಕಂಪ್ಯೂಟರ್ ಸಾಕ್ಷರತೆ	60,000/–	ಕನಿಷ್ಠ ವಯೋಮಿತಿ: 35 ವರ್ಷಗಳು
04	ಸಿವಿಲ್ ಮುಖ್ಯಸ್ಥ (ಒಂದು ಹುದ್ದೆ)	• ಅಭ್ಯರ್ಥಿಗಳು ಬಿ.ಇ(ಸಿವಿಲ್)/ಎಂ.ಇ/ಎಂ.ಟೆಕ್ ಪದವಿ ಪಡೆದಿರಬೇಕು. • ರನ್‌ವೇಗಳು, ರಸ್ತೆಗಳು, ವಿಮಾನ ನಿಲ್ದಾಣದ ನಿರ್ವಹಣೆಯಂಥಹ ಬೃಹತ್ ಸಿವಿಲ್ ನಿರ್ಮಾಣ ಕ್ಷೇತ್ರದಲ್ಲಿ 15 ವರ್ಷಗಳ ಅನುಭವ.	80,000/–	ಕನಿಷ್ಠ ವಯೋಮಿತಿ: 35 ವರ್ಷಗಳು
05	ಎಲೆಕ್ಟ್ರಿಕಲ್ ಮುಖ್ಯಸ್ಥ (ಒಂದು ಹುದ್ದೆ)	• ಅಭ್ಯರ್ಥಿಗಳು ಬಿ.ಇ(ಎಲೆಕ್ಟ್ರಿಕಲ್)/ಎಂ.ಇ/ಎಂ.ಟೆಕ್ ಪದವಿ ಪಡೆದಿರಬೇಕು • ಬೃಹತ್ ವಿದ್ಯುತ್ ಕಾಮಗಾರಿಗಳು, ಉಪಕೇಂದ್ರಗಳು ಹಾಗೂ ಪ್ರಸರಣ ನಿರ್ವಹಣೆ ಕಾಮಗಾರಿಗಳ ನಿರ್ವಹಣೆ ಕ್ಷೇತ್ರದಲ್ಲಿ 15 ವರ್ಷಗಳ ಅನುಭವ. ಕೆಪಿಟಿಸಿಎಲ್/ ಬೆಸ್ಕಾಂ/ಸೆಂಟ್ರಲ್ ಪಿಎಸ್‌ಯುಗಳ ಕಾಮಗಾರಿಗಳು ಮತ್ತು ವಿಮಾನ ನಿಲ್ದಾಣಗಳಲ್ಲಿ ಅನುಭವಕ್ಕೆ ಆದ್ಯತೆ.	80,000/–	ಕನಿಷ್ಠ ವಯೋಮಿತಿ: 35 ವರ್ಷಗಳು
06	ಏರ್‌ಸೈಡ್ ಆಪರೇಷನಲ್ ಮ್ಯಾನೇಜರ್ (ಒಂದು ಹುದ್ದೆ)	• ಅಭ್ಯರ್ಥಿಯು ಯಾವುದೇ ಪದವಿಯನ್ನು ಪಡೆದಿರಬೇಕು. • ಜಿಎಂ–ಎಎಐ, ಜೆಜಿಎಂ–ಎಎಐ ಹಾಗೂ ಡಿಜಿಎಂ–ಎಎಐ ಯಿಂದ ನಿವೃತ್ತ ಸಿಬ್ಬಂದಿಗೆ ಸಹಾ ಆದ್ಯತೆ ನೀಡಲಾಗುವುದು. • ವಿಮಾನ ನಿಲ್ದಾಣಗಳಲಿ ಏರ್‌ಸೈಡ್ ಆಪರೇಷನ್ಸ್ ಕ್ಷೇತ್ರದಲ್ಲಿ 10 ವರ್ಷಗಳ ಅನುಭವ.	75,000/–	ಕನಿಷ್ಠ ವಯೋಮಿತಿ: 35 ವರ್ಷಗಳು
07.	ಟರ್ಮಿನಲ್ ಮ್ಯಾನೇಜರ್ (ಒಂದು ಹುದ್ದೆ)	• ಅಭ್ಯರ್ಥಿಯು ಏವಿಯೇಷನ್‌ನಲ್ಲಿ ಎಂಬಿಎ ಪಡೆದಿರಬೇಕು. • ಜಿಎಂ–ಎಎಐ, ಜೆಜಿಎಂ–ಎಎಐ ಹಾಗೂ ಡಿಜಿಎಂ–ಎಎಐ ಯಿಂದ ನಿವೃತ್ತ ಸಿಬ್ಬಂದಿಗೆ ಸಹಾ ಆದ್ಯತೆ ನೀಡಲಾಗುವುದು. • ವಿಮಾನ ನಿಲ್ದಾಣಗಳಲ್ಲಿ ಏರ್‌ಪೋರ್ಟ್ ಟರ್ಮಿನಲ್/ ಏರ್‌ಸೈಡ್ ಆಪರೇಷನ್ಸ್ ಕ್ಷೇತ್ರದಲ್ಲಿ 10 ವರ್ಷಗಳ ಅನುಭವ.	1,00,000/–	ಕನಿಷ್ಠ ವಯೋಮಿತಿ: 35 ವರ್ಷಗಳು

(1) ಆಸಕ್ತ ಅಭ್ಯರ್ಥಿಗಳು ಈ ಪ್ರಕಟಣೆ ಪ್ರಕಟಗೊಂಡ ದಿನಾಂಕದಿಂದ **07 ದಿನಗಳ ಒಳಗಾಗಿ** ವಿದ್ಯಾರ್ಹತೆ ಮತ್ತು ಅನುಭವದ ವಿವರಗಳೊಂದಿಗೆ ತಮ್ಮ ಗೋಷ್ವಾರೆಯನ್ನು ಮೇಲ್ಕಂಡ ವಿಳಾಸಕ್ಕೆ ಕಳುಹಿಸಬೇಕು. (2) ಕೆಎಸ್‌ಐಐಡಿಸಿ ಮಾನದಂಡಗಳ ಅನುಸಾರ ಇತರೆ ಭತ್ಯೆಗಳು, ಟಿಎ, ಡಿಎಗಳು ಅನ್ವಯಿಸುತ್ತವೆ. (3) ಆಯ್ದ ಸಿಬ್ಬಂದಿಯನ್ನು ವಿಜಯಪುರ ವಿಮಾನ ನಿಲ್ದಾಣಕ್ಕೆ ನಿಯೋಜಿಸಲಾಗುವುದು. (4) ಯಾವುದೇ ಸ್ಪಷ್ಟನೆಗಾಗಿ ದಯವಿಟ್ಟು ಎಜಿಎಂ–ಮೊಬೈಲ್ ಸಂಖ್ಯೆ : 9845580837/9848533566 ಅನ್ನು ಸಂಪರ್ಕಿಸಿ.

ಸಹಿ/– ಸಹಾಯಕ ಪ್ರಧಾನ ವ್ಯವಸ್ಥಾಪಕರು–ವಿಮಾನ ನಿಲ್ದಾಣಗಳು

ಸುಭಾಷಿತ

ಯಾರೊಬ್ಬರ ಬಗ್ಗೆಯೂ ಅತಿ ಬೇಗ ಒಂದು ನಿರ್ಣಯಕ್ಕೆ ಬಂದುಬಿಡಬೇಡಿ. ಏಕೆಂದರೆ, ಪ್ರತಿಯೊಬ್ಬ ಸಂತನಿಗೂ ಒಂದು ಇತಿಹಾಸ ಇರುತ್ತದೆ ಮತ್ತು ಪ್ರತಿಯೊಬ್ಬ ಪಾಪಿಷ್ಠನೂ ಭವಿಷ್ಯವನ್ನು ಹೊಂದಿರುತ್ತಾನೆ.

-ಆಸ್ಕರ್ ವೈಲ್ಡ್

ಪ್ರತಿಕೂಲ ವರದಿ: ಮೂದಲಿಕೆಯಿಂದ ಸಮಸ್ಯೆಗೆ ಪರಿಹಾರ ಸಾಧ್ಯವಿಲ್ಲ

ಜಾಗತಿಕ ಹಸಿವು ಸೂಚ್ಯಂಕದ (ಜಿಎಚ್‌ಐ) ವರದಿಯು ಕಳೆದ ವಾರ ಬಿಡುಗಡೆಯಾಗಿದ್ದು, ಅದರ ಬಗ್ಗೆ ಭಾರತ ಸರ್ಕಾರ ನೀಡಿರುವ ಪ್ರತಿಕ್ರಿಯೆ ನಿರೀಕ್ಷಿತವೇ ಆಗಿದೆ. 125 ದೇಶಗಳ ಪಟ್ಟಿಯಲ್ಲಿ ಭಾರತವು 111ನೇ ಸ್ಥಾನ ಪಡೆದಿದೆ ಎಂದು ವರದಿ ಹೇಳಿದೆ. ಬೆಳವಣಿಗೆ ಕುಂಠಿತಗೊಂಡ ಮಕ್ಕಳ ಪ್ರಮಾಣವು ನಮ್ಮಲ್ಲಿಯೇ ಅತಿ ಹೆಚ್ಚು ಇದೆ. ಇಂತಹ ಮಕ್ಕಳ ಪ್ರಮಾಣವು ಶೇಕಡ 18.7ರಷ್ಟಿದೆ ಎಂದು ವರದಿ ವಿವರಿಸಿದೆ. ದೇಶದಲ್ಲಿ ಹಸಿವು ಮತ್ತು ಅಪೌಷ್ಟಿಕತೆ ವ್ಯಾಪಕವಾಗಿದೆ ಎಂಬುದನ್ನು ಇದು ಸೂಚಿಸುತ್ತದೆ. ವರದಿಯು ಅಸಮರ್ಪಕವಾಗಿದ್ದು ಲೋಪದಿಂದ ಕೂಡಿದೆ, ವರದಿ ಸಿದ್ಧಪಡಿಸುವಿಕೆಯಲ್ಲಿ ಸರಿಯಾದ ಪ್ರಕ್ರಿಯೆಯನ್ನು ಅನುಸರಿಸಿಲ್ಲ ಎಂದು ಸರ್ಕಾರ ಹೇಳಿದೆ. ಕಳೆದ ವರ್ಷ ಜಿಎಚ್‌ಐನಲ್ಲಿ ಭಾರತದ ರ‍್ಯಾಂಕ್ 107 ಇತ್ತು, ಆಗಲೂ ಭಾರತ ಸರ್ಕಾರವು ಹೀಗೆಯೇ ಹೇಳಿತ್ತು. ವರದಿ ಸಿದ್ಧಪಡಿಸಿದ ವಿಧಾನವೇ ಸರಿ ಇಲ್ಲ, ವರದಿಯು ದುರುದ್ದೇಶದಿಂದ ಕೂಡಿದೆ ಎಂದೂ ಸರ್ಕಾರ ಹೇಳಿದೆ. ದೇಶದಲ್ಲಿ ಸಮಸ್ಯೆಗಳು ಇವೆ ಎಂದು ಹೇಳುವ ವರದಿಗಳನ್ನು ಅಥವಾ ಸಮೀಕ್ಷೆಗಳ ಕುರಿತು ಸರ್ಕಾರ ಪ್ರತಿ ಬಾರಿಯೂ ಇಂತಹ ಪ್ರತಿಕ್ರಿಯೆಯನ್ನು ನೀಡಿದೆ. ಸಮೀಕ್ಷೆಗೆ ಮಿತಿಗಳು ಇವೆ ಎಂದು ಭಾವಿಸಿದರೂ ಅದು ಕೊಟ್ಟ ಆಘಾತಕಾರಿ ಚಿತ್ರಣವನ್ನು ತಿರಸ್ಕರಿಸುವುದರಲ್ಲಿ ಪ್ರಾಮಾಣಿಕತೆಯಾಗಲೀ ಸದುದ್ದೇಶವಾಗಲೀ ಇಲ್ಲ. ಹಸಿವಿನ ವಿಚಾರದಲ್ಲಿ ವಿವಿಧ ದೇಶಗಳ ಸ್ಥಿತಿಗತಿ ಹೇಗಿದೆ ಎಂಬ ಈ ತುಲನಾತ್ಮಕ ವರದಿಯನ್ನು ಜಗತ್ತು ಒಪ್ಪಿಕೊಂಡಿದೆ. ಈ ವರದಿಯನ್ನು ಭಾರತ ಪ್ರಶ್ನಿಸಿದ ರೀತಿಯಲ್ಲಿ ಬೇರೆ ಯಾವ ದೇಶವೂ ಪ್ರಶ್ನಿಸಿಲ್ಲ.

ಜಾಗತಿಕ ಹಸಿವು ಸೂಚ್ಯಂಕದ ವರದಿಯ ದತ್ತಾಂಶಗಳನ್ನು ಸರ್ಕಾರ ಒಪ್ಪಿಕೊಂಡು, ಸಮಸ್ಯೆಯನ್ನು ಪರಿಹರಿಸಲು ಪ್ರಯತ್ನಿಸಬೇಕು

ಹಸಿವು ಮತ್ತು ಅಪೌಷ್ಟಿಕತೆ ದೊಡ್ಡ ಮಟ್ಟದಲ್ಲಿಯೇ ಇವೆ ಎಂಬುದನ್ನು ಸರ್ಕಾರ ನೀಡಿದ ಅಂಕಿಅಂಶಗಳೇ ಹೇಳುತ್ತವೆ. ಆರು ತಿಂಗಳಿಂದ 23 ತಿಂಗಳೊಳಗಿನ ಶೇ 11.3ರಷ್ಟು ಮಕ್ಕಳಿಗೆ ಮಾತ್ರ ಸಮತೋಲಿತ ಆಹಾರ ದೊರೆಯುತ್ತಿದೆ ಎಂದು ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ (ಎನ್‌ಎಫ್‌ಎಚ್‌ಎಸ್)– 5ರ ವರದಿಯು ಹೇಳಿದೆ. ಆರು ವರ್ಷದೊಳಗಿನ ಮಕ್ಕಳು, ಹದಿಹರೆಯದ ಬಾಲಕ-ಬಾಲಕಿಯರು ಮತ್ತು 15 ವರ್ಷದಿಂದ 49 ವರ್ಷ ವಯಸ್ಸಿನ ಮಹಿಳೆಯರಲ್ಲಿ ರಕ್ತಹೀನತೆ ವ್ಯಾಪಕವಾಗಿದೆ ಎಂಬುದರ ಮೇಲೂ ಈ ವರದಿ ಬೆಳಕು ಚೆಲ್ಲಿದೆ. ಭಾರತದಲ್ಲಿ 43 ಲಕ್ಷ ಮಕ್ಕಳಲ್ಲಿ ಅಪೌಷ್ಟಿಕತೆ ಇದೆ ಎಂದು 'ಪೋಷಣ್ ಟ್ರ್ಯಾಕರ್' ಕಳೆದ ತಿಂಗಳು ಹೇಳಿದೆ. ದೇಶದ ಶೇ 74ರಷ್ಟು ಜನರಿಗೆ ಆರೋಗ್ಯಕರ ಆಹಾರವನ್ನು ಪಡೆದುಕೊಳ್ಳುವ ಸಾಮರ್ಥ್ಯ ಇಲ್ಲ ಎಂದು ನೀತಿ ಆಯೋಗವು ಬಿಡುಗಡೆ ಮಾಡಿದ್ದ ವರದಿಯು ಹೇಳಿದೆ. 2030ರೊಳಗೆ ಹಸಿವಿನ ಪ್ರಮಾಣವನ್ನು ಸೊನ್ನೆಗೆ ಇಳಿಸಬೇಕು ಎಂದು ವಿಶ್ವಸಂಸ್ಥೆಯು ಹಾಕಿಕೊಂಡಿರುವ ಸುಸ್ಥಿರ ಅಭಿವೃದ್ಧಿ ಗುರಿಯನ್ನು ಭಾರತವು ತಲುಪುವ ಸಾಧ್ಯತೆ ಕ್ಷೀಣವಾಗಿದೆ.

ಜಿಎಚ್‌ಐ ವರದಿಯನ್ನೇ ಪ್ರಶ್ನಿಸುವ ಬದಲು, ಭಾರತದಲ್ಲಿ ಹಸಿವಿನ ಪ್ರಮಾಣವು ಅತಿ ಹೆಚ್ಚು ಇರಲು ಕಾರಣವೇನು, ಅದು ಹೆಚ್ಚುತ್ತಿರುವುದು ಏಕೆ ಎಂಬುದನ್ನು ಸರ್ಕಾರವು ಪರಿಶೀಲಿಸಬೇಕು. 2014ರಲ್ಲಿ ಸಿದ್ಧಪಡಿಸಲಾಗಿದ್ದ 76 ದೇಶಗಳ ಪಟ್ಟಿಯಲ್ಲಿ ಭಾರತವು 55ನೇ ಸ್ಥಾನವನ್ನು ಪಡೆದಿತ್ತು. ಆಗ, ನೇಪಾಳ ಮತ್ತು ಶ್ರೀಲಂಕಾಕ್ಕಿಂತ ಕೆಳಗಿದ್ದರೂ ಬಾಂಗ್ಲಾದೇಶ ಮತ್ತು ಪಾಕಿಸ್ತಾನಕ್ಕಿಂತ ಮೇಲೆಯೇ ಇತ್ತು. ಆದರೆ, ವರ್ಷಗಳು ಕಳೆದಂತೆ ಭಾರತದ ಸ್ಥಾನವು ಕೆಳಕ್ಕೆ ಜಾರುತ್ತಲೇ ಹೋಗಿದೆ. ಈಗಂತೂ ನಮ್ಮ ನೆರೆಯ ದೇಶಗಳು ಅಲ್ಲದೆ, ಆಫ್ರಿಕಾದ ದೇಶಗಳಿಗಿಂತಲೂ ಕೆಳಗಿದೆ. ವರದಿಯ ದತ್ತಾಂಶಗಳನ್ನು ನಿರಾಕರಿಸುವುದು ಮತ್ತು ವರದಿ ಸಿದ್ಧಪಡಿಸಿದವರನ್ನು ಮೂದಲಿಸುವುದರ ಬದಲಿಗೆ ವರದಿಯನ್ನು ಒಪ್ಪಿಕೊಂಡು ಸಮಸ್ಯೆಯನ್ನು ಪರಿಹರಿಸಲು ಸರ್ಕಾರವು ಪ್ರಯತ್ನಿಸಬೇಕು. 2013ರ ರಾಷ್ಟ್ರೀಯ ಆಹಾರ ಭದ್ರತೆ ಕಾಯ್ದೆ ಪ್ರಕಾರ, ಪ್ರತಿ ಪ್ರಜೆಯ ಆಹಾರದ ಮೂಲಭೂತ ಅಗತ್ಯಗಳನ್ನು ಪೂರೈಸುವುದು ಸರ್ಕಾರದ ಹೊಣೆಗಾರಿಕೆ. ಆದರೆ, ಹಸಿವು ಮತ್ತು ಅಪೌಷ್ಟಿಕತೆ ನಿವಾರಣೆಗೆ ರೂಪಿಸಿರುವ ಹಲವು ಯೋಜನೆಗಳು ಲಕ್ಷಾಂತರ ಜನರನ್ನು ತಲುಪಿಯೇ ಇಲ್ಲ. ಜಗತ್ತಿನ ಪ್ರಮುಖ ಆಹಾರೋತ್ಪನ್ನ ರಫ್ತುದಾರ ದೇಶಗಳಲ್ಲಿ ಭಾರತವೂ ಒಂದಾಗಿದೆ. ಹಾಗಿದ್ದರೂ ದೇಶದಲ್ಲಿರುವ ಲಕ್ಷಾಂತರ ಪ್ರಜೆಗಳ ಹಸಿವು ನೀಗಿಸಲು ಸಾಧ್ಯವಾಗಿಲ್ಲ ಎಂಬುದು ನಾಚಿಕೆಗೇಡಿನ ಸಂಗತಿ.

ದಿನದ ಟ್ವೀಟ್

ಪರ್ಯಾಯ ವ್ಯವಸ್ಥೆ ಇರಲಿ

ಬೆಂಗಳೂರಿನ ಹೊರವರ್ತುಲ ರಸ್ತೆಯಲ್ಲಿ ಸಂಚರಿಸುವ ಬಿಳಿ ಬೋರ್ಡಿನ ಬಹುತೇಕ ಕಾರುಗಳು ಬರೀ ಒಬ್ಬರೇ ಪ್ರಯಾಣಿಕರನ್ನು ಹೊಂದಿರುವುದು ಯಾಕೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕೆಂಬ ಕುತೂಹಲ ನಿಜಕ್ಕೂ ನನಗಿದೆ. ಸಾರ್ವಜನಿಕ ಸಾರಿಗೆ ಸುಧಾರಣೆ ಆಗಬೇಕು ಎಂಬುದನ್ನು ಒಪ್ಪುತ್ತೇನೆ. ಆದರೆ, ಕಚೇರಿ ವಾಹನಗಳು, ಬಸ್ಸುಗಳು ಮತ್ತು ಕಾರ್ ಪೂಲಿಂಗ್ ವ್ಯವಸ್ಥೆ ಇದ್ದೇಇದೆ. ಇವುಗಳಿಂದ ಸಂಚಾರ ದಟ್ಟಣೆ ಹಾಗೂ ಮಾಲಿನ್ಯ ತಪ್ಪಿಸಲು ಸಾಧ್ಯ.

ದೀಪಕ್ ಎನ್., ಎಂಜಿನಿಯರ್

ಕಿಡಿನುಡಿ

ದೇವೇಗೌಡರೇ ನಿಮಗೀಗ 92 ವರ್ಷ ವಯಸ್ಸಾಗಿದೆ. ಈಗ ತಪ್ಪು ಹೆಜ್ಜೆ ಇಡಬೇಡಿ. ಬಿಜೆಪಿ ಜತೆಗಿನ ಮೈತ್ರಿ ನಿರ್ಧಾರವನ್ನು ಕೈಬಿಡಿ.

ಸಿ.ಎಂ.ಇಬ್ರಾಹಿಂ, ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ

25 ವರ್ಷಗಳ ಹಿಂದೆ

ಶನಿವಾರ, 17-10-1998

● **ಭಾಗ್ಯಜ್ಯೋತಿ, 10 ಎಚ್‌ಪಿ ಪಂಪ್‌ಗೆ ಮೀಟರ್ ಇಲ್ಲ**

ಬೆಂಗಳೂರು, ಅ. 16– ಆಡಳಿತ ಪಕ್ಷದ ಭಿನ್ನಮತೀಯರ ಒತ್ತಾಯಕ್ಕೆ ಮಣಿದ ಸರ್ಕಾರ, ವಿದ್ಯುತ್ ಮಂಡಲಿ ಇತ್ತೀಚೆಗೆ ಹೆಚ್ಚಿಸಿದ್ದ ವಿದ್ಯುತ್ ದರದಲ್ಲಿ ಮನೆದೀಪ, ಎಇಎಚ್, ಸಣ್ಣ ಕೈಗಾರಿಕೆಗಳಿಗೆ ಸ್ವಲ್ಪಮಟ್ಟಿನ ರಿಯಾಯಿತಿ ನೀಡಿ ಇಂದು ತೀರ್ಮಾನ ತೆಗೆದುಕೊಂಡಿದೆ.

ಭಾಗ್ಯಜ್ಯೋತಿ ಮನೆಗಳಿಗೆ ಮೊದಲು ತಿಂಗಳಿಗೆ ವಿಧಿಸುತ್ತಿದ್ದ 2.50 ರೂಪಾಯಿ ದರ ಮುಂದುವರೆದಿದೆ. ಹತ್ತು ಎಚ್‌ಪಿವರೆಗಿನ ನೀರಾವರಿ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸದಿರಲು ಇಂದು ಇಲ್ಲಿ ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅಧ್ಯಕ್ಷತೆಯಲ್ಲಿ ಸೇರಿದ್ದ ಮಂತ್ರಿಮಂಡಲ ಸಭೆ ತೀರ್ಮಾನ ತೆಗೆದುಕೊಂಡಿತು.

● **ಜನತೆಯ ಕಷ್ಟಗಳಿಗೆ ಸ್ಪಂದಿಸಿ ಶಾಸಕರಿಗೆ ಪಟೇಲ್ ಆಗ್ರಹ**

ಬೆಂಗಳೂರು, ಅ. 16– 'ಮೊದಲು ಜನತೆ, ನಂತರ ರಾಜಕೀಯ. ನಿಮ್ಮ ಪ್ರದೇಶಗಳಲ್ಲಿ ನೈಸರ್ಗಿಕ ವಿಕೋಪಗಳಿಂದ ಜನರು ತತ್ತರಿಸಿದ್ದಾರೆ. ಆದ್ದರಿಂದ, ಮೊದಲು ಅವರ ಕಷ್ಟ-ನಷ್ಟಗಳಿಗೆ ಸ್ಪಂದಿಸಿ'– ತಮ್ಮನ್ನು ಭೇಟಿ ಮಾಡಿದ ಜನಪ್ರತಿನಿಧಿಗಳಿಗೆ ಹೀಗೆ ಹೇಳಿದವರು ಮುಖ್ಯಮಂತ್ರಿ ಜೆ.ಎಚ್. ಪಟೇಲ್.

ಜನತಾದಳದಲ್ಲಿ ಈಗ ನಡೆಯುತ್ತಿರುವ ಭಿನ್ನಮತೀಯ ಚಟುವಟಿಕೆಗಳ ಹಿನ್ನೆಲೆಯಲ್ಲಿ ಪಕ್ಷದ ಕೆಲವು ಶಾಸಕರು ಮುಖ್ಯಮಂತ್ರಿಯನ್ನು ಅವರ ಅಧಿಕೃತ ನಿವಾಸ ಕಾವೇರಿಯಲ್ಲಿ ಇಂದು ಭೇಟಿ ಮಾಡಿ ಅವರಿಗೆ ತಮ್ಮ ಬೆಂಬಲ ವ್ಯಕ್ತಪಡಿಸಿದ ಸಂದರ್ಭದಲ್ಲಿ ಪಟೇಲರು ಮೇಲಿನಂತೆ ನುಡಿದರು.

ಶಾಸಕರು 'ನಮ್ಮ ಬೆಂಬಲ ನಿಮಗಿದೆ. ನೀವೇ ನಮ್ಮ ನಾಯಕರು' ಎಂದಾಗ 'ನಿಮ್ಮ ನಾಯಕರು ಜನತೆ. ಅವರ ಬಳಿಗೆ ಹೋಗಿ, ಅನಾಹುತಗಳ ಬಗ್ಗೆ ವಿಚಾರಿಸಿ ಸೂಕ್ತ ಪರಿಹಾರಕ್ಕೆ ವ್ಯವಸ್ಥೆ ಮಾಡಿ, ನಂತರ ರಾಜಕೀಯ ಮಾತನಾಡೋಣ' ಎಂದು ಪಟೇಲರು ಕಿವಿಮಾತು ಹೇಳಿದರೆಂದು ಅವರ ಆಪ್ತ ವಲಯಗಳು ತಿಳಿಸಿವೆ.

50 ವರ್ಷಗಳ ಹಿಂದೆ

ಬುಧವಾರ, 17-10-1973

● **ನಿವೃತ್ತಿ ವಯಸ್ಸು 55ಕ್ಕೆ ಇಳಿಕೆ 1974ನೇ ಜನವರಿಯಿಂದ ಅನ್ವಯ**

ಬೆಂಗಳೂರು, ಅ.16 – ಶಿಕ್ಷಕರು ಮತ್ತು ಇತರ ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು 58ರಿಂದ 55ಕ್ಕೆ ಇಳಿಸಿದ ಮಂತ್ರಿಮಂಡಲದ ನಿರ್ಧಾರ 1974ನೇ ಜನವರಿ 1ರಿಂದ ಕಾರ್ಯಗತವಾಗಲಿದೆ.

ಪಕ್ಷೇತರ ಸದಸ್ಯ ಸತ್ಯನಾರಾಯಣ ರಾವ್ ಅವರು ಆಜ್ಞೆಯನ್ನು ಇಂದು ವಿಧಾನ ಪರಿಷತ್ತಿನಲ್ಲಿ ಪ್ರಸ್ತಾಪಿಸಿದಾಗ, ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರು 'ಬಹುಪಾಲು ಮಂದಿ ಅದನ್ನು ಸ್ವಾಗತಿಸಿದ್ದಾರೆ' ಎಂದರು.

ಶೇ 40 ಮಂದಿಗೆ: ರಾಜ್ಯದ ಸರ್ಕಾರಿ ನೌಕರರಲ್ಲಿ ಶೇ 40ರಷ್ಟಾಗುವ ಶಿಕ್ಷಕರು ಮತ್ತು ನ್ಯಾಯಾಂಗ ಅಧಿಕಾರಿಗಳಿಗೆ ಈವರೆಗೆ ನಿವೃತ್ತಿ ವಯಸ್ಸು 58 ಇತ್ತು. ಹೊಸ ಆಜ್ಞೆಯಿಂದ ನಿವೃತ್ತಿ ವಯಸ್ಸು ಎಲ್ಲರಿಗೂ 55ಕ್ಕೆ ಇಳಿಯಿತು. ರಾಜ್ಯದ ಸರ್ಕಾರಿ ನೌಕರರ ಸಂಖ್ಯೆ 2,80,000.

● **ಸೂಯೆಜ್ ದಾಟಿದ ಇಸ್ರೇಲಿ ಪಡೆಯಿಂದ ಕ್ಷಿಪಣಿ ಸಾಲು ಧ್ವಂಸ**

ಇಸ್ರೇಲಿ ಪಡೆಗಳು ಸೂಯೆಜ್ ಕಾಲುವೆಯನ್ನು ದಾಟಿ ಕಾಲುವೆಯ ಪಶ್ಚಿಮದಂಡೆಯ ಕಡೆ ಇರುವ ಈಜಿಪ್ಟ್ ನೆಲದಲ್ಲಿ ಈಜಿಪ್ಟ್ ಪಡೆಯೊಡನೆ ಕಾಳಗದಲ್ಲಿ ನಿರತವಾಗಿವೆ ಎಂದು ಮಂಗಳವಾರ ಟೆಲ್‌ಅವೀವ್ ಪ್ರಕಟಿಸಿತು.

ಇಸ್ರೇಲ್ ಪಾರ್ಲಿಮೆಂಟಿನಲ್ಲಿ ಪ್ರಧಾನಿ ಗೋಲ್ಡಾಮಿರ್ ಅವರು ಹಠಾತ್ತನೆ ಈ ಅನಿರೀಕ್ಷಿತ ಪ್ರಕಟಣೆ ನೀಡಿದರು. ಯುದ್ಧ ಬಂದಿಗಳ ಸಂಪೂರ್ಣ ವಿನಿಮಯಕ್ಕೆ ಒಪ್ಪಿಗೆ ಸಿಕ್ಕುವವರೆಗೆ ಇಸ್ರೇಲ್ ಯುದ್ಧಸ್ತಂಭನಕ್ಕೆ ಒಪ್ಪುವುದಿಲ್ಲ ಎಂದು ಹೇಳಿದರು.

ಪಿ–5 ರಾಷ್ಟ್ರಗಳು ಬದಲಾಗದಿದ್ದರೆ, ವಿಶ್ವಸಂಸ್ಥೆ ಸಂಪೂರ್ಣವಾಗಿ ಮಹತ್ವ ಕಳೆದುಕೊಳ್ಳುತ್ತದೆ

ವಿಶ್ವಸಂಸ್ಥೆ: ಸುಧಾರಣೆ ಪರ್ವ ಎಂದು?

ವಿಶ್ಲೇಷಣೆ

ಸುಧೀರ್ ಕೀಳಂಬಿ

ಬದಲಾವಣೆ ಜಗದ ನಿಯಮ. ಆದರೆ ವಿಶ್ವಮಾನ್ಯವಾದ ಸಂಸ್ಥೆಯೊಂದು ಕೆಲವೇ ಕೆಲವು ಪಟ್ಟಭದ್ರ ಹಿತಾಸಕ್ತಿಗಳ ಕಾರಣದಿಂದ ಸುಧಾರಣೆಯನ್ನೇ ಕಾಣದೆ ಸೊರಗುತ್ತಿರುವುದು ವಿಷಾದನೀಯ. ವಿಶ್ವದ ಎಲ್ಲ ರಾಷ್ಟ್ರಗಳನ್ನೂ ಒಟ್ಟಿಗೆ ಮುನ್ನಡೆಸುವುದರ ಮೂಲಕ ಜಗದೋದ್ಧಾರದ ಸದುದ್ದೇಶದೊಂದಿಗೆ 1945ರಲ್ಲಿ ವಿಶ್ವಸಂಸ್ಥೆ ಅಸ್ತಿತ್ವಕ್ಕೆ ಬಂದಿತು. ಇದಾಗಿ ಸುಮಾರು 8 ದಶಕಗಳಾಗುತ್ತ ಬಂದಿದ್ದರೂ ಸಂಸ್ಥೆಯು ಕಾಲಕ್ಕೆ ತಕ್ಕಂತೆ ಬದಲಾಗದೆ ತನ್ನ ಮಹತ್ವವನ್ನೇ ಕಳೆದುಕೊಳ್ಳುತ್ತಿದೆ.

ದ್ವಿತೀಯ ಮಹಾಯುದ್ಧದ ನಂತರ, ಅಂತಹ ಮತ್ತೊಂದು ಯುದ್ಧ ನಡೆಯದಂತೆ ನೋಡಿಕೊಂಡು, ವಿಶ್ವದಲ್ಲಿ ಶಾಂತಿ ಮತ್ತು ಭದ್ರತೆಯನ್ನು ಸಾಧಿಸಲೋಸುಗ ಜನ್ಮತಾಳಿದ ವಿಶ್ವಸಂಸ್ಥೆಯು ತನ್ನ ಮೂಲ ಉದ್ದೇಶದಲ್ಲಿ ಬಹುತೇಕ ಸಫಲವಾಗಿದೆ. ಆದರೂ ಮೂಲ ಸಂರಚನೆಯಲ್ಲಿನ ಹಲವಾರು ದೋಷಗಳಿಂದಾಗಿ ಅದು ತನ್ನ ಪ್ರಸ್ತುತತೆಯನ್ನು ಕಳೆದುಕೊಳ್ಳುತ್ತಿದೆ. ಬದಲಾದ ಪರಿಸ್ಥಿತಿಯೊಂದಿಗೆ ಹೆಜ್ಜೆ ಹಾಕಿದರೆ ಮಾತ್ರ ಸಂಸ್ಥೆಯು ತನ್ನ ಪ್ರಸ್ತುತತೆಯನ್ನು ಉಳಿಸಿಕೊಳ್ಳಲು ಸಾಧ್ಯ ಎಂಬುದು ವಾಸ್ತವ.

ವಿಶ್ವಸಂಸ್ಥೆ ಆರಂಭವಾದ 1945ರ ಜಗತ್ತಿಗೂ 2023ರ ಆಧುನಿಕ ಜಗತ್ತಿಗೂ ಅಜಗಜಾಂತರ ಇದೆ. ಪ್ರಧಾನಿ ನರೇಂದ್ರ ಮೋದಿ ಅವರು ಇತ್ತೀಚೆಗೆ, '20ನೇ ಶತಮಾನದ ಮಧ್ಯಭಾಗದ ನೀತಿಗಳು 21ನೇ ಶತಮಾನಕ್ಕೆ ಹೊಂದಿಕೆ ಆಗಲಾರವು. ಹೀಗಿರುವಾಗ, ಬದಲಾಗುತ್ತಿರುವ ವಾಸ್ತವಗಳನ್ನು ನಮ್ಮ ಅಂತರ-ರಾಷ್ಟ್ರೀಯ ಸಂಸ್ಥೆಗಳು ಗುರುತಿಸಬೇಕು. ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಗಳನ್ನು ವಿಸ್ತರಿಸಬೇಕು. ಆದ್ಯತೆಗಳನ್ನು ಮರುಪರಿಶೀಲಿಸಬೇಕು, ಯಾವ ಧ್ವನಿಗಳಿಗೆ ಪ್ರಾತಿನಿಧ್ಯ ನೀಡಬೇಕೋ ಅಂತಹವುಗಳಿಗೆ ನೀಡಬೇಕು' ಎಂದು ಪ್ರತಿಪಾದಿಸಿದ್ದಾರೆ.

1945ರಲ್ಲಿ ಬರೀ 51 ಸದಸ್ಯ ರಾಷ್ಟ್ರಗಳನ್ನು ಹೊಂದಿದ್ದ ವಿಶ್ವಸಂಸ್ಥೆಯು ಈಗ 193 ದೇಶಗಳನ್ನು ಒಳಗೊಂಡಿದೆ. ಸಂಸ್ಥೆಯ ಆರಂಭದ ವರ್ಷಗಳಲ್ಲಿ, ಜಾಗತಿಕ ರಾಜಕೀಯದಲ್ಲಿ ಪ್ರಮುಖ ಪಾತ್ರಧಾರಿಗಳು ಅಮೆರಿಕ, ಇಂಗ್ಲೆಂಡ್, ರಷ್ಯಾ, ಚೀನಾ, ಫ್ರಾನ್ಸ್ ಸೇರಿದಂತೆ ವಿಜಯಶಾಲಿ ಮಿತ್ರರಾಷ್ಟ್ರಗಳು ಮಾತ್ರ ಆಗಿದ್ದವು. ಭಾರತವೂ ಸೇರಿದಂತೆ ಹಲವು ರಾಷ್ಟ್ರಗಳು ಇನ್ನೂ ವಸಾಹತುಗಳಾಗಿದ್ದವು ಅಥವಾ ಆಗತಾನೇ ವಸಾಹತುಶಾಹಿ ಆಳ್ವಿಕೆಯಿಂದ ಸ್ವಾತಂತ್ರ್ಯ ಪಡೆದಿದ್ದವು. ಜಾಗತಿಕವಾಗಿ ಸೀಮಿತ ಸವಾಲುಗಳಿದ್ದ ಕಾಲವದು.

2023ರ ಜಗತ್ತು ಬಹು ಭಿನ್ನವಾಗಿದೆ. ಚೀನಾ, ಭಾರತ, ಬ್ರೆಜಿಲ್‌ನಂತಹ ದೇಶಗಳನ್ನು ಒಳಗೊಂಡ ಹೊಸ ಜಾಗತಿಕ ಶಕ್ತಿಗಳ ಉದಯದೊಂದಿಗೆ ಬಹುಮುಖಿ ಆಯಾಮ ಪಡೆದಿದೆ. ಹವಾಮಾನ ಬದಲಾವಣೆ, ಭಯೋತ್ಪಾದನೆ, ಪರಮಾಣು ಪ್ರಸರಣ, ಆಂತರಿಕ ಮತ್ತು ಬಾಹ್ಯ ಸಂಘರ್ಷಗಳು, ಸೈಬರ್ ಬೆದರಿಕೆ, ಸಾಂಕ್ರಾಮಿಕ ರೋಗಗಳಂತಹ ವೈವಿಧ್ಯಮಯ ಸಂಕೀರ್ಣ ಸವಾಲುಗಳನ್ನು ಎದುರಿಸುತ್ತಿದೆ. ಭಾರತದಂತಹ ಉದಯೋನ್ಮುಖ ಶಕ್ತಿಗಳು ತಮ್ಮ ಆರ್ಥಿಕ ಶಕ್ತಿ, ಶಾಂತಿಪಾಲನಾ ಕಾರ್ಯಾಚರಣೆ ಹಾಗೂ ಜಾಗತಿಕ ಸವಾಲುಗಳನ್ನು ಎದುರಿಸುವಲ್ಲಿ ಕೊಡುಗೆಗಳನ್ನು ನೀಡುವ ಮೂಲಕ ಮಹತ್ವಪೂರ್ಣವಾದ ಸ್ಥಾನ ಪಡೆದಿವೆ.

ವಿಶ್ವಸಂಸ್ಥೆಯಲ್ಲಿ ಮುಖ್ಯವಾಗಿ ದೋಷ ಇರುವುದು ಅದರ ಭದ್ರತಾ ಮಂಡಳಿಯಲ್ಲಿ, ಪಿ- 5 ರಾಷ್ಟ್ರಗಳು ಎಂದು ಕರೆಯಲಾಗುವ ಅಮೆರಿಕ, ರಷ್ಯಾ, ಫ್ರಾನ್ಸ್, ಚೀನಾ ಮತ್ತು ಇಂಗ್ಲೆಂಡ್ ಹೊಂದಿರುವ ವಿಟೊ ಅಧಿಕಾರ. ಭದ್ರತಾ ಮಂಡಳಿಯು ಈ ಐದು ದೇಶಗಳಿಗೆ ವಿಟೊದಂಥ ವಿಶೇಷ ಅಧಿಕಾರ ಕೊಟ್ಟಿರುವುದರಿಂದ, ಸಂಸ್ಥೆಯ ಯಾವುದೇ ನಿರ್ಧಾರಗಳಿಗೆ ಇವುಗಳಲ್ಲಿನ ಯಾವುದೇ ಒಂದು ದೇಶ ಸಹ ಅಡ್ಡಗಾಲು ಹಾಕಿ ತಡೆಯಬಹುದಾಗಿದೆ. ಇದರಿಂದ, ವಿಶ್ವಸಂಸ್ಥೆಯು ಯಾವುದೇ ಮುಖ್ಯ ನಿರ್ಧಾರ ತೆಗೆದುಕೊಳ್ಳುವುದು ಕಷ್ಟಸಾಧ್ಯವಾಗಿದೆ.

ವಿಶ್ವಸಂಸ್ಥೆಯು ಪ್ರಬಲವಾಗಿ ಇದ್ದಿದ್ದರೆ, ಪ್ರಸ್ತುತ ನಡೆಯುತ್ತಿರುವ ಇಸ್ರೇಲ್- ಹಮಾಸ್, ರಷ್ಯಾ- ಉಕ್ರೇನ್ ನಡುವಿನ ಯುದ್ಧಗಳು, ಭಯೋತ್ಪಾದನೆ, ಮಾನವ ಹಕ್ಕುಗಳ ಉಲ್ಲಂಘನೆ, ಅಣ್ವಸ್ತ್ರ ತಯಾರಿಕೆಯಲ್ಲಿನ ಪೈಪೋಟಿ ತಡೆಯಬಹುದಿತ್ತು. ದುರಂತವೆಂದರೆ, ಇಂತಹ ವಿಪತ್ತಿನ ಸಮಯದಲ್ಲೂ ಅದು ಅಸಹಾಯಕವಾಗಿ ಕುಳಿತಿದೆ. ಈ ಕಾರಣದಿಂದ, ಜಿ20, ಎಸ್‌ಸಿಒ (ಶಾಂಘೈ ಸಹಕಾರ ಸಂಘಟನೆ), ಇಯು (ಐರೋಪ್ಯ ಒಕ್ಕೂಟ), ಜಿ7ನಂತಹ ಗುಂಪುಗಳು ಮಹತ್ವ ಪಡೆದುಕೊಂಡು ವಿಶ್ವಸಂಸ್ಥೆಯ ಪ್ರತಿಷ್ಠೆಯನ್ನೇ ಕುಂದಿಸಿವೆ.

ಇನ್ನು ವಿಶ್ವಸಂಸ್ಥೆಯ ಸುಧಾರಣೆಯಾಗಿ, ಭದ್ರತಾ ಮಂಡಳಿಯಲ್ಲಿ ಭಾರತಕ್ಕೂ ಕಾಯಂ ಸದಸ್ಯತ್ವ ಸಿಗಬೇಕೆಂದು ವಾದಿಸಲು ಹಲವಾರು ಕಾರಣಗಳಿವೆ. ಅವುಗಳಲ್ಲಿ ಪ್ರಮುಖವಾದವೆಂದರೆ, ಭಾರತವು ವಿಶ್ವದ ಜನಸಂಖ್ಯೆಯ ಗಮನಾರ್ಹ ಪ್ರಮಾಣವನ್ನು ಪ್ರತಿನಿಧಿಸುತ್ತಿದೆ. ವಿಶ್ವಸಂಸ್ಥೆಯ ಪ್ರಕಾರ, ಈ ವರ್ಷದ ಏಪ್ರಿಲ್‌ನಲ್ಲೇ ಭಾರತದ ಜನಸಂಖ್ಯೆ ವಿಶ್ವದಲ್ಲೇ ಅತಿ ಹೆಚ್ಚಾಗಿದೆ. ಕೆಲವು ಮೂಲಗಳ ಪ್ರಕಾರ, ದೇಶದ ಜನಸಂಖ್ಯೆಯು ಒಟ್ಟು ಮಾನವ ಸಂಕುಲದ ಶೇಕಡ 17ರಷ್ಟಿದೆ. ಇಂದು ಭಾರತೀಯರು ಬಾಹ್ಯಾಕಾಶದಿಂದ ಹಿಡಿದು ತಂತ್ರಜ್ಞಾನ, ವೈದ್ಯಕೀಯ, ಆರ್ಥಿಕತೆಯಂತಹ ಎಲ್ಲ ರಂಗಗಳಲ್ಲೂ ಛಾಪು ಮೂಡಿಸಿದ್ದಾರೆ. ಈ ಮೂಲಕ ದೇಶವು ಜಾಗತಿಕ ಭೂಪಟದಲ್ಲಿ ನಿರ್ಣಾಯಕ ಪಾತ್ರಧಾರಿಯಾಗಿದೆ. ವಿಶ್ವದ 5ನೇ ಅತಿ ದೊಡ್ಡ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿರುವ ದೇಶ, ಸದ್ಯದಲ್ಲೇ 3ನೇ ಸ್ಥಾನಕ್ಕೆ ಏರಲಿದೆ. ಭಾರತದ ಆರ್ಥಿಕ ಪ್ರಭಾವವು ಅಂತರರಾಷ್ಟ್ರೀಯ ಆರ್ಥಿಕ ನೀತಿಗಳು ಮತ್ತು ವ್ಯಾಪಾರದ ಮೇಲೆ ಗಣನೀಯವಾಗಿ ಆಗುತ್ತಿದೆ. ಪರಮಾಣು ಶಕ್ತಿಯಾಗಿ ಹೊರಹೊಮ್ಮಿರುವ ದೇಶವು 'ಮೊದಲು ಅಣ್ವಸ್ತ್ರ ಬಳಸುವುದಿಲ್ಲ' ಎಂಬ ಜವಾಬ್ದಾರಿಯುತ ನೀತಿಯನ್ನು ಅನುಸರಿಸುವ ಮೂಲಕ ಜಗತ್ತಿಗೇ ಮಾದರಿಯಾಗಿದೆ.

'ವಸುಧೈವ ಕುಟುಂಬಕಂ' ಘೋಷಣೆಯೊಂದಿಗೆ ಭಾರತದ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆದ ಜಿ20 ಶೃಂಗಸಭೆಯು ದೇಶದ ಶಕ್ತಿ, ಸಾಮರ್ಥ್ಯಗಳನ್ನು ಜಗಜ್ಜಾಹೀರಾಗಿಸಿದೆ. ಅದರಲ್ಲೂ ಪ್ರಮುಖವಾಗಿ, ದೇಶದ ಪ್ರಯತ್ನದಿಂದ ಈ ಶೃಂಗಸಭೆಯಲ್ಲಿ ಒಡಮೂಡಿದ ಒಮ್ಮತದ ಜಂಟಿ ಘೋಷಣೆಯು ವಿವಿಧ ಹಿತಾಸಕ್ತಿಗಳಿಂದ ಕೂಡಿದ ದೇಶಗಳನ್ನು ಒಗ್ಗೂಡಿಸುವಲ್ಲಿ ಭಾರತ ತೋರಿದ ಶಕ್ತಿಯ ದ್ಯೋತಕವಾಗಿದೆ. ಅಲ್ಲದೆ ಶಾಂತಿಪಾಲನಾ ಪಡೆಗೆ ಭಾರತದ ಕೊಡುಗೆ, ವಿಪತ್ತಿನಲ್ಲಿ ಅನ್ಯ ದೇಶದವರಿಗೆ ನೆರವಾಗುವ ಗುಣ, ಬಹುಪಕ್ಷೀಯತೆಗೆ ಸಂಬಂಧಿಸಿದಂತೆ ದೇಶದ ಬದ್ಧತೆ, ಅದರ ವೈವಿಧ್ಯ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆ, ಅಣ್ವಸ್ತ್ರಗಳ ಜವಾಬ್ದಾರಿಯುತ ನಿರ್ವಹಣೆಯು ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತ ಮತ್ತು ಭಾರತೀಯರ ಗೌರವವನ್ನು ಹೆಚ್ಚಿಸಿವೆ.

ಇವೆಲ್ಲವುಗಳನ್ನೂ ಪರಿಗಣಿಸಿದರೆ, ವಿಶ್ವಸಂಸ್ಥೆಯ ಭದ್ರತಾ ಮಂಡಳಿಗೆ ಭಾರತಕ್ಕಿಂತ ಉತ್ತಮ ಸದಸ್ಯ ರಾಷ್ಟ್ರ ಇನ್ನೆಲ್ಲೂ ಸಿಗಲಾರದು. ದೇಶದ ವಿದೇಶಾಂಗ ಸಚಿವ ಎಸ್.ಜೈಶಂಕರ್ ಹಲವಾರು ವೇದಿಕೆಗಳಲ್ಲಿ ಭದ್ರತಾ ಮಂಡಳಿಯ ಕಾಯಂ ಸದಸ್ಯತ್ವಕ್ಕೆ ಭಾರತದ ದಾವೆಯನ್ನು ಸಮರ್ಥವಾಗಿ ಮಂಡಿಸುತ್ತಲೇ ಬರುತ್ತಿದ್ದಾರೆ. ಇತ್ತೀಚೆಗೆ ನಡೆದ ವಿಶ್ವಸಂಸ್ಥೆಯ ಮಹಾ ಅಧಿವೇಶನದಲ್ಲಿ ಮಾತನಾಡುತ್ತಾ, ವಿಶ್ವದ ಕೆಲವೇ ದೇಶಗಳು ತಮಗೆ ಬೇಕಾದಂತೆ ವಿಶ್ವವನ್ನು ಕೊಂಡೊಯ್ಯುವ ದಿನಗಳು ಮುಗಿದಿದ್ದು, ಪ್ರಜಾಸತ್ತಾತ್ಮಕ ಹಾಗೂ ನ್ಯಾಯಯುತ ವ್ಯವಸ್ಥೆಗಳು ಬಂದು ಜಗವನ್ನು ಮುನ್ನಡೆಸಲಿವೆ ಎಂದಿದ್ದಾರೆ.

ವಿಶ್ವಸಂಸ್ಥೆಗೆ ಅತ್ಯಗತ್ಯವಾಗಿ ಆಗಬೇಕಾದ ಸುಧಾರಣೆಯ ಬೇಡಿಕೆಯನ್ನು ಹಲವು ದೇಶಗಳು ಮೂರು ದಶಕಗಳಿಂದಲೂ ಪ್ರತಿಪಾದಿಸುತ್ತಲೇ ಬಂದಿವೆ. ಇದರಲ್ಲಿ ಭಾರತದ ಧ್ವನಿ ಪ್ರಬಲವಾಗಿದೆ. ಜೊತೆಗೆ, ಬ್ರೆಜಿಲ್, ಜಪಾನ್, ಜರ್ಮನಿಯಂತಹ ಕೆಲವು ದೇಶಗಳೂ ಸುಧಾರಣೆಗಾಗಿ ಒತ್ತಾಯಿಸುತ್ತಿವೆ. ಭಾರತ, ಬ್ರೆಜಿಲ್, ದಕ್ಷಿಣ ಆಫ್ರಿಕಾ ದೇಶಗಳು ಐಬಿಎಸ್‌ಎ ಎಂಬ ಸಮೂಹ ರಚಿಸಿಕೊಂಡಿದ್ದು, ಸುಧಾರಣೆಗಾಗಿ ಒತ್ತಾಯಿಸುತ್ತಿವೆ.

ವಿಶ್ವಸಂಸ್ಥೆಯ ಸುಧಾರಣೆಗಾಗಿ ಅದರ ಸನ್ನದಿಗೆ ತಿದ್ದುಪಡಿ ತರಬೇಕು. ಅದಕ್ಕಾಗಿ ವಿಶ್ವಸಂಸ್ಥೆಯ ಮಹಾ ಅಧಿವೇಶನದಲ್ಲಿ ಪಾಲ್ಗೊಳ್ಳುವ ಮೂರನೇ ಎರಡರಷ್ಟು ರಾಷ್ಟ್ರಗಳು ಹಾಗೂ ಭದ್ರತಾ ಮಂಡಳಿಯ ಎಲ್ಲಾ ಕಾಯಂ ಸದಸ್ಯ ರಾಷ್ಟ್ರಗಳ ಒಪ್ಪಿಗೆ ಅನಿವಾರ್ಯ. ಭದ್ರತಾ ಮಂಡಳಿಯ ಪಿ- 5 ದೇಶಗಳಲ್ಲಿ ಈ ಕುರಿತು ಸಹಮತ ಇಲ್ಲದಿರುವುದೇ ಸುಧಾರಣಾ ಕಾರ್ಯ ನನೆಗುದಿಗೆ ಬೀಳಲು ಕಾರಣ.

ಪಿ- 5ಗೆ ಸೇರಿದ ಕೆಲ ರಾಷ್ಟ್ರಗಳು ಸ್ವಹಿತಾಸಕ್ತಿ ಬದಿಗೊತ್ತಿ ಸುಧಾರಣೆಗೆ ಮನಸ್ಸು ಮಾಡದೇ ಇದ್ದರೆ, ವಿಶ್ವಸಂಸ್ಥೆ ತನ್ನ ಮಹತ್ವವನ್ನು ಸಂಪೂರ್ಣವಾಗಿ ಕಳೆದುಕೊಂಡು ಮೂಲೆಗುಂಪಾಗುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಭಾರತದ ದೃಷ್ಟಿಯಿಂದಷ್ಟೇ ಅಲ್ಲದೆ, ಸಮಗ್ರ ವಿಶ್ವದ ಏಳಿಗೆಗಾಗಿ ಸುಧಾರಣೆಯ ಅಗತ್ಯವಿದೆ.

ಲೇಖಕ: ಅಂತರರಾಷ್ಟ್ರೀಯ ಕಾನೂನು ಸಲಹೆಗಾರ
ವಿದೇಶಾಂಗ ಇಲಾಖೆ, ನವದೆಹಲಿ

ಚುರುಮುರಿ

ಮೂರು ಕಥೆಗಳು

● ಲಿಂಗರಾಜು ಡಿ.ಎಸ್.

ಪುರಾಣ ಕಾಲದಲ್ಲಿ ಭೋಜರಾಜ ಮತ್ತು ಅವನ ವಂಶದ ರಾಜರು ಭಾರತ ದೇಶವನ್ನು ಆಳುತ್ತಿದ್ದರು. ಅವರಿಗೆ ಸತ್ಯ, ನ್ಯಾಯ, ನಿಷ್ಠೆ, ಧರ್ಮ, ನೀತಿ, ನಿಯಮ ಅಂತ ಮಂತ್ರಿಗಳಿದ್ದರು. ಅವರು ರಾಜ ಕೊಡುತ್ತಿದ್ದ ಸಂಬಳದಲ್ಲೇ ಜೀವನ ನಡೆಸುತ್ತಿದ್ದರು. ರಾಜ ಮತ್ತು ಮಂತ್ರಿಗಳು ಜನಕ್ಕೆ ಒಳ್ಳೇದಾಗಲಿ ಅಂತ ಹಗಲು-ರಾತ್ರಿ ದುಡಿಯುತ್ತಾ ಅರವತ್ತರ ನಂತರ ವಾನಪ್ರಸ್ಥಕ್ಕೆ ತೆರಳುತ್ತಿದ್ದರು. ಪ್ರಜೆಗಳಿಗೆ ಮೋಸ, ಸುಳ್ಳು-ತಟವಟ ಗೊತ್ತೇ ಇರಲಿಲ್ಲ. ಹಾಗಾಗಿ, ತಮ್ಮ ವೃತ್ತಿಯನ್ನು ನಿಷ್ಠೆಯಿಂದ ಮಾಡುತ್ತಾ ರಾಜನಿಗೆ ತೆರಿಗೆ ಕೊಡುತ್ತಾ ಸುಖವಾಗಿದ್ದರು. ದೇವ ದೇವತೆಗಳೆಲ್ಲಾ ಖುಷಿಯಿಂದ ಭೂಮಿಗೆ ಬಂದು ತೆರಳುತ್ತಿದ್ದರು.

ಬಹಳ ಕಾಲದ ನಂತರ ಜೋಬುರಾಜನ ವಂಶ ಆಳ್ವಿಕೆ ಆರಂಭವಾಯಿತು. ರಾಜ-ಮಂತ್ರಿಗಳು ಇನ್ನೂ ಅದೆಷ್ಟು ಕಾಲ ದೇಶಕ್ಕೆಂತಲೇ ನಿಯತ್ತಿನಿಂದ ದುಡಿಯುವುದು ಅಂತ ಸ್ವಲ್ಪ-ಮಟ್ಟಿಗೆ ಸ್ವಾಹಾಪ್ರಿಯರಾದರು. ಇವರಿಗೆ ತಮ್ಮ ಜೋಬು ತುಂಬಿಸಿಕೊಳ್ಳುವುದೇ ಗುರಿಯಾಗಿತ್ತು. ಹಾಗಾಗಿ ರಾಜ-ಮಂತ್ರಿಗಳ ಜೋಬು ನಿಧಾನವಾಗಿ ತುಂಬಲಾರಂಭಿಸಿತು. ಇವರ ಕೈಕಸುಬನ್ನು ನೋಡಿ ಅಧಿಕಾರಿಗಳೂ ಕಾಸಿಗಾಗಿ ಹೋರಾಟ ಆರಂಭಿಸಿದರು. ದೇಶವು ಅನೀತಿ, ಅಧರ್ಮ, ಅನ್ಯಾಯದ ಕಡೆಗೆ ಹೊರಳುತ್ತಿದೆ ಎಂದು ಧರ್ಮಾತ್ಮರು ದುಃಖಿಸಲಾರಂಭಿಸಿದರು.

ಶತಮಾನಗಳ ನಂತರ ರಾಬುರಾಜನ ಆಳ್ವಿಕೆ ಆರಂಭವಾಗಿತ್ತು. ರಾಜಕಾರಣ, ಪ್ರಜಾಪ್ರಭುತ್ವದ ಹೆಸರಿನಲ್ಲಿ ರಾಬರಿ ಮಾಡುವುದೇ ಗುರಿಯಾಗಿದ್ದ ಈತನಿಗೆ ಅಸತ್ಯ, ಹಿಂಸೆ, ಅನ್ಯಾಯ, ಅನೀತಿ, ಅಧರ್ಮರೆಂಬ ಮಂತ್ರಿಗಳು ಇದ್ದರು. ಇವರು ಕೂಡ ರಾಜನಿಗೆ ಕಾಣದಂತೆ ಕಾಸು ದೋಚಲಾರಂಭಿಸಿದ್ದರು. ಜನರ ಕಿವಿಗೆ ಹೂವಿಡಲು ಆಗಾಗ್ಗೆ ಬೆಲೆಗಳನ್ನು ನೂರು ರೂಪಾಯಿ ಇಳಿಸಿ ನಂತರ ಇನ್ನೂರು ರೂಪಾಯಿ ಏರಿಸಲಾಗುತ್ತಿತ್ತು. ಅನೇಕ ಭಾಗ್ಯ, ಯೋಜನೆಗಳ ದುಡ್ಡನ್ನು ಜನರಿಂದಲೇ ವಸೂಲು ಮಾಡುತ್ತಿದ್ದರು. ವರ್ಗಾವಣೆಗೆ ಕಾಸು, ಕಚೇರಿಗಳಲ್ಲಿ ಕೆಲಸ ಮಾಡಿಕೊಡಲು ಲಂಚ ಕಾನೂನುಬದ್ಧವಾಯಿತು. ದೇವರಭಯ ಕಾಣೆಯಾಯ್ತು! ತಮ್ಮನ್ನೂ ಬೀದಿಯಲ್ಲಿ ಮಾರಾಟಕ್ಕಿಟ್ಟದ್ದನ್ನು ಕಂಡು ಬೆದರಿದ ದೇವತೆಗಳು ಭೂಮಿಗೆ ಬರುವುದನ್ನೇ ಬಿಟ್ಟರು!

ಸಂಗತ

ಮಕ್ಕಳ ವ್ಯಕ್ತಿತ್ವ ಮತ್ತು ಮಾಂತ್ರಿಕ ಬದಲಾವಣೆ

ಕಲಿಕೆಯಲ್ಲಿ ಅನಾಸಕ್ತಿ ತೋರುವ ಮಕ್ಕಳನ್ನು ವೈಯಕ್ತಿಕವಾಗಿ ಆಲಿಸುವುದು ಮುಖ್ಯ. ಅಲ್ಲಿ ನಕಾರಾತ್ಮಕ ಪ್ರತಿಕ್ರಿಯೆ ಸಲ್ಲದು

● ಡಾ. ಮುರಳೀಧರ ಕಿರಣಕೆರೆ

ಅದು, ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮ. ಮಕ್ಕಳ ಪ್ರತಿಕ್ರಿಯೆ ತುಂಬಾ ನೀರಸವಾಗಿತ್ತು. ಎಷ್ಟೇ ಪ್ರೇರಣೆ ನೀಡಿದರೂ ಪ್ರಶ್ನೆ ಕೇಳುವುದಿರಲಿ ಬಾಯಿ ಬಿಡುವುದಕ್ಕೂ ಹಿಂದುಮುಂದು ನೋಡುತ್ತಿದ್ದರು. ಮಾಡಿಸುತ್ತಿದ್ದ ಚಟುವಟಿಕೆಗಳಿಗೂ ಸರಿಯಾದ ಸ್ಪಂದನೆ ಸಿಗದಿದ್ದುದು ಆಶ್ಚರ್ಯ ತಂದಿತ್ತು.

ಅರ್ಧವಾರ್ಷಿಕ ಪರೀಕ್ಷೆಗಳು ಆಗಲೇ ಮುಗಿದಿದ್ದರಿಂದ ಆ ಒತ್ತಡವೂ ಇಲ್ಲ. ದಸರಾ ರಜೆ ಆರಂಭವಾಗುತ್ತಿದೆಯೆಂದು ಖುಷಿ ಖುಷಿಯಾಗಿ ಇರಬೇಕಾದವರು ಹೀಗೇಕೆ ಕುಂದಿದ್ದಾರೆ? ಬೆಳಗಿನ ಅವಧಿಯಲ್ಲಿ ಪೋಷಕರ ಸಭೆಯೂ ನಡೆದಿತ್ತು. ಕೆಲವು ಪೋಷಕರು ಹಿಂದೆ ಕುಳಿತಿದ್ದರಿಂದ ಇವರಿಗೆ ಮುಜುಗರ ಆಗುತ್ತಿರಬಹುದೆಂದು ಎಣಿಸಿ, ಮಕ್ಕಳಿಗೆ ಮಾತ್ರ ತರಗತಿ ಮುಂದುವರಿಸಿದರೂ ಬದಲಾವಣೆ ಕಂಡಿರಲಿಲ್ಲ. ಕಂಗೆಟ್ಟಂತೆ ಕುಳಿತ ಅವರ ವರ್ತನೆಗೆ ನಂತರದಲ್ಲಿ ಕಾರಣ ತಿಳಿದಾಗ ನಿಜಕ್ಕೂ ದಿಗ್ಭ್ರಮೆಯಾಗಿತ್ತು!

ಅರ್ಧವಾರ್ಷಿಕ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮುಗಿಸಿದ್ದ ಶಿಕ್ಷಕರು, ಪೋಷಕರ ಸಭೆಯಲ್ಲಿ ಮಕ್ಕಳನ್ನೂ ಕೂರಿಸಿಕೊಂಡು ಒಬ್ಬೊಬ್ಬರ ಅಂಕಪಟ್ಟಿಯನ್ನೂ ಜೋರಾಗಿ ಓದಿ ಹೇಳುತ್ತಾ ಹೆತ್ತವರ ಪ್ರತಿಕ್ರಿಯೆ ಕೇಳಿದ್ದರು. ಬಹುತೇಕ ವಿದ್ಯಾರ್ಥಿಗಳದ್ದು ಕಡಿಮೆ ಅಂಕಗಳ ಸಂಪಾದನೆ! ಬೈಸಿಕೊಳ್ಳುವುದರ ಜೊತೆಗೆ ಇದಕ್ಕೆ ಕಾರಣವನ್ನೂ ಕೊಡಬೇಕಿತ್ತು. ಪೋಷಕರಿಗೂ ಮುಖಭಂಗದ ಪರಿಸ್ಥಿತಿ!

ಬೆಳಿಗ್ಗೆ ತಾನೆ ನಡೆದ ಈ 'ಕೋರ್ಟ್ ಮಾರ್ಷಲ್' ಮಕ್ಕಳನ್ನು ಮಾನಸಿಕವಾಗಿ ಕುಗ್ಗಿಸಿತ್ತು. ಎಲ್ಲರ ಎದುರಿಗೆ ಆದ ಅವಮಾನದ ಜೊತೆಗೆ ಮನೆಯಲ್ಲೂ ಮೂದಲಿಕೆ ಕೇಳಬೇಕಾದ ಚಿಂತೆಯಿಂದ ಕಂಗಾಲಾಗಿದ್ದರು.

ಬಹಳಷ್ಟು ಶಾಲೆಗಳಲ್ಲಿ ಪೋಷಕರ ಸಭೆಯ ಪ್ರಮುಖ ಕಾರ್ಯಸೂಚಿಯೇ ಇದು, ಮಕ್ಕಳ ಕಲಿಕಾ ಸಾಮರ್ಥ್ಯದ ಬಹಿರಂಗ ಮೌಲ್ಯಮಾಪನ! ಮಗುವನ್ನು ಮಾತ್ರ ಎದುರಿಗೆ ಕೂರಿಸಿಕೊಂಡು ಶಿಕ್ಷಕರು ತುಂಬಾ ಖಾಸಗಿಯಾಗಿ ನಡೆಸಬೇಕಾದ ಈ ಪ್ರಕ್ರಿಯೆ ಒಂದರ್ಥದಲ್ಲಿ ಆಪ್ತಸಮಾಲೋಚನೆಯೇ. ಪ್ರೀತಿಯಿಂದ ಮಾತನಾಡಿಸುತ್ತಾ ಮನ ಗೆದ್ದು ಹಿನ್ನಡೆಗೆ ಕಾರಣ ಹೊರತೆಗೆಯಬೇಕು. ನಿಜ ಸಮಸ್ಯೆಯನ್ನು ಅರಿತಾಗ ತಿದ್ದುವುದು, ಪರಿಹಾರದ ಮಾರ್ಗ ತೋರುವುದು ಸುಲಭ. ಅಂಕಗಳು ಕಡಿಮೆ ಬಂದಾಗ, ಯಾಕಾಗಿ ಹೀಗಾಯ್ತು ಎಂಬುದನ್ನು ವಿವೇಚಿಸದೆ ನಿಂದಿಸುವುದು, ಹೋಲಿಕೆ ಮಾಡುವುದು ಎಳೆಯರ ಮಾನಸಿಕ ಸ್ವಾಸ್ಥ್ಯದ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ. ಸಣ್ಣ ಕಾರಣಕ್ಕೂ ತನ್ನನ್ನು ದೂಷಿಸುವ ಗುರುವಿನ ಮೇಲೆ ವಿದ್ಯಾರ್ಥಿಗೂ ದ್ವೇಷ ಬೆಳೆಯುತ್ತದೆ. ಪರಿಣಾಮ, ಆತ ಬೋಧಿಸುವ ವಿಷಯದ ಮೇಲೂ ಹಗೆತನ ಉಂಟಾಗಿ ಅಂಕ ಕಡಿಮೆಯಾಗುತ್ತದೆ.

ತರಗತಿಯಲ್ಲಾಗಲೀ ಸಭೆಯಲ್ಲಾಗಲೀ ಪೋಷಕರ ಮುಂದಾಗಲೀ ಮಕ್ಕಳನ್ನು ಶಿಕ್ಷಕರು ಅವಮಾನಿಸುವುದು, ಗದರುವುದು, ಹೊಡೆಯುವುದು ಮಕ್ಕಳ ಆತ್ಮಗೌರವಕ್ಕೆ ಧಕ್ಕೆ ತರುತ್ತದೆ. ಆತ್ಮ-ವಿಶ್ವಾಸಕ್ಕೆ ಪೆಟ್ಟು ಕೊಡುತ್ತದೆ. ತಮ್ಮ ಮೇಲೆಯೇ ಭರವಸೆ ಕಳೆದುಕೊಳ್ಳುವುದು ಕಲಿಕೆಗೆ ಮಾತ್ರವಲ್ಲದೆ ಸಮಗ್ರ ವ್ಯಕ್ತಿತ್ವ ವಿಕಸನಕ್ಕೂ ಬಾಧಕ. ಒಮ್ಮೆ ಸಾಮರ್ಥ್ಯದ ಕುರಿತು ಕೀಳರಿಮೆ ಬೆಳೆಸಿಕೊಂಡರೆ ಅದರಿಂದ ಹೊರಬರುವುದು ತುಂಬಾ ಕಷ್ಟ. ಸುಪ್ತ ಮನಸ್ಸಿನಲ್ಲಿ ದಾಖಲಾಗುವ ಇಂತಹ ಅವಮಾನಕಾರಿ ಘಟನೆಗಳು ಅಭ್ಯಾಸಕ್ಕೆ ಕುಳಿತಾಗಲೆಲ್ಲಾ ಮತ್ತೆ ಮತ್ತೆ ನೆನಪಾಗಿ, ಏಕಾಗ್ರತೆಯ ಜೊತೆಗೆ ಅರ್ಥೈಸಿಕೊಳ್ಳುವ ಸಾಮರ್ಥ್ಯಕ್ಕೂ ಅಡ್ಡಿ ತರುತ್ತವೆ.

ಸದಾ ಹೀಯಾಳಿಕೆಗೆ ಗುರಿಯಾಗುವ ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯವೇ ಇಷ್ಟು ಎಂದು ಭಂಡತನ ರೂಢಿಸಿಕೊಂಡು ಅಭ್ಯಾಸದಿಂದ ಪೂರ್ಣವಾಗಿ ವಿಮುಖರಾಗುವ ಸಂಭವ ಇರುತ್ತದೆ. ಸೂಕ್ಷ್ಮ ಮನಸ್ಸಿನವರು ತಮ್ಮ ಈ ದೌರ್ಬಲ್ಯದ ಬಗ್ಗೆ ಸದಾ ಕೊರಗುತ್ತಾ ಖಿನ್ನತೆಯತ್ತ ಜಾರಬಹುದು. ಇತ್ತ ಪೋಷಕರೂ ಕುಂಠಿತ ಪ್ರಗತಿಯ ಕಾರಣದಿಂದ ಅವಮಾನಿತರಾಗಿ, ತಮ್ಮ ಕೋಪವನ್ನು ಮಕ್ಕಳ ಮೇಲೆ ತೀರಿಸಿಕೊಳ್ಳುತ್ತಾರೆ. ಓದಲು ವಿಪರೀತ ಒತ್ತಡ ಹೇರುತ್ತಾರೆ. ಸದಾ ಕಿರಿಕಿರಿಯ ವಾತಾವರಣ ಎಳೆಯರ ಮೃದು ಮನಸ್ಸಿನ ಮೇಲೆ ತೀವ್ರ ಪರಿಣಾಮ ಬೀರುತ್ತದೆ.



ಕಲಿಕೆಯಲ್ಲಿ ಅನಾಸಕ್ತಿ ತೋರುವ ಮಕ್ಕಳಲ್ಲಿ ಆತ್ಮವಿಶ್ವಾಸ ತುಂಬಿದಾಗ ಮಾತ್ರ ಉತ್ತಮ ಪ್ರಗತಿ ನಿರೀಕ್ಷಿಸಬಹುದು. ತರಗತಿಯಲ್ಲಿ ತನ್ನನ್ನು ಶಿಕ್ಷಕರು ಗುರುತಿಸಬೇಕೆಂಬ ಹಂಬಲ ಪ್ರತಿ ಮಗುವಿನ ಬಯಕೆ. ಒಳ್ಳೆಯ ಕೆಲಸವನ್ನು ಅದು ಎಷ್ಟೇ ಸಣ್ಣಪುಟ್ಟದ್ದಿರಲಿ ಗುರುತಿಸಿ ಪ್ರಶಂಸಿಸುವುದರಿಂದ ಪ್ರೇರಣೆಯ ಟಾನಿಕ್ ಸಿಕ್ಕಂತಾಗುತ್ತದೆ. ಹುರುಪುಗೊಂಡ ಮಕ್ಕಳು ಮತ್ತಷ್ಟು ಪ್ರಯತ್ನಶೀಲರಾದಾಗ ಫಲಿತಾಂಶವೂ ಮೇಲೇರುತ್ತದೆ. ತಪ್ಪು ಉತ್ತರ ಕೊಟ್ಟಾಗ ಗದರದೆ, ಅವಮಾನಿಸದೆ, ಇವೆಲ್ಲವೂ ಈ ಹಂತದಲ್ಲಿ ಸಹಜವೆಂಬ ಭಾವ ಬಿತ್ತಿದರೆ ಹಿಂಜರಿಕೆ ಕಾಡದು.

ತರಗತಿಯ ಕೊಠಡಿಯೊಳಗೆ ನಕಾರಾತ್ಮಕ ಮಾತುಗಳಿಗೆ ಜಾಗ ಇರಬಾರದು. ಇದು ಸಾಧ್ಯ, ಖಂಡಿತಾ ಮಾಡಬಲ್ಲೆ ಎಂದು ಸದಾ ಸಕಾರಾತ್ಮಕವಾಗಿ ಹುರಿದುಂಬಿಸುವುದರಿಂದ ಎಳೆಯರ ಆತ್ಮವಿಶ್ವಾಸ ಉದ್ದೀಪನಗೊಂಡು ಸಾಧನೆ ತೋರಲು ಸಾಧ್ಯ.

ಹೌದು, ಪ್ರತಿ ಮಗುವೂ ವಿಭಿನ್ನ, ವಿಶಿಷ್ಟ. ಅನುವಂಶೀಯತೆ, ಬೆಳೆಯುವ ಪರಿಸರ, ಕಲಿಕಾ ಸಾಮರ್ಥ್ಯ, ಅಭಿರುಚಿ, ಗ್ರಹಿಕೆ, ಇಷ್ಟಾನಿಷ್ಟಗಳೂ ಭಿನ್ನ ಭಿನ್ನ. ಹಾಗಾಗಿ ಎಲ್ಲಾ ಮಕ್ಕಳನ್ನು ಒಂದೇ ತಕ್ಕಡಿಯಲ್ಲಿಟ್ಟು ತೂಗುವುದು ಖಂಡಿತಾ ಸಲ್ಲದು. ಮನ್ನಣೆ, ಪ್ರೋತ್ಸಾಹ, ಬೆಂಬಲ, ಪ್ರಶಂಸೆ, ಗೌರವಿಸುವುದು, ನಗುಮೊಗದ ತಿದ್ದುವಿಕೆ ಮಕ್ಕಳ ವ್ಯಕ್ತಿತ್ವದಲ್ಲಿ ಮಾಂತ್ರಿಕ ಬದಲಾವಣೆ ತರಬಲ್ಲದು.

ವಾಚಕರ ವಾಣಿ

ಸರ್ವರ್ ಕಿರಿಕಿರಿ: ಮಾರ್ಗೋಪಾಯ ಹುಡುಕಿ

ಪಡಿತರ ಚೀಟಿಯಲ್ಲಿ ಫಲಾನುಭವಿಗಳ ವಿವರಗಳ ತಿದ್ದುಪಡಿ, ಹೆಚ್ಚುವರಿ ಫಲಾನುಭವಿಗಳ ಹೆಸರು ಸೇರ್ಪಡೆ ಹಾಗೂ ಪಡಿತರ ವಿತರಣಾ ಕೇಂದ್ರ ಬದಲಾವಣೆ ಮಾಡಲು ರಾಜ್ಯ ಆಹಾರ ಇಲಾಖೆ ಇತ್ತೀಚೆಗೆ ಎರಡನೇ ಬಾರಿಗೆ ಬೆಂಗಳೂರು, ಕಲಬುರಗಿ ಹಾಗೂ ಬೆಳಗಾವಿ ವಲಯಗಳಿಗೆ ಪ್ರತ್ಯೇಕ ದಿನಾಂಕವನ್ನು ನಿಗದಿಗೊಳಿಸಿತ್ತು. ಆರಂಭದಿಂದ ನಿಗದಿತ ದಿನಾಂಕ ಮುಗಿಯುವವರೆಗೂ ವೃದ್ಧರು, ಮಹಿಳೆಯರು ಹಾಗೂ ಮಕ್ಕಳು ಸೇರಿದಂತೆ ಗ್ರಾಮ ಒನ್ ಕೇಂದ್ರಗಳ ಮುಂದೆ ಸುಡು ಬಿಸಿಲಿನಲ್ಲಿ ಸರತಿ ಸಾಲಿನಲ್ಲಿ ನಿಂತರೂ ಸರ್ವರ್ ಸಮಸ್ಯೆಯಿಂದ ಉದ್ದೇಶ ಈಡೇರಲಿಲ್ಲ. ಇದರಿಂದ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿನ ನಾಗರಿಕರು ತೀವ್ರ ತೊಂದರೆ ಅನುಭವಿಸಿದರು.

ಆರಂಭದಲ್ಲಿ ಬೆಂಗಳೂರು ವಲಯದಲ್ಲಿ ಮಾತ್ರ ಸರ್ವರ್ ತೊಡಕು ಉಂಟುಮಾಡಿರಲಿಲ್ಲ ಎಂಬುದು ಗಮನಾರ್ಹ. ಕೂಲಿನಾಲಿ ಮಾಡಿ ಹೊಟ್ಟೆ ತುಂಬಿಕೊಳ್ಳುವ ಬಡ ಕಾರ್ಮಿಕರು ತಮ್ಮ ದಿನನಿತ್ಯದ ಕೆಲಸ ಕಾರ್ಯಗಳನ್ನು ಬಿಟ್ಟು ಈ ಕೇಂದ್ರಗಳಿಗೆ ಎಡತಾಕಿದರೂ ಫಲ ಇಲ್ಲದಂತಾಗಿದೆ. ಇದರಿಂದ ಅವರು ರೋಸಿ ಹೋಗಿದ್ದಾರೆ. ಎಲ್ಲರಿಗೂ ತಲೆನೋವಾಗಿ ಪರಿಣಮಿಸಿರುವ ಸರ್ವರ್ ಕಿರಿಕಿರಿ ನಿವಾರಣೆಗೆ ಅಧಿಕಾರಿಗಳು ಸೂಕ್ತ ಮಾರ್ಗೋಪಾಯಗಳನ್ನು ಶೋಧಿಸಬೇಕು.

ಜಯವೀರ ಎ.ಕೆ., ಖೇಮಲಾಪುರ, ರಾಯಬಾಗ

ತಿರುಗುಬಾಣವಾದ ಪಕ್ಷಾಂತರ

ಲೋಕಸಭೆ ಚುನಾವಣೆಯ ಹೊಸ್ತಿಲಿನಲ್ಲಿ ರಾಜ್ಯದಲ್ಲಿ ನಡೆಯುತ್ತಿರುವ 'ಆಪರೇಷನ್ ಹಸ್ತ'ವು ಬಿಜೆಪಿ ನಾಯಕರಿಗೆ ತಲೆನೋವು ತಂದೊಡ್ಡಿದೆ ಎಂಬ ವರದಿಯು (ಪ್ರ.ವಾ., ಅ. 16) ಕಟುವಾಸ್ತವದಿಂದ ಕೂಡಿದೆ. ಇದಕ್ಕೆ ಕಾರಣ ಹಲವು. ಬಿಜೆಪಿ ಮುಖಂಡ ಬಿ.ಎಸ್.ಯಡಿಯೂರಪ್ಪ ಅವರಂಥ ಪ್ರಭಾವಿ ಸ್ಥಳೀಯ ಮುಖಂಡರನ್ನು ಮೂಲೆಗುಂಪು ಮಾಡಿ, ಎಲ್ಲಾ ರಾಜಕೀಯ ತೀರ್ಮಾನಗಳನ್ನು ದೆಹಲಿಯಿಂದಲೇ ತೆಗೆದುಕೊಳ್ಳಲು ಪ್ರಾರಂಭಿಸಿದ್ದು, ಸ್ಥಳೀಯ ಮುಖಂಡರ ಬೆನ್ನುಮೂಳೆ ಮುರಿಯಲೋ ಮತ್ತ್ಯಾವುದೋ ಕಾರಣಕ್ಕೆ, ವಿಧಾನಸಭಾ ಚುನಾವಣೆ ನಡೆದು ತಿಂಗಳುಗಳು ಕಳೆದರೂ ವಿರೋಧಪಕ್ಷದ ನಾಯಕನನ್ನು ನೇಮಿಸದೇ ಇರುವುದು ಬಿಜೆಪಿಯ ರಾಜ್ಯ ಘಟಕದಲ್ಲಿ ಅನಾಯಕತ್ವದ ಗೊಂದಲಕ್ಕೆ ಕಾರಣವಾಗಿದೆ.

ಕೇಂದ್ರದಲ್ಲಿ ಅಭೂತಪೂರ್ವ ಬಹುಮತದೊಂದಿಗೆ ಅಧಿಕಾರಕ್ಕೆ ಬಂದಿರುವ ಬಿಜೆಪಿ, ಪಕ್ಷಾಂತರ ನಿಷೇಧ ಕಾನೂನಿಗೆ ಬಲ ತುಂಬಬೇಕಿತ್ತು. ಪಕ್ಷಾಂತರಿಗಳು ಕನಿಷ್ಠ ಐದು ವರ್ಷಗಳ ಕಾಲ ಚುನಾವಣೆಗೆ ಸ್ಪರ್ಧಿಸಲು ಅವಕಾಶವಿಲ್ಲದಂತೆ ನಿಯಮ ರೂಪಿಸಬೇಕಿತ್ತು. ಆದರೆ ಏನೇನೋ ತಂತ್ರಗಾರಿಕೆ ಬಳಸಿ ಮಧ್ಯಪ್ರದೇಶ, ಕರ್ನಾಟಕ, ಮಹಾರಾಷ್ಟ್ರ ಸೇರಿದಂತೆ ಹಲವು ರಾಜ್ಯಗಳಲ್ಲಿ ಇತರ ಪಕ್ಷಗಳಿಂದ ಮುಖಂಡರನ್ನು ಕರೆತಂದು ಸರ್ಕಾರ ರಚಿಸಲು ಮುಂದಾಯಿತೇ ವಿನಾ ತನಗೊಂದು ದಿನ ಇದು ತಿರುಗುಬಾಣ ಆಗಬಹುದು ಎಂದು ಯೋಚಿಸಲಿಲ್ಲ. ಜೊತೆಗೆ, ಬಿಜೆಪಿಯಲ್ಲಿ ಸಂಘಪರಿವಾರದ ಹೆಸರಿನಲ್ಲಿ ತೆರೆಮರೆಯ ರಾಜಕೀಯ ಮಾಡುವವರ ಬಲ ಹೆಚ್ಚುತ್ತಾ ಹೋದುದು ಕೆಲವು ಶಾಸಕರು, ಮಾಜಿ ಶಾಸಕರಿಗೆ ಪಕ್ಷದ ಮೇಲಿನ ವಿಶ್ವಾಸ ಕುಂದಲು ಕಾರಣವಾಯಿತು ಎಂಬ ಮಾತು ಕೇಳಿಬರುತ್ತದೆ. ಜಗದೀಶ ಶೆಟ್ಟರ್ ಅವರಂತಹ ನಿಷ್ಠಾವಂತ ಕಾರ್ಯಕರ್ತರನ್ನು, ಅವರ ನಿಜವಾದ ಶಕ್ತಿಯನ್ನು ಅರಿಯದೆ ಮೂಲೆಗುಂಪು ಮಾಡಲೆತ್ನಿಸಿದ್ದು ದುಬಾರಿಯಾಗಿ ಪರಿಣಮಿಸಿದೆ ಎಂದರೆ ವಿಪರೀತವಾಗದು. ಇದೆಲ್ಲದರ ಫಲವಾಗಿ ಈಗ ಬಿಜೆಪಿಯ ಸ್ಥಿತಿ 'ಮಾಡಿದ್ದುಣ್ಣೋ ಮಹರಾಯ' ಎಂಬಂತಾಗಿದೆ.

ಎಂ.ಜಿ.ರಂಗಸ್ವಾಮಿ, ಹಿರಿಯೂರು

ಜಡತ್ವ ನಿವಾರಣೆಗೆ ಚುನಾವಣೆ ಪರಿಹಾರವಲ್ಲ

ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಘಟಕಗಳ ಅಧ್ಯಕ್ಷ ಸ್ಥಾನಕ್ಕೂ ಚುನಾವಣೆ ನಡೆಯಲಿ ಎಂದಿದ್ದಾರೆ ವೆಂಕಟೇಶ ಬೈಲೂರು (ವಾ.ವಾ., ಅ. 16). ಅವರು ಎತ್ತಿರುವ ಆಕ್ಷೇಪಗಳಿಗೆ ಅಥವಾ ಕಸಾಪವನ್ನು ಆವರಿಸಿರುವ ಜಡತ್ವಕ್ಕೆ ಚುನಾವಣೆಯು ಪರಿಹಾರ ಅಲ್ಲವೇ ಅಲ್ಲ. ಪರಿಷತ್ತಿನ ಇತಿಹಾಸವನ್ನು ಗಮನಿಸಿದರೆ, ಮೊದಲೆಲ್ಲ ಜಿಲ್ಲಾ ಘಟಕಗಳಿಗೂ ಚುನಾವಣೆ ಇರಲಿಲ್ಲ ಎಂಬುದನ್ನು ನಾವು ಗಮನಿಸಬೇಕು. ಆದರೆ ಆಗಲೂ ಕನ್ನಡದ ಅತ್ಯುತ್ತಮ ಕೆಲಸ ಕಾರ್ಯಗಳಾಗಲಿಲ್ಲವೇ? ಆಗಿವೆ. ಅಂದರೆ ಏನರ್ಥ? ನಂತರ ಜಿಲ್ಲಾ ಘಟಕಗಳಿಗೆ ಚುನಾವಣೆ ಏರ್ಪಟ್ಟಾಗ, ಅಲ್ಲಿ ಪಾಳೆಗಾರಿಕೆ, ಜಾತಿ, ಹಣದಂತಹ ನಕಾರಾತ್ಮಕ ಅಂಶಗಳು ಪರಿಣಾಮ ಬೀರಿರುವುದನ್ನು ಕಾಣುತ್ತೇವೆ. ಈಗಲೂ ಕಸಾಪ ಚುನಾವಣೆಯಲ್ಲಿ ಅದು ಮುಂದುವರಿದೇ ಇದೆಯಲ್ಲವೆ?

ಕಸಾಪ ಜಿಲ್ಲಾ ಮತ್ತು ತಾಲ್ಲೂಕು ಘಟಕಗಳಿಗೆ ಅನೇಕ ಕಡೆ ಸ್ವಂತ ಕಟ್ಟಡಗಳಿವೆ. ಅಲ್ಲಿ ಸಾಹಿತ್ಯದ ಕಾರ್ಯಕ್ರಮವಿರಲಿ ದೈನಂದಿನ ಸ್ವಚ್ಛತೆಯನ್ನು ಸಹ ಕಾಪಾಡುವವರೇ ಇಲ್ಲದಂತಾಗಿದೆ. ಅನೇಕ ಕಟ್ಟಡಗಳಿಗೆ ಬೀಗ ಹಾಕಲಾಗಿದೆ. ಕಸಾಪ ಇಂದು ಲಕ್ಷಾಂತರ ಸದಸ್ಯರನ್ನು ಹೊಂದಿರುವ ಬೃಹತ್ ಸಂಸ್ಥೆ. ಆದರೆ ಅದು ಸಾಮಾನ್ಯ ಸದಸ್ಯರೊಂದಿಗೆ ಸಂಪರ್ಕ ಸಾಧಿಸಲು 'ಕನ್ನಡ ನುಡಿ' ಪತ್ರಿಕೆ ಮತ್ತು ಸಾಹಿತ್ಯ ಸಮ್ಮೇಳನದ 'ಆಮಂತ್ರಣ ಪತ್ರಿಕೆ'ಗಳನ್ನು ಸಹ ಕಳಿಸುವುದಿಲ್ಲ. ಇದಕ್ಕೆಲ್ಲ ಹಣಕಾಸಿನ ಸಮಸ್ಯೆಯೇನೂ ಇಲ್ಲ. ಹಾಗಾಗಿ, ಚುನಾವಣೆಗಿಂತ ಮಿಗಿಲಾಗಿ, ಕೇಂದ್ರದಿಂದ ಹಿಡಿದು ಜಿಲ್ಲಾ ಮತ್ತು ತಾಲ್ಲೂಕು ಘಟಕಗಳವರೆಗೆ ಕನ್ನಡದ ಕೈಂಕರ್ಯವನ್ನು ಮುನ್ನಡೆಸಬಲ್ಲ ವ್ಯಕ್ತಿಗಳು ಬೇಕೇ ವಿನಾ ಅಧಿಕಾರಶಾಹಿ ಮನೋಭಾವದವರಲ್ಲ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಅಚಾತುರ್ಯಕ್ಕೆ ಅಸಹನೆಯೇ ಕಾರಣ

ಮೊಳಕಾಲ್ಮುರು ಪಟ್ಟಣದಲ್ಲಿ, ಟಿ.ವಿ. ರಿಮೋಟ್‌ಗಾಗಿ ಇಬ್ಬರು ಮಕ್ಕಳ ಮಧ್ಯೆ ನಡೆದ ಗಲಾಟೆಯಿಂದ ಸಿಟ್ಟಿಗೆದ್ದ ತಂದೆ ಬೀಸಿ ಎಸೆದ ಕತ್ತರಿಯು ಮಗನನ್ನು ಬಲಿ ಪಡೆದಿರುವ ಅತ್ಯಂತ ನೋವಿನ ಪ್ರಕರಣವೊಂದು ವರದಿಯಾಗಿದೆ (ಪ್ರ.ವಾ., ಅ. 16). ಒಂದು ಕ್ಷಣದ ಕೋಪ ಇಡೀ ಕುಟುಂಬವನ್ನು ಶಾಶ್ವತವಾಗಿ ನೋವಿನ ಪ್ರಪಾತಕ್ಕೆ ನೂಕಿರುವುದನ್ನು ನೋಡಿದರೆ, ತಾಳ್ಮೆಯ ಮಹತ್ವ ಎಂಥದ್ದು ಎಂಬುದು ಅರ್ಥವಾಗುತ್ತದೆ. ಆ ಕುಟುಂಬದ ಯಜಮಾನನ ಅಶಾಂತ ಮನಃಸ್ಥಿತಿಗೆ ಆತನ ಅನಾರೋಗ್ಯ ಮತ್ತು ಕುಟುಂಬದ ಬಡತನವೂ ಕಾರಣವಾಗಿದೆ. ಸಮಾಜದಲ್ಲಿ ಮತ್ತು ಕುಟುಂಬಗಳಲ್ಲಿ ಸ್ವಾರ್ಥ, ಅಸಹನೆಯ ವಾತಾವರಣ ತುಂಬಿತುಳುಕುತ್ತಿದೆ. ಬೇರೆಯವರ ಸುಖದಲ್ಲಿ ತನ್ನ ಸುಖ ಅಡಗಿದೆ ಎಂಬ ಮನಃಸ್ಥಿತಿಗೆ ತಿಲಾಂಜಲಿ ಕೊಟ್ಟಿರುವುದರ ಫಲವೇ ಇಂಥ ಅಚಾತುರ್ಯಗಳಿಗೆ ಮುಖ್ಯ ಕಾರಣ. ಈ ಬಗೆಯ ಮನಃಸ್ಥಿತಿ ಶಿಕ್ಷಣ ಕ್ರಮದಲ್ಲಾಗಲೀ ಹಿರಿಯರ ನಡವಳಿಕೆಯಿಂದಾಗಲೀ ಮಕ್ಕಳಿಗೆ ದೊರೆಯುತ್ತಿಲ್ಲ ಎಂಬುದನ್ನು ವಿಷಾದದಿಂದ ಹೇಳಬೇಕಿದೆ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಹಮಾಸ್–ಇಸ್ರೇಲ್ ಸಂಘರ್ಷ

ಯುದ್ಧ ಮುಂದುವರಿದರೆ ಭಾರತಕ್ಕೂ ನಷ್ಟ

ಇಸ್ರೇಲ್–ಹಮಾಸ್ ಬಂಡುಕೋರರ ನಡುವಣ ಯುದ್ಧವು ಭಾರತದ ಮೇಲೆ ಪರಿಣಾಮ ಬೀರುತ್ತದೆಯೇ ಎಂಬುದು ಈ ಹೊತ್ತಿನ ಪ್ರಶ್ನೆಗಳಲ್ಲಿ ಒಂದು. ಭಾರತವು ರಕ್ಷಣೆ, ತಂತ್ರಜ್ಞಾನ, ಕೃಷಿ ಸೇರಿ ಹಲವು ಕ್ಷೇತ್ರಗಳಲ್ಲಿ ಇಸ್ರೇಲ್‌ನೊಂದಿಗೆ ದೊಡ್ಡಮಟ್ಟದ ವಾಣಿಜ್ಯ ಸಂಬಂಧ ಹೊಂದಿದೆ. ಇಸ್ರೇಲ್ ಯುದ್ಧ ಘೋಷಿಸಿ 10 ದಿನಗಳಷ್ಟೇ ಕಳೆದಿರುವ ಕಾರಣ, ಜಗತ್ತಿನ ಯಾವ ದೇಶದ ಮೇಲೂ ಅದರ ಪರಿಣಾಮ ತಕ್ಷಣಕ್ಕೆ ಗೊತ್ತಾಗುತ್ತಿಲ್ಲ. ಭಾರತವೂ ಇದಕ್ಕೆ ಹೊರತಲ್ಲ. ಯುದ್ಧ ದೀರ್ಘಾವಧಿಯವರೆಗೆ ಮುಂದುವರಿದರೆ ಖಂಡಿತವಾಗಿಯೂ ಅದು ಭಾರತದ ಆರ್ಥಿಕ ಚಟುವಟಿಕೆಗಳ ಮೇಲೆ ಪರಿಣಾಮ ಬೀರುತ್ತದೆ ಎಂದು ಅಂದಾಜಿಸಲಾಗಿದೆ

ಇಸ್ರೇಲ್‌ನ ಹೈಫಾ ಬಂದರಿನಲ್ಲಿ ಹಲವು ದಿನಗಳಿಂದ ಲಂಗರು ಹಾಕಿದ್ದ ಐಷಾರಾಮಿ ಕ್ರೂಸ್ ಹಡಗು, ನಿಗದಿತ ಅವಧಿಗಿಂತ ಹಲವು ದಿನ ಮೊದಲೇ ಸೋಮವಾರ ಇಸ್ರೇಲ್‌ನಿಂದ ಹೊರಟಿತು. ಈ ಬಂದರು ಭಾರತದ ಅದಾನಿ ಸಮೂಹದ ಕಂಪನಿಯ ಒಡೆತನದಲ್ಲಿದೆ. ಯುದ್ಧದ ಕಾರಣದಿಂದ ಪ್ರವಾಸೋದ್ಯಮಕ್ಕೆ ಧಕ್ಕೆಯಾದರೆ, ಭಾರತದ ಕಂಪನಿಗಳ ಆದಾಯವೂ ನಷ್ಟವಾಗಲಿದೆ –ಎಎಫ್‌ಪಿ ಚಿತ್ರ

ಪ್ರಜಾವಾಣಿ ವಾರ್ತೆ

ವ್ಯಾಪಾರ ವಹಿವಾಟಿನ ವಿಚಾರದಲ್ಲಿ ಭಾರತ ಮತ್ತು ಇಸ್ರೇಲ್‌ನ ಸಂಬಂಧ ತೀರಾ ಹಳೆಯೇನು ಅಲ್ಲ. 90ರ ದಶಕದಲ್ಲಿ ಭಾರತವು ಉದಾರೀಕರಣ ಮತ್ತು ಜಾಗತೀಕರಣಕ್ಕೆ ತೆರೆದುಕೊಂಡಾಗಷ್ಟೇ ಇಸ್ರೇಲ್‌ನೊಂದಿಗೆ ಗಣನೀಯ ಮಟ್ಟದ ವಾಣಿಜ್ಯ ಸಂಬಂಧ ಬೆಳೆದದ್ದು. ನಂತರದ ವರ್ಷಗಳಲ್ಲಿ ಆ ಸಂಬಂಧ ಗಟ್ಟಿಯಾಗುತ್ತಲೇ ಹೋಗಿದೆ. ಈಗ ಭಾರತವು ಹತ್ತು ಹಲವು ಕ್ಷೇತ್ರಗಳಲ್ಲಿ ಇಸ್ರೇಲ್‌ನೊಟ್ಟಿಗೆ ವಾಣಿಜ್ಯ ಸಂಬಂಧವನ್ನು ಹೊಂದಿದೆ. ಭಾರತದ ಹಲವು ಐಟಿ ಕಂಪನಿಗಳು, ಭಾರತೀಯ ಸ್ಟೇಟ್ ಬ್ಯಾಂಕ್, ಕೈಗಾರಿಕೆಗಳು ಇಸ್ರೇಲ್‌ನಲ್ಲಿ ಕಾರ್ಯನಿರ್ವಹಿಸುತ್ತಿವೆ. ಭಾರತವು ಇಸ್ರೇಲ್‌ನಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೌಲ್ಯಕ್ಕಿಂತ, ಭಾರತವು ಇಸ್ರೇಲ್‌ಗೆ ರಫ್ತು ಮಾಡುವ ಸರಕು ಮತ್ತು ಸೇವೆಗಳ ಮೌಲ್ಯ ಹೆಚ್ಚು.

ಇಸ್ರೇಲ್‌ನಲ್ಲಿ ಭಾರತದ ಹಲವು ಕಂಪನಿಗಳು ಕಾರ್ಯನಿರ್ವಹಿಸುತ್ತಿವೆ. ಈ ಕಂಪನಿಗಳಲ್ಲಿ ಸಾವಿರಾರು ಭಾರತೀಯರು ಇಸ್ರೇಲ್‌ನಲ್ಲಿ ನೆಲೆಸಿದ್ದಾರೆ. ಅಕ್ಟೋಬರ್ ಆರಂಭದ ವೇಳೆಗೆ ಇಸ್ರೇಲ್‌ನಲ್ಲಿದ್ದ ಭಾರತೀಯರ ಸಂಖ್ಯೆ ಅಂದಾಜು 20,000. ಅವರನ್ನು ಸುರಕ್ಷಿತವಾಗಿ ಕರೆ ತರಲು ಭಾರತ ಸರ್ಕಾರವು 'ಆಪರೇಷನ್ ಅಜಯ್' ಅನ್ನು ಆರಂಭಿಸಿದೆ. ಈ ಎಲ್ಲಾ ಭಾರತೀಯರು ಇಸ್ರೇಲ್‌ನಿಂದ ಹೊರಗೆ ಬಂದರೆ, ಅವರು ಮಾಡುತ್ತಿದ್ದ ಕೆಲಸ ಬಾಕಿಯಾಗುವ ಸಾಧ್ಯತೆ ಇರುತ್ತದೆ. ಕೆಲವು ಕಂಪನಿಗಳೇ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿವೆ. ಇವು ವೇತನ ಕಡಿತಕ್ಕೆ ಅಥವಾ ವೇತನ ನಷ್ಟಕ್ಕೆ ಕಾರಣವಾಗಬಹುದು. ಇಸ್ರೇಲ್‌ನ ಕೃಷಿ ತಂತ್ರಜ್ಞಾನ ಅಧ್ಯಯನಕ್ಕೆ ಭಾರತದಿಂದ ರೈತರು, ಅಧಿಕಾರಿಗಳನ್ನು ಕಳುಹಿಸಲಾಗುತ್ತದೆ. ಯುದ್ಧದ ಕಾರಣದಿಂದ ಈ ಅಧ್ಯಯನ ಪ್ರವಾಸಕ್ಕೆ ಹಿನ್ನಡೆಯಾಗಬಹುದು ಎಂದು ನಿರೀಕ್ಷಿಸಲಾಗಿದೆ.

ಅತೀಅಗತ್ಯದ ಸರಕು ಮತ್ತು ಸೇವೆಗಳಿಗಾಗಿ ಭಾರತವು ಇಸ್ರೇಲ್ ಅನ್ನು ಅವಲಂಬಿಸಿರುವುದಕ್ಕಿಂತ, ಇಸ್ರೇಲ್ ಭಾರತವನ್ನು ಹೆಚ್ಚು ಅವಲಂಬಿಸಿದೆ. ಭಾರತವು ಇಸ್ರೇಲ್‌ಗೆ ರಫ್ತು ಮಾಡುವ ಸರಕುಗಳಲ್ಲಿ, ಹಲವು ಸರಕುಗಳು ಗುಡಿ ಕೈಗಾರಿಕೆಗಳು ಮತ್ತು ಸಣ್ಣ ಕೈಗಾರಿಕೆಗಳಲ್ಲಿ ತಯಾರಾಗುತ್ತವೆ. ಯುದ್ಧ ಮುಂದುವರಿದರು, ಅಂತಹ ಸರಕುಗಳಿಗೆ ಬೇಡಿಕೆ ಕುಸಿದರೆ ಈ ಕೈಗಾರಿಕೆಗಳ ವಹಿವಾಟು ಕುಸಿಯುತ್ತದೆ. ಅಂತಿಮವಾಗಿ ಇದು ಆ ಕೈಗಾರಿಕೆಗಳಲ್ಲಿ ಉದ್ಯೋಗಿಗಳಾಗಿರುವ ಜನರ ಉದ್ಯೋಗವನ್ನು ಕಸಿದುಕೊಳ್ಳಬಹುದು. ಆದರೆ, ಅಂತಹ ಸಾಧ್ಯತೆ ತೀರಾ ಕಡಿಮೆ ಎಂದು ತಜ್ಞರು ಅಂದಾಜಿಸಿದ್ದಾರೆ.

ದಕ್ಷಿಣ ಭಾರತದ ಕೈಗಾರಿಕಾ ಕೇಂದ್ರಗಳಲ್ಲಿನ ಗಾರ್ಮೆಂಟ್‌ಗಳಲ್ಲಿ (ಸಿದ್ಧಉಡುಪು ಕಾರ್ಖಾನೆಗಳು) ತಯಾರಾಗುವ ಹತ್ತಿಯ ಬಟ್ಟೆಗಳಿಗೆ ಇಸ್ರೇಲ್ ದೊಡ್ಡ ಮಾರುಕಟ್ಟೆಗಳಲ್ಲಿ ಒಂದು. ಕಳೆದ ಕೆಲವು ವರ್ಷಗಳಿಂದ ಭಾರತದಿಂದ ಇಸ್ರೇಲ್‌ಗೆ ರಫ್ತಾಗುವ ಹತ್ತಿಯ ಬಟ್ಟೆಗಳ ಪ್ರಮಾಣ ಕಡಿಮೆಯಾಗಿದೆ. ಯುದ್ಧ ಮುಂದುವರಿದರೆ ಅದು ಇನ್ನಷ್ಟು ಕಡಿಮೆಯಾಗುವ ಅಪಾಯವಿದೆ. 2021–22ರಲ್ಲಿ ಭಾರತದಿಂದ ಇಸ್ರೇಲ್‌ಗೆ ₹250 ಕೋಟಿ ಮೌಲ್ಯದ ಹತ್ತಿಯ ಬಟ್ಟೆಗಳು ರಫ್ತಾಗಿದ್ದವು. 2022–23ರಲ್ಲಿ ಅದು ₹210 ಕೋಟಿಗೆ ಕುಸಿದಿತ್ತು. ಈಗ ಅದು ಇನ್ನಷ್ಟು ಕುಸಿಯುವ ಅಪಾಯವಿದೆ ಎಂದು ನಿರೀಕ್ಷಿಸಲಾಗಿದೆ.

ಭಾರತದ ಟಿಸಿಎಸ್, ವಿಪ್ರೊ, ಇನ್ಫೊಸಿಸ್ ಸೇರಿ ಹಲವು ಮಾಹಿತಿ ತಂತ್ರಜ್ಞಾನ ಕಂಪನಿಗಳು ಇಸ್ರೇಲ್‌ನಲ್ಲಿ ಕಾರ್ಯನಿರ್ವಹಿಸುತ್ತಿವೆ. ಅಲ್ಲಿ ಕಾರ್ಯನಿರ್ವಹಿಸುತ್ತಿರುವ ಅಮೆರಿಕದ ಕೆಲವು ಕಂಪನಿಗಳು ಈಗಾಗಲೇ ತಮ್ಮ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಬೇರೆಡೆಗೆ ಸ್ಥಳಾಂತರಿಸಿವೆ. ಯುದ್ಧ ತೀವ್ರವಾದರೆ ಭಾರತದ ಕಂಪನಿಗಳೂ ಇದೇ ಹಾದಿ ಹಿಡಿಯಬೇಕಾಗಬಹುದು. ಹಾಗೆ ಆದರೂ ಅದು ಕಾರ್ಯಾಚರಣೆ ವೆಚ್ಚವನ್ನು ಹೆಚ್ಚಿಸಬಹುದೇ ಹೊರತು, ತೀವ್ರ ನಷ್ಟವಾಗುವ ಸಾಧ್ಯತೆ ಕಡಿಮೆ ಎಂದು ಅಂದಾಜಿಸಲಾಗಿದೆ.

ಡೀಸೆಲ್ ರಫ್ತಿಗೆ ಗ್ರಹಣ?

ಭಾರತದಿಂದ ಇಸ್ರೇಲ್‌ಗೆ ರಫ್ತಾಗುವ ಸರಕುಗಳಲ್ಲಿ ಸಿಂಹಪಾಲು ಡೀಸೆಲ್ ಮತ್ತು ಪೆಟ್ರೋಲಿಯಂ ಉತ್ಪನ್ನಗಳದ್ದು. 2022–23ರಲ್ಲಿ ಭಾರತದಿಂದ ಇಸ್ರೇಲ್‌ಗೆ ರಫ್ತಾದ ಸರಕುಗಳ ಮೌಲ್ಯ ₹68,277 ಕೋಟಿ. ಇದರಲ್ಲಿ ಡೀಸೆಲ್ ಮತ್ತು ಸಂಸ್ಕರಿಸಿದ ಪೆಟ್ರೋಲಿಯಂ ಉತ್ಪನ್ನಗಳ ಮೌಲ್ಯವೇ ₹44,620 ಕೋಟಿಯಷ್ಟಾಗುತ್ತದೆ. ಇದು ಇಸ್ರೇಲ್‌ಗೆ ಭಾರತವು ರಫ್ತು ಮಾಡಿದ ಒಟ್ಟು ಸರಕುಗಳ ಮೌಲ್ಯದ ಶೇ 65ರಷ್ಟಾಗುತ್ತದೆ. 2021–22ರಲ್ಲಿ ಇಸ್ರೇಲ್ ಭಾರತದಿಂದ ಆಮದು ಮಾಡಿಕೊಂಡ ಡೀಸೆಲ್ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಮೌಲ್ಯ ₹12,143 ಕೋಟಿ ಮಾತ್ರ.

ಭಾರತವು ಜಾಗತಿಕ ಮಾರುಕಟ್ಟೆ ದರಕ್ಕಿಂತ ಕಡಿಮೆ ದರದಲ್ಲಿ ರಷ್ಯಾದಿಂದ ಕಚ್ಚಾತೈಲವನ್ನು ಆಮದು ಮಾಡಿಕೊಳ್ಳುತ್ತಿದೆ. ಭಾರತದ ಕೆಲವು ಖಾಸಗಿ ತೈಲ ಸಂಸ್ಕರಣ ಕಂಪನಿಗಳು ರಷ್ಯಾದಿಂದ ಕಚ್ಚಾತೈಲವನ್ನು ಕಡಿಮೆ ದರಕ್ಕೆ ಖರೀದಿಸಿ, ಮಧ್ಯಪ್ರಾಚ್ಯದ ಕೆಲವು ದೇಶಗಳಿಗೆ ಮತ್ತು ಐರೋಪ್ಯ ದೇಶಗಳಿಗೆ ಸಂಸ್ಕರಿಸಿದ ಪೆಟ್ರೋಲಿಯಂ ಉತ್ಪನ್ನಗಳನ್ನು ರಫ್ತು ಮಾಡುತ್ತವೆ. ಹೀಗಾಗಿಯೇ 2022–23ರಲ್ಲಿ ಮತ್ತು ಈ ಆರ್ಥಿಕ ವರ್ಷದಲ್ಲೂ ಇಸ್ರೇಲ್‌ಗೆ ಹೆಚ್ಚಿನ ಪ್ರಮಾಣದ ಡೀಸೆಲ್ ಮತ್ತು ಪೆಟ್ರೋಲಿಯಂ ಉತ್ಪನ್ನಗಳನ್ನು ಭಾರತವು ರಫ್ತು ಮಾಡಲು ಸಾಧ್ಯವಾಗಿದೆ.

ಈಗ ಯುದ್ಧದ ಕಾರಣದಿಂದ ಈ ಉತ್ಪನ್ನಗಳ ಪೂರೈಕೆಗೆ ತೊಡಕಾಗುವ ಸಂಭವವಿದೆ. ಭಾರತದಿಂದ ಇಸ್ರೇಲ್‌ಗೆ ಭೂಮಾರ್ಗದಲ್ಲಿ ಮತ್ತು ಸಮುದ್ರಮಾರ್ಗದಲ್ಲಿ ಈ ಉತ್ಪನ್ನಗಳನ್ನು ಸಾಗಿಸಲು ಹೆಚ್ಚಿನ ಮೊತ್ತದ ವಿಮೆಯನ್ನು ಮಾಡಿಸಬೇಕಾಗುತ್ತದೆ. ಇದರಿಂದ ಇಸ್ರೇಲ್‌ಗೆ ರಫ್ತಾಗುವ ತೈಲೋತ್ಪನ್ನಗಳ ಬೆಲೆ ಏರಿಕೆಯಾಗಲಿದೆ. ಆ ಕಾರಣದಿಂದ ಇಸ್ರೇಲ್ ಭಾರತದ ತೈಲೋತ್ಪನ್ನಗಳನ್ನು ಖರೀದಿಸಲು ಹಿಂದೇಟು ಹಾಕಬಹುದು. ಇದು ಭಾರತದ ರಫ್ತು ಪ್ರಮಾಣವು ಕಡಿಮೆಯಾಗುವ ಸಾಧ್ಯತೆ ಇದೆ ಎಂದು ಅಂದಾಜಿಸಲಾಗಿದೆ.

ಹರಳು, ವಜ್ರ ಹೊಳಪಿಗೆ ಕುಂದು?

ವಿಶ್ವದಲ್ಲಿ ಹರಳು ಮತ್ತು ವಜ್ರಗಳಿಗೆ ಹೊಳಪು ನೀಡುವ ಉದ್ಯಮವು ಕೇಂದ್ರಿತವಾಗಿರುವುದು ಗುಜರಾತ್‌ನ ಸೂರತ್‌ನಲ್ಲಿ. ವಿಶ್ವದ, ಹರಳು ಮತ್ತು ವಜ್ರಗಳಿಗೆ ಹೊಳಪು ನೀಡುವ ಶೇ 90ರಷ್ಟು ಕೆಲಸಗಳು ನಡೆಯುವುದು ಸೂರತ್‌ನಲ್ಲಿಯೇ. ಆದರೆ, ಸೂರತ್‌ನ ಈ ಉದ್ಯಮವು ಕಚ್ಚಾ ಹರಳು ಮತ್ತು ವಜ್ರಗಳಿಗಾಗಿ ಅವಲಂಬಿಸಿರುವುದು ಇಸ್ರೇಲ್ ಅನ್ನು. ಹೀಗೆ ಹೊಳಪು ನೀಡಲಾದ ಉತ್ಪನ್ನಗಳನ್ನೂ ಭಾರತವು ಇಸ್ರೇಲ್‌ಗೆ ರಫ್ತು ಮಾಡುತ್ತದೆ.

ಭಾರತದಿಂದ ಇಸ್ರೇಲ್‌ಗೆ ರಫ್ತಾಗುವ ಸರಕಿನ ಒಟ್ಟು ಮೌಲ್ಯದಲ್ಲಿ ಹೊಳಪು ನೀಡಲಾದ ಹರಳು ಮತ್ತು ವಜ್ರಗಳ ಮೌಲ್ಯದ ಪ್ರಮಾಣ ಶೇ 17ಕ್ಕಿಂತಲೂ ಹೆಚ್ಚು. ಯುದ್ಧದ ಕಾರಣದಿಂದ ಕಚ್ಚಾ ಹರಳು ಮತ್ತು ವಜ್ರಗಳ ಪೂರೈಕೆಯಲ್ಲಿ ತೊಡಕಾಗಬಹುದು ಮತ್ತು ಹೊಳಪು ನೀಡಲಾದ ಉತ್ಪನ್ನಗಳ ರಫ್ತಿಗೂ ತೊಡಕಾಬಹುದು ಎಂದು ನಿರೀಕ್ಷಿಸಲಾಗಿದೆ.

'ಹೊಳಪು ನೀಡುವ ಉದ್ಯಮಕ್ಕೆ ಹಲವು ವಾರಗಳಿಗೆ ಬೇಕಾಗುವಷ್ಟು ಕಚ್ಚಾ ಹರಳು ಮತ್ತು ವಜ್ರಗಳ ದಾಸ್ತಾನು ಈಗಾಗಲೇ ಸೂರತ್‌ನಲ್ಲಿ ಇದೆ. ಹೀಗಾಗಿ ಯುದ್ಧವು ತಕ್ಷಣಕ್ಕೆ ದೊಡ್ಡ ಪ್ರಮಾಣದ ಹೊಡೆತವನ್ನೇನೂ ನೀಡಿಲ್ಲ. ಆದರೆ, ಯುದ್ಧ ಮುಂದುವರಿದರೆ ಪೂರೈಕೆ ಮತ್ತು ಬೇಡಿಕೆ ಎರಡಕ್ಕೂ ಧಕ್ಕೆಯಾಗಬಹುದು' ಎಂದು ಸೂರತ್‌ನ ವಜ್ರ ಸಂಸ್ಕರಣ ಉದ್ಯಮಿಗಳ ಸಂಘಟನೆ ಹೇಳಿದೆ.

ಔಷಧ ಕ್ಷೇತ್ರ

ಔಷಧ ಕ್ಷೇತ್ರದಲ್ಲಿ ಭಾರತವು ಇಸ್ರೇಲ್‌ಗೆ ಅತ್ಯಂತ ದೊಡ್ಡ ರಫ್ತುದಾರ ದೇಶವೇನಲ್ಲ. ಆದರೆ, ಇತ್ತೀಚಿನ ವರ್ಷಗಳಲ್ಲಿ ಭಾರತವು ಇಸ್ರೇಲ್‌ಗೆ ಹೆಚ್ಚಿನ ಸಂಖ್ಯೆಯಲ್ಲಿ ಔಷಧಗಳನ್ನು ರಫ್ತು ಮಾಡುತ್ತಿದೆ. 2021–22ನೇ ಆರ್ಥಿಕ ವರ್ಷದಲ್ಲಿ ಭಾರತವು 60 ಮಿಲಿಯನ್ ಡಾಲರ್ (ಅಂದಾಜು ₹500 ಕೋಟಿ) ಮೌಲ್ಯದ ಔಷಧಗಳನ್ನು ರಫ್ತು ಮಾಡುತ್ತಿತ್ತು. 2022–23ರ ಹೊತ್ತಿಗೆ ಔಷಧಗಳ ರಫ್ತಿನಲ್ಲಿ ಶೇ 40ರಷ್ಟು ಏರಿಕೆ ಕಂಡಿತ್ತು. ಆಗ ಭಾರತವು 92 ಮಿಲಿಯನ್ ಡಾಲರ್ (ಅಂದಾಜು ₹765 ಕೋಟಿ) ಮೌಲ್ಯದ ಔಷಧಗಳನ್ನು ಇಸ್ರೇಲ್‌ಗೆ ರಫ್ತು ಮಾಡಿತ್ತು. ಇಸ್ರೇಲ್‌ನಲ್ಲಿರುವ ಹಲವು ಔಷಧ ಕಂಪನಿಗಳ ಜೊತೆಯಲ್ಲಿ ಭಾರತ ಔಷಧ ತಯಾರಕ ಕಂಪನಿಗಳು ಸಹಭಾಗಿತ್ವ ಹೊಂದಿವೆ.

'ಇಲ್ಲಿಯವರೆಗೆ ಭಾರತದ ಔಷಧ ಕ್ಷೇತ್ರಕ್ಕೆ ಯಾವುದೇ ತೊಡಕಾಗಿಲ್ಲ. ಪ್ಯಾಲೇಸ್ಟೇನ್‌ಗೆ ಭಾರತವು ಹೇಳಿಕೊಳ್ಳುವ ಮಟ್ಟಿಗೆ ಔಷಧಿಗಳನ್ನು ಮಾರಾಟ ಮಾಡುತ್ತಿಲ್ಲ. ಈ ಕಾರಣಕ್ಕಾಗಿ ಇಲ್ಲಿಯವರೆಗಿನ ಯುದ್ಧದಿಂದ ಯಾವುದೇ ತೊಂದರೆ ಆಗಿಲ್ಲ' ಎಂದು ಭಾರತದ ಔಷಧೀಯ ಉತ್ಪನ್ನಗಳ ರಫ್ತು ಉತ್ತೇಜನ ಮಂಡಳಿಯ ಮಹಾನಿರ್ದೇಶಕ ಆರ್. ಉದಯ್ ಭಾಸ್ಕರ್ ಅವರು ಹಲವು ಪತ್ರಿಕೆಗಳಿಗೆ ಹೇಳಿಕೆ ನೀಡಿದ್ದಾರೆ.

ರಕ್ಷಣಾ ಕ್ಷೇತ್ರಕ್ಕೆ ತೊಡಕು?

ಭಾರತದ ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ರಷ್ಯಾ ಹಾಗೂ ಇಸ್ರೇಲ್ ಎರಡು ಪ್ರಮುಖ ದೇಶಗಳಾಗಿವೆ. ಈ ದೇಶಗಳಿಂದಲೇ ಭಾರತವು ಹಲವು ಮುಖ್ಯ ರಕ್ಷಣಾ ಸಾಮಗ್ರಿಗಳನ್ನು ಖರೀದಿಸುತ್ತದೆ. ಆದರೆ, ಈಗ ಈ ಎರಡೂ ದೇಶಗಳು ಯುದ್ಧದಲ್ಲಿ ಮುಳುಗಿವೆ. ಈಗಾಗಲೇ ರಷ್ಯಾ–ಉಕ್ರೇನ್ ಯುದ್ಧದ ಕಾರಣ ರಷ್ಯಾದಿಂದ ಬರಬೇಕಿದ್ದ ರಕ್ಷಣಾ ಸಾಮಗ್ರಿಗಳ ಮೇಲೆ ಪರಿಣಾಮ ಬೀರಿದೆ. ಒಂದುವೇಳೆ ಇಸ್ರೇಲ್ ಹಾಗೂ ಹಮಾಸ್ ಯುದ್ಧವು ತಿಂಗಳುಗಳವರೆಗೆ ನಡೆದರೆ, ಇಸ್ರೇಲ್‌ದಿಂದ ಬರುವ ರಕ್ಷಣಾ ಸಾಮಗ್ರಿಗಳ ಮೇಲೂ ಪರಿಣಾಮ ಬೀರಬಹುದು ಎಂದು ರಕ್ಷಣಾ ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಇಸ್ರೇಲ್–ಹಮಾಸ್ ಯುದ್ಧದ ಕಾರಣದಿಂದ ಭಾರತದಿಂದ ಇಸ್ರೇಲ್ ಹೆಚ್ಚಿನ ಶಸ್ತ್ರಾಸ್ತ್ರಗಳನ್ನು ಖರೀದಿಸಬಹುದು. ಆದ್ದರಿಂದ, ಯುದ್ಧದಿಂದ ಭಾರತಕ್ಕೆ ಲಾಭವೇ ಇದೆ ಎಂದು ಕೆಲವು ಖಾಸಗಿ ರಕ್ಷಣಾ ಸಾಮಗ್ರಿ ತಯಾರಕ ಕಂಪನಿಗಳು ಅಭಿಪ್ರಾಯಪಟ್ಟಿವೆ. ಆದರೆ, ತಜ್ಞರ ಪ್ರಕಾರ ಹೆಚ್ಚು ದಿನ ಯುದ್ಧ ನಡೆಯುವುದರಿಂದ ಭಾರತದ ರಕ್ಷಣಾ ಕ್ಷೇತ್ರಕ್ಕೆ ತೊಂದರೆಯೇ ಉಂಟಾಗಲಿದೆ. ಹಮಾಸ್ ವಿರುದ್ಧದ ಯುದ್ಧಕ್ಕೆ ಇಸ್ರೇಲ್ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿಟ್ಟುಕೊಳ್ಳಬಹುದು. ಆದ್ದರಿಂದ, ಭಾರತವು ಈಗಾಗಲೇ ಖರೀದಿಸಿದ ಕೆಲವು ಶಸ್ತ್ರಾಸ್ತ್ರಗಳ ಪೂರೈಕೆಯು ವಿಳಂಬವಾಗಬಹುದು ಎನ್ನುತ್ತಾರೆ ತಜ್ಞರು. ಇಸ್ರೇಲ್‌ನಿಂದ ಭಾರತದ ಆಮದು: ಡ್ರೋನ್, ಗುರಿ ನಿರ್ದೇಶಿತ ಕ್ಷಿಪಣಿ, ಗುರಿ ನಿರ್ದೇಶಿಕ ಏವಿಯಾನಿಕ್ಸ್ (ವಿಮಾನ ನಿಯಂತ್ರಣ) ವ್ಯವಸ್ಥೆ, ರೇಡಾರ್‌ಗಳು, ಸಂವೇದಕಗಳು ಮತ್ತು ಕಣ್ಗಾವಲು ಉಪಕರಣಗಳು

5ಜಿಗೆ ಅಡ್ಡಿ

ಭಾರತದ ಹಲವು ಟೆಲಿಕಾಂ ಕಂಪನಿಗಳು 5ಜಿ ಸಂಪರ್ಕ ಸೇವೆಯನ್ನು ಒದಗಿಸಲು ಮುಂದಾಗಿವೆ. ಇದಕ್ಕಾಗಿ ನೂರಾರು ಕೋಟಿ ಹೂಡಿಕೆಯನ್ನೂ ಮಾಡಿವೆ. ಜೊತೆಗೆ, ಭಾರತವು ಈ 5ಜಿ ಸಂಪರ್ಕ ಸೇವೆಗೆ ಅಗತ್ಯ ಇರುವ ಹಲವು ಉಪಕರಣಗಳನ್ನು ಇಸ್ರೇಲ್ ಸೇರಿದಂತೆ ಹಲವು ದೇಶಗಳಿಂದ ಆಮದು ಮಾಡಿಕೊಳ್ಳುತ್ತದೆ. ಯುದ್ಧವು ಮುಂದುವರಿದರೆ ಭಾರತದ ಟೆಲಿಕಾಂ ಕಂಪನಿಗಳಿಗೆ ನಷ್ಟ ಉಂಟಾಗುವ ಸಾಧ್ಯತೆ ಇದೆ.

ಇಸ್ರೇಲ್–ಹಮಾಸ್ ಯುದ್ಧದ ಕಾರಣದಿಂದ ಡಾಲರ್ ಎದುರು ಭಾರತದ ರೂಪಾಯಿ ಮೌಲ್ಯವು ಕುಸಿತ ಕಾಣುವ ಲಕ್ಷಣಗಳಿವೆ. ಇದರಿಂದಾಗಿ ಉಪಕರಣಗಳ ಆಮದಿನ ಮೌಲ್ಯವು ₹2,000 ಕೋಟಿಯಿಂದ ₹2,500 ಕೋಟಿವರೆಗೂ ಏರಿಕೆಯಾಗುವ ಸಾಧ್ಯತೆ ಇದೆ. ಹೀಗಾದರೆ ಭಾರತದ ಕಂಪೆನಿಗಳ ಮೇಲೆ ದೊಡ್ಡ ಮಟ್ಟದ ಪರಿಣಾಮವನ್ನೇ ಬೀರಬಹುದು ಎನ್ನುತ್ತಾರೆ ತಜ್ಞರು.

ಆಧಾರ: ಭಾರತದ ವಾಣಿಜ್ಯ ಸಚಿವಾಲಯದ 'ಭಾರತ–ಇಸ್ರೇಲ್ ದ್ವಿಪಕ್ಷೀಯ ವಾಣಿಜ್ಯ ಸಂಬಂಧ ಟಿಪ್ಪಣಿ', ವಾಣಿಜ್ಯ ಸಚಿವಾಲಯದ ರಫ್ತು ಮತ್ತು ಆಮದು ದತ್ತಾಂಶ ಬ್ಯಾಂಕ್, ಪಿಟಿಐ

ಸಿನಿ ಬಿಟ್ಸ್

ನ.24ಕ್ಕೆ ತೆರೆಯುತ್ತೆ 'ಶುಗರ್ ಫ್ಯಾಕ್ಟರಿ'

2021ರಲ್ಲಿ ಸೆಟ್ಟೇರಿದ್ದ ನಟ ಡಾರ್ಲಿಂಗ್ ಕೃಷ್ಣ ನಟನೆಯ 'ಶುಗರ್ ಫ್ಯಾಕ್ಟರಿ' ಸಿನಿಮಾ ಬಿಡುಗಡೆಗೆ ಸಜ್ಜಾಗುತ್ತಿದೆ. ಇದೇ ನ.24ರಂದು ಸಿನಿಮಾ ಬಿಡುಗಡೆಗೆ ದಿನಾಂಕ ನಿಗದಿಯಾಗಿದೆ. ಪ್ರಚಾರ ಆರಂಭಿಸಿರುವ ಚಿತ್ರತಂಡ 'ಜಹಾಪನಾ' ಎಂಬ ಹಾಡು ಬಿಡುಗಡೆ ಮಾಡಿದೆ.

ದೀಪಕ್ ಅರಸ್ ನಿರ್ದೇಶನದಲ್ಲಿ ಈ ಚಿತ್ರ ಮೂಡಿಬಂದಿದ್ದು, ಜಯಂತ ಕಾಯ್ಕಿಣಿ ಅವರು 'ಜಹಾಪನಾ' ಎಂಬ ಹಾಡಿಗೆ ಸಾಹಿತ್ಯ ಬರೆದಿದ್ದಾರೆ. ನಿಹಾಲ್ ತಾವ್ರೊ ಹಾಗೂ ಅಮೃತಾ ನಾಯಕ್ ಇದಕ್ಕೆ ಧ್ವನಿಯಾಗಿದ್ದಾರೆ. ಧನಂಜಯ್ ಅವರ ನೃತ್ಯ ನಿರ್ದೇಶನದಲ್ಲಿ ಡಾರ್ಲಿಂಗ್ ಕೃಷ್ಣ ಹಾಗೂ ಸೋನಾಲ್ ಮೊಂತೆರೋ ಈ ಹಾಡಿಗೆ ಹೆಜ್ಜೆ ಹಾಕಿದ್ದಾರೆ. ಕಬೀರ್ ರಫಿ ಸಂಗೀತ ನೀಡಿದ್ದಾರೆ. ಡಾರ್ಲಿಂಗ್ ಕೃಷ್ಣ ಅವರ ಸಿನಿಜರ್ನಿಯಲ್ಲೇ ಬಿಗ್ ಬಜೆಟ್ ಚಿತ್ರವೆಂದು ಕರೆಸಿಕೊಳ್ಳುತ್ತಿರುವ ಈ ಸಿನಿಮಾದ ಚಿತ್ರೀಕರಣ ಬೆಂಗಳೂರು ಮತ್ತು ಗೋವಾದಲ್ಲಿ ನಡೆದಿದೆ.

ಆರ್. ಗಿರೀಶ್ ನಿರ್ಮಿಸಿರುವ ಈ ಚಿತ್ರದಲ್ಲಿ ಕೃಷ್ಣ ಅವರಿಗೆ ನಾಯಕಿಯರಾಗಿ ಸೋನಾಲ್ ಮಾಂತೆರೋ, ಅದ್ವಿತಿ ಶೆಟ್ಟಿ, ರುಹಾನಿ ಶೆಟ್ಟಿ ನಟಿಸಿದ್ದಾರೆ. ಅದ್ವಿತಿ ಈ ಚಿತ್ರದಲ್ಲಿ ಈವೆಂಟ್ ಮ್ಯಾನೇಜರ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ರಂಗಾಯಣ ರಘು, 'ಲವ್ ಮಾಕ್ಟೇಲ್' ಅಭಿ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ. ❖

ಸೋನಲ್

ಕನ್ನಡದಲ್ಲೂ ತೆರೆಕಾಣಲಿದೆ 'ಸ್ಪಾರ್ಕ್ ಲೈಫ್'

ತೆಲುಗಿನ ವಿಕ್ರಾಂತ್ ನಟನೆಯ ತೆಲುಗು ಸಿನಿಮಾ 'ಸ್ಪಾರ್ಕ್ ಲೈಫ್' ಕನ್ನಡದ ಜೊತೆಗೆ ತಮಿಳು, ಹಿಂದಿ ಹಾಗೂ ಮಲಯಾಳಂನಲ್ಲಿ ಡಬ್ ಆಗಿ ತೆರೆಕಾಣಲಿದೆ. ನ. 17ಕ್ಕೆ ಚಿತ್ರ ಬಿಡುಗಡೆಯಾಗುತ್ತಿದ್ದು, ಮೆಹ್ರೀನ್ ಪಿರ್ಜಾದಾ ನಾಯಕಿಯಾಗಿ ವಿಕ್ರಾಂತ್‌ಗೆ ಜೋಡಿಯಾಗಿದ್ದಾರೆ.

ಈಗಾಗಲೇ ಚಿತ್ರದ ಟೀಸರ್ ಬಿಡುಗಡೆಯಾಗಿದ್ದು, ಇತ್ತೀಚೆಗೆ ಹೈದರಾಬಾದ್‌ನಲ್ಲಿ ಚಿತ್ರದ ಟ್ರೈಲರ್ ಬಿಡುಗಡೆ ನಡೆಯಿತು. 'ಸ್ಪಾರ್ಕ್ ಸಿನಿಮಾ ನನ್ನ ಮೂರು ವರ್ಷದ ಕನಸು. ಈ ಚಿತ್ರಕ್ಕಾಗಿ ಒಂದೂವರೆ ವರ್ಷ ಕಥೆ ಬರೆದೆ. ಇನ್ನೊಂದುವರೆ ವರ್ಷ ನಿರ್ಮಾಣದಲ್ಲಿ ತೊಡಗಿಸಿಕೊಂಡೆ. ಮೇಕಿಂಗ್‌ನಲ್ಲಿ ಯಾವುದೇ ರಾಜಿ ಮಾಡಿಕೊಂಡಿಲ್ಲ. ಕಾಮಿಡಿ, ಪ್ರೀತಿ, ಥ್ರಿಲ್ಲಿಂಗ್ ಎಲಿಮೆಂಟ್ ಎಲ್ಲವೂ ಸಿನಿಮಾದಲ್ಲಿದೆ. ನಾನು ನಾಯಕನಾಗಿಯೂ ಬಣ್ಣ ಹಚ್ಚಿದ್ದೇನೆ' ಎಂದಿದ್ದಾರೆ ವಿಕ್ರಾಂತ್.

ಮೆಹ್ರೀನ್ ಪಿರ್ಜಾದಾ ಮತ್ತು ರುಕ್ಷಾರ್ ಧಿಲ್ಲೋನ್ ಚಿತ್ರದಲ್ಲಿ ನಾಯಕಿಯರಾಗಿ ಅಭಿನಯಿಸಿದ್ದಾರೆ. ಮಲಯಾಳಂನ ಖ್ಯಾತ ನಟ ಗುರು ಸೋಮಸುಂದರಂ ಖಳನಾಯಕನಾಗಿ ಈ ಸಿನಿಮಾದಲ್ಲಿ ನಟಿಸಿದ್ದಾರೆ. ನಾಸರ್, ಸುಹಾಸಿನಿ ಮಣಿರತ್ನಂ, ವೆನ್ನೆಲ ಕಿಶೋರ್, ಸತ್ಯ, ಬ್ರಹ್ಮಾಜಿ, ಶ್ರೀಕಾಂತ್ ಅಯ್ಯಂಗಾರ್, ಚಮ್ಮಕ್ ಚಂದ್ರ, ಅನ್ನಪೂರ್ಣಮ್ಮ, ರಾಜಾ ರವೀಂದ್ರ ಮುಂತಾದವರು ತಾರಾಬಳಗದಲ್ಲಿದ್ದಾರೆ. ಡೆಫ್ ಫ್ರಾಗ್ ಪ್ರೊಡಕ್ಷನ್ಸ್ ಬ್ಯಾನರ್ ಅಡಿಯಲ್ಲಿ ತಯಾರಾಗುತ್ತಿರುವ ಈ ಚಿತ್ರಕ್ಕೆ 'ಹೃದಯಂ' ಮತ್ತು 'ಖುಷಿ' ಖ್ಯಾತಿಯ ಹೇಶಮ್ ಅಬ್ದುಲ್ ವಹಾಬ್ ಸಂಗೀತ ನೀಡುತ್ತಿದ್ದಾರೆ. ❖

ಮೆಹ್ರೀನ್ ಪಿರ್ಜಾದಾ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ 'ಬಿಜೆಪಿ ಇರುವ ತನಕ ಭಾರತದ ಮೇಲೆ ದಾಳಿ ಮಾಡಲು ಸಾಧ್ಯವಿಲ್ಲ– ತಾಲಿಬಾನ್ ಕಾರ್ಯದರ್ಶಿ ಅಲ್ ಬೇಡರ್ ಇಲ್ಯಾಸಿ. ದೇಶಕ್ಕೆ ಬಿಜೆಪಿ ಎಷ್ಟು ಅವಶ್ಯ ಇದೆ ಎಂದು ಯಾಕೆ ದೇಶದ ಜನರು ಅರ್ಥ ಮಾಡಿಕೊಳ್ಳುತ್ತಿಲ್ಲ. ಅದರಲ್ಲೂ ಹಿಂದೂಗಳು' ಎಂಬ ಪೋಸ್ಟರ್‌ವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.

✓ 2021ರಿಂದಲೂ ಇದೇ ಪೋಸ್ಟರ್ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಆಗಿಂದಲೂ 'ದಿ ಕ್ವಿಂಟ್' ಸೇರಿದಂತೆ ವಿವಿಧ ಮಾಧ್ಯಮಗಳು ಫ್ಯಾಕ್ಟ್‌ಚೆಕ್ ಪ್ರಕಟಿಸಿವೆ. ಬೇರೆ ಬೇರೆ ಮಾದರಿಯ ಪೋಸ್ಟರ್‌ಗಳು ಹರಿದಾಡುತ್ತಿವೆ. ಈ ಹಿಂದಿನ ಪೋಸ್ಟರ್‌ನಲ್ಲಿ 'ಎನ್‌ಡಬ್ಲೂಎಎ ಸ್ಟುಡಿಯೊ' ಎಂದು ನಮೂದಾಗಿದೆ. ಯೂಟ್ಯೂಬ್‌ನಲ್ಲಿ ಈ ಚಾನೆಲ್ ಅನ್ನು ಹುಡುಕಿದರೆ, 17.5 ನಿಮಿಷದ ವಿಡಿಯೊವೊಂದು ದೊರೆಯುತ್ತದೆ. ಈ ವಿಡಿಯೊದಲ್ಲಿ, ವಿಡಿಯೊವನ್ನು 2019ರ ಮಾರ್ಚ್ 1ರಂದು ಚಿತ್ರೀಕರಿಸಲಾಗಿದೆ ಎಂದು ಬರೆದುಕೊಂಡಿದೆ. ಹಾಗೆಯೇ ವಿಡಿಯೊದಲ್ಲಿ ಇರುವವರು ಖಲೀದ್ ಮೆಹಮೂದ್ ಅಬ್ಬಾಸಿ ಎಂದೂ ಹೇಳಲಾಗಿದೆ. 2021ರಲ್ಲಿ ಕ್ವಿಂಟ್ ತನ್ನ ಫ್ಯಾಕ್ಟ್‌ಚೆಕ್ ಪ್ರಕಟಿಸುವ ವೇಳೆ ಅಬ್ಬಾಸಿ ಅವರನ್ನು ಸಂಪರ್ಕಿಸಿತ್ತು. 'ನಾನು ತಾಲಿಬಾನ್‌ಗೆ ಸೇರಿದವನಲ್ಲ. ನಾನೊಬ್ಬ ಮೌಲ್ವಿ' ಎಂದಿದ್ದರು. ಪೂರ್ಣ ಪ್ರಮಾಣದ ವಿಡಿಯೊವನ್ನು ಕೇಳಿಸಿಕೊಂಡರೂ, ಎಲ್ಲಿಯೂ ಪೋಸ್ಟರ್‌ನಲ್ಲಿ ಇರುವಂತೆ ಅವರು ಬಿಜೆಪಿಯನ್ನು ಹೊಗಳಿಲ್ಲ. ಭಾರತದಲ್ಲಿ ಮುಸ್ಲಿಮರ ಸ್ಥಿತಿಗತಿ ಕುರಿತು ಮಾತನಾಡಿದ್ದಾರೆ ಮತ್ತು ಬಿಜೆಪಿಯು ಮುಸ್ಲಿಮರನ್ನು ಸರಿಯಾಗಿ ನಡೆಸಿಕೊಳ್ಳುತ್ತಿಲ್ಲ ಎಂದೇ ಮಾತನಾಡಿದ್ದಾರೆ. ಆದ್ದರಿಂದ, ಪೋಸ್ಟರ್‌ನಲ್ಲಿ ಹೇಳಿರುವಂತೆ ವಿಡಿಯೊದಲ್ಲಿ ಇರುವವರು ಅಲ್ ಬೇಡರ್ ಇಲ್ಯಾಸಿ ಅಲ್ಲ. ಅವರು ತಾಲಿಬಾಲ್ ಕಾರ್ಯದರ್ಶಿಯೂ ಅಲ್ಲ.

ನುಡಿ ಬೆಳಗು



ಪಿ. ಚಂದ್ರಿಕಾ

ಒಂಟಿಕಾಲಿನ ಹಕ್ಕಿ

ಒಬ್ಬ ಮನುಷ್ಯನಿಗೆ ಜೀವನದಲ್ಲಿ ತುಂಬಾ ಜಿಗುಪ್ಸೆ ಬಂದಿತ್ತು. ಅವನು ಎಲ್ಲವನ್ನೂ ಬಿಟ್ಟು ಎಲ್ಲಿಗಾದರೂ ಹೋಗಿಬಿಡುವುದೆಂದು ತೀರ್ಮಾನಿಸಿದ್ದ. ತನ್ನ ಬಳಿ ಹಣವಿಲ್ಲ, ಪ್ರೀತಿಸುವ ಜನರಿಲ್ಲ, ತನ್ನಪ್ಪ ತನಗಾಗಿ ಏನನ್ನೂ ಮಾಡಿಡಲಿಲ್ಲ... ಹೀಗೆ ತನ್ನ ಬೇಸರಕ್ಕೆ ತಾನೇ ಕಾರಣಗಳನ್ನು ಹುಡುಕಿಕೊಳ್ಳುತ್ತಿದ್ದ. ಹೀಗೆ ನಡೆದುಕೊಂಡು ಹೋಗುವಾಗ ತುಂಬಾ ದಣಿವಾಗಿ, ಹಣ್ಣುಗಳು ತುಂಬಿದ ಒಂದು ಮರದ ಕೆಳಗೆ ಕುಳಿತ.

ಮರದ ಮೇಲಿಂದ ಹಕ್ಕಿಯೊಂದು ನೆಲದಕಡೆಗೆ ಹಾರಿ ಬಂತು. ಅದರ ಚಲನವಲನವನ್ನು ನೋಡಿದರೆ ಯಾರಿಗಾದರೂ ಈ ಹಕ್ಕಿ ಖುಷಿಯಾಗಿದೆ ಎನ್ನಿಸುವಂತಿತ್ತು. ಅದು ಹಾರಿ ನೆಲಕ್ಕೆ ಇಳಿಯುವವರೆಗೂ ಅವನಿಗೆ ಆ ಹಕ್ಕಿಗೆ ಒಂದು ಕಾಲಿಲ್ಲ ಎಂದು ಗೊತ್ತಾಗಲೇ ಇಲ್ಲ. ಒಂಟಿ ಕಾಲಲ್ಲಿ ಕುಂಟುತ್ತಾ ನಡೆಯುತ್ತಾ ತನಗೆ ಬೇಕಾದ ಹಣ್ಣುಗಳನ್ನು ಬೀಜಗಳನ್ನು ಹಕ್ಕಿ ತಿನ್ನುತ್ತಾ ಖುಷಿಯಲ್ಲಿ ಕೂಗುತ್ತಾ ಓಡಾಡುತ್ತಿತ್ತು. ಆ ಮನುಷ್ಯನಿಗೆ ಆಶ್ಚರ್ಯವಾಯ್ತು; ಒಂದು ಕಾಲಿಲ್ಲ ಆದರೂ ಇಷ್ಟು ಖುಷಿಯಾಗಿದೆಯಲ್ಲಾ! ಎನ್ನಿಸಿ, ಆ ಪಕ್ಷಿಯನ್ನು ತಡೆದು, 'ಎಲೆ ಹಕ್ಕಿಯೇ ಇಷ್ಟು ಖುಷಿಯಾಗಿದ್ದೀಯಲ್ಲಾ ನಿನಗೆ ಒಂದು ಕಾಲಿಲ್ಲ ಎನ್ನುವುದು ಗೊತ್ತಿದೆಯೇ?' ಎಂದು ಕೇಳಿದ. ಹಕ್ಕಿ ನಗುತ್ತಾ, 'ಯಾಕೆ ಗೊತ್ತಿಲ್ಲ ಗೊತ್ತಿದೆ' ಎಂದಿತು. 'ಇಂಥಾ ದೊಡ್ಡ ಕೊರತೆ ನಿನಗಿದ್ದಾಗಲೂ ನೀನು ಹೇಗೆ ಸಂತಸದಲ್ಲಿದ್ದೀಯ?' ಎಂದು ಮರು ಪ್ರಶ್ನಿಸಿದ.

ಅಷ್ಟರಲ್ಲಿ ಅಲ್ಲೊಂದು ಹಾವು ಹರಿದು ಹೋಯಿತು. ಹಕ್ಕಿ ಅದನ್ನು ತೋರಿಸುತ್ತಾ, 'ನೋಡು ದೇವರು ನನಗೆ ಒಂದು ಕಾಲನ್ನಾದರೂ ಕೊಟ್ಟಿದ್ದಾನೆ. ಜೊತೆಗೆ ಹಾರುವ ಚೈತನ್ಯ ತುಂಬಿದ ರೆಕ್ಕೆಗಳನ್ನು ಕೊಟ್ಟಿದ್ದಾನೆ. ನೆಲದಲ್ಲಿ ತೆವಳುತ್ತಿರುವ ಹಾವಿಗೆ ಕಾಲನ್ನೇ ಕೊಟ್ಟಿಲ್ಲ. ಅದಕ್ಕೆ ರೆಕ್ಕೆಗಳೂ ಇಲ್ಲ. ಈಗ ಹೇಳು ನನಗೆ ಸಂತಸಪಡಲಿಕ್ಕೆ ಇದಕ್ಕಿಂತ ಹೆಚ್ಚಿನದ್ದೇನು ಬೇಕು? ಇಲ್ಲ ಎನ್ನುವ ಲೆಕ್ಕದಲ್ಲಿ ಆಸಕ್ತಿ ಬಂದುಬಿಟ್ಟರೆ, ಇರುವುದು ಮರೆತು ಹೋಗುತ್ತದೆ. ಅದಕ್ಕೆ ನನ್ನ ಬಳಿ ಇರುವುದನ್ನು ಬೇರೆಯವರ ಬಳಿ ಇಲ್ಲದಿರುವುದನ್ನು ಮಾತ್ರ ನೋಡು. ಆಗ ಜಗತ್ತಿನ ಖುಷಿ ನಿನ್ನ ಬಳಿ ಇರುತ್ತದೆ' ಎಂದು ಹಾರಿ ಹೋಯಿತು.

'ಹಕ್ಕಿಯ ಮಾತು ಎಷ್ಟು ಸರಿಯಲ್ಲವಾ! ನನ್ನ ಹತ್ತಿರ ಇಲ್ಲ ಎಂದು ಕೊರಗುತ್ತಿರುವುದೆಲ್ಲವನ್ನೂ ನಾನು ಗಳಿಸಿಕೊಳ್ಳಬಹುದು. ನನಗೆ ಎಲ್ಲವೂ ಇದೆ. ಮುಖ್ಯ ಗಟ್ಟಿಯಾಗಿ ನಿಲ್ಲಲು ಎರಡು ಕಾಲು. ಅದೇ ಇಲ್ಲದಿರುವ ಹಕ್ಕಿ ಸಂತೋಷದಿಂದ ಇರುವುದಾದರೆ ನಾನ್ಯಾಕೆ ಇರಬಾರದು?' ಎಂದು ಮನೆಗೆ ವಾಪಸಾದ. ಕಷ್ಟಪಟ್ಟು ದುಡಿದ. ಎಲ್ಲವನ್ನೂ ಗಳಿಸಿದ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಅಕ್ಟೋಬರ್ 17, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಶುಕ್ಲ ತೃತೀಯ ಗಂ. 25-27 ನಕ್ಷತ್ರ: ವಿಶಾಖಾ ಗಂ. 20-31 ಯೋಗ: ಪ್ರೀತಿ ಗಂ 09-21 ಕರಣ: ತೈತಿಲ ಗಂ. 13-24, ಕನ್ಯಾ ಮಾಸದ 30 ನೇ ದಿನ, ಮಳೆನಕ್ಷತ್ರ: ಚಿತ್ರ 2. ರಾಹುಕಾಲ : ಮಧ್ಯಾಹ್ನ 03-00 - 04-30 ಸೂರ್ಯೋದಯ : 06-25 ಸೂರ್ಯಾಸ್ತ : 06-07
ಮುಸ್ಲಿಂ ದಿನಾಂಕ : 01 ರಬಿಯುಸ್ಸಾನಿ
ದಿನ ವಿಶೇಷ : ನವರಾತ್ರಿ 3ನೇ ದಿನ
ಅದೃಷ್ಟ ಸಂಖ್ಯೆ : 4, 8

ಮೇಷ: ಎಲ್ಲಾ ವಿಷಯದಲ್ಲಿಯೂ ಹೊಂದಾಣಿಕೆ ಅಗತ್ಯವೆನಿಸಲಿದೆ. ಶ್ರಮದ ಸರಿಸಮಾನವಾದ ಧನಾಗಮನಕ್ಕೆ ಯಾವುದೇ ತೊಂದರೆಯಿಲ್ಲ. ಕೃಷಿ ಕೆಲಸಗಳು ಸಮರ್ಪಕವಾಗಿ ನಡೆದು ಮನಸ್ಸಿಗೆ ನೆಮ್ಮದಿ ಉಂಟಾಗುತ್ತದೆ.

ವೃಷಭ: ವಾಹನ ಚಾಲಕ ವೃತ್ತಿಯವರಿಗೆ ಅಧಿಕ ಒತ್ತಡದಿಂದ ದೇಹಕ್ಕೆ ಆಯಾಸ ಆಗಲಿದೆ. ಆರೋಗ್ಯದ ಬಗ್ಗೆ ಕಾಳಜಿವಹಿಸಿ. ಹೊಸ ಯೋಜನೆಗಳ ತಯಾರಿಗೆ ಒಳ್ಳೆಯ ಸಮಯ. ವಿವಾಹ ಅಪೇಕ್ಷಿಗಳಿಗೆ ಶುಭವಿರುತ್ತದೆ.

ಮಿಥುನ: ಹಾಲು ಉತ್ಪನ್ನ ವಸ್ತುಗಳ ಮಾರಾಟಗಾರರಿಗೆ ಲಾಭ ಆಗಲಿದೆ. ಕೆಲಸ ಕಾರ್ಯಗಳು ಲಾಭಯುಕ್ತವಾಗಿ ಪೂರೈಸುವುದು. ಹೊಸ ಮನೆಯ ಕೆಲಸಗಳು ಮುಕ್ತಾಯ ಹಂತ ತಲುಪುವುದರಿಂದ ಮನಸ್ಸಿಗೆ ನೆಮ್ಮದಿ ಇರುವುದು.

ಕರ್ಕಾಟಕ: ಮಕ್ಕಳೊಂದಿಗೆ ವ್ಯವಹಾರದ ವಿಚಾರಗಳ ಬಗ್ಗೆ ಸುದೀರ್ಘ ಮಾತುಕತೆ ನಡೆಸುವುದರಿಂದ ನೆಮ್ಮದಿ ಪ್ರಾಪ್ತಿಯಾಗುವುದು. ಕಾರ್ಮಿಕರ ಬೇಡಿಕೆಗಳನ್ನು ಅಲ್ಲಗಳೆಯದೆ ತೀರ್ಮಾನ ತೆಗೆದುಕೊಳ್ಳುವುದು ಉತ್ತಮ.

ಸಿಂಹ: ಆಸ್ತಿ ವಿಷಯಗಳನ್ನು ತ್ವರಿತ ಗತಿಯಲ್ಲಿ ಬಗೆಹರಿಸಿಕೊಳ್ಳಲು ಹಿತೈಷಿಯೊಬ್ಬರ ನೆರವು ಪಡೆಯುವಿರಿ. ಆಧ್ಯಾತ್ಮಿಕ ವಿಚಾರಗಳತ್ತ ಗಮನ ಹರಿಸುವಿರಿ. ಗುಪ್ತಚರ ಇಲಾಖೆ ಉದ್ಯೋಗಿಗಳಿಗೆ ಪ್ರಶಸ್ತಿ ಮತ್ತು ಬಹುಮಾನ ಸಿಗಲಿದೆ.

ಕನ್ಯಾ: ಕನಸುಗಳು ಈ ದಿನ ಕನಸಾಗಿಯೇ ಉಳಿಯಲಿವೆ. ಅಧಿಕಾರಿ ಹಾಗೂ ಹಿರಿಯರಿಂದ ಸಹಾಯ, ಸಹಕಾರಗಳನ್ನು ಅಪೇಕ್ಷಿಸುವಂತಹ ದಿನ ಆಗಲಿದೆ. ಏಕಾಂಗಿ ಹೋರಾಟ ಸರಿಯಲ್ಲ. ಗುತ್ತಿಗೆ ಆಧಾರಿತ ಉದ್ಯೋಗ ಸಿಗಲಿದೆ.

ತುಲಾ: ಶುಭಕಾರ್ಯಗಳಿಗಾಗಿ ಅಥವಾ ಕ್ಷೇತ್ರ ದರ್ಶನಕ್ಕಾಗಿ ಖರ್ಚಿನ ಸಂಭವವಿರುವುದು. ಮಕ್ಕಳ ಓದಿನ ಕಡೆ ಹೆಚ್ಚು ನಿಗಾವಹಿಸುವುದು ಉತ್ತಮ. ಸಂಜೆಯ ಸಮಯದಲ್ಲಿ ಶಿರೋ ವೇದನೆಯಿಂದ ಬಳಲುವ ಸಾಧ್ಯತೆ ಇರುವುದು.

ವೃಶ್ಚಿಕ: ವಿನೋದ ಸ್ವಭಾವ ಹಾಗೂ ಬುದ್ಧಿವಂತಿಕೆ ಇತರರನ್ನು ಆಕರ್ಷಿಸುವುದು. ಕೈತಪ್ಪಿ ಹೋಗಿದ್ದ ಕೆಲವು ಕೆಲಸಗಳು ಹಿರಿಯರೊಬ್ಬರ ಸಹಾಯದಿಂದ ಪುನಃ ದೊರೆಯಲಿದೆ. ಇದರಿಂದ ಆತ್ಮವಿಶ್ವಾಸ ಹೆಚ್ಚುವುದು.

ಧನು: ಮನೆಯ ಪರಿಸ್ಥಿತಿಗಳನ್ನು ಸುಧಾರಣೆಗೆ ತರುವ ಪ್ರಯತ್ನದಿಂದ ಕೆಲಸದ ಕಡೆಗೆ ಹೆಚ್ಚಿನ ಗಮನ ಕೊಡಲು ಸಾಧ್ಯವಾಗದು. ಅವಿವಾಹಿತರಿಗೆ ಉತ್ತಮ ಕಡೆಯ ಸಂಬಂಧ ಅರಸಿ ಬರುವುದು.

ಮಕರ: ಈ ದಿನದ ಪರಿಸ್ಥಿತಿಗಳು ಸ್ವಲ್ಪ ಕಿರಿಕಿರಿ ಮೂಡಿಸಿದರೂ ಫಲಿತಾಂಶ ಸಕಾರಾತ್ಮಕವಾಗಿರುವುದು. ನಿಜದ ಗೆಳೆಯ ಯಾರೆಂಬುವುದನ್ನು ಈ ದಿನದ ಸಂದರ್ಭಗಳು ತಿಳಿಸಲಿದೆ. ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿಯನ್ನು ಕಾಣುವಿರಿ.

ಕುಂಭ: ನಾಳೆಯ ಬಗ್ಗೆ ಮುಂದಾಲೋಚನೆ ಇಲ್ಲದೇ ಯಾರಿಗೂ ಯಾವುದೇ ಭರವಸೆಯನ್ನೂ ನೀಡಬೇಡಿ. ಆಕಸ್ಮಿಕವಾಗಿ ಉದ್ಯೋಗದಲ್ಲಿ ಸಮತೋಲನತೆ ತಪ್ಪುವಂತೆ ಆಗಲಿದೆ. ಹೆಚ್ಚಿನ ಅಧ್ಯಯನಕ್ಕೆ ಇದು ಸಕಾಲವಾಗಿರುತ್ತದೆ.

ಮೀನ: ಕೆಲವರ ಮಾತುಗಳು ನಿಮಗೆ ಹಿತವೆನ್ನಿಸದೇ ಇದ್ದರೂ ಹೇಳಿದ ಮಾತಿನ ಬಗ್ಗೆ ವಿಚಾರ ಮಾಡುವುದರಿಂದ ಅನುಕೂಲವಾಗುವುದು. ವ್ಯಾಪಾರ ವ್ಯವಹಾರದಲ್ಲಿ ಮಗನ ಸಹಾಯದಿಂದ ಅಭಿವೃದ್ಧಿ ಕಾಣುವಿರಿ.

ಪದಬಂಧ 5473

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಬಿಡಿಸಲು ಕಷ್ಟವಾದ ಪ್ರಶ್ನೆ (3)
4.ವಿವಾದವಿಲ್ಲದೇ ನಡೆದ ಲಗ್ನ (3)
5.ನೆಮ್ಮದಿ ಹೀಗೆ ಬಂದಿದೆ (4)
6.ಗಡಿ ಹತ್ತಿರವಿರುವ ಕಾಲಸೂಚಕ ಯಂತ್ರ (4)
7.ವನದಲ್ಲಿ ತಿರುಗಿದಾಗ ಹೊಸತು ಸಿಕ್ಕಿದೆ (2)
9.ಹೀಗೆ ಚುಚ್ಚು! (2)
13.ಮನೆಯನ್ನು ಹೀಗೂ ಹೇಳುವರು (4)
14.ಜೊತೆಯಲ್ಲಿ ವಾಸಿಸುವಿಕೆ (4)
15. ಬೇಡುವವ ಇಲ್ಲಿಗೆ ಬಂದಿದ್ದಾನೆ (3)
16.ಧನವುಳ್ಳವನ ಸೆರೆವಾಸ (3)

ಮೇಲಿಂದ ಕೆಳಕ್ಕೆ
1.ಸೂಕ್ಷ್ಮವಾದ ಎಳೆಯಿದು (4)
2.ಗತಿಸಿದ ಪತಿಯೊಡನೆಯೇ ಚಿತೆಯೇರುವುದು (5)
3.ತಡ ಎಂದು ಹೀಗೂ ಹೇಳಬಹುದು (3)
5.ಈಕೆ ವಿದ್ಯಾಧಿದೇವತೆ (4)
8.ಕಾಡಿನಲ್ಲಿ ವಾಸಿಸುವಿಕೆ (4)
10.ಲೋಹದ ಹಕ್ಕಿಯಲ್ಲಿನ ಪಯಣ (5)
11.ಮರದಲ್ಲಿರುವ ದುಂಬಿ (4)
12.ಮಡಿವಂತನೇರಿದ ಅಟ್ಟ (3)

1	■	2			■	■	3	■
4			■	■	5			
	■	6				■		■
	■		■	■		■	■	■
■	■	7	8	■	9	10	■	■
■	■	■		■	■		■	11
■	12	■	13				■	
14				■	■	15		
■		■	■	16			■	

5472ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವರದಿ 5.ನಪುಂಸಕ
6.ಪಕ್ಷಾಂತರ 8.ರಜನಿ
11.ಮಟ್ಟಸ 13.ವನರಾಜ
17.ರೂಪಾಂತರ 18.ಸವಾಲು

ಮೇಲಿಂದ ಕೆಳಕ್ಕೆ:
1.ವಸಂತ 2.ದಿನಕರ
3.ಶಿಕಪ 4.ಕದಿತ
7.ರಮಣಿ 9.ನಿಯಮ
10.ಸ್ವಭಾವ 12.ಸಮರಸ
14.ನಕ್ಷತ್ರ 15.ಜರೂರು
16.ಬಯಲು

ಸುಡೊಕು 5859

5	2			3		4		6
4		1	5		2			
				4			5	1
	9				4	6		
6		2		8				5
		4	2			3		
				2				9
	1	3	8		5		6	
9	4		6		3	8		

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5858 ಸುಡೊಕು

5	3	1	4	8	6	2	9	7
7	8	4	2	3	9	1	5	6
2	9	6	1	5	7	8	4	3
8	1	7	5	4	2	3	6	9
3	6	2	9	7	1	5	8	4
9	4	5	8	6	3	7	1	2
1	7	8	3	9	4	6	2	5
4	2	3	6	1	5	9	7	8
6	5	9	7	2	8	4	3	1

7 ಲಕ್ಷ ದಾಟಿದ ನಿತ್ಯ ಪ್ರಯಾಣಿಸುವವರ ಸಂಖ್ಯೆ • ಐಟಿ–ಬಿಟಿ ಉದ್ಯೋಗಿಗಳಿಗೆ ಉಪಯೋಗವಾದ ನೇರಳೆ ಮಾರ್ಗ

ಸಮಯ, ಶ್ರಮ, ಹಣ ಉಳಿಸಿದ ವಿಸ್ತರಿತ ಮೆಟ್ರೊ

ಅಂಕಿ ಅಂಶ

73.81 ಕಿ.ಮೀ ಈಗ ಹಸಿರು ಮತ್ತು ನೇರಳೆ ಮಾರ್ಗಗಳ ಒಟ್ಟು ಉದ್ದ

66 ಎರಡು ಮಾರ್ಗಗಳಲ್ಲಿ ಇರುವ ಒಟ್ಟು ಮೆಟ್ರೊ ನಿಲ್ದಾಣಗಳು

• ಬಾಲಕೃಷ್ಣ ಪಿ.ಎಚ್.

ಬೈಯಪ್ಪನಹಳ್ಳಿ ಮೆಟ್ರೊ ನಿಲ್ದಾಣದಿಂದ ಕೆ.ಆರ್‌. ಪುರ ಕಡೆ ಸಂಚರಿಸುತ್ತಿರುವ ಮೆಟ್ರೊ ರೈಲು –ಪ್ರಜಾವಾಣಿ ಚಿತ್ರ

ಬೆಂಗಳೂರು: ವಿಸ್ತರಿತ ನೇರಳೆ ಮಾರ್ಗದಲ್ಲಿ ಮೆಟ್ರೊ ರೈಲು ಆರಂಭವಾಗಿರುವುದರಿಂದ ನಿತ್ಯ ಪ್ರಯಾಣಿಸುವವರ ಸಂಖ್ಯೆ ಸರಾಸರಿ 80 ಸಾವಿರ ಹೆಚ್ಚಾಗಿದೆ. ಐಟಿ-ಬಿಟಿ ಸೇರಿದಂತೆ ವಿವಿಧ ಕಂಪನಿಗಳ ಉದ್ಯೋಗಿಗಳು ಪ್ರಯಾಣದ ವೆಚ್ಚ ಮತ್ತು ಸಮಯ ಕಡಿಮೆಯಾಗಿರುವ ಖುಷಿಯಲ್ಲಿದ್ದಾರೆ.

ವೈಟ್‌ಫೀಲ್ಡ್ ಕಡೆಗೆ ಹೋಗುವವರು ಹಿಂದೆ ಬೈಯಪ್ಪನಹಳ್ಳಿವರೆಗೆ ಮೆಟ್ರೊದಲ್ಲಿ ಬಂದು, ಅಲ್ಲಿಂದ ಮುಂದಕ್ಕೆ ಬಸ್ಸಿನಲ್ಲಿ ಪ್ರಯಾಣಿಸಬೇಕಿತ್ತು. ಬೈಯಪ್ಪನಹಳ್ಳಿಯಿಂದ ಕೆ.ಆರ್ ಪುರದವರೆಗೆ 2 ಕಿಲೋ ಮೀಟರ್ ಮೆಟ್ರೊ ಇರಲಿಲ್ಲ. ಅಲ್ಲಿಂದ ಮುಂದಕ್ಕೆ ಕಾಡುಗೋಡಿವರೆಗೆ ಮೆಟ್ರೊ ಇದ್ದರೂ ಮತ್ತೆ ಬಸ್ ಹತ್ತಿ ಇಳಿದು ಮೆಟ್ರೊ ಹತ್ತುವ ಕೆಲಸವನ್ನು ಪ್ರಯಾಣಿಕರು ಮಾಡುತ್ತಿರಲಿಲ್ಲ. ಈ 2 ಕಿಲೋಮೀಟರ್ ಸಮಸ್ಯೆಯಿಂದಾಗಿ ನೇರ ಪ್ರಯಾಣ ಸಾಧ್ಯವಾಗದ ಕಾರಣಕ್ಕೆ ಕೆಲವರು ಸ್ವಂತ ವಾಹನದಲ್ಲಿಯೇ ಹೋಗುತ್ತಿದ್ದರು.

ಈಗ ಬೈಯಪ್ಪನಹಳ್ಳಿ–ಕೆ.ಆರ್. ಪುರ ಸಂಪರ್ಕ ಕೊಂಡಿ ಜೋಡಣೆಯಾಗಿರುವುದು ಹಲವು ಸಮಸ್ಯೆಗಳಿಗೆ ಒಮ್ಮೆಲೇ ಪರಿಹಾರ ಸಿಕ್ಕಿದೆ. ಪ್ರಯಾಣದ ವೆಚ್ಚ ಕಡಿಮೆಯಾಗಿದೆ. ಕಡಿಮೆ ಸಮಯದಲ್ಲಿ ಕಚೇರಿ ತಲುಪುವಂತಾಗಿದೆ. ವಾಹನದಟ್ಟಣೆಯಲ್ಲಿ ಸಿಲುಕಿಕೊಳ್ಳುವುದು ತಪ್ಪಿದೆ. ಕೆ.ಆರ್.ಪುರ-ವೈಟ್‌ಫೀಲ್ಡ್ ಮಧ್ಯೆ ವಾಹನದಟ್ಟಣೆಯನ್ನೂ ಇದು ಸ್ವಲ್ಪ ಕಡಿಮೆ ಮಾಡಿದೆ.

ಮೆಟ್ರೊ ಜಾಲ: ಹಸಿರು ಮತ್ತು ನೇರಳೆ ಮೆಟ್ರೊ ಜಾಲವು 69.66 ಕಿಲೋಮೀಟರ್ ಇತ್ತು. ನೇರಳೆ ಮಾರ್ಗದಲ್ಲಿ ಬಾಕಿ ಉಳಿದಿದ್ದ ಬೈಯಪ್ಪನಹಳ್ಳಿ–ಕೆ.ಆರ್.ಪುರ ಮೆಟ್ರೊ ಮಾರ್ಗದ 2.10 ಕಿ.ಮೀ. ಮತ್ತು ಕೆಂಗೇರಿ–ಚಲ್ಲಘಟ್ಟ ನಡುವೆ 2.10 ಕಿ. ಮೀ. ಕಾಮಗಾರಿ ಪೂರ್ಣಗೊಂಡು ಅ.9ರಂದು ಈ ವಿಸ್ತರಿತ ಪ್ರದೇಶದಲ್ಲಿ ಮೆಟ್ರೊ ರೈಲು ಆರಂಭವಾಗಿತ್ತು. ಅಲ್ಲಿವರೆಗೆ ನಿತ್ಯ ಸರಾಸರಿ 6.20 ಲಕ್ಷ ಜನ ಪ್ರಯಾಣಿಸುತ್ತಿದ್ದರು. ಆನಂತರ ಪ್ರಯಾಣಿಕರ ಸಂಖ್ಯೆ ಸರಾಸರಿ 7 ಲಕ್ಷ ದಾಟಿದೆ. ವಾರದಲ್ಲಿ ಮೊದಲ ಐದು ದಿನ ಪ್ರಯಾಣಿಸುವವರ ಸರಾಸರಿ ಪ್ರಮಾಣ 7.30 ಲಕ್ಷವಿದೆ. ವಾರಾಂತ್ಯದ ಎರಡು ದಿನ ಪ್ರಯಾಣಿಕರು ಕಡಿಮೆ ಇದ್ದಾರೆ.

ನೇರಳೆ ಮಾರ್ಗದಲ್ಲಿ ಜನರ ದಟ್ಟಣೆ ಹೆಚ್ಚಿರುವ ಅವಧಿಯಲ್ಲಿ 4 ನಿಮಿಷಕ್ಕೊಂದು ರೈಲು ಕಾರ್ಯಾಚರಿಸುತ್ತಿದೆ. ಅದರ ಜೊತೆಗೆ ಶಾರ್ಟ್ ಲೂಪ್ ಟ್ರಿಪ್ (ಹೆಚ್ಚು ದಟ್ಟಣೆ ಇರುವ ಕೆಲವೇ ನಿಲ್ದಾಣಗಳ ನಡುವೆ ಹೆಚ್ಚುವರಿ ರೈಲು ಸಂಚರಿಸುವುದು) ಕೂಡ ಕಾರ್ಯಾಚರಿಸುತ್ತಿದೆ. ವೈಟ್‌ಫೀಲ್ಡ್‌ನಿಂದ ಪಟ್ಟಂದೂರು ಅಗ್ರಹಾರದ ನಡುವೆ 10 ನಿಮಿಷಗಳಿಗೆ ಒಂದು, ಮೈಸೂರು ರಸ್ತೆ–ಚಲ್ಲಘಟ್ಟ ನಡುವೆ 10 ನಿಮಿಷಕ್ಕೊಂದು, ಪಟ್ಟಂದೂರು ಅಗ್ರಹಾರದಿಂದ ಮೈಸೂರು ರಸ್ತೆಗೆ ಐದು ನಿಮಿಷಕ್ಕೆ ಒಂದು, ಮೆಜೆಸ್ಟಿಕ್‌ನಿಂದ ಎಂ.ಜಿ. ರಸ್ತೆವರೆಗೆ ಬೆಳಗಿನ ದಟ್ಟಣೆ ಸಮಯದಲ್ಲಿ 3 ನಿಮಿಷಕ್ಕೆ ಒಂದರಂತೆ ಮೆಟ್ರೊ ರೈಲು ಸಂಚರಿಸುತ್ತಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಮೆಟ್ರೊ ಹೆಚ್ಚಿಸಿ: ಚಲ್ಲಘಟ್ಟದಿಂದ ವೈಟ್‌ಫೀಲ್ಡ್‌ವರೆಗೆ 43.49 ಕಿ.ಮೀ. ನೇರವಾಗಿ ಮೆಟ್ರೊ ಮಾರ್ಗದಲ್ಲಿ ನಿತ್ಯ ಸಂಚರಿಸುವವರು ಹೆಚ್ಚಾಗಿದ್ದಾರೆ. ಈ ಪ್ರಮಾಣದಲ್ಲಿ ರೈಲುಗಳ ಸಂಖ್ಯೆ ಹೆಚ್ಚಾಗಿಲ್ಲ. ರೈಲುಗಳನ್ನು ಹೆಚ್ಚಿಸಬೇಕು. ಇಲ್ಲವೇ ಇರುವ ರೈಲುಗಳಿಗೆ ಬೋಗಿಗಳನ್ನು ಹೆಚ್ಚಿಸಬೇಕು ಎಂದು ಪ್ರಯಾಣಿಕರು ಒತ್ತಾಯಿಸಿದ್ದಾರೆ.

ನೇರಳೆ ಮಾರ್ಗದಲ್ಲಿ ಸಂಚರಿಸಲು ಮೆಟ್ರೊ ರೈಲಿಗಾಗಿ ಕಾಯುತ್ತಿರುವ ಪ್ರಯಾಣಿಕರು

ವಿಸ್ತರಿತ ಮಾರ್ಗ ಆರಂಭವಾದ ಮೇಲೆ ಮೆಟ್ರೊದಲ್ಲಿ ಪ್ರಯಾಣಿಸಿದವರ ಒಟ್ಟು ಸಂಖ್ಯೆ

ದಿನಾಂಕ	ಪ್ರಯಾಣಿಕರು
ಅ.9	6,80,894
ಅ.10	6,84,194
ಅ.11	7,01,455
ಅ.12	7,01,267
ಅ.13	7,50,316

ಪ್ರಯಾಣಿಕರು ಏನಂತಾರೆ?

ನಾನು ಉದ್ಯೋಗ ನಿಮಿತ್ತ ಕೆಂಗೇರಿಯಿಂದ ಐಟಿಪಿಎಲ್‌ಗೆ ನಿತ್ಯ ಪ್ರಯಾಣಿಸುವವಳು. ಕ್ಯಾಬ್‌ನಲ್ಲಿ ಪ್ರತಿದಿನ ಹೋಗಲು ಎರಡರಿಂದ ಎರಡೂವರೆ ತಾಸು ಬೇಕಾಗುತ್ತಿತ್ತು. ಈಗ ವಿಸ್ತರಿತ ಮಾರ್ಗದಲ್ಲಿ ಮೆಟ್ರೊ ಆರಂಭವಾಗಿರುವುದರಿಂದ ಒಂದು ವಾರದಿಂದ ಅದರಲ್ಲೇ ಹೋಗುತ್ತಿದ್ದೇನೆ. ಕೇವಲ 45 ನಿಮಿಷಗಳಲ್ಲಿ ತಲುಪುತ್ತಿದ್ದೇನೆ.

ಸುಶ್ಮಿತಾ ಎನ್., ಐಟಿಪಿಎಲ್ ಉದ್ಯೋಗಿ

ಉದ್ಯೋಗ ನಿಮಿತ್ತ ನಿತ್ಯ ಬೈಯಪನಹಳ್ಳಿಗೆ ಬರಬೇಕು. ಕೆ.ಆರ್.ಪುರದಿಂದ ಬೈಯಪ್ಪನಹಳ್ಳಿಗೆ ಮೆಟ್ರೊ ಇರಲಿಲ್ಲ. ನಾವು ಕೆಲಸ ಮುಗಿಸಿ ಬರುವಾಗ ರಾತ್ರಿ 9.30ರೆ ದಾಟಿದರೆ ಬಿಎಂಟಿಸಿ ಬಸ್ ಸಿಗಲ್ಲ. ಎರಡು ಕಿಲೋಮೀಟರ್‌ಗೆ ಕ್ಯಾಬ್‌ನಲ್ಲಿ ಬರೋಣ ಎಂದರೆ ಅವರು ₹ 250–₹ 300 ಬಾಡಿಗೆ ಹೇಳುತ್ತಿದ್ದರು. ರಾತ್ರಿ ವೇಳೆ ಆಟೊದವರು ಇನ್ನೂ ಜಾಸ್ತಿ ಹೇಳುತ್ತಿದ್ದರು. ಈಗ ಬೈಯಪ್ಪನಹಳ್ಳಿ–ಕೆ.ಆರ್.ಪುರ ನಡುವೆ ಮೆಟ್ರೊ ಆರಂಭವಾಗಿರುವುದರಿಂದ ಶೇ 90ರಷ್ಟು ಹಣ ಉಳಿಯುತ್ತಿದೆ. ಬೇಗ ಮನೆ ತಲುಪುತ್ತಿದ್ದೇನೆ.

ವೀರಮಣಿಕಂಠ, ಖಾಸಗಿ ಕಂಪನಿ ಉದ್ಯೋಗಿ

ಬೈಯಪ್ಪನಹಳ್ಳಿ–ಕೆ.ಆರ್.ಪುರ ಮಧ್ಯೆ ಬಾಕಿ ಉಳಿದಿದ್ದ ಕಾಮಗಾರಿ ಪೂರ್ಣಗೊಳಿಸಿ ಮೆಟ್ರೊ ಆರಂಭಿಸಿರುವುದು ಬಹಳ ಅನುಕೂಲವಾಗಿದೆ. ರಸ್ತೆಯಲ್ಲೇ ಹೆಚ್ಚು ಸಮಯ ಹೋಗುತ್ತಿರುವುದು ತಪ್ಪಿದೆ. ನಮ್ಮ ಹಣವೂ ಉಳಿದಿದೆ.

ಭಾಗ್ಯ, ಸಾಫ್ಟ್‌ವೇರ್ ಎಂಜಿನಿಯರ್

ನಡುವೆ ಕೇವಲ 2 ಕಿಲೋಮೀಟರ್‌ನಷ್ಟು ಮೆಟ್ರೊ ಇಲ್ಲದೇ ಇದ್ದಿದ್ದರಿಂದ ಬಹಳ ಸಮಸ್ಯೆಯಾಗಿತ್ತು. ನಾವು ಪ್ರತಿ ಸಾರಿ ವೈಟ್‌ಫಿಲ್ಡ್‌ಗೆ ಸಂಚರಿಸಲು ಕ್ಯಾಬ್, ಆಟೊ ಅವಲಂಬಿಸಬೇಕಿತ್ತು. ಈಗ ಸರಾಗವಾಗಿ ಓಡಾಡುವಂತಾಗಿದೆ.

ಜ್ಯೋತಿ ಮಂಜುನಾಥ್ ಕಲ್ಕೆರೆ
ಖಾಸಗಿ ಕಂಪನಿ ಉದ್ಯೋಗಿ

ಪಟ್ಟಂದೂರು ತಲುಪಲು ಕ್ಯಾಬ್, ಆಟೊ ಅಥವಾ ಬಸ್‌ನಲ್ಲಿ ಹೋಗಬೇಕಿತ್ತು. ಮೆಟ್ರೊ ನೇರಳೆ ಮಾರ್ಗದಲ್ಲಿ ಈಗ ತಡೆಯಿಲ್ಲದೇ ಸಂಚಾರ ಆರಂಭವಾಗಿದ್ದರಿಂದ ನಮ್ಮ ಟ್ರಾಫಿಕ್ ತ್ರಾಸ ತಪ್ಪಿದೆ.

ಪ್ರವೀಣ್, ಟೆಕ್ಕಿ, ಕೆ.ಆರ್‌.ಪುರ

ಬಾವಲಿ ಬೇಟೆಯಾಡಿದ ಚಿರತೆ

ಪ್ರಜಾವಾಣಿ ವಾರ್ತೆ

ತುಮಕೂರು: ಚಿರತೆಗಳ ಅಧ್ಯಯನಕ್ಕಾಗಿ ನಗರದ ಹೊರವಲಯದ ದೇವರಾಯನದುರ್ಗ ಅರಣ್ಯ ಪ್ರದೇಶದಲ್ಲಿ ಅಳವಡಿಸಲಾದ ಕ್ಯಾಮೆರಾದಲ್ಲಿ ಚಿರತೆಯೊಂದು ದೊಡ್ಡ ಬಾವಲಿಯನ್ನು ಕಚ್ಚಿಕೊಂಡು ಹೋಗುತ್ತಿರುವ ದೃಶ್ಯ ಸೆರೆಯಾಗಿದೆ.

ಸಂಜಯ್ ಗುಬ್ಬಿ ಮತ್ತು ತಂಡ ಅಳವಡಿಸಿದ್ದ ಕ್ಯಾಮೆರಾದಲ್ಲಿ ಆಗಸ್ಟ್–ಸೆಪ್ಟೆಂಬರ್ ಅವಧಿಯಲ್ಲಿ ಈ ಚಿತ್ರ ಸೆರೆಯಾಗಿದೆ ಎಂದು ಗುಬ್ಬಿ ಅವರು ತಿಳಿಸಿದ್ದಾರೆ.

ಅಮೃತ ವಿಶ್ವವಿದ್ಯಾಪೀಠದ ಬೆಂಗಳೂರು ಕ್ಯಾಂಪಸ್‌ನಲ್ಲಿ ಈಚೆಗೆ ನಡೆದ ಘಟಿಕೋತ್ಸವದಲ್ಲಿ ಇಸ್ರೊ ಮುಖ್ಯಸ್ಥ ಎಚ್‌.ಸೋಮನಾಥ್ ಅವರನ್ನು ಸನ್ಮಾನಿಸಲಾಯಿತು. ಫಿಲಿಪ್ಸ್ ಇನೋವೇಶನ್ ಸೆಂಟರ್‌ನ ಮುಖ್ಯಸ್ಥ ಅರವಿಂದ್ ವೈಷ್ಣವ್, ಕ್ಯಾಂಪಸ್ ನಿರ್ದೇಶಕ ಪಿ.ಮನೋಜ್, ಮಾತಾ ಅಮೃತಾನಂದಮಯಿ ಮಠದ ಮುಖ್ಯಸ್ಥ ಸ್ವಾಮಿ ಅಮೃತ ಗೀತಾನಂದಪುರಿ ಇದ್ದರು

ಇಸ್ರೇಲ್ ಬೆಂಬಲಿಸಿದ್ದಕ್ಕೆ ಖಂಡನೆ • 20ಕ್ಕೂ ಹೆಚ್ಚು ಮಂದಿ ಪೊಲೀಸರ ವಶಕ್ಕೆ

ಎಂ.ಜಿ. ರಸ್ತೆಯಲ್ಲಿ ಪ್ರತಿಭಟನೆ: ಪ್ಯಾಲೆಸ್ಟೀನ್ ಪರ ಘೋಷಣೆ

ಪ್ರಜಾವಾಣಿ ವಾರ್ತೆ

ನಗರದ ಎಂ.ಜಿ.ರಸ್ತೆಯಲ್ಲಿ ಸೇರಿದ್ದ ಪ್ರತಿಭಟನಕಾರರು – ಪ್ರಜಾವಾಣಿ ಚಿತ್ರ

ಬೆಂಗಳೂರು: 'ಪ್ಯಾಲೆಸ್ಟೀನ್‌ನ ಗಾಜಾ ಮೇಲೆ ಇಸ್ರೇಲ್ ನಡೆಸುತ್ತಿರುವ ದಾಳಿಯನ್ನು ಭಾರತ ಖಂಡಿಸಬೇಕು' ಎಂದು ಒತ್ತಾಯಿಸಿ ನಗರದ ಎಂ.ಜಿ. ರಸ್ತೆಯಲ್ಲಿ ಸೋಮವಾರ ದಿಢೀರ್ ಪ್ರತಿಭಟನೆ ನಡೆಸಿದ ಕೆಲ ಸಂಘಟನೆಗಳ ಸದಸ್ಯರು, ಪ್ಯಾಲೆಸ್ಟೀನ್ ಪರ ಘೋಷಣೆ ಕೂಗಿದರು.

'ಬಹುತ್ವ ಕರ್ನಾಟಕ' ಹಾಗೂ 'ಅಖಿಲ ಭಾರತೀಯ ವಿದ್ಯಾರ್ಥಿ ಸಂಘಟನೆ (ಎಐಎಸ್‌ಎ)' ಸಹಯೋಗದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ನಗರದ ವಿವಿಧ ಪ್ರದೇಶಗಳಿಂದ ಬಂದಿದ್ದ ಪ್ರತಿಭಟನಕಾರರು, 'ಬನ್ನಿ ಪ್ಯಾಲೇಸ್ಟಿನ್‌ನ ಸಂತ್ರಸ್ತರ ಪರ ನಮ್ಮ ಧ್ವನಿಗೂಡಿಸೋಣ' ಎಂಬ ಘೋಷಣಾ ಫಲಕಗಳನ್ನು ಪ್ರದರ್ಶಿಸಿದರು.

ಬ್ರಿಗೇಡ್ ರಸ್ತೆಯ ಕಾವೇರಿ ಎಂಪೋರಿಯಂ ವೃತ್ತದಿಂದ ಎಂ.ಜಿ. ರಸ್ತೆಯ ಮೆಟ್ರೊ ನಿಲ್ದಾಣದ ಪಾದಚಾರಿ ಮಾರ್ಗದಲ್ಲಿ ಮಾನವ ಸರಪಳಿ ನಿರ್ಮಿಸಿದ್ದ ಪ್ರತಿಭಟನಕಾರರು, ಪ್ಯಾಲೆಸ್ಟೀನ್ ಧ್ವಜ ಪ್ರದರ್ಶಿಸಿದರು. ಕೆಲವರು, ಬಾಯಿಗೆ ಕಪ್ಪು ಪಟ್ಟಿ ಧರಿಸಿದ್ದರು.

ಕೆಲವರು, ತಮ್ಮ ಬೈಕ್‌ಗಳಿಗೆ ಪ್ಯಾಲೆಸ್ಟೀನ್ ಧ್ವಜ ಕಟ್ಟಿಕೊಂಡಿದ್ದರು. ಇದನ್ನು ಪೊಲೀಸರು, ತೆರವು ಮಾಡಿಸಿದರು.

'ಭಾರತ ಇಸ್ರೆಲ್‌ಗೆ ಬೆಂಬಲ ವ್ಯಕ್ತಪಡಿಸಿರುವುದು ಖಂಡನೀಯ. ಕೂಡಲೇ ಭಾರತ, ತನ್ನ ಬೆಂಬಲವನ್ನು ವಾಪಸ್ ಪಡೆಯಬೇಕು. ಪ್ಯಾಲೆಸ್ಟೀನ್‌ಗೆ ಬೆಂಬಲ ನೀಡಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ದಿಢೀರ್ ಪ್ರತಿಭಟನೆ ನಡೆದಿದ್ದರಿಂದ ಎಂ.ಜಿ. ರಸ್ತೆಯಲ್ಲಿ ವಾಹನಗಳ ಸಂಚಾರಕ್ಕೆ ತೊಂದರೆಯಾಯಿತು. ವಿಪರೀತ ದಟ್ಟಣೆ ಉಂಟಾಗಿ, ವಾಹನಗಳು ಸಾಲುಗಟ್ಟಿ ನಿಂತಿದ್ದವು.

ಸ್ಥಳಕ್ಕೆ ಬಂದ ಕಬ್ಬನ್ ಪಾರ್ಕ್ ಠಾಣೆ ಪೊಲೀಸರು, 'ಎಂ.ಜಿ.ರಸ್ತೆಯಲ್ಲಿ ಪ್ರತಿಭಟನೆಗೆ ಅವಕಾಶವಿಲ್ಲ. ಸ್ವಾತಂತ್ರ್ಯ ಉದ್ಯಾನದಲ್ಲಿ ಮಾತ್ರ ಅವಕಾಶವಿದೆ. ಈಗ, ಸ್ಥಳದಿಂದ ಹೊರಟು ಹೋಗಿ' ಎಂದು ತಾಕೀತು ಮಾಡಿದರು. ಇದೇ ವಿಚಾರವಾಗಿ ಪರಸ್ಪರ ಮಾತಿನ ಚಕಮಕಿ ನಡೆಯಿತು. ಪ್ರತಿಭಟನೆ ಮುಂದಾಳತ್ವ ವಹಿಸಿದ್ದ ವಿನಯ್ ಶ್ರೀನಿವಾಸ್, ಟಿ.ನರಸಿಂಹಮೂರ್ತಿ ಸೇರಿದಂತೆ 20ಕ್ಕೂ ಹೆಚ್ಚು ಮಂದಿಯನ್ನು ವಶಕ್ಕೆ ಪಡೆದ ಪೊಲೀಸರು ಕರೆದೊಯ್ದರು.

'ಪ್ಯಾಲೆಸ್ಟೀನ್ ಪರ ಯಾರು ಮಾತನಾಡುತ್ತಿಲ್ಲ. ಅಂತರರಾಷ್ಟ್ರೀಯ ನ್ಯಾಯಾಲಯದ ಮೂಲಕ ಈ ಯುದ್ಧದ ಬಗ್ಗೆ ತನಿಖೆ ನಡೆಸಿ ವರದಿ ಬಹಿರಂಗಪಡಿಸಬೇಕು. ಪ್ಯಾಲೆಸ್ಟೀನ್ ಪರ ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಹಾಕುವವರ ಹಾಗೂ ಪ್ಯಾಲೆಸ್ಟೀನ್‌ಗೆ ಆಗಿರುವ ಅನ್ಯಾಯ ಪ್ರಶ್ನಿಸುವರ ವಿರುದ್ಧ ಪ್ರಕರಣ ದಾಖಲಿಸುವ ಕ್ರಮವನ್ನು ನಿಲ್ಲಿಸಬೇಕು' ಎಂದು ಒತ್ತಾಯಿಸಿದರು.

'ಅಬ್ಬೆ'ಗೆ ಪ್ರಶಸ್ತಿ

ಉಡುಪಿ: ಕೋಟೇಶ್ವರದ ಎನ್. ಆರ್.ಎ.ಎಂ.ಎಚ್. ಪ್ರಕಾಶನ ಮತ್ತು ಸ್ಥಿತಿಗತಿ ತ್ರೈಮಾಸಿಕ ಪತ್ರಿಕೆಯಿಂದ ಪಾಂಡೇಶ್ವರ ಸೂರ್ಯನಾರಾಯಣ ಚಡಗರ ನೆನಪಿನಲ್ಲಿ ನೀಡುವ 14ನೇ ವರ್ಷದ ಚಡಗ ಕಾದಂಬರಿ ಪ್ರಶಸ್ತಿಗೆ ಶಶಿಧರ ಹಾಲಾಡಿ ಅವರ 'ಅಬ್ಬೆ' ಕಾದಂಬರಿ ಆಯ್ಕೆಯಾಗಿದೆ.

ಪ್ರಶಸ್ತಿಯು ₹10 ಸಾವಿರ ನಗದು, ಸ್ಮರಣಿಕೆ, ಪ್ರಶಸ್ತಿ ಪತ್ರ ಒಳಗೊಂಡಿದೆ ಎಂದು ಸ್ಪರ್ಧೆಯ ಸಂಚಾಲಕ ಪ್ರೊ. ಉಪೇಂದ್ರ ಸೋಮ ಯಾಜಿ ತಿಳಿಸಿದ್ದಾರೆ. ಸಾಹಿತ್ಯ ಮತ್ತು ಸಂಘಟನೆಯ ಕ್ಷೇತ್ರಗಳಲ್ಲಿ ಚಡಗರ ಒಡನಾಡಿಯಾಗಿದ್ದ ಬಿ.ಜಿ. ಸತ್ಯಮೂರ್ತಿ ಅವರ ಜೀವಮಾನದ ಸಾಧನೆ ಪರಿಗಣಿಸಿ, ಅವರಿಗೆ 'ಚಡಗ ಸಂಸ್ಮರಣಾ ಪುರಸ್ಕಾರ' ನೀಡಿ ಗೌರವಿಸಲಾಗುವುದು ಎಂದು ಎನ್. ಭಾಸ್ಕರ ಆಚಾರ್ಯ ತಿಳಿಸಿದ್ದಾರೆ.

ಮಹಾರಾಣಿ ಕ್ಲಸ್ಟರ್ ವಿ.ವಿ ಕುಲಪತಿಗೆ ಹೈಕೋರ್ಟ್ ಎಚ್ಚರಿಕೆ

ಬೆಂಗಳೂರು: ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಡಾ.ಜಿ.ಕೃಷ್ಣಾರೆಡ್ಡಿ ಮತ್ತು ಪ್ರಾಂಶುಪಾಲರಾಗಿದ್ದ ಡಾ.ಎಚ್. ಪ್ರಕಾಶ್ ಅವರಿಗೆ ಕಳೆದ 15 ತಿಂಗಳಿಂದ ವೇತನ ಬಿಡುಗಡೆ ಮಾಡದಿರುವ ವಿಶ್ವವಿದ್ಯಾಲಯದ ನಡೆಗೆ ಹೈಕೋರ್ಟ್ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, 'ಕೂಡಲೇ ವೇತನ ಬಿಡುಗಡೆ ಮಾಡದಿದ್ದರೆ ಕಠಿಣ ಕ್ರಮ ಜರುಗಿಸಬೇಕಾಗುತ್ತದೆ' ಎಂದು ಕುಲಪತಿಗೆ ಎಚ್ಚರಿಕೆ ನೀಡಿದೆ.

ವೇತನ ತಡೆ ಹಿಡಿದಿದ್ದ ಸರ್ಕಾರದ ಕ್ರಮವನ್ನು ಆಕ್ಷೇಪಿಸಿ ಡಾ.ಜಿ.ಕೃಷ್ಣಾರೆಡ್ಡಿ ಮತ್ತು ಡಾ.ಎಚ್. ಪ್ರಕಾಶ್ ಸಲ್ಲಿಸಿದ್ದ ಪ್ರತ್ಯೇಕ ರಿಟ್ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎನ್.ಎಸ್. ಸಂಜಯ್ ಗೌಡ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಎಚ್‌ಆರ್‌ಎಂಎಸ್ (ರಾಷ್ಟ್ರೀಯ ಮಾನವ ಸಂಪನ್ಮೂಲಗಳ ನಿರ್ವಹಣಾ ಪದ್ಧತಿಗಳು) ಮಾದರಿಯಲ್ಲಿ ಬಿಲ್‌ಗಳನ್ನು ಸಲ್ಲಿಸುವಲ್ಲಿ ಕೆಲ ತೊಂದರೆಯಾಗಿದೆ ಮತ್ತು ಕೆಲವೊಂದು ದಾಖಲೆಗಳ ಪರಿಶೀಲನೆ ನಡೆಯಬೇಕಿರುವ ಕಾರಣದಿಂದ ವೇತನ ಬಿಡುಗಡೆ ಮಾಡಲಾಗುತ್ತಿಲ್ಲ' ಎಂಬ ಕುಲಪತಿಯವರ ವಾದವನ್ನು ಒಪ್ಪಲು ಸಾಧ್ಯವಿಲ್ಲ. ಸರ್ಕಾರ ಹಣ ಬಿಡುಗಡೆ ಮಾಡಿದ ಮೇಲೂ ವೇತನ ಪಾವತಿ ಮಾಡುತ್ತಿಲ್ಲ ಎಂದರೆ, ಇದು ಉದ್ದೇಶಪೂರ್ವಕವಾಗಿ ವೇತನ ತಡೆಹಿಡಿದಿರುವ ಕ್ರಮ ಎಂಬುದಾಗಿ ತೋರುತ್ತಿದೆ' ಎಂದು ನ್ಯಾಯಪೀಠ ಅತೃಪ್ತಿ ವ್ಯಕ್ತಪಡಿಸಿದೆ.

ಪ್ರಕರಣವೇನು?: ಮಹಾರಾಣಿ ಕಾಲೇಜನ್ನು ಕ್ಲಸ್ಟರ್ ವಿಶ್ವವಿದ್ಯಾಲಯವನ್ನಾಗಿ ಪರಿವರ್ತಿಸಿ 2019ರಲ್ಲಿ ಮತ್ತು ಅಲ್ಲಿನ 64 ಸಿಬ್ಬಂದಿಯನ್ನು ವಿಶ್ವವಿದ್ಯಾಲಯದ ಸಿಬ್ಬಂದಿಯಾಗಿ ವಿಲೀನಗೊಳಿಸಿ 2022ರ ಜೂನ್ 30ರಂದು ಸರ್ಕಾರ ಆದೇಶಿಸಿತ್ತು. ಇದಕ್ಕೂ ಮೊದಲು 2022ರ ಜನವರಿ 14ರಂದು ಆ ವರ್ಷ ಸೇವೆಯಿಂದ ಬಿಡುಗಡೆಯಾಗಲಿರುವ ಸಿಬ್ಬಂದಿಯ ಪಟ್ಟಿಯನ್ನು ಬಿಡುಗಡೆ ಮಾಡಿತ್ತು. ಈ ಪಟ್ಟಿಯಲ್ಲಿ ಅರ್ಜಿದಾರರ ಹೆಸರಿತ್ತು.

ಈ ಪಟ್ಟಿಯನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದ ಅರ್ಜಿದಾರರು, 'ಕಾಲೇಜು ಸಿಬ್ಬಂದಿಯಾಗಿದ್ದರೆ 60 ವರ್ಷಕ್ಕೆ ಸೇವೆಯಿಂದ ನಿವೃತ್ತರಾಗುತ್ತಿದ್ದೆವು. ಆದರೆ, ಕ್ಲಸ್ಟರ್ ವಿಶ್ವವಿದ್ಯಾಲಯ ಸಿಬ್ಬಂದಿಯಾಗಿ ವಿಲೀನವಾದ ನಂತರ ನಿವೃತ್ತಿ ವಯಸ್ಸು 62 ಆಗಿದೆ. ಇದೇ ಕಾರಣ ಮುಂದಿಟ್ಟುಕೊಂಡು 2022ರ ಜುಲೈನಿಂದ ನಮಗೆ ವೇತನ ಪಾವತಿ ತಡೆಹಿಡಿಯಲಾಗಿದೆ' ಎಂದು ಆಕ್ಷೇಪಿಸಿದ್ದರು.

ಕೆಎಟಿ ಆದೇಶ ಎತ್ತಿಹಿಡಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರದ ಮಾನ್ಯತೆ ಪಡೆದ ಮಾಧ್ಯಮಗಳ ಪಟ್ಟಿಯಲ್ಲಿ ಹೆಸರಿಲ್ಲ' ಎಂಬ ಕಾರಣಕ್ಕೆ ಅಮೆರಿಕದ ನಿಯತಕಾಲಿಕೆಯಲ್ಲಿ ಕೆಲಸ ನಿರ್ವಹಿಸಿದ ಅನುಭವದ ಆಧಾರದಲ್ಲಿ; ರಾಜ್ಯ ಮಾಹಿತಿ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಹುದ್ದೆಗೆ ಅಭ್ಯರ್ಥಿಯೊಬ್ಬರನ್ನು ಪರಿಗಣಿಸಲು ತಿರಸ್ಕರಿಸಿದ್ದ ಕರ್ನಾಟಕ ರಾಜ್ಯ ಆಡಳಿತಾತ್ಮಕ ನ್ಯಾಯಮಂಡಳಿ (ಕೆಎಸ್‌ಎಟಿ) ಆದೇಶವನ್ನು ಹೈಕೋರ್ಟ್ ಎತ್ತಿಹಿಡಿದಿದೆ.

ಈ ಸಂಬಂಧ ನಗರದ ಆರ್. ಹರೀಶ್ (38) ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಪಿ.ಎಸ್.ದಿನೇಶ್ ಕುಮಾರ್ ಮತ್ತು ನ್ಯಾಯಮೂರ್ತಿ ಟಿ.ಜಿ.ಶಿವಶಂಕರೇಗೌಡ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಅರ್ಜಿದಾರರು ಸಿಲಿಕಾನ್ ಮೀಡಿಯಾ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಸೇರಿದ 'ಸಿಲಿಕಾನ್ ಇಂಡಿಯಾ' ಎಂಬ ನಿಯತಕಾಲಿಕೆಯಲ್ಲಿ 5 ವರ್ಷ 8 ತಿಂಗಳ ಅನುಭವ ಹೊಂದಿರುವುದಾಗಿ ಹೇಳಿದ್ದಾರೆ. ಆದರೆ, ಈ ಪತ್ರಿಕೆಯು ಮುದ್ರಣ ಮತ್ತು ಪುಸ್ತಕಗಳ ನೋಂದಣಿ ಕಾಯ್ದೆ–1867ರ ಅನುಸಾರ ಭಾರತದಲ್ಲಿ ನೋಂದಾಯಿತವಾಗಿಲ್ಲ. ರಾಜ್ಯದ ಮಾಧ್ಯಮ ಪತ್ರಿಕೆಗಳ ಪಟ್ಟಿಯಲ್ಲೂ ಇಲ್ಲ. ಹೀಗಾಗಿ, ಇವರನ್ನು ಈ ಹುದ್ದೆಗೆ ಪರಿಗಣಿಸಲು ತಿರಸ್ಕರಿಸಿದ್ದ ಆದೇಶ ಸರಿಯಾಗಿಯೇ ಇದೆ' ಎಂದು ಹೈಕೋರ್ಟ್ ಕೆಎಸ್‌ಎಟಿ ಆದೇಶವನ್ನು ಪುರಸ್ಕರಿಸಿದೆ.

ಏನಿದು ಅರ್ಜಿ?: ಕರ್ನಾಟಕ ಲೋಕ ಸೇವಾ ಆಯೋಗವು (ಕೆಪಿಎಸ್‌ಸಿ) ಗ್ರೂಪ್ ಎ, ಬಿ ಮತ್ತು ಸಿ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಿತ್ತು. ಈ ಹಿನ್ನೆಲೆಯಲ್ಲಿ ಸಾಮಾನ್ಯ ವರ್ಗದ ವ್ಯಾಪ್ತಿಗೆ ಒಳಪಡುವ ಹಿರಿಯ ಸಹಾಯಕ ನಿರ್ದೇಶಕ ಹುದ್ದೆಗೆ ಅರ್ಜಿದಾರರು ಅರ್ಜಿ ಸಲ್ಲಿಸಿದ್ದರು. ಅರ್ಜಿಯಲ್ಲಿ ನಮೂದಿಸಲಾಗಿದ್ದ ಅರ್ಹತೆಯ ಅನುಭವಗಳ ಅನುಸಾರ ಈ ಹುದ್ದೆಗೆ ಸಾಮಾನ್ಯ ವರ್ಗದ ಅಭ್ಯರ್ಥಿಗಳು; ಪತ್ರಿಕೋದ್ಯಮದಲ್ಲಿ ಪದವಿ, 3 ವರ್ಷಗಳಿಗೆ ಕಡಿಮೆ ಇಲ್ಲದಂತೆ ಉಪ ಸಂಪಾದಕ, ವರದಿಗಾರ, ಪುಟ ವಿನ್ಯಾಸ ಕಲಾವಿದ ಅಥವಾ ಕಾಪಿ ರೈಟರ್ ಆಗಿ ಅನುಭವ ಹೊಂದಿರಬೇಕು' ಎಂದಿತ್ತು.

ಆದರೆ, 'ಅರ್ಜಿದಾರರು ತಾವು ಅನುಭವ ಹೊಂದಿರುವುದಾಗಿ ಹೇಳಿರುವ ಪತ್ರಿಕೆಯು ಭಾರತೀಯ ಕಾಯ್ದೆಯ ಅನುಸಾರ ನೋಂದಾಯಿತವಲ್ಲ' ಎಂದು ಅರ್ಜಿ ತಿರಸ್ಕರಿಸಲಾಗಿತ್ತು. ಇದನ್ನು ಪ್ರಶ್ನಿಸಿ ಅರ್ಜಿದಾರರು ಕೆಎಸ್‌ಎಟಿ ಮೊರೆ ಹೋಗಿದ್ದರು. ಕೆಎಸ್‌ಎಟಿ ಅರ್ಜಿಯನ್ನು 2021ರ ಆಗಸ್ಟ್ 31ರಂದು ವಜಾಗೊಳಿಸಿತ್ತು. ಈ ಆದೇಶ ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಸಚಿವರ ಗಡುವು

ಬೆಂಗಳೂರು: ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿ ಹಾಗೂ ತಹಶೀಲ್ದಾರ್ ನ್ಯಾಯಾಲಯಗಳಲ್ಲಿ ಬಾಕಿ ಇರುವ ತಕರಾರು ಪ್ರಕರಣಗಳನ್ನು ಶೀಘ್ರವೇ ಇತ್ಯರ್ಥಗೊಳಿಸಬೇಕು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ವಿಕಾಸಸೌಧದಲ್ಲಿ ಸೋಮವಾರ ನಡೆದ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲಾಧಿಕಾರಿಗಳ ತಿಂಗಳ ಪ್ರಗತಿಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

'ಕಳೆದ ನಾಲ್ಕು ತಿಂಗಳಲ್ಲಿ ಬೆಂಗಳೂರು ವಿಭಾಗದ ಪ್ರಗತಿ ಪರಿಶೀಲನಾ ಸಭೆ ನಡೆಸಲಾಗಿದೆ. ಮೂರು ಬಾರಿ ಜಿಲ್ಲಾಧಿಕಾರಿಗಳ ಸಭೆ ನಡೆಸಲಾಗಿದೆ. ಅಲ್ಲದೆ, ಜಿಲ್ಲೆಗಳಿಗೂ ಭೇಟಿ ನೀಡಿ ಸಭೆ ನಡೆಸಲಾಗಿದೆ. ಈ ವೇಳೆ ತಕರಾರು ಪ್ರಕರಣಗಳನ್ನು ಶೀಘ್ರ ಇತ್ಯರ್ಥಕ್ಕೆ ಸೂಚಿಸಲಾಗಿತ್ತು. ಆದರೂ, ಈ ವಿಚಾರದಲ್ಲಿ ನಿರೀಕ್ಷಿತ ಪ್ರಗತಿ ಕಾಣದಿರುವುದು ಏಕೆ' ಎಂದು ಅವರು ಪ್ರಶ್ನಿಸಿದರು.

ನವರಾತ್ರಿ ವಿಶೇಷ

ಸಾಯಿ ಚಂಡಿಕಾಂಬ ಸಪ್ತಾಹ: ಆಯೋಜನೆ ಮತ್ತು ಸ್ಥಳ: ಸತ್ಯಸಾಯಿ ಆಶ್ರಮ, ಕಾಡುಗೋಡಿ, ಬೆಳಿಗ್ಗೆ ಮತ್ತು ಸಂಜೆ 5ರಿಂದ

'ನಿಮಿಷಾಂಬಾದೇವಿಗೆ ಚಂದನ ಅಲಂಕಾರ': ಆಯೋಜನೆ ಮತ್ತು ಸ್ಥಳ: ನಿಮಿಷಾಂಬಾ ದೇವಿ ದೇವಸ್ಥಾನ, ಅಕ್ಕಿಪೇಟೆ ಹತ್ತಿರ, ಓ.ಟಿ.ಸಿ. ರಸ್ತೆ

ದೇವಿಗೆ ಡ್ರೈಫ್ರೂಟ್ಸ್, ಕವಡೆ ಅಲಂಕಾರ: ಆಯೋಜನೆ ಮತ್ತು ಸ್ಥಳ: ಮಹೇಶ್ವರಿ ದೇವಸ್ಥಾನ ಟ್ರಸ್ಟ್,ಮಲ್ಲೇಶ್ವರ

ಚಂದ್ರಘಂಟ ದೇವಿಯ ಆವಾಹನೆ, ಚಂದ್ರಘಂಟ ಹೋಮ, ಕುಂಕುಮಾರ್ಚನೆ, ಪುಷ್ಪಾರ್ಚನೆ, 108 ಜಪ ಪಾರಾಯಣ, ಚಂಡಿ ಪಾರಾಯಣ, ಮಹಾ ಮಂಗಳಾರತಿ, ಆಯೋಜನೆ: ತ್ರಿಕೋನ ಶಕ್ತಿ ಪೀಠ, ಸ್ಥಳ: ಸಾತನೂರು, ಯಲಹಂಕ, ಬೆಳಿಗ್ಗೆ 9ರಿಂದ

ದೇವಿಗೆ ಮಹಾಭಿಷೇಕ, ಕರಗ ಅಲಂಕಾರ: ಸಾಮೂಹಿಕ ಲಲಿತ ಸಹಸ್ರ ಪಾರಾಯಣ ಮಧ್ಯಾಹ್ನ 1.30ಕ್ಕೆ, ಹಿಂದೂಸ್ತಾನಿ ಗಾಯನ: ಶರಣ್ ಗುರ್ಜಾರ್ ಮತ್ತು ತಂಡ ಸಂಜೆ 6.30ಕ್ಕೆ, ಆಯೋಜನೆ ಮತ್ತು ಸ್ಥಳ: ಸರ್ಕಲ್ ಮಾರಮ್ಮ ದೇವಸ್ಥಾನ, ಮಲ್ಲೇಶ್ವರ

ವಚನ ನವರಾತ್ರಿ: ಆಶಯ ನುಡಿ: ಪ್ರಸನ್ನ ಪಂಚಾಕ್ಷರಯ್ಯ, 'ವಿಚಾರ ಪತ್ನಿ ನೀಲಾಂಬಿಕೆ' ಕುರಿತು ಉಪನ್ಯಾಸ: ಕಾತ್ಯಾಯಿನಿ ಸುಭಾಷ್, ಅತಿಥಿಗಳು: ಶ್ವೇತಜ ಶಿವಕುಮಾರಸ್ವಾಮಿ, ಶಶಿ ವಿಶ್ವನಾಥ್, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಬಸವ ಬೆಳಕು, ದೊಡ್ಡಬಸ್ತಿ ಮುಖ್ಯರಸ್ತೆ, ಕಲ್ಯಾಣ ಗೃಹನಿರ್ಮಾಣ ಸಹಕಾರ ಸಂಘ ಬಡಾವಣೆ, ಸಂಜೆ 5

ದೇವಿ ಸ್ತೋತ್ರ ಪಠಣ, ಚಲನಚಿತ್ರ ಉತ್ಸವ: 'ಗಾಂಧೀದೇವಿ' ಚಲನಚಿತ್ರ ಪ್ರದರ್ಶನ, ಆಯೋಜನೆ ಮತ್ತು ಸ್ಥಳ: ಕಪ್ಪಣ್ಣ ಅಂಗಳ, ಜೆ.ಪಿ. ನಗರ, ಸಂಜೆ 5ರಿಂದ

ದೇವಿಗೆ ಅಭಿಷೇಕ, ರಾಜರಾಜೇಶ್ವರಿ ಅಲಂಕಾರ: ಲಲಿತಾ ಸಹಸ್ರನಾಮ ಪಾರಾಯಣ: ಆಯೋಜನೆ ಮತ್ತು ಸ್ಥಳ: ಬಂಡೆ ಮಹಾಂಕಾಳಿ ದೇವಾಲಯ ವಿಶ್ವಸ್ಥ ಮಂಡಳಿ, ಗುಟ್ಟಹಳ್ಳಿ, ಸಂಜೆ 6

ದುರ್ಗಾ ಮಹೇಶ್ವರಮ್ಮ ದೇವಿಗೆ 'ಚಂದ್ರಘಂಟ ದೇವಿ ಅಲಂಕಾರ': ಭಜನೆ: ದಿವ್ಯ ಉಪಾಧ್ಯಯ, ವಾಗದೇವಿ ಸಂಗೀತ ಪಾಠಶಾಲೆಯ ಮಕ್ಕಳಿಂದ, ಆಯೋಜನೆ: ದುರ್ಗಾ ಮಹೇಶ್ವರಮ್ಮ ದೇವಾಲಯ, ಕೃಷ್ಣಾರಾಜಪುರ, ಸಂಜೆ 6

ದೇವಿಗೆ ಪೂಜೆ: ಮಹಾ ನೀರಾಜನ, ತೀರ್ಥಪ್ರಸಾದ ವಿನಿಯೋಗ, ಲಲಿತ ಸಹಸ್ರನಾಮ ಪಾರಾಯಣ, ಭಕ್ತಿ ಗೀತೆಗಳು: ಸುವರ್ಣ, ಸವಿತಾ–ಸುಶ್ರಾವ್ಯ ಸ್ನೇಹಿತೆಯರ ಬಳಗ, ಆಯೋಜನೆ: ಸನಾತನ ಭಕ್ತ ಮಂಡಲಿ ಟ್ರಸ್ಟ್, ಸ್ಥಳ: ಕೋದಂಡ ರಾಮ ದೇವಸ್ಥಾನ, ವಿಜಯನಗರ, ಸಂಜೆ 6

ನವರಾತ್ರಿ ಸಾಂಸ್ಕೃತಿಕ ಸಿಂಚನ: ಭಜನೆ: ರಮಮೌಳಿ ತಂಡ, ಆಯೋಜನೆ: ಬ್ರಾಹ್ಮಣ ಸಭಾ, ಸ್ಥಳ: ಗಾಯತ್ರಿ ಮಂದಿರ, ಕೆಂಗೇರಿ ಉಪನಗರ, ಸಂಜೆ 6ರಿಂದ

ಯಲ್ಲಮ್ಮ ದೇವಿಗೆ ಲಕ್ಷ್ಮಿ ಅಲಂಕಾರ: ಆಯೋಜನೆ ಮತ್ತು ಸ್ಥಳ: ಯಲ್ಲಮ್ಮದೇವಿ ದೇವಾಲಯ, ದೇಶದ ಪೇಟೆ ರಸ್ತೆ, ಯಲಹಂಕ, ಸಂಜೆ 6.30

ದೇವಿಗೆ ಕೌಮಾರೀ ಅಲಂಕಾರ, ಮಹಾಮೃತ್ಯುಂಜಯ ಹೋಮ, ಗಾಯನ: ಧನ್ಯಾ ದಿನೇಶ್ ರುದ್ರಪಟ್ಟಂ, ಆಯೋಜನೆ ಮತ್ತು ಸ್ಥಳ: ಶೃಂಗೇರಿ ಶಂಕರಮಠ ಶಂಕರಪುರ, ಸಂಜೆ 7

ದೊಡ್ಡಮ್ಮ ದೇವಿಗೆ ಅಡಿಕೆ ಅಲಂಕಾರ: ಆಯೋಜನೆ ಮತ್ತು ಸ್ಥಳ: ದೊಡ್ಡಮ್ಮ ದೇವಿ ಅಭಿವೃದ್ಧಿ ಸಮಿತಿ, ಚಿಕ್ಕದೇವಸಂದ್ರ, ಕೆ.ಆರ್. ಪುರ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ನಗರದಲ್ಲಿ ಇಂದು

58ನೇ ವಾರ್ಷಿಕ ಘಟಿಕೋತ್ಸವ: ಅಧ್ಯಕ್ಷತೆ: ಥಾವರಚಂದ್ ಗೆಹಲೋತ್, ಗೌರವ ಡಾಕ್ಟರೇಟ್ ಪುರಸ್ಕೃತರು: ಎಚ್‌.ಡಿ. ದೇವೇಗೌಡ, ಎಸ್. ಸೋಮನಾಥ್, ಉಪಸ್ಥಿತಿ: ಡಾ.ಎಂ.ಸಿ. ಸುಧಾಕರ್, ನಿಖಿಲ್ ಕಾಮತ್, ಜಯಕರ್ ಎಸ್.ಎಂ., ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು ಆವರಣ, ಅರಮನೆ ರಸ್ತೆ, ಬೆಳಿಗ್ಗೆ 10.30

'ವಿದೇಶಿ ಮತ್ತು ಕಡಿಮೆ ಬಳಕೆಯ ತೋಟಗಾರಿಕೆ ಬೆಳೆಗಳ ಕುರಿತು ಅಂತರರಾಷ್ಟ್ರೀಯ ವಿಚಾರಸಂಕಿರಣ–ಅದ್ಯತೆಗಳು ಮತ್ತು ಉದಯೋನ್ಮುಖ ಪ್ರವೃತಿಗಳು': ಉದ್ಘಾಟನೆ: ಥಾವರಚಂದ್ ಗೆಹಲೋತ್, ಆಯೋಜನೆ ಮತ್ತು ಸ್ಥಳ: ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ, ಹೆಸರಘಟ್ಟ, ಮಧ್ಯಾಹ್ನ 2

ರಾಜೀವ್ ತಾರಾನಾಥರ ಗೌರವಾರ್ಥ ಅಭಿನಂದನಾ ಸಂಗೀತ ಕಛೇರಿ: ಅತಿಥಿಗಳು: ಚಂದ್ರಶೇಖರ ಕಂಬಾರ, ಹಂಸಲೇಖ, ಬಾಲಕೃಷ್ಣ, ಮನು ಬಳಿಗಾರ್, ವಿಶುಕುಮಾರ್, ಸರೋದ್: ರಾಜೀವ್ ತಾರಾನಾಥ್, ತಬಲಾ: ಉದಯರಾಜ್ ಕರ್ಪೂರ್, ಆಯೋಜನೆ: ಪಂಡಿತ್ ತಾರಾನಾಥ್ ಫೌಂಡೇಷನ್, ಸ್ಥಳ: ರವಿಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6ರಿಂದ

ಚಂದ್ರಶೇಖರ ಕಂಬಾರ

ತ್ಯಾಜ್ಯ ವಿಲೇವಾರಿ ಘಟಕಕ್ಕೆ ವಿರೋಧ

'ಕಸದ ಲಾರಿ ಬಂದರೆ ಬೆಂಕಿ ಹಚ್ಚುತ್ತೇವೆ...'

ಪ್ರಜಾವಾಣಿ ವಾರ್ತೆ

ತ್ಯಾಜ್ಯ ವಿಲೇವಾರಿ ಘಟಕ ನಿರ್ಮಾಣ ವಿರೋಧಿಸಿ, ರಾಮನಗರ ತಾಲ್ಲೂಕಿನ ಹರಿಸಂದ್ರ ಗ್ರಾಮದಲ್ಲಿ ಜೆಡಿಎಸ್ ಕಾರ್ಯಕರ್ತರು ಹಾಗೂ ಸ್ಥಳೀಯರು ಗ್ರಾಮ ಪಂಚಾಯಿತಿ ಎದುರು ಸೋಮವಾರ ಪ್ರತಿಭಟನೆ ನಡೆಸಿದರು

ರಾಮನಗರ: 'ಅಭಿವೃದ್ಧಿ ಹೆಸರಿನಲ್ಲಿ ಬೆಂಗಳೂರಿನ ಕಸವನ್ನು ರಾಮನಗರ ಜಿಲ್ಲೆಗೆ ತಂದು ವಿಲೇವಾರಿ ಮಾಡಲು ಮುಂದಾದರೆ ಕಸದ ಲಾರಿಗಳಿಗೆ ಬೆಂಕಿ ಹಚ್ಚಿ ಸುಟ್ಟು ಹಾಕುತ್ತೇವೆ. ಜೈಲಿಗೆ ಹೋಗುವುದಕ್ಕೂ ರೆಡಿ. ತಾಲ್ಲೂಕಿನ ಹರಿಸಂದ್ರ ಗ್ರಾಮದಲ್ಲಿ ರಾಮನಗರ ನಗರಸಭೆಯ ಕಸ ವಿಲೇವಾರಿ ಮಾಡಲು ಸಹ ಬಿಡುವುದಿಲ್ಲ. ಇದರಿಂದ ಸುತ್ತಮುತ್ತಲಿನ ಗ್ರಾಮಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ...'

ರಾಜಧಾನಿ ಬೆಂಗಳೂರಿನ ಕಸ ವಿಲೇವಾರಿಯನ್ನು ರಾಮನಗರದಲ್ಲಿ ವಿಲೇವಾರಿ ಮಾಡಲು ಸರ್ಕಾರ ಮುಂದಾಗಿರುವುದು ಮತ್ತು ತಾಲ್ಲೂಕಿನ ಹರಿಸಂದ್ರದಲ್ಲಿ ರಾಮನಗರದ ಕಸ ವಿಲೇವಾರಿಗೆ ಜಾಗ ನಿಗದಿಪಡಿಸಿರುವುದನ್ನು ವಿರೋಧಿಸಿ, ಇಲ್ಲಿನ ಗ್ರಾಮ ಪಂಚಾಯಿತಿ ಆವರಣದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದ ಜೆಡಿಎಸ್ ಕಾರ್ಯಕರ್ತರು ಹಾಗೂ ಸ್ಥಳೀಯರು ನೀಡಿದ ಎಚ್ಚರಿಕೆ ಇದು.

ಗ್ರಾಮದಲ್ಲಿ ಜಮಾಯಿಸಿದ ಕಾರ್ಯಕರ್ತರು ಪ್ರತಿಭಟನಾ ಮೆರವಣಿಗೆ ನಡೆಸಿದರು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಂಸದ ಡಿ.ಕೆ. ಸುರೇಶ್, ಸ್ಥಳೀಯ ಶಾಸಕ ಎಚ್‌.ಎ. ಇಕ್ಬಾಲ್ ಹುಸೇನ್ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

23 ಎಕರೆಯಲ್ಲಿ ವಿಲೇವಾರಿ: ಹರಿಸಂದ್ರ ಗ್ರಾಮದಲ್ಲಿ ತ್ಯಾಜ್ಯ ವಿಲೇವಾರಿ ಘಟಕ ನಿರ್ಮಾಣಕ್ಕಾಗಿ, 23 ಎಕರೆ ಜಾಗವನ್ನು ತಹಶೀಲ್ದಾರ್ ಅಂತಿಮಗೊಳಿಸಿದ್ದಾರೆ. ಒಂದು ವೇಳೆ ಉದ್ದೇಶಿತ ಘಟಕ ಗ್ರಾಮದಲ್ಲಿ ನಿರ್ಮಾಣವಾದರೆ ಹರಿಸಂದ್ರವಷ್ಟೇ ಅಲ್ಲದೆ, ಸುತ್ತಮುತ್ತಲಿನ ಗ್ರಾಮಗಳ ಮೇಲೂ ಇದು ಪ್ರತಿಕೂಲ ಪರಿಣಾಮ ಬೀರುತ್ತದೆ ಎಂದು ಪ್ರತಿಭಟನಕಾರರು ಆತಂಕ ವ್ಯಕ್ತಪಡಿಸಿದರು.

ನವವರ್ಣ

ನವರಾತ್ರಿಯ ಎರಡನೆಯ ದಿನ ಜಗನ್ಮಾತೆಯನ್ನು ಬ್ರಹ್ಮಚಾರಿಣಿಯ ಸ್ವರೂಪದಲ್ಲಿ ಪೂಜಿಸಲಾಗುತ್ತದೆ. 'ಬ್ರಹ್ಮಚಾರಿಣಿ' ಎಂದರೆ ತಪಸ್ಸಿನಲ್ಲಿ, ವೇದದಲ್ಲಿ ನಿರತಳಾದವಳು ಎಂದು ಅರ್ಥ. ದೇವಿಯು ಕೈಯಲ್ಲಿ ಕಮಂಡಲ ಮತ್ತು ಜಪಮಾಲೆಯನ್ನು ಹಿಡಿದಿರುತ್ತಾಳೆ. ಇದು ತಪಸ್ಸನ್ನೂ ವಿದ್ಯೆಯನ್ನೂ ಸೂಚಿಸುತ್ತದೆ. ಅವಳು ಧರಿಸಿರುವ ವಸ್ತ್ರ ಶ್ವೇತವರ್ಣದ್ದು. ಇದು ತಪಸ್ಸು–ಜ್ಞಾನದ ಶುಭ್ರಸ್ವರೂಪವನ್ನು ಸಂಕೇತಿಸುತ್ತದೆ.

ಬಿಳಿಯ ಬಣ್ಣದಲ್ಲಿ ನವರಾತ್ರಿಯ ಸಂಭ್ರಮವನ್ನು ಆಚರಿಸಿಕೊಂಡವರ ಕೆಲವೊಂದು ಚಿತ್ರಗಳು ಇಲ್ಲಿವೆ.

ಕೆಂಪು ಬಣ್ಣದ ಧಿರಿಸನ್ನು ಧರಿಸಿ ತೆಗೆಸಿಕೊಂಡ ಚಿತ್ರಗಳನ್ನು ಮಂಗಳವಾರ ಸಂಜೆ 4 ಗಂಟೆಯೊಳಗೆ ಕಳುಹಿಸಿ. ಹೆಸರು, ವಿಳಾಸವೂ ಇರಲಿ... 7338018541

ಬೆಂಗಳೂರು ದೂರದರ್ಶನ ಕೇಂದ್ರದ ಸಿಬ್ಬಂದಿ

ಭಾರತ್ ನಗರ ಮಹಿಳಾ ಅಭಿವೃದ್ಧಿ ಸಮಿತಿ ಮಾಳಾಪುರ, ಧಾರವಾಡ

ಸ್ನೇಹಿತೆಯರೊಂದಿಗೆ ಶ್ರೀಮತಿ ಕುಮಾರಿ ಸಹದೇವಪುರ

ಸೆಂಟ್ರಲ್ ಎಕ್ಸೈಜ್ ಲೇಔಟ್‌ನ ಮಹಿಳೆಯರು, ಬೆಂಗಳೂರು

ಸಿ.ಎಸ್. ಇಂಡಿಯಾ ಸಿಬ್ಬಂದಿ, ರಾಜಾಜಿ ನಗರ, ಬೆಂಗಳೂರು

ದೇವಿ ಭಜನಾ ಮಂಡಳಿ ನಾಗಸಂದ್ರ, ಬೆಂಗಳೂರು

ವಾಣಿ ಅಮರ್ ಮತ್ತು ಗೆಳತಿಯರು, ರಾಜಾಜಿನಗರ, ಬೆಂಗಳೂರು

ಎಸ್‌ಕೆ. ಡಿಸೈನರ್ ಸಿಬ್ಬಂದಿ, ರಾಮಕೃಷ್ಣ ನಗರ

ವೆಂಕಟರಮಣ ಮಹಿಳಾ ಸಂಘದ ಸದಸ್ಯರು, ಶ್ರೀನಗರ, ಬೆಂಗಳೂರು

ಪ್ರಭಾ, ಶಾಂತ ಮತ್ತು ಲತಾ. ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ..ಬೆಂಗಳೂರು

ಕುಸ್ಮಿಕಾ, ನಾಗರಭಾವಿ, ಬೆಂಗಳೂರು

ವಿದ್ಯಾವತಿ ಮತ್ತು ಸ್ನೇಹಿತೆಯರು, ರಾಮನಗರ

ಸಮಾಜ ಕಲ್ಯಾಣ ಇಲಾಖೆಯ ಸಿಬ್ಬಂದಿ ವರ್ಗ, ವಿಕಾಸ ಸೌಧ, ಬೆಂಗಳೂರು

ವನಸಿರಿ ವಿನಾಯಕ ದೇವಸ್ಥಾನ ಭಜನಾ ಮಂಡಳಿ, ಕತ್ರಿಗುಪ್ಪೆ, ಬೆಂಗಳೂರು

ಸಾಕ್ಷರಿಕ ವಿದ್ಯ ವರ್ಷಿಣಿ ಶಾಲೆ, ಮೈಲಾಪುರ

ಹೇಮಲತಾ, ಉಮಾದೇವಿ, ದಾಸರಹಳ್ಳಿ ಬೆಂಗಳೂರು

ವಾಸಂತಿ ಮತ್ತು ಸ್ನೇಹಿತೆ, ಬೆಂಗಳೂರು

ಸುಷ್ಮಾ, ಮಧು ಮತ್ತು ಸಂಜನಾ, ಆರ್‌.ಎಂ. ಲೋಹಿಯಾನಗರ, ಹುಬ್ಬಳ್ಳಿ

ವನಜಾಕ್ಷಿ ಮತ್ತು ಅಕ್ಕಂದಿರು. ವಿಶ್ವನಾಥಪುರ, ದೇವನಹಳ್ಳಿ ತಾಲ್ಲೂಕು

ಗಿರಿಜಾ ಮತ್ತು ಸೊಸೆಯಂದಿರು, ವಿಜಯಪುರ, ಬೆಂಗಳೂರು ಗ್ರಾಮಾಂತರ

ಸಿಟಿ ಸಿವಿಲ್ ಕೋರ್ಟ್ ಸಿಬ್ಬಂದಿ, ಬೆಂಗಳೂರು

ವಸತಿ ಸಮುಚ್ಚಯಗಳಿಗೆ ದಂಡ: ₹200 ಕೋಟಿ ವಸೂಲಿ ಬಾಕಿ – ಸಚಿವ ಈಶ್ವರ ಬಿ. ಖಂಡ್ರೆ

ಕೆಂಪು ವರ್ಗದ ಕೈಗಾರಿಕೆ: 3 ತಿಂಗಳಲ್ಲಿ ಎನ್‌ಒಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೈಗಾರಿಕೆಗಳ ಆರಂಭಿಸಲು ನಿರಾಕ್ಷೇಪಣಾ ಪತ್ರಕ್ಕಾಗಿ (ಎನ್‌ಒಸಿ) 1,400ಕ್ಕೂ ಅರ್ಜಿಗಳು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಕೆಯಾಗಿದ್ದು ಅವುಗಳ ವಿಲೇವಾರಿಗೆ ಸಮಿತಿ ರಚಿಸಲಾಗಿದೆ ಎಂದು ಅರಣ್ಯ, ಜೀವಶಾಸ್ತ್ರ ಹಾಗೂ ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದರು.

‘ನಿಯಮಾನುಸಾರ ಅರ್ಜಿಗಳ ವಿಲೇವಾರಿಗೆ ಇಲಾಖೆ ಪ್ರಧಾನ ಕಾರ್ಯದರ್ಶಿ, ಮಂಡಳಿಯ ಸದಸ್ಯ ಕಾರ್ಯದರ್ಶಿ, ಮುಖ್ಯ ಪರಿಸರ ಅಧಿಕಾರಿ ಹಾಗೂ ತಾಂತ್ರಿಕ ಪರಿಣತರ ನೇತೃತ್ವದಲ್ಲಿ ಈ ಸಮಿತಿ ರಚಿಸಲಾಗಿದೆ’ ಎಂದು ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಸೋಮವಾರ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

‘ಮಾಲಿನ್ಯ ನಿಯಂತ್ರಣ ಮಂಡಳಿಗೆ ನಿರಾಕ್ಷೇಪಣಾ ಪತ್ರ (ಎನ್.ಒ.ಸಿ) ಕೋರಿ ಬರುವ ಅರ್ಜಿಗಳನ್ನು ಕಾಲಮಿತಿಯಲ್ಲಿ ಇತ್ಯರ್ಥ ಪಡಿಸಲಾಗುವುದು. ಹಸಿರು ಪ್ರವರ್ಗದ ಕೈಗಾರಿಕಾ ಘಟಕಗಳ ಸ್ಥಾಪನೆಯ ಅರ್ಜಿಗಳನ್ನು 30 ದಿನ, ಆರೆಂಜ್ ಪ್ರವರ್ಗದ ಕೈಗಾರಿಕೆಗಳ ಅರ್ಜಿಗಳನ್ನು 45 ದಿನಗಳ ಒಳಗೆ ಹಾಗೂ ಕೆಂಪು ಪ್ರವರ್ಗದ ಕೈಗಾರಿಕೆಗಳ ಅರ್ಜಿಗಳ ವಿಲೇವಾರಿಯನ್ನು ಮೂರು ತಿಂಗಳ ಒಳಗಾಗಿ ವಿಲೇವಾರಿ ಮಾಡಲು ಗಡುವು ವಿಧಿಸಲಾಗಿದೆ. ನಿಯಮಾನುಸಾರ ಅರ್ಜಿಗಳಿದ್ದರೆ ಮಾತ್ರ ಕಾಲಮಿತಿಯಲ್ಲಿ ನಿರಾಕ್ಷೇಪಣಾ ಪತ್ರ ದೊರೆಯಲಿದೆ’ ಎಂದು ಹೇಳಿದರು.

> ಮಂಡಳಿಗೆ ಸಲ್ಲಿಕೆಯಾಗುವ ಅರ್ಜಿಗಳ ವಿಲೇವಾರಿಯನ್ನು ಅನಗತ್ಯವಾಗಿ ವಿಳಂಬ ಮಾಡಿದರೆ ಸಂಬಂಧಿತ ಅಧಿಕಾರಿಗಳನ್ನೇ ಹೊಣೆ ಮಾಡಲಾಗುವುದು.
> **ಈಶ್ವರ ಬಿ. ಖಂಡ್ರೆ,** ಅರಣ್ಯ ಸಚಿವ

‘ಬೆಂಗಳೂರಿನ ಬೆಳ್ಳಂದೂರು ಕೆರೆಯ ಸುತ್ತಮುತ್ತ ತ್ಯಾಜ್ಯದ ನೀರನ್ನು ಕೆರೆಗೆ ನೇರವಾಗಿ ಹರಿಸುತ್ತಿರುವ ಬೃಹತ್ ವಸತಿ ಸಮುಚ್ಚಯಗಳಿಂದ ಸುಮಾರು ₹ 200 ಕೋಟಿ ದಂಡ ವಸೂಲಿ ಮಾಡಿ, ತ್ಯಾಜ್ಯ ಜಲ ಸಂಸ್ಕರಣೆಗೆ ಘಟಕ(ಎಸ್.ಟಿ.ಪಿ.) ನಿರ್ಮಿಸಲು ಎನ್‌ಜಿಟಿ ಆದೇಶ ನೀಡಿದೆ. 2024ರ ಡಿಸೆಂಬರ್ ಒಳಗೆ ಈ ಎಸ್‌ಟಿಪಿ ಕಾರ್ಯ ಪೂರ್ಣಗೊಳಿಸಲು ಗಡುವು ನೀಡಲಾಗಿದೆ’ ಎಂದು ಹೇಳಿದರು.

‘ನಿಯಮ ಪಾಲಿಸದ ಹಾಗೂ ಅಪಾರ್ಟ್‌ಮೆಂಟ್‌ನ ತ್ಯಾಜ್ಯ ನೀರನ್ನು ಕೆರೆಗೆ ಹರಿಸುತ್ತಿದ್ದ 58 ಕಟ್ಟಡಗಳಿಗೆ ತಲಾ ₹ 3 ಕೋಟಿ ದಂಡ ವಿಧಿಸಲಾಗಿದೆ. ಉಳಿದಂತೆ 122 ಕಟ್ಟಡಗಳಿಗೆ ತಲಾ ₹ 3 ಲಕ್ಷದಂತೆ ದಂಡ ವಿಧಿಸಲಾಗಿದೆ. ಆದರೆ, ಈವರೆಗೆ ₹ 4 ಕೋಟಿ ಮಾತ್ರವೇ ಸಂಗ್ರಹವಾಗಿದೆ’ ಎಂದು ತಿಳಿಸಿದರು.

‘ಕಟ್ಟಡ ನಿರ್ಮಿಸಿದ ಬಿಲ್ಡರ್‌ಗಳು ಕೆಲವೆಡೆ ಮನೆಗಳನ್ನು ಮಾರಾಟ ಮಾಡಿದ್ದಾರೆ. ಆದರೆ, ಈಗ ಮನೆ ಖರೀದಿಸಿರುವ ಮಧ್ಯಮವರ್ಗದ ಜನರಿಂದ ದಂಡ ವಸೂಲಿ ಮಾಡುವುದು ಕಷ್ಟವಾಗಿದೆ. ಆದರೂ, ಕಾನೂನಿನ ಮಿತಿಯಲ್ಲಿ ದಂಡ ವಸೂಲಿ ಮಾಡಿ ಕಲುಷಿತಗೊಂಡಿರುವ ಕೆರೆಗಳ ಅಭಿವೃದ್ಧಿ ಪಡಿಸಲಾಗುವುದು’ ಎಂದು ಹೇಳಿದರು.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಸೋಮವಾರ ನಡೆದ ಸಭೆಯಲ್ಲಿ ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಮಾತನಾಡಿದರು.

ತಗ್ಗಿದ ಪಿಒಪಿ ಗಣೇಶ ಮೂರ್ತಿಗಳು

ಈ ವರ್ಷದ ಗಣೇಶ ಹಬ್ಬದ ವೇಳೆ ಶೇ 75ರಷ್ಟು ಪಿಒಪಿ ಮೂರ್ತಿ ವಿಸರ್ಜನೆ ಕಡಿಮೆಯಾಗಿದೆ. ಮುನ್ನೆಚ್ಚರಿಕೆ ವಹಿಸಿದ್ದರ ಪರಿಣಾಮ ಪಿಒಪಿ ಬಳಕೆ ಕಡಿಮೆಯಾಗಿದೆ ಎಂದು ಅರಣ್ಯ, ಜೀವಶಾಸ್ತ್ರ ಹಾಗೂ ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ಹೇಳಿದರು.

ಉಡುಪಿ, ಮಂಗಳೂರು, ಕಾರವಾರದಲ್ಲಿ ಈ ವರ್ಷ ಪಿಒಪಿ ಮೂರ್ತಿಗಳ ಬಳಕೆಯನ್ನೇ ಮಾಡಿರಲಿಲ್ಲ. ಕಲ್ಯಾಣ ಕರ್ನಾಟಕದ ಭಾಗದಲ್ಲಿ ಪಿಒಪಿ ಮೂರ್ತಿ ಬಳಕೆಯನ್ನು ಪೂರ್ಣ ಪ್ರಮಾಣದಲ್ಲಿ ನಿಯಂತ್ರಿಸಲು ಸಾಧ್ಯವಾಗಿಲ್ಲ ಎಂದು ಹೇಳಿದರು.

ಪಟಾಕಿ: ವಿಚಕ್ಷಣಾ ದಳ ರಚಿಸಲು ಚಿಂತನೆ

ಬೆಂಗಳೂರು: ‘ಪರಿಸರಕ್ಕೆ ಹಾನಿ ಉಂಟುಮಾಡುವ ಪಟಾಕಿಗಳ ದಾಸ್ತಾನು, ಮಾರಾಟ, ಸಾಗಣೆ, ಸಂಗ್ರಹ ಹಾಗೂ ಉತ್ಪಾದನೆಯ ಮೇಲೆ ಕಣ್ಗಾವಲಿಗಾಗಿ ವಿಚಕ್ಷಣಾ ದಳ ರಚಿಸಲು ಚಿಂತಿಸಲಾಗಿದೆ’ ಎಂದು ಅರಣ್ಯ, ಜೀವಶಾಸ್ತ್ರ ಹಾಗೂ ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದರು.

‘ಮುಂದಿನ ಸಚಿವ ಸಂಪುಟದಲ್ಲೇ ಜಾಗೃತ ದಳದ ರೂಪುರೇಷೆ ಕುರಿತು ಚರ್ಚಿಸಲಾಗುವುದು. ದಳದಲ್ಲಿ ಯಾರೆಲ್ಲಾ ಇರಬೇಕು ಎಂಬುದರ ಕುರಿತೂ ತೀರ್ಮಾನ ತೆಗೆದುಕೊಳ್ಳಲಾಗುವುದು. ಜಿಲ್ಲಾಡಳಿತ, ಪೊಲೀಸ್ ಇಲಾಖೆ, ಅಗ್ನಿಶಾಮಕ ದಳದ ಅಧಿಕಾರಿಗಳು ಹಾಗೂ ತೆರಿಗೆ ಇಲಾಖೆ ಅಧಿಕಾರಿಗಳನ್ನೂ ಈ ದಳಕ್ಕೆ ಸೇರಿಸಿಕೊಳ್ಳಲಾಗುವುದು . ಪಟಾಕಿ ತಯಾರಿಕೆ ಘಟಕಗಳಿಂದ ಮಾದರಿ ಸಂಗ್ರಹಿಸಿ ಪ್ರಯೋಗಾಲದಲ್ಲಿ ಪರಿಶೀಲಿಸಿ ಪಟಾಕಿ ರಾಸಾಯನಿಕಯುಕ್ತವೇ ಅಥವಾ ಹಸಿರು ಪಟಾಕಿಯೇ ಎಂಬುದನ್ನು ಖಚಿತ ಪಡಿಸಿಕೊಳ್ಳಲಾಗುವುದು. ಜಾಗೃತ ದಳ ಉತ್ತಮವಾಗಿ ಕೆಲಸ ಮಾಡಿದರೆ, ಶೇ 80ರಷ್ಟು ನಿಷೇಧಿತ ಪಟಾಕಿ ಉತ್ಪಾದನೆ, ಮಾರಾಟ ನಿಯಂತ್ರಣಕ್ಕೆ ತರಲು ಸಾಧ್ಯವಿದೆ’ ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

‘ದಸರಾ, ದೀಪಾವಳಿ ವೇಳೆ ಹಸಿರು ಪಟಾಕಿ ಬಳಕೆಗೆ ಮಾತ್ರ ಅವಕಾಶ ಕಲ್ಪಿಸಲಾಗುವುದು. ಈ ಬಗ್ಗೆ ಮಂಡಳಿ ಸುತ್ತೋಲೆ ಹೊರಡಿಸಿದೆ’ ಎಂದು ಹೇಳಿದರು.

‘ಹಸಿರು ಪಟಾಕಿ ದಾಸ್ತಾನು ಮಾಡಿಕೊಂಡಿದ್ದರೆ ತೊಂದರೆ ಇಲ್ಲ. ಹಸಿರು ಪಟಾಕಿಗೆ ಲಾಂಛನವಿದೆ. ಬೇರೆ ಪಟಾಕಿ ದಾಸ್ತಾನಿಗೆ ಅವಕಾಶವೇ ಇಲ್ಲ’ ಎಂದು ಹೇಳಿದರು. ‘ಹೊರ ರಾಜ್ಯಗಳಿಂದ ನಿಷೇಧಿತ ಪಟಾಕಿಯನ್ನು ರಾಜ್ಯದ ಒಳಗೆ ತರುತ್ತಿದ್ದರೆ ರಾಜ್ಯದ ಗಡಿಗಳಲ್ಲೇ ಜಪ್ತಿ ಮಾಡಿಕೊಳ್ಳಲಾಗುವುದು’ ಎಂದರು.

ರಾತ್ರಿ 8ರಿಂದ ರಾತ್ರಿ 10 ಗಂಟೆಯವರೆಗೆ ಮಾತ್ರ ಪಟಾಕಿ ಬಳಕೆಗೆ ಸುಪ್ರೀಂ ಕೋರ್ಟ್ ಅವಕಾಶ ನೀಡಿದೆ. ಆ ಅವಧಿಯಲ್ಲಿ ಮಾತ್ರ ಹಸಿರು ಪಟಾಕಿಯನ್ನು ಬಳಕೆ ಮಾಡಬೇಕು ಎಂದರು.

ಸುದ್ದಿ 2 ನಿಮಿಷ

ನಿವೇಶನ ಹಂಚಿಕೆ ರದ್ದು ಕ್ರಮ ಎತ್ತಿಹಿಡಿದ ಹೈಕೋರ್ಟ್

ಬೆಂಗಳೂರು: ಯಲಹಂಕ ಉಪನಗರ ವ್ಯಾಪ್ತಿಯಲ್ಲಿ, ‘ದಿವ್ಯಜ್ಯೋತಿ ವಿದ್ಯಾ ಕೇಂದ್ರ ಸೊಸೈಟಿ’ಗೆ ನೀಡಲಾಗಿದ್ದ ನಾಗರಿಕ ಸೌಲಭ್ಯಕ್ಕೆ ಮೀಸಲಾದ ನಿವೇಶನ ಹಂಚಿಕೆ ರದ್ದುಪಡಿಸಿದ್ದ ಕರ್ನಾಟಕ ಗೃಹ ಮಂಡಳಿಯ (ಕೆಎಚ್‌ಬಿ) ಕ್ರಮವನ್ನು ಹೈಕೋರ್ಟ್ ಪುರಸ್ಕರಿಸಿದೆ.

ನಿವೇಶನ ಮಂಜೂರಾತಿ ರದ್ದುಪಡಿಸಿದ್ದ ಆದೇಶವನ್ನು ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿತ್ತು. ಇದನ್ನು ಪ್ರಶ್ನಿಸಿ ದಿವ್ಯಜ್ಯೋತಿ ವಿದ್ಯಾ ಕೇಂದ್ರ ಸೊಸೈಟಿ ಸಲ್ಲಿಸಿದ್ದ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

‘ಸೊಸೈಟಿಯು ಶೈಕ್ಷಣಿಕ ಕಟ್ಟಡ ನಿರ್ಮಿಸುವ ಉದ್ದೇಶಕ್ಕಾಗಿ ನಿವೇಶನ ಪಡೆದು 20 ವರ್ಷಗಳಾದರೂ ಕಟ್ಟಡ ನಿರ್ಮಾಣ ಮಾಡಿಲ್ಲ. ಹೀಗಾಗಿ, ಷರತ್ತು ಉಲ್ಲಂಘಿಸಿರುವ ಅರ್ಜಿದಾರರಿಗೆ ಸಹಾನುಭೂತಿ ತೋರುವ ಅಗತ್ಯವಿಲ್ಲ’ ಎಂದು ನ್ಯಾಯಪೀಠ ಹೇಳಿದೆ.

‘ಶೈಕ್ಷಣಿಕ ಕಟ್ಟಡ ನಿರ್ಮಾಣಕ್ಕೆ ಮಾಡಬೇಕೆಂಬ ನಿರ್ದಿಷ್ಟ ಉದ್ದೇಶಕ್ಕೆ ಸಾರ್ವಜನಿಕ ಸ್ವತ್ತನ್ನು (ಸಿಎ ನಿವೇಶನ) ಮಂಜೂರು ಮಾಡಲಾಗಿದೆ. ಆದರೆ, ಅರ್ಜಿದಾರರು ತಮ್ಮ ಉದ್ದೇಶವನ್ನು ಈಡೇರಿಸುವಲ್ಲಿ ವಿಫಲವಾಗಿದ್ದಾರೆ. ಇಂತಹ ಸಂದರ್ಭದಲ್ಲಿ ನಿವೇಶನ ಮಂಜೂರಾತಿ ಆದೇಶವನ್ನು ಉಳಿಸುವುದು ಸಾರ್ವಜನಿಕ ಹಿತಾಸಕ್ತಿಯ ವಿರೋಧಿ ಕ್ರಮವಾಗಲಿದೆ’ ಎಂದು ನ್ಯಾಯಪೀಠ ಹೇಳಿತು.

‘ಅರ್ಜಿದಾರ ಸಂಸ್ಥೆಯು ನಿವೇಶನದ ಸ್ವಾಧೀನಾನುಭವನ್ನು 4 ವಾರಗಳಲ್ಲಿ ಕೆಎಚ್‌ಬಿ ವಶಕ್ಕೆ ನೀಡಬೇಕು. ಕೆಎಚ್‌ಬಿಯು, ಸಂಸ್ಥೆ ಪಾವತಿಸಿರುವ ಹಣವನ್ನು ಹಿಂದಿರುಗಿಸಬೇಕು’ ಎಂದು ಆದೇಶಿಸಿದೆ.

ಹಾಲಶ್ರೀಗೆ ಜಾಮೀನು ನಿರಾಕರಣೆ

ಬೆಂಗಳೂರು: ವಂಚನೆ ಪ್ರಕರಣದ ಆರೋಪಿಯಾದ ವಿಜಯನಗರ ಜಿಲ್ಲೆ ಹಿರೇಹಡಗಲಿ ಹಾಲಸ್ವಾಮಿ ಮಠದ ಅಭಿನವ ಹಾಲಶ್ರೀ ಸ್ವಾಮೀಜಿಗೆ ನಗರದ ಸೆಷನ್ಸ್ ನ್ಯಾಯಾಲಯ ಜಾಮೀನು ನಿರಾಕರಿಸಿದೆ.

ಈ ಸಂಬಂಧ ಹಾಲಶ್ರೀ ಸ್ವಾಮೀಜಿ ಸಲ್ಲಿಸಿದ್ದ ಜಾಮೀನು ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು 57ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಟಿ. ಗೋವಿಂದಯ್ಯ ಸೋಮವಾರ ಪ್ರಕಟಿಸಿದ್ದಾರೆ.

"ಉಡುಪಿ ಜಿಲ್ಲೆಯ ಬೈಂದೂರು ಕ್ಷೇತ್ರದಿಂದ ಸ್ಪರ್ಧಿಸಲು ಬಿಜೆಪಿ ಟಿಕೆಟ್ ಕೊಡಿಸುವುದಾಗಿ ನಂಬಿಸಿ ನನ್ನಿಂದ ₹ 5 ಕೋಟಿ ಪಡೆದು ವಂಚಿಸಿದ್ದಾರೆ" ಎಂದು ಆರೋಪಿಸಿ ಉದ್ಯಮಿ ಗೋವಿಂದ ಬಾಬು ಪೂಜಾರಿ ಪೊಲೀಸರಿಗೆ ದೂರು ನೀಡಿದ್ದರು.

ಈ ಪ್ರಕರಣದಲ್ಲಿ ₹ 1.50 ಕೋಟಿ ಪಡೆದ ಆರೋಪ ಎದುರಿಸುತ್ತಿರುವ ಸ್ವಾಮೀಜಿಯನ್ನು 2023ರ ಸೆಪ್ಟೆಂಬರ್ 19ರಂದು ಸಿಸಿಬಿ ಪೊಲೀಸರು ಒಡಿಶಾದ ಕಟಕ್‌ನಲ್ಲಿ ಬಂಧಿಸಿದ್ದರು.

ಕೆಂಪೇಗೌಡ ನಗರದ ಶ್ರೀ ಬಂಡೆಮಹಾಂಕಾಳಿ ದೇವಸ್ಥಾನದಲ್ಲಿ ಸೋಮವಾರ ನವರಾತ್ರಿ ಆಚರಣೆ ಪ್ರಯುಕ್ತ ದುರ್ಗಾಮೂರ್ತಿಗಳನ್ನು ಅಲಂಕೃತವಾಗಿ ಸಿದ್ಧಗೊಳಿಸುತ್ತಿರುವ ಭಕ್ತಾದಿಗಳು ಪ್ರಜಾವಾಣಿ ಚಿತ್ರ /ಕಿಶೋರ್ ಕುಮಾರ್ ಬೋಳಾರ್

ನಿರಂತರ ವಿದ್ಯುತ್ ಪೂರೈಕೆಗೆ ರೈತ ಸಂಘ ಆಗ್ರಹ

ಬೆಂಗಳೂರು: ರಾಜ್ಯದ ಗ್ರಾಮೀಣ ಪ್ರದೇಶಗಳಿಗೆ ಹಾಗೂ ರೈತರ ಪಂಪ್‌ಸೆಟ್‌ಗಳಿಗೆ ಸತತ 8 ಗಂಟೆ ನಿರಂತರ ವಿದ್ಯುತ್ ಪೂರೈಕೆ ಮಾಡಲಾಗುವುದು ಎಂದು ಪ್ರಣಾಳಿಕೆಯಲ್ಲಿ ಭರವಸೆ ನೀಡಿದ್ದ ಕಾಂಗ್ರೆಸ್ ಸರ್ಕಾರ ಇದೀಗ ಲೋಡ್ ಶೆಡ್ಡಿಂಗ್ ಜಾರಿಗೊಳಿಸಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಆರೋಪಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್, ‘ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದ್ದು ರೈತರು ಬೆಳೆಗಳಿಗೆ ನೀರು ಹಾಯಿಸಲು ಪರದಾಡುತ್ತಿದ್ದಾರೆ. ರಾತ್ರಿ ವೇಳೆಯೂ ತ್ರಿ-ಫೇಸ್ ವಿದ್ಯುತ್ ಸರಬರಾಜು ಕಡಿತಗೊಳ್ಳುತ್ತಿದ್ದು ರೈತರು ರಾತ್ರಿಯಿಡೀ ನಿದ್ದೆಗೆಟ್ಟು ವಿದ್ಯುತ್‌ಗಾಗಿ ಕಾಯುವ ಪರಿಸ್ಥಿತಿ ಎದುರಾಗಿದೆ’ ಎಂದರು.

‘ಬಿಜೆಪಿ ಸರ್ಕಾರ ಜಾರಿಗೊಳಿಸಿರುವ ಮೂರು ಕೃಷಿ ಕಾಯ್ದೆಗಳನ್ನು ರದ್ದುಗೊಳಿಸುತ್ತೇವೆ ಎಂದು ಹೇಳುತ್ತಾ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಿದೆ. ಆದರೆ ಇದುವರೆಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಈ ಬಗ್ಗೆ ಮಾತನಾಡುತ್ತಿಲ್ಲ’ ಎಂದು ದೂರಿದರು.

‘ಬೆಂಬಲ ಬೆಲೆಗೆ (ಎಂಎಸ್‌ಪಿ) ನೀತಿ ರೂಪಿಸಿ ಶಾಸನಬದ್ಧಗೊಳಿಸಬೇಕು. ಇಲ್ಲದಿದ್ದರೆ ರೈತರಿಗೆ ಉಳಿಗಾಲವಿಲ್ಲ. ಸಿಎಂ ಸಿದ್ದರಾಮಯ್ಯ ಅವರು ಕೊಬ್ಬರಿಗೆ ಘೋಷಣೆ ಮಾಡಿದ್ದ ₹1,250 ಸಹಾಯ ಧನ ಒಂದು ಸಾವಿರ ರೈತರಿಗೂ ತಲುಪಿಲ್ಲ. ರಾಜ್ಯದಲ್ಲಿ ಬರಗಾಲ ಘೋಷಣೆಯಾಗಿದ್ದು, ರಾಜ್ಯ ಸರ್ಕಾರ ರೈತರ ಪರವಾಗಿ ನಿಂತುಕೊಳ್ಳಬೇಕು’ ಎಂದು ಆಗ್ರಹಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಭಕ್ತರಹಳ್ಳಿ ಬೈರೇಗೌಡ, ಕಾರ್ಯದರ್ಶಿಗಳಾದ ಹುಸ್ಕೂರು ಸುರೇಶ, ವೀರಭದ್ರಸ್ವಾಮಿ ಇದ್ದರು.

ಶಕ್ತಿ ಟಿಕೆಟ್ ಹರಿದ ನಿರ್ವಾಹಕ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶಕ್ತಿ’ ಯೋಜನೆಯ ಉಚಿತ ಟಿಕೆಟ್‌ಗಳನ್ನು ಹರಿದು ಬಿಸಾಡಿದ ಆರೋಪದಲ್ಲಿ ಬಿಎಂಟಿಸಿ ಚಾಲಕ ಕಂ ನಿರ್ವಾಹಕರೊಬ್ಬರನ್ನು ಅಮಾನತು ಮಾಡಲಾಗಿದೆ.

ಘಟಕ 17ರ ಮಾರ್ಗ ಸಂಖ್ಯೆ 242 ‘ಬಿ’ಯಲ್ಲಿ (ಮೆಜೆಸ್ಟಿಕ್–ತಾವರಕೆರೆ) ಕಾರ್ಯನಿರ್ವಹಿಸುತ್ತಿದ್ದ ಪ್ರಕಾಶ ಅರ್ಜುನ ಕೊಟ್ಯಾಳ ಅಮಾನತು ಆದವರು.

ಟಿಕೆಟ್ ಮಷಿನ್ ಇಲ್ಲದ ಕೆಲವು ಬಸ್‌ಗಳಲ್ಲಿ ಪ್ರಯಾಣಿಕರಿಗೆ ಬಣ್ಣದ ಟಿಕೆಟ್ ನೀಡಲಾಗುತ್ತದೆ. ‘ಶಕ್ತಿ’ ಯೋಜನೆಯಡಿ ಪ್ರಯಾಣಿಸುವ ಮಹಿಳೆಯರಿಗೆ ಪ್ರತ್ಯೇಕ ಟಿಕೆಟ್ ಇದೆ. ಹೆಚ್ಚಿನ ಇನ್ಸೆಂಟಿವ್ ಆಸೆಯಿಂದ ಈ ಟಿಕೆಟ್‌ಗಳನ್ನು ಹರಿದು ಬಿಸಾಡಿದ್ದ ವಿಡಿಯೊ ಹರಿದಾಡಿತ್ತು. ಈ ಬಗ್ಗೆ ವಿಚಾರಣೆ ನಡೆಸಿದ ಮೇಲಧಿಕಾರಿಗಳು ಕರ್ತವ್ಯದಿಂದ ಅಮಾನತು ಮಾಡಿದ್ದಾರೆ.

‘ಶಕ್ತಿ’ ಯೋಜನೆಯನ್ನು ಎಲ್ಲ ಘಟಕದ ಅಧಿಕಾರಿಗಳು ಮತ್ತು ಸಿಬ್ಬಂದಿ ಸಮರ್ಪಕವಾಗಿ ನಿರ್ವಹಣೆ ಮಾಡಬೇಕು. ತಪ್ಪಿದರೆ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಸತ್ಯವತಿ ಜಿ. ಎಚ್ಚರಿಕೆ ನೀಡಿದ್ದಾರೆ.

2019ರಲ್ಲಿ ಕ್ರಿಕೆಟ್ ಆಡುವಾಗ ಗಲಾಟೆ: ಹಳೇ ವೈಷಮ್ಯದಿಂದ ಕೃತ್ಯ

ಸ್ನೇಹಿತನ ಹತ್ಯೆ: ಕೈ ಕತ್ತರಿಸಿ ವಿಡಿಯೊ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮಮೂರ್ತಿನಗರ ಠಾಣೆ ವ್ಯಾಪ್ತಿಯಲ್ಲಿ ಮದನ್ ಅಲಿಯಾಸ್ ರಿಚರ್ಡ್ ಅವರನ್ನು ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿದ್ದ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

‘ರಿತಿಕ್ ಕುಮಾರ್ ಹಾಗೂ ಸುಮನ್ ಬಂಧಿತರು. ಅ. 11ರಂದು ಮದನ್ ಅವರನ್ನು ಕೊಲೆ ಮಾಡಿ ಆರೋಪಿಗಳು ಪರಾರಿಯಾಗಿದ್ದರು. ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳು ಹಾಗೂ ಇತರೆ ಪುರಾವೆಗಳನ್ನು ಆಧರಿಸಿ ಇಬ್ಬರು ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಮದನ್

ಕ್ರಿಕೆಟ್ ಆಡುವಾಗ ಗಲಾಟೆ: ‘ಮದನ್ ಹಾಗೂ ಆರೋಪಿಗಳು, ಹಲವು ವರ್ಷಗಳ ಸ್ನೇಹಿತರು. ಎಲ್ಲರೂ ಸೇರಿ ಆಗಾಗ ಕ್ರಿಕೆಟ್ ಆಡುತ್ತಿದ್ದರು. 2019ರಲ್ಲಿ ಕ್ರಿಕೆಟ್ ಆಡುವಾಗ ಮದನ್ ಹಾಗೂ ರಿತಿಕ್ ಕುಮಾರ್ ನಡುವೆ ಗಲಾಟೆ ಆಗಿತ್ತು. ಸಿಟ್ಟಾಗಿದ್ದ ಮದನ್, ಬ್ಯಾಟ್‌ನಿಂದ ರಿತಿಕ್ ತಲೆಗೆ ಹೊಡೆದಿದ್ದ. ತೀವ್ರ ಗಾಯಗೊಂಡಿದ್ದ ರಿತಿಕ್, ಪ್ರಜ್ಞೆ ತಪ್ಪಿ ಬಿದ್ದಿದ್ದ. ಆತನನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, 9 ತಿಂಗಳು ಆಸ್ಪತ್ರೆಯಲ್ಲಿದ್ದ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಹಲ್ಲೆ ಮಾಡಿದ ನಂತರ ಮದನ್, ನಗರ ತೊರೆದು ಚೆನ್ನೈಗೆ ಹೋಗಿದ್ದರು. ಅಲ್ಲಿಯೇ ಕ್ಯಾಬ್ ಚಾಲಕರಾಗಿ ಕೆಲಸ ಮಾಡುತ್ತಿದ್ದರು. ಆಸ್ಪತ್ರೆಯಿಂದ ಮನೆಗೆ ಬಂದಿದ್ದ ರಿತಿಕ್, ಸೇಡು ತೀರಿಸಿಕೊಳ್ಳಲು ಕಾಯುತ್ತಿದ್ದ. ಮದನ್ ಅವರನ್ನು ಕೊಲೆ ಮಾಡಲು ಸ್ನೇಹಿತ ಸುಮನ್ ಜೊತೆ ಸೇರಿ ಸಂಚು ರೂಪಿಸಿದ್ದ’ ಎಂದು ಹೇಳಿವೆ.

ಕರೆ ಮಾಡಿ ಕರೆಸಿಕೊಂಡು ಹತ್ಯೆ: ‘ಇತ್ತೀಚೆಗೆ ಮದನ್‌ಗೆ ಕರೆ ಮಾಡಿದ್ದ ಆರೋಪಿ ರಿತಿಕ್, ‘ನಾವೆಲ್ಲರೂ ಸ್ನೇಹಿತರು. ನಮ್ಮಲ್ಲಿ ಜಗಳ ಬೇಡ. ನೀನು ವಾಪಸು ಬೆಂಗಳೂರಿಗೆ ಬಾ. ಎಲ್ಲರೂ ಮೊದಲಿನ ಹಾಗೆ ಇರೋಣ’ ಎಂದಿದ್ದ. ಅದನ್ನು ನಂಬಿದ್ದ ಮದನ್, ಬೆಂಗಳೂರಿಗೆ ಬಂದಿದ್ದರು’ ಎಂದು ಮೂಲಗಳು ತಿಳಿಸಿವೆ.

‘ಅ. 11ರಂದು ಮದನ್ ಹಾಗೂ ಆರೋಪಿಗಳು, ಒಂದೆಡೆ ಸೇರಿದ್ದರು. ಹಳೇ ಗಲಾಟೆ ವಿಚಾರವಾಗಿ ಮಾತಿಗೆ ಮಾತು ಬೆಳೆದು ಜಗಳ ಶುರುವಾಗಿತ್ತು. ಇದೇ ಸಂದರ್ಭದಲ್ಲಿ ಆರೋಪಿಗಳು, ಸಮೀಪದಲ್ಲೇ ಬಚ್ಚಿಟ್ಟಿದ್ದ ಮಾರಕಾಸ್ತ್ರ ತಂದು ಮದನ್ ಮೇಲೆ ದಾಳಿ ಮಾಡಿದ್ದರು. ಮದನ್ ತಪ್ಪಿಸಿಕೊಂಡು ಓಡಲಾರಂಭಿಸಿದ್ದರು.’

‘ಮದನ್ ಅವರನ್ನು ಬೆನ್ನಟ್ಟಿದ್ದ ಆರೋಪಿಗಳು, ರಸ್ತೆಯಲ್ಲೇ ಮಾರಕಾಸ್ತ್ರ ಬೀಸಿದ್ದರು. ಇದರಿಂದ ಮದನ್ ಮೈ ಮೇಲೆ ಗಾಯಗಳಾಗಿದ್ದವು. ಪ್ರಾಣಭಯದಿಂದ ಮದನ್ ಸಲೂನ್‌ವೊಂದರ ಒಳಗೆ ಹೋಗಿದ್ದರು. ಅಲ್ಲಿಗೂ ನುಗ್ಗಿದ್ದ ಆರೋಪಿಗಳು, ಮದನ್ ಅವರ ಎರಡೂ ಕೈಗಳನ್ನು ಕತ್ತರಿಸಿದ್ದರು. ನಂತರ, ದೇಹದ ಹಲವು ಭಾಗಗಳಿಗೆ ಮಾರಕಾಸ್ತ್ರಗಳಿಂದ ಹೊಡೆದಿದ್ದರು. ತೀವ್ರ ಗಾಯಗೊಂಡು ಮದನ್ ಸ್ಥಳದಲ್ಲೇ ಮೃತಪಟ್ಟರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಕೈಗಳನ್ನು ಕತ್ತರಿಸಿದ್ದ ದೃಶ್ಯವನ್ನು ಆರೋಪಿ ತನ್ನ ಮೊಬೈಲ್ ಕ್ಯಾಮೆರಾದಲ್ಲಿ ಸೆರೆ ಹಿಡಿದಿದ್ದಾನೆ. ಇದೇ ದೃಶ್ಯವನ್ನು ಸ್ನೇಹಿತರಿಗೆ ತೋರಿಸಿದ್ದ ಆರೋಪಿ, ‘ಸೇಡು ತೀರಿಸಿಕೊಂಡೆ’ ಎಂದು ಸಂಭ್ರಮಪಟ್ಟಿದ್ದ’ ಎಂದು ಮೂಲಗಳು ತಿಳಿಸಿವೆ.

ಮರಳಿನಲ್ಲಿ ಮೃತದೇಹ: ಮರುದಿನವೇ ಮತ್ತೊಂದು ಕೊಲೆ

ಬೆಂಗಳೂರು: ಮಹಾಲಕ್ಷ್ಮಿ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ಭಾನುವಾರ ಮೃತದೇಹ ಪತ್ತೆಯಾಗಿದ್ದು, ಇದೇ ಠಾಣೆ ವ್ಯಾಪ್ತಿಯಲ್ಲಿ ಮರುದಿನವಾದ ಸೋಮವಾರ ಮತ್ತೊಂದು ಕೊಲೆ ನಡೆದಿದೆ.

‘ಪ್ರತ್ಯೇಕ ಪ್ರಕರಣಗಳಲ್ಲಿ ಭಾನುವಾರ ಹಾಗೂ ಸೋಮವಾರ ಎರಡು ಕೊಲೆಗಳಾಗಿವೆ. ಆರೋಪಿಗಳನ್ನು ಪತ್ತೆ ಮಾಡಲು ವಿಶೇಷ ತಂಡಗಳನ್ನು ರಚಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ಮರಳು ರಾಶಿಯಲ್ಲಿ ಮೃತದೇಹ: ‘ಯಶವಂತಪುರ ನಿವಾಸಿ ರಾಜು (45) ಅವರನ್ನು ಮಾರಕಾಸ್ತ್ರಗಳಿಂದ ಹೊಡೆದು ಕೊಲೆ ಮಾಡಲಾಗಿದೆ. ಕುರುಬರಹಳ್ಳಿಗೆ ಹೊಂದಿಕೊಂಡಿರುವ ಲಗ್ಗೆರೆಯ 16ನೇ ಅಡ್ಡರಸ್ತೆಯ ನಿರ್ಮಾಣ ಹಂತದ ಕಟ್ಟಡವೊಂದರ ಮರಳಿನ ರಾಶಿಯಲ್ಲಿ ಭಾನುವಾರ ಮೃತದೇಹ ಪತ್ತೆಯಾಗಿದೆ’ ಎಂದು ಪೊಲೀಸರು ತಿಳಿಸಿದರು.

‘ಹಲವು ದಿನಗಳ ಹಿಂದೆಯೇ ರಾಜು ಅವರನ್ನು ಕೊಲೆ ಮಾಡಿರುವ ದುಷ್ಕರ್ಮಿಗಳು, ಮೃತದೇಹವನ್ನು ಮರಳು ರಾಶಿಯಲ್ಲಿ ಬಚ್ಚಿಟ್ಟಿದ್ದರು. ರಸ್ತೆಯಲ್ಲಿ ಓಡಾಡುತ್ತಿದ್ದ ನಾಯಿಗಳು, ಮರಳು ಕೆದರಿ ಮೃತದೇಹವನ್ನು ಹೊರಗೆ ತೆಗೆದಿದ್ದವು. ಅದನ್ನು ನೋಡಿದ್ದ ಸ್ಥಳೀಯರು ಠಾಣೆಗೆ ಮಾಹಿತಿ ನೀಡಿದ್ದರು’ ಎಂದು ಹೇಳಿದರು.

‘ಆರಂಭದಲ್ಲಿ ಮೃತರ ಹೆಸರು ಗೊತ್ತಾಗಿರಲಿಲ್ಲ. ಫೋಟೊವನ್ನು ಎಲ್ಲ ಠಾಣೆಗಳಿಗೆ ಕಳುಹಿಸಲಾಗಿತ್ತು. ಇದೀಗ ಮೃತರ ಗುರುತು ಪತ್ತೆಯಾಗಿದೆ. ನಿರ್ಮಾಣ ಹಂತದ ಕಟ್ಟಡದ ಮಾಲೀಕರಿಂದ ಹೇಳಿಕೆ ಪಡೆದು ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ತಿಳಿಸಿದರು.

ಮಾರಕಾಸ್ತ್ರಗಳಿಂದ ಹೊಡೆದು ಕೊಲೆ: ‘ಆರ್‌ಎಂಸಿ ಯಾರ್ಡ್ ಬಳಿಯ ಸೋಮೇಶ್ವರನಗರದಲ್ಲಿ ಸಜ್ಜನ್ ಸಿಂಗ್ (33) ಅವರನ್ನು ಮಾರಕಾಸ್ತ್ರಗಳಿಂದ ಹೊಡೆದು ಕೊಲೆ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಉತ್ತರ ಭಾರತದ ಸಜ್ಜನ್ ಸಿಂಗ್ ಕೆಲ ತಿಂಗಳ ಹಿಂದೆಯಷ್ಟೇ ನಗರಕ್ಕೆ ಬಂದಿದ್ದರು. ಆರ್‌ಎಂಸಿ ಯಾರ್ಡ್‌ನಲ್ಲಿ ಕೂಲಿ ಕೆಲಸ ಮಾಡುತ್ತಿದ್ದರು. ಕ್ಷುಲ್ಲಕ ಕಾರಣಕ್ಕೆ ಜಗಳ ತೆಗೆದಿದ್ದ ಆರೋಪಿಗಳು, ಸಜ್ಜನ್ ಸಿಂಗ್ ಅವರ ಕೈ–ಕಾಲುಗಳು, ಹೊಟ್ಟೆ ಹಾಗೂ ಎದೆಗೆ ಮಾರಕಾಸ್ತ್ರಗಳಿಂದ ಹೊಡೆದು ಕೊಲೆ ಮಾಡಿದ್ದಾರೆ. ಕೃತ್ಯದ ಬಳಿಕ ಆರೋಪಿಗಳು ಪರಾರಿಯಾಗಿದ್ದಾರೆ’ ಎಂದು ತಿಳಿಸಿದರು.

ಸ್ನೇಹಿತರ ಜತೆ ಸಲುಗೆಗೆ ಒತ್ತಾಯ: ಪತಿ ವಿರುದ್ಧ ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತಮ್ಮ ಸ್ನೇಹಿತರ ಜತೆ ಸಲುಗೆ ಇಟ್ಟುಕೊಳ್ಳುವಂತೆ ಪತಿ ಒತ್ತಾಯಿಸುತ್ತಿದ್ದು, ಅದಕ್ಕೆ ಒಪ್ಪದಿದ್ದಕ್ಕೆ ಮಾನಸಿಕವಾಗಿ ಹಾಗೂ ದೈಹಿಕ ಕಿರುಕುಳ ನೀಡುತ್ತಿದ್ದಾರೆ’ ಎಂದು ಆರೋಪಿಸಿ ಮಹಿಳೆಯೊಬ್ಬರು ಅಮೃತಹಳ್ಳಿ ಠಾಣೆಗೆ ದೂರು ನೀಡಿದ್ದಾರೆ.

ದೂರಿನ್ವಯ ಮಹಿಳೆಯ ಪತಿ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಆರೋಪಿಗಳ ವಿಚಾರಣೆಗಾಗಿ ನೋಟಿಸ್ ನೀಡಿರುವ ಪೊಲೀಸರು, ತನಿಖೆ ಮುಂದುವರಿಸಿದ್ದಾರೆ.

‘ದೂರುದಾರ ಮಹಿಳೆ ಹಾಗೂ ಆರೋಪಿ, 2007ರಲ್ಲಿ ಮದುವೆಯಾಗಿದ್ದಾರೆ. ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಇತ್ತೀಚೆಗೆ ದೂರುದಾರರ ಮೊಬೈಲ್ ಹಾಳಾಗಿತ್ತು. ಹೀಗಾಗಿ, ಪತಿಯ ಮೊಬೈಲ್ ಬಳಸುತ್ತಿದ್ದರು. ಇದೇ ಸಂದರ್ಭದಲ್ಲಿ ಪತಿಯ ವಾಟ್ಸ್‌ಆ್ಯಪ್ ಚಾಟಿಂಗ್ ಗಮನಿಸಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಸ್ನೇಹಿತರು ಹಾಗೂ ಬೇರೆ ಮಹಿಳೆಯರ ಜೊತೆ ಲೈಂಗಿಕ ವಿಷಯಗಳ ಬಗ್ಗೆ ಪತಿ ಮಾತನಾಡಿದ್ದನ್ನು ದೂರುದಾರರು ಕಂಡಿದ್ದರು. ಈ ಬಗ್ಗೆ ಪತಿಯನ್ನು ಪ್ರಶ್ನಿಸಿದ್ದರು. ಅಷ್ಟಕ್ಕೆ ಮನೆಯಲ್ಲಿ ಜಗಳ ಶುರುವಾಗಿತ್ತು. ‘ನಾನು ಏನಾದರೂ ಮಾಡಿಕೊಳ್ಳುತ್ತೇನೆ. ಕೇಳಲು ನೀನು ಯಾರು?’ ಎಂದು ಪತ್ನಿಯೊಂದಿಗೆ ಪತಿ ಗಲಾಟೆ ಮಾಡಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ನೀನು ನನ್ನ ಸ್ನೇಹಿತರ ಜೊತೆ ಸಲುಗೆ ಇಟ್ಟುಕೊಳ್ಳಬೇಕು. ಇಲ್ಲದಿದ್ದರೆ, ನಿನ್ನನ್ನು ಹಾಗೂ ನಿನ್ನ ಮಕ್ಕಳನ್ನು ಸುಮ್ಮನೇ ಬಿಡುವುದಿಲ್ಲ. ನಿಮಗೆ ಯಾವುದೇ ಜೀವನಾಂಶವನ್ನೂ ನೀಡುವುದಿಲ್ಲ’ ಎಂದು ಪತಿ ಬೆದರಿಸಿದ್ದರು. ಇದರಿಂದ ನೊಂದ ಮಹಿಳೆ, ಅಮೃತಹಳ್ಳಿ ಠಾಣೆಗೆ ಬಂದು ದೂರು ನೀಡಿದ್ದಾರೆ’ ಎಂದು ಪೊಲೀಸ್ ಇಲಾಖೆಯ ಮೂಲಗಳು ಹೇಳಿವೆ.

ಮಹಿಳೆ ಮೇಲೆ ಮಚ್ಚಿನಿಂದ ಹಲ್ಲೆ: ಆರೋಪಿ ವಶಕ್ಕೆ

ಬೆಂಗಳೂರು: ಸುಬ್ರಮಣ್ಯನಗರ ಠಾಣೆ ವ್ಯಾಪ್ತಿಯಲ್ಲಿ ಮಹಿಳೆಯೊಬ್ಬರಿಗೆ ಮಚ್ಚಿನಿಂದ ಹೊಡೆದು ಹಲ್ಲೆ ಮಾಡಲಾಗಿದ್ದು, ಕೃತ್ಯ ಎಸಗಿದ್ದ ಆರೋಪಿಯೊಬ್ಬನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ಸ್ಥಳೀಯ ನಿವಾಸಿ ವೀಣಾ (48) ಅವರ ಮನೆಗೆ ನುಗ್ಗಿದ್ದ ಆರೋಪಿಗಳು ಕೃತ್ಯ ಎಸಗಿ ಪರಾರಿಯಾಗಿದ್ದರು. ಒಬ್ಬ ಸಿಕ್ಕಿಬಿದ್ದಿದ್ದು, ವಿಚಾರಣೆ ನಡೆಸಲಾಗುತ್ತಿದೆ. ಮತ್ತಷ್ಟು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ. ಘಟನೆಯಲ್ಲಿ ಗಾಯಗೊಂಡಿರುವ ವೀಣಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ’ ಎಂದು ತಿಳಿಸಿದರು.

‘ಗಣೇಶ ಪ್ರತಿಷ್ಠಾಪನೆ ವಿಚಾರವಾಗಿ ಎರಡು ಗುಂಪುಗಳ ನಡುವೆ ಜಗಳ ಆಗಿತ್ತು. ಬೇರೆ ಪ್ರದೇಶದ ನಿವಾಸಿಗಳಾದ ಆರೋಪಿಗಳು, ಎದುರಾಳಿ ತಂಡ ಯುವಕನನ್ನು ಹುಡುಕಿಕೊಂಡು ಗಾಯತ್ರಿನಗರಕ್ಕೆ ಭಾನುವಾರ ರಾತ್ರಿ ಬಂದಿದ್ದರು.’

‘ಯುವಕನ ಮನೆ ಇರಬಹುದೆಂದು ತಿಳಿದು ವೀಣಾ ಅವರ ಮನೆ ಬಾಗಿಲಿಗೆ ಮಚ್ಚಿನಿಂದ ಹೊಡೆದಿದ್ದರು. ವೀಣಾ ಬಾಗಿಲು ತೆಗೆಯುತ್ತಿದ್ದಂತೆ ಅವರ ಕೈಗೆ ಮಚ್ಚಿನಿಂದ ಏಟು ಬಿದ್ದಿತ್ತು. ರಕ್ತ ಸೋರಲಾರಂಭಿಸಿತ್ತು. ವೀಣಾ ಕೂಗಾಡುತ್ತಿದ್ದಂತೆ ಸ್ಥಳೀಯರು ಜಮಾಯಿಸಿದ್ದರು. ಆರೋಪಿಗಳು ಸ್ಥಳದಿಂದ ಪರಾರಿಯಾಗಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಸುಧಾಮೂರ್ತಿ ಹೆಸರಿನಲ್ಲಿ ವಂಚನೆ: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇನ್ಫೊಸಿಸ್ ಪ್ರತಿಷ್ಠಾನದ ಅಧ್ಯಕ್ಷೆ ಸುಧಾಮೂರ್ತಿ ಹೆಸರಿನಲ್ಲಿ ಜನರನ್ನು ವಂಚಿಸುತ್ತಿದ್ದ ಆರೋಪಿ ಅರುಣ್ ಸುದರ್ಶನ್‌ನನ್ನು (40) ಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ರಾಜಾಜಿನಗರ ನಿವಾಸಿ ಅರುಣ್ ಸುದರ್ಶನ್, ಕಾರ್ಯಕ್ರಮ ಸಂಘಟನಾ ಸಂಸ್ಥೆ ನಡೆಸುತ್ತಿದ್ದ. ಸುಧಾಮೂರ್ತಿ ಅವರ ಸಹಾಯಕರು ನೀಡಿದ್ದ ದೂರಿನನ್ವಯ ಎಫ್‌ಐಆರ್ ದಾಖಲಿಸಿಕೊಂಡು, ಆರೋಪಿಯನ್ನು ಸೆರೆ ಹಿಡಿಯಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆರೋಪಿ ಅರುಣ್, ಸಂಬಂಧಿಕರಾದ ಶ್ರುತಿ ಮೇಲೆ ದ್ವೇಷ ಸಾಧಿಸುತ್ತಿದ್ದ. ಅವರ ಹೆಸರಿಗೆ ಚ್ಯುತಿ ತರಲು ಸಂಚು ರೂಪಿಸಿ ಕೃತ್ಯ ಎಸಗಿದ್ದ. ಆರಂಭದಲ್ಲಿ, ಶ್ರುತಿ ಹಾಗೂ ಲಾವಣ್ಯಾ ಆರೋಪಿ ಎಂಬುದಾಗಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ತನಿಖೆ ನಡೆಸಿದಾಗ, ಅರುಣ್ ತಪ್ಪೊಪ್ಪಿಕೊಂಡ’ ಎಂದು ತಿಳಿಸಿವೆ.

‘ಶ್ರುತಿ ಕುಟುಂಬ ಅಮೆರಿಕದಲ್ಲಿದೆ. ಅಲ್ಲಿಯ ಕನ್ನಡ ಕೂಟದ ಕಾರ್ಯಕ್ರಮ ನಡೆಸಲು ಮುಂದಾಗಿದ್ದ ಶ್ರುತಿ, ಸುಧಾಮೂರ್ತಿ ಅವರನ್ನು ಕರೆತರುವಂತೆ ಆರೋಪಿ ಅರುಣ್‌ಗೆ ಹೇಳಿದ್ದರು. ಅದಕ್ಕೆ ಒಪ್ಪಿದ್ದ ಅರುಣ್, ‘ಸುಧಾಮೂರ್ತಿ ಅವರ ಆಪ್ತ ಸಹಾಯಕಿ ಲಾವಣ್ಯಾ ಜೊತೆ ಮಾತನಾಡಿದ್ದೇನೆ. ಕಾರ್ಯಕ್ರಮ ಸುಧಾಮೂರ್ತಿ ಬರುತ್ತಾರೆ’ ಎಂಬುದಾಗಿ ಹೇಳಿ ₹5 ಲಕ್ಷ ಪಡೆದಿದ್ದ.’

‘ಕಾರ್ಯಕ್ರಮಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಿದ್ದ ಶ್ರುತಿ, ಸುಧಾಮೂರ್ತಿ ಕಾರ್ಯಕ್ರಮಕ್ಕೆ 40 ಡಾಲರ್ (₹3,200) ಪ್ರವೇಶ ಶುಲ್ಕ ನಿಗದಿಪಡಿಸಿದ್ದರು. ಸಾಮಾಜಿಕ ಮಾಧ್ಯಮಗಳಲ್ಲಿ ಕಾರ್ಯಕ್ರಮದ ಜಾಹೀರಾತು ಸಹ ನೀಡಲಾಗಿತ್ತು’ ಎಂದು ಹೇಳಿವೆ.

‘ಕಾರ್ಯಕ್ರಮದ ಬಗ್ಗೆ ಮಾಹಿತಿ ಗೊತ್ತಾಗುತ್ತಿದ್ದಂತೆ ಸುಧಾಮೂರ್ತಿ ಅವರ ಸಹಾಯಕರು, ಸಂಘಟಕರನ್ನು ಸಂಪರ್ಕಿಸಿದ್ದರು. ಸುಧಾಮೂರ್ತಿ ಕರೆತರುವುದಾಗಿ ಹೇಳಿರುವ ಶ್ರುತಿ ಹಾಗೂ ಲಾವಣ್ಯಾ, ಹಣ ಪಡೆದಿರುವುದಾಗಿ ಸಂಘಟಕರು ಹೇಳಿದ್ದರು. ಅವಾಗಲೇ ಸಹಾಯಕರು, ಶ್ರುತಿ ಹಾಗೂ ಲಾವಣ್ಯಾ ಮೇಲೆ ದೂರು ನೀಡಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಶ್ರುತಿ ಹಾಗೂ ಲಾವಣ್ಯ ಮೇಲೆ ಅನುಮಾನವಿತ್ತು. ಕೆಲ ಪುರಾವೆಗಳನ್ನು ಪರಿಶೀಲಿಸಿದಾಗ, ಅರುಣ್ ಕೃತ್ಯ ತಿಳಿಯಿತು. ಸುಳ್ಳು ಹೇಳಿ ಹಣ ಪಡೆದು ಶ್ರುತಿ ಅವರನ್ನು ಪ್ರಕರಣದಲ್ಲಿ ಸಿಲುಕಿ ಜೈಲಿಗೆ ಕಳುಹಿಸುವ ಉದ್ದೇಶವಿತ್ತು ಎಂಬುದಾಗಿ ಆರೋಪಿ ಹೇಳಿಕೊಂಡಿದ್ದಾನೆ’ ಎಂದು ಮೂಲಗಳು ವಿವರಿಸಿವೆ.

ಮಂಗಳಾದೇವಿ ದೇವಸ್ಥಾನದ ಜಾತ್ರೆ: ವ್ಯಾಪಾರ ವಿವಾದಕ್ಕೆ ಹೊಸ ತಿರುವು

ಹಿಂದೂಗಳ ಮಳಿಗೆಗಳಲ್ಲಿ ಭಗವಾಧ್ವಜ

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರದ ಮಂಗಳಾದೇವಿ ದೇವಸ್ಥಾನ ನವರಾತ್ರಿ ಜಾತ್ರೆಯಲ್ಲಿ ಹಿಂದೂಯೇತರರಿಗೂ ವ್ಯಾಪಾರಕ್ಕೆ ಅವಕಾಶ ಕಲ್ಪಿಸಿರುವುದಕ್ಕೆ ವಿಶ್ವ ಹಿಂದೂ ಪರಿಷತ್ ಹಾಗೂ ಸನಾತನ ಹಿಂದೂ ವ್ಯಾಪಾರಸ್ಥರ ಸಂಘದವರು ವಿರೋಧ ವ್ಯಕ್ತಪಡಿಸಿದ್ದಾರೆ.

ಇಲ್ಲಿ ಹರಾಜಿನಲ್ಲಿ ಮಳಿಗೆಗಳನ್ನು ಪಡೆದ ಮುಸ್ಲಿಂ ವ್ಯಾಪಾರಿಗಳ ಬಳಿ ಹಿಂದೂಗಳು ವ್ಯಾಪಾರ ನಡೆಸುವುದನ್ನು ತಡೆಯಲು ವಿಶ್ವ ಹಿಂದೂ ಪರಿಷತ್ ಹಾಗೂ ಸನಾತನ ಹಿಂದೂ ವ್ಯಾಪಾರಸ್ಥರ ಸಂಘದವರು ಹಿಂದೂಗಳ ಮಳಿಗೆಗಳಲ್ಲಿ ಭಗವಾಧ್ವಜಗಳನ್ನು ಕಟ್ಟಿದ್ದಾರೆ. ಭಗವಾಧ್ವಜ ಕಟ್ಟಿರುವ ಮಳಿಗೆಗಳಲ್ಲಿ ಮಾತ್ರ ವ್ಯಾಪಾರ ನಡೆಸುವಂತೆ ಹಿಂದೂಗಳಿಗೆ ಸಂದೇಶ ರವಾನಿಸಿದ್ದಾರೆ.

ಧ್ವಜಗಳನ್ನು ಕಟ್ಟಿದ ಬಗ್ಗೆ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ವಿಶ್ವ ಹಿಂದೂ ಪರಿಷತ್‌ನ ದಕ್ಷಿಣ ಪ್ರಾಂತ ಸಹಕಾರ್ಯದರ್ಶಿ ಶರಣ್ ಪಂಪ್‌ವೆಲ್, ‘ಮುಸ್ಲಿಮರು ವ್ಯಾಪಾರ ನಡೆಸುವುದಕ್ಕೆ ನಮ್ಮ ವಿರೋಧವಿಲ್ಲ. ಆದರೆ, ಹಿಂದೂ ಜಾತ್ರೆಗಳ ಸಂದರ್ಭದಲ್ಲಿ ದೇವಸ್ಥಾನದ ಬಳಿ ಅವರು ವ್ಯಾಪಾರ ನಡೆಸುವುದಕ್ಕಷ್ಟೇ ನಮ್ಮ ವಿರೋಧ’ ಎಂದರು.

ಮಂಗಳೂರಿನ ಮಂಗಳಾದೇವ ದೇವಸ್ಥಾನದ ನವರಾತ್ರಿ ಉತ್ಸವದ ಬಳಿ ನಿರ್ಮಿಸಿರುವ ಮಳಿಗೆಗಳಿಗೆ ಶರಣ್ ಪಂಪ್‌ವೆಲ್ ಅವರು ಸೋಮವಾರ ಭಗವಾಧ್ವಜ ಕಟ್ಟಿದರು

‘ಹಿಂದೂಗಳ ಮಳಿಗೆಗಳಲ್ಲಿ ಮಾತ್ರ ವ್ಯಾಪಾರ ನಡೆಸುವಂತೆ ನಾವು ನಮ್ಮ ಧರ್ಮದವರ ಮನವೊಲಿಸುತ್ತೇವೆ. ನಮ್ಮವರ ಮಳಿಗೆಗಳನ್ನು ಗುರುತಿಸಲು ಭಗವಾಧ್ವಜ ಕಟ್ಟಿದ್ದೇವೆ’ ಎಂದು ಅವರು ಹೇಳಿದರು.

ಈ ದೇವಸ್ಥಾನದ ಬಳಿ 125 ಮಳಿಗೆಗಳನ್ನು ಹರಾಜು ಮಾಡಲಾಗಿದೆ. ಆರು ಮಳಿಗೆಗಳನ್ನು ಮುಸ್ಲಿಮರು ಹರಾಜಿನಲ್ಲಿ ಪಡೆದುಕೊಂಡಿದ್ದಾರೆ.

ಆರಂಭದಲ್ಲಿ ಇಲ್ಲಿ ಹಿಂದೂ ಜಾತ್ರಾ ವ್ಯಾಪಾರಸ್ಥರ ಸಂಘದವರಿಗೆ ಮಾತ್ರ ಮಳಿಗೆಗಳನ್ನು ಹಂಚಿಕೆ ಮಾಡಲಾಗಿತ್ತು. ಇದಕ್ಕೆ ಬೀದಿ ಬದಿ ವ್ಯಾಪಾರಸ್ಥರ ಸಂಘದವರು ವಿರೋಧ ವ್ಯಕ್ತಪಡಿಸಿದ ಬಳಿಕ ಜಿಲ್ಲಾಡಳಿತ ಮಧ್ಯಪ್ರವೇಶ ಮಾಡಿತ್ತು. ಮತ್ತಷ್ಟು ಮಳಿಗೆಗಳನ್ನು ಹಂಚಿಕೆ ಮಾಡುವಾಗ ಮುಸ್ಲಿಮರು ಹರಾಜಿನಲ್ಲಿ ಪಾಲ್ಗೊಳ್ಳುವುದಕ್ಕೆ ಅವಕಾಶ ಕಲ್ಪಿಸಿತ್ತು.

ನಿಧನ ವಾರ್ತೆ

ನಿವೃತ್ತ ಸಿ.ಎಸ್ ಪ್ರಹ್ಲಾದ್ ಬಿ. ಮಹಿಷಿ

ಬೆಂಗಳೂರು: ನಿವೃತ್ತ ಮುಖ್ಯ ಕಾರ್ಯದರ್ಶಿ ಪ್ರಹ್ಲಾದ್ ಬಿ.ಮಹಿಷಿ (75) ಸೋಮವಾರ ನಿಧನರಾದರು.

ಪ್ರಹ್ಲಾದ್ ಬಿ.ಮಹಿಷಿ

1972ನೇ ಸಾಲಿನ ಐಎಎಸ್ ಅಧಿಕಾರಿ ಆಗಿದ್ದ ಪ್ರಹ್ಲಾದ್ ಮಹಿಷಿ ಅವರು ಚಂದ್ರಶೇಖರ್ ಪ್ರಧಾನಿ ಆಗಿದ್ದಾಗ ಅವರ ಆಪ್ತ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದರು. ರಾಜ್ಯ ಸರ್ಕಾರದಲ್ಲಿ ಅನೇಕ ಪ್ರಮುಖ ಹುದ್ದೆಗಳನ್ನು ನಿರ್ವಹಿಸಿದ್ದರು ವಿದ್ಯುತ್ ನಿಗಮವನ್ನು ಲಾಭದ ಕಡೆಗೆ ತಂದ ಹೆಗ್ಗಳಿಕೆಗೆ ಪಾತ್ರರಾಗಿದ್ದರು. 2006ರಲ್ಲಿ ರಾಜ್ಯದ ಮುಖ್ಯ ಕಾರ್ಯದರ್ಶಿಯಾಗಿದ್ದರು. ದಿವಂಗತ ಸರೋಜಿನಿ ಮಹಿಷಿ ಅವರ ಸಹೋದರರಾಗಿದ್ದಾರೆ. ಅವರಿಗೆ ಪತ್ನಿ ಇದ್ದಾರೆ.

ನವವರ್ಣ

ನಿವೇದಿತಾ ಮತ್ತು ಸಂಗಡಿಗರು, ಯಲಹಂಕ, ಬೆಂಗಳೂರು

ಲೋಲಾಕ್ಷಿ ಆರ್, ರಾಜಲಕ್ಷ್ಮಿ ಆರ್‌ಡಿ., ಮತ್ತು ಶ್ರೇಯಶ್ರೀ ಆರ್, ಶಾಂತಿ ನಗರ, ಬೆಂಗಳೂರು

ಓಂ ಯೋಗ ಕೇಂದ್ರದ ಮಹಿಳಾ ಗುಂಪು, ನಾಗರಭಾವಿ, ಬೆಂಗಳೂರು

ವಿವೇಕ ಗ್ರೂಪ್, ವಿಜಯನಗರ, ಬೆಂಗಳೂರು

ಸಂಗೀತಾ ಮತ್ತು ಗೆಳತಿಯರು, ಬೆಂಗಳೂರು

ಕಣ್ವ ಡಯಾಗ್ನೋಸಿಸ್ ಸಿಬ್ಬಂದಿ, ನಾಗರಬಾವಿ, ಬೆಂಗಳೂರು

ಸಿಟಿ ಸಿವಿಲ್ ಕೋರ್ಟ್‌ನ ವಕೀಲೆಯರು, ಬೆಂಗಳೂರು

ಚಾಮುಂಡೇಶ್ವರಿ ಭಜನಾ ಮಂಡಳಿ, ಆಂಜನಾಪುರ, ಬೆಂಗಳೂರು

ಭಾರತಿ ಶೆಟ್ಟಿ ಮತ್ತು ಸ್ನೇಹಿತೆಯರು, ಗುಬ್ಬಳ್ಳಿ, ಬೆಂಗಳೂರು

ಚೌಡೇಶ್ವರಿ ಮಹಿಳಾ ಸಂಘ, ಮತ್ತಿಕೆರೆ, ಬೆಂಗಳೂರು

ಮೊಮ್ಮಗನೊಂದಿಗೆ ಕವಿತಾ ರಾಜು, ಬೆಂಗಳೂರು

ಬಿ. ರುಕ್ಮಿಣಿ ಬಾಯಿ ಮತ್ತು ಗೆಳತಿಯರು ಬೆಂಗಳೂರು

ಪ್ರಿಮಿಯರ್ ಹೈಸ್ಕೂಲ್ ಸಿಬ್ಬಂದಿ, ಶ್ರೀರಾಂಪುರ, ಬೆಂಗಳೂರು

ಪ್ರಕೃತಿ ಮಹಿಳಾ ಗುಂಪು, ನಿಸರ್ಗ ಬಡಾವಣೆ, ಬೆಂಗಳೂರು

ಜ್ಯೋತಿ ಮತ್ತು ಗೆಳತಿಯರ ತಂಡ, ಡಿಎಸ್ ಮ್ಯಾಕ್ಸ್ ಸ್ವಸ್ತಿಕ್, ಬೆಂಗಳೂರು

ರಾಜೇಶ್ವರಿ ಮತ್ತು ಗೆಳತಿಯರು, ಬೆಂಗಳೂರು

ದಿ ನ್ಯೂ ಇಂಟರ್‌ನ್ಯಾಷನಲ್ ಪಬ್ಲಿಕ್ ಸ್ಕೂಲ್ ಸಿಬ್ಬಂದಿ, ನಾಯಂಡಹಳ್ಳಿ, ಬೆಂಗಳೂರು

ಶ್ರೀ ಸರೋಜಿನಿ ನಾಯ್ಡು ಒಕ್ಕೂಟ, ಮಹಾಲಕ್ಷ್ಮಿ ಬಡಾವಣೆ, ಬೆಂಗಳೂರು

ನಾದಬ್ರಹ್ಮ ಸುಮಂಗಲಿ ಭಜನೆ ಗ್ರೂಪ್, ನಾಗರಬಾವಿ, ಬೆಂಗಳೂರು

ಯೂನಿವರ್ಸಲ್ ಪಬ್ಲಿಕ್ ಸ್ಕೂಲ್, ಅರ್ಚಕರ ಹಳ್ಳಿ, ರಾಮನಗರ ಟೌನ್

ಯುನಿಫ್ಯಾಬ್‌ಕ್ರಾಫ್ಟ್ ಗಾರ್ಮೆಂಟ್ಸ್, ರಾಜರಾಜೇಶ್ವರಿ ನಗರ, ಬೆಂಗಳೂರು

ಸುಮಾ ಶ್ರೀನಿವಾಸ್, ಅನಿತಾ ರೆಡ್ಡಿ ಮತ್ತು ಬೃಂದಾ, ವಿದ್ಯಾರಣ್ಯಪುರ, ಬೆಂಗಳೂರು

ರಂಜಿತಾ ಮತ್ತು ಗೆಳತಿಯರು, ಪಾಪರೆಡ್ಡಿಪಾಳ್ಯ, ಬೆಂಗಳೂರು

ಸುಪ್ರೀಂ ಕೋರ್ಟ್‌ನಲ್ಲಿ ಚುನಾವಣಾ ಬಾಂಡ್ ಸಿಂಧುತ್ವ ಪ್ರಶ್ನಿಸಿರುವ ಅರ್ಜಿ

ವಿಚಾರಣೆ ಸಂವಿಧಾನ ಪೀಠಕ್ಕೆ

ನವದೆಹಲಿ (ಪಿಟಿಐ): ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡುವುದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಆರಂಭಿಸಿರುವ ಚುನಾವಣಾ ಬಾಂಡ್ ಯೋಜನೆಯ ಸಿಂಧುತ್ವ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್‌ನ ಐವರು ನ್ಯಾಯಮೂರ್ತಿಗಳನ್ನು ಒಳಗೊಂಡ ಸಂವಿಧಾನ ಪೀಠದಲ್ಲಿ ನಡೆಯಲಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರಿದ್ದ ತ್ರಿಸದಸ್ಯ ನ್ಯಾಯಪೀಠವು, ಅಕ್ಟೋಬರ್ 30ರಂದು ಯೋಜನೆಯ ಕ್ರಮಬದ್ಧತೆ ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗಳ ವಿಚಾರಣೆ ನಡೆಸುವುದಾಗಿ ಹೇಳಿತ್ತು. ಈಗ ಸಂವಿಧಾನ ಪೀಠಕ್ಕೆ ವಿಚಾರಣೆಯನ್ನು ವರ್ಗಾಯಿಸಿದೆ.

2024ರ ಲೋಕಸಭಾ ಚುನಾವಣೆ ಆರಂಭವಾಗುವುದಕ್ಕೂ ಮೊದಲೇ ಈ ಅರ್ಜಿಗಳ ಅಂತಿಮ ವಿಚಾರಣೆ ನಡೆಸಿ ತೀರ್ಪು ಪ್ರಕಟಿಸಬೇಕು ಎಂದು ಹಿರಿಯ ವಕೀಲ ಪ್ರಶಾಂತ್ ಭೂಷಣ್ ನ್ಯಾಯಪೀಠಕ್ಕೆ ಕೋರಿದ್ದರು.

ಈ ವಿಷಯಕ್ಕೆ ಸಂಬಂಧಿಸಿದಂತೆ ನಾಲ್ಕು ಪಿಐಎಲ್‌ಗಳ ವಿಚಾರಣೆ ಬಾಕಿ ಇದೆ. ರಾಜಕೀಯ ಪಕ್ಷಗಳಿಗೆ ಸಾವಿರಾರು ಕೋಟಿ ರೂಪಾಯಿ ಮೊತ್ತವು ಈ ಬಾಂಡ್‌ಗಳ ಹೆಸರಿನಲ್ಲಿ ದೇಣಿಗೆ ರೂಪದಲ್ಲಿ ಪಾವತಿಯಾಗಿದೆ. ಈ ಮೊತ್ತದಲ್ಲಿ ಪ್ರಮುಖ ಪಕ್ಷವೊಂದಕ್ಕೆ ಮೂರನೇ ಎರಡರಷ್ಟು ಹಣ ಸಂದಾಯವಾಗಿದೆ ಎಂದು ಮಾರ್ಚ್‌ನಲ್ಲಿ ನಡೆದ ವಿಚಾರಣೆ ವೇಳೆ ಅರ್ಜಿದಾರರೊಬ್ಬರು ವಾದಿಸಿದ್ದರು.

ಪಕ್ಷವಾರು ದೇಣಿಗೆ ಸಂದಾಯ (ಕೋಟಿಗಳಲ್ಲಿ)

ಪಕ್ಷ	ಮೊತ್ತ
ಬಿಜೆಪಿ	₹5,217.97
ಕಾಂಗ್ರೆಸ್	₹952.29
ತೃಣಮೂಲ ಕಾಂಗ್ರೆಸ್	₹768.88
ಬಿಜೆಡಿ	₹622
ಡಿಎಂಕೆ	₹431.5

ನ್ಯೂಸ್‌ಕ್ಲಿಕ್ ಪ್ರಕರಣ: 'ಸುಪ್ರೀಂ' ಮೊರೆ ಹೋದ ಪುರಕಾಯಸ್ಥ, ಚಕ್ರವರ್ತಿ

ನವದೆಹಲಿ (ಪಿಟಿಐ): ಸುದ್ದಿ ಪೋರ್ಟಲ್ 'ನ್ಯೂಸ್‌ಕ್ಲಿಕ್'ನ ಸಂಸ್ಥಾಪಕ ಪ್ರಬೀರ್ ಪುರಕಾಯಸ್ಥ ಮತ್ತು ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ಅಮಿತ್ ಚಕ್ರವರ್ತಿ ಅವರು, ತಮ್ಮ ಬಂಧನ ವಿಚಾರದಲ್ಲಿ ಮಧ್ಯಪ್ರವೇಶಿಸಲು ನಿರಾಕರಿಸಿದ ದೆಹಲಿ ಹೈಕೋರ್ಟ್ ವಿರುದ್ಧ ಸೋಮವಾರ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ.

ಹಿರಿಯ ವಕೀಲ ಕಪಿಲ್ ಸಿಬಲ್ ಅವರು ಅರ್ಜಿಯ ತುರ್ತು ವಿಚಾರಣೆಗೆ ಕೋರಿ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ, ಮನೋಜ್ ಮಿಶ್ರಾ ಅವರನ್ನು ಒಳಗೊಂಡ ನ್ಯಾಯಪೀಠಕ್ಕೆ ಮನವಿ ಸಲ್ಲಿಸಿದ್ದಾರೆ.

ಕಾನೂನುಬಾಹಿರ ಚಟುವಟಿಕೆಗಳ (ತಡೆ) ಕಾಯ್ದೆ (ಯುಎಪಿಎ) ಅಡಿಯಲ್ಲಿ ಬಂಧಿಸಿರುವುದು ಮತ್ತು ಏಳು ದಿನಗಳ ಪೊಲೀಸ್ ಕಸ್ಟಡಿಯನ್ನು ಪ್ರಶ್ನಿಸಿ ಪುರಕಾಯಸ್ಥ ಮತ್ತು ಚಕ್ರವರ್ತಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಮಧ್ಯಂತರ ಪರಿಹಾರವಾಗಿ ತಕ್ಷಣ ಬಿಡುಗಡೆ ಮಾಡುವಂತೆ ಕೋರಿದ್ದರು. ಆದರೆ, ಹೈಕೋರ್ಟ್ ಪ್ರಕರಣದಲ್ಲಿ ಮಧ್ಯಪ್ರವೇಶಿಸಲು ನಿರಾಕರಿಸಿ ಅರ್ಜಿಯನ್ನು ವಜಾಗೊಳಿಸಿತ್ತು.

₹13 ಸಾವಿರ ಕೋಟಿ ಬಾಂಡ್ ಮಾರಾಟ

2018ರ ಜನವರಿ 2ರಂದು ಕೇಂದ್ರ ಸರ್ಕಾರವು ಈ ಯೋಜನೆಯನ್ನು ಜಾರಿಗೆ ತಂದಿದೆ. ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ನೀಡಿರುವ ಮಾಹಿತಿ ಪ್ರಕಾರ ಇಲ್ಲಿಯವರೆಗೆ 28 ಆವೃತ್ತಿಗಳ ಮೂಲಕ ಚುನಾವಣಾ ಬಾಂಡ್‌ಗಳ ಮಾರಾಟವಾಗಿದೆ. ಅಕ್ಟೋಬರ್ 3ರಿಂದ 13ರ ನಡುವೆ ಕೊನೆಯದಾಗಿ ಬಾಂಡ್‌ಗಳು ಮಾರಾಟವಾಗಿವೆ.

ಈವರೆಗೆ ₹ 13,791.89 ಕೋಟಿ ಮೊತ್ತದ ಬಾಂಡ್‌ಗಳು ಮಾರಾಟವಾಗಿವೆ. ಈ ಪೈಕಿ ₹ 23.88 ಕೋಟಿ ಮೊತ್ತದ ಬಾಂಡ್‌ಗಳು ನಗದೀಕರಣಗೊಂಡಿಲ್ಲ. ಅವುಗಳನ್ನು ಪ್ರಧಾನಮಂತ್ರಿಗಳ ರಾಷ್ಟ್ರೀಯ ಪರಿಹಾರ ನಿಧಿಗೆ ವರ್ಗಾಯಿಸಲಾಗಿದೆ ಎಂದು ಎಡಿಆರ್ ತಿಳಿಸಿದೆ.

ಪ್ರಸಕ್ತ ವರ್ಷದ ಏಪ್ರಿಲ್‌ನಲ್ಲಿ ₹ 970.50 ಕೋಟಿ ಹಾಗೂ ಜುಲೈನಲ್ಲಿ ₹812.80 ಕೋಟಿ ಮೊತ್ತದ ಬಾಂಡ್‌ಗಳು ಮಾರಾಟವಾಗಿವೆ. 2017–18ರಿಂದ 2021–22ನೇ ಸಾಲಿನ ನಡುವೆ ₹ 9,188.35 ಕೋಟಿ ಮೊತ್ತದ ಬಾಂಡ್‌ಗಳು ಮಾರಾಟವಾಗಿವೆ. ದೇಣಿಗೆ ರೂಪದಲ್ಲಿ ರಾಜಕೀಯ ಪಕ್ಷಗಳಿಗೆ ಈ ಹಣ ಸಂದಾಯವಾಗಿದೆ ಎಂದು ವಿವರಿಸಿದೆ.

ಎಎಪಿ ಆರೋಪಿಯಾಗಿಸಲು ಚಿಂತನೆ

ಅಬಕಾರಿ ನೀತಿ ಪ್ರಕರಣ: 'ಸುಪ್ರೀಂ'ಗೆ ಮಾಹಿತಿ ನೀಡಿದ ಇ.ಡಿ, ಸಿಬಿಐ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಅಬಕಾರಿ ನೀತಿ ಪ್ರಕರಣದಲ್ಲಿ ಆಮ್ ಆದ್ಮಿ ಪಕ್ಷವನ್ನು (ಎಎಪಿ) ಆರೋಪಿಯಾಗಿ ಗುರುತಿಸುವ ಚಿಂತನೆ ಇದೆ' ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಮತ್ತು ಸಿಬಿಐ ಸೋಮವಾರ ಸುಪ್ರೀಂ ಕೋರ್ಟ್‌ಗೆ ಮಾಹಿತಿ ನೀಡಿತು.

ಸಿಬಿಐ ಮತ್ತು ಇ.ಡಿ ಪ್ರತಿನಿಧಿಸಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ. ರಾಜು, 'ಎಎಪಿ ಅನ್ನು ಆರೋಪಿಯಾಗಿಸಿ ಪಿಎಂಎಲ್‌ಎ ಕಾಯ್ದೆ ಸೆಕ್ಷನ್ 70ರ ಅನ್ವಯ ಪ್ರಕರಣ ದಾಖಲಿಸಲು ತನಿಖಾ ಸಂಸ್ಥೆಗಳು ಚಿಂತನೆ ನಡೆಸಿರುವ ಮಾಹಿತಿ ಇದೆ' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ, ಎಸ್.ವಿ.ಎನ್.ಭಟ್ಟಿ ಅವರಿದ್ದ ಪೀಠವು, 'ಎರಡು ತನಿಖಾ ಸಂಸ್ಥೆಗಳು ತನಿಖೆ ನಡೆಸುತ್ತಿರುವ ಪ್ರಕರಣದಲ್ಲಿ ಎಎಪಿ ವಿರುದ್ಧ ಪ್ರತ್ಯೇಕ ಆರೋಪ ಹೊರಿಸಲಾಗುವುದೇ ಎಂಬ ಬಗ್ಗೆ ನಾಳೆ (ಅ. 17) ನಿಲುವು ಸ್ಪಷ್ಟಪಡಿಸಬೇಕು' ಎಂದು ಸೂಚಿಸಿತು.

ಆಗ, ಹೆಚ್ಚುವರಿ ಸಾಲಿಸಿಟರ್ ಜನರಲ್, 'ಅದೇ ಅಪರಾಧಕ್ಕೆ ಸಂಬಂಧಿಸಿ ಇರಲಿದೆ' ಎಂದರು. ಆಗ, 'ಹೇಳಿಕೆ ಕುರಿತು ಜಾಗರೂಕರಾಗಿರಬೇಕು' ಎಂದು ಪೀಠ ಎಚ್ಚರಿಸಿತು. 'ಇ.ಡಿ ಪ್ರಕರಣದ ಅದೇ ಅಪರಾಧವೋ, ಪ್ರತ್ಯೇಕವಾದುದೋ ಎಂದು ಮಂಗಳವಾರ ಸ್ಪಷ್ಟಪಡಿಸಿ' ಎಂದು ತಿಳಿಸಿತು.

ಭ್ರಷ್ಟಾಚಾರ ಪ್ರಕರಣದಲ್ಲಿ ಖಂಡಿತವಾಗಿ ಇದು ಪ್ರತ್ಯೇಕ ಆರೋಪ ಆಗಿರಲಿದೆ ಎಂದ ಪೀಠ, ಸಿಬಿಐ ಪ್ರಕರಣ ವಿಷಯದಲ್ಲಿ ಪ್ರತ್ಯೇಕ ಆರೋಪವೊ ಎಂದು ಪ್ರಶ್ನಿಸಿತು. ಆಗ ಸಾಲಿಸಿಟರ್ ಜನರಲ್, 'ಆರೋಪ ಬೇರೆ ಆಗಿರಬಹುದು. ಅದೇ ಅಪರಾಧಕ್ಕೆ ಸಂಬಂಧಿಸಿದಂತೆ ಇರಲಿದೆ' ಎಂದು ಹೇಳಿದರು.

'ಅನಿರ್ದಿಷ್ಟ ಅವಧಿಗೆ ಜೈಲಿನಲ್ಲಿಡಲಾಗದು'

ನವದೆಹಲಿ (ಪಿಟಿಐ): ದೆಹಲಿಯ ಅಬಕಾರಿ ನೀತಿ ಪ್ರಕರಣದಲ್ಲಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಅವರನ್ನು 'ಅನಿರ್ದಿಷ್ಟ ಅವಧಿ'ಗೆ ಜೈಲಿನಲ್ಲಿ ಇಡಲಾಗದು ಎಂದು ಸುಪ್ರೀಂ ಕೋರ್ಟ್ ಸೋಮವಾರ ತನಿಖಾ ಸಂಸ್ಥೆಗಳಾದ ಸಿಬಿಐ ಮತ್ತು ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ತಿಳಿಸಿತು.

ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ಎಸ್‌ವಿಎನ್ ಭಟ್ಟಿ ಅವರಿದ್ದ ನ್ಯಾಯಪೀಠವು, ಎರಡೂ ತನಿಖಾ ಸಂಸ್ಥೆಗಳ ಪರವಾಗಿ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು ಅವರಿಗೆ ಸಿಸೋಡಿಯಾ ವಿರುದ್ಧದ ಆರೋಪ ಕುರಿತು ಕೆಳಹಂತದ ನ್ಯಾಯಾಲಯದಲ್ಲಿ ವಿಚಾರಣೆ ಯಾವಾಗ ಆರಂಭವಾಗಲಿದೆ ಎಂದು ಪ್ರಶ್ನಿಸಿತು.

'ನೀವು ಅವರನ್ನು ಹೀಗೆ ಜೈಲಿನಲ್ಲಿ ಇಡಲಾಗದು. ಒಮ್ಮೆ ದೋಷಾರೋಪ ಪಟ್ಟಿ ಸಲ್ಲಿಸಿದ ಕೂಡಲೇ ಅದರ ವಿಚಾರಣೆಯು ಆರಂಭವಾಗಬೇಕು' ಎಂದು ನ್ಯಾಯಪೀಠವು ಅಭಿಪ್ರಾಯಪಟ್ಟಿತು.

ಇದಕ್ಕೆ ರಾಜು ಅವರು, 'ಸಿಸೋಡಿಯಾ ವಿರುದ್ಧದ ಪ್ರಕರಣ ಇನ್ನು ಸಿಆರ್‌ಪಿಸಿ ಸೆಕ್ಷನ್ 207 (ಆರೋಪಿಗಳಿಗೆ ದಾಖಲೆಗಳ ಪೂರೈಕೆ) ಹಂತದಲ್ಲಿದೆ. ಆ ಪ್ರಕ್ರಿಯೆ ನಂತರ ವಿಚಾರಣೆಯು ಆರಂಭವಾಗಲಿದೆ' ಎಂದು ತಿಳಿಸಿದರು. 'ಇನ್ನೂ ವಿಚಾರಣೆ ಏಕೆ ಆರಂಭವಾಗಿಲ್ಲ. ಯಾವಾಗ ಆರಂಭವಾಗಲಿದೆ ಎಂಬ ಮಾಹಿತಿಯನ್ನು ನಾಳೆ (ಅ. 17) ಪೀಠಕ್ಕೆ ತಿಳಿಸಬೇಕು ಎಂದು ನ್ಯಾಯಮೂರ್ತಿ ಖನ್ನಾ ಅವರು ಸೂಚಿಸಿದರು.

ರಾಜ್ಯಸಭೆ ಕಾರ್ಯಾಲಯಕ್ಕೆ ನೋಟಿಸ್

ನವದೆಹಲಿ (ಪಿಟಿಐ): ರಾಜ್ಯಸಭೆಯಿಂದ ಅಮಾನತುಗೊಳಿಸಿರುವುದನ್ನು ಪ್ರಶ್ನಿಸಿ ಎಎಪಿಯ ರಾಘವ್ ಚಡ್ಡಾ ಅವರು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಇದೇ 30ರಂದು ನಡೆಸಲು ಸುಪ್ರೀಂಕೋರ್ಟ್ ಸಮ್ಮತಿಸಿದ್ದು, ಈ ಸಂಬಂಧ ಪ್ರತಿಕ್ರಿಯೆ ಸಲ್ಲಿಸಲು ರಾಜ್ಯಸಭೆ ಕಾರ್ಯಾಲಯಕ್ಕೆ ನೋಟಿಸ್ ಜಾರಿ ಮಾಡಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಜೆ.ಬಿ. ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರಿದ್ದ ನ್ಯಾಯಪೀಠವು, ಈ ಪ್ರಕರಣ ಇತ್ಯರ್ಥಪಡಿಸಲು ನೆರವಾಗುವಂತೆ ಅಟಾರ್ನಿ ಜನರಲ್ ಅವರಿಗೂ ಸೂಚಿಸಿದೆ.

ಬೆತ್ತಲೆ ಮೆರವಣಿಗೆ ಸಿಬಿಐನಿಂದ ಆರೋಪ ಪಟ್ಟಿ

ನವದೆಹಲಿ (ಪಿಟಿಐ): ಮಣಿಪುರದಲ್ಲಿ ಇಬ್ಬರು ಮಹಿಳೆಯರನ್ನು ಬೆತ್ತಲಾಗಿಸಿ ಮೆರವಣಿಗೆ ಮಾಡಿದ್ದ ಪ್ರಕರಣದಲ್ಲಿ ಕಾನೂನು ಸಂಘರ್ಷ ಎದುರಿಸುತ್ತಿರುವ ಬಾಲಕ ಮತ್ತು ಇತರ ಆರು ಜನರ ವಿರುದ್ಧ ಸಿಬಿಐ ಸೋಮವಾರ ದೋಷಾರೋಪ ಪಟ್ಟಿಯನ್ನು ದಾಖಲಿಸಿತು.

ಕಾಂಗ್ಪೋಕ್ಪಿ ಜಿಲ್ಲೆಯಲ್ಲಿ ಈ ವರ್ಷದ ಮೇ ತಿಂಗಳಲ್ಲಿ ನಡೆದಿದ್ದ ಕೃತ್ಯದ ವಿಡಿಯೊ ಜುಲೈ ತಿಂಗಳಲ್ಲಿ ಬಯಲಾಗಿತ್ತು. ದೇಶದಾದ್ಯಂತ ಈ ಕೃತ್ಯಕ್ಕೆ ತೀವ್ರ ಆಕ್ರೋಶ ವ್ಯಕ್ತವಾಗಿತ್ತು. ಸುಪ್ರೀಂ ಕೋರ್ಟ್ ಈ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಿತ್ತು. ಗುವಾಹಟಿಯ ಸಿಬಿಐ ವಿಶೇಷ ಕೋರ್ಟ್‌ನಲ್ಲಿ ದೋಷಾರೋಪ ಪಟ್ಟಿ ದಾಖಲಿಸಲಾಗಿದೆ.

ಆ ಪ್ರಕಾರ, ಆಧುನಿಕ ಶಸ್ತ್ರಾಸ್ತ್ರಗಳನ್ನು ಹೊಂದಿದ್ದ 900–1000 ಜನರಿದ್ದ ಗುಂಪು ಕಾಂಗ್ಪೋಕ್ಪಿ ಜಿಲ್ಲೆಯ ಫೈನೊಮ್ ಗ್ರಾಮದಲ್ಲಿ ದಾಂದಲೆ ನಡೆಸಿದೆ. ಮನೆಗಳಿಗೆ ಬೆಂಕಿ ಹಚ್ಚಿ, ಆಸ್ತಿಗಳನ್ನು ಲೂಟಿ ಮಾಡಿದೆ. ಗ್ರಾಮಸ್ಥರ ಮೇಲೆ ಹಲ್ಲೆ ನಡೆಸಿ ಕೊಲೆ, ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದೆ ಎಂದು ಸಿಬಿಐ ಉಲ್ಲೇಖಿಸಿದೆ.

ಇಬ್ಬರು ಮಹಿಳೆಯರನ್ನು ಬೆತ್ತಲಾಗಿಸಿ ಮೆರವಣಿಗೆ ಮಾಡಿಸಿದ್ದು,ಅವರನ್ನು ಕೊಲೆ ಮಾಡಲಾಗಿದೆ. ಬಂಧಿಸಲಾಗಿರುವ ಆರೋಪಿಗಳು ಈ ಕೃತ್ಯದಲ್ಲಿ ಭಾಗಿಯಾಗಿದ್ದು, ಅದರಂತೆ ದೋಷಾರೋಪ ಪಟ್ಟಿಯನ್ನು ದಾಖಲಿಸಲಾಗಿದೆ ಎಂದು ತಿಳಿಸಿದೆ.

ದಸರಾ ಸಡಗರ ದಸರಾ ಹಬ್ಬದ ಅಂಗವಾಗಿ ರಾಜಸ್ಥಾನದ ಜೈಪುರದ ರಸ್ತೆಬದಿಯಲ್ಲಿ ಮಾರಾಟಕ್ಕಿಟ್ಟಿರುವ ರಾವಣಾಸುರನ ಪ್ರತಿಕೃತಿಗಳು –ಪಿಟಿಐ ಚಿತ್ರ

ಖೇರಾ ಅರ್ಜಿ ವಿಚಾರಣೆಗೆ ಅಸ್ತು

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿದ ಆರೋಪ ಮೇಲೆ ತಮ್ಮ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣ ರದ್ದುಪಡಿಸಲು ಅಲಹಾಬಾದ್ ಹೈಕೋರ್ಟ್ ನಿರಾಕರಿಸಿರುವುದನ್ನು ಪ್ರಶ್ನಿಸಿ ಕಾಂಗ್ರೆಸ್ ಮುಖಂಡ ಪವನ್ ಖೇರಾ ಸಲ್ಲಿಸಿರುವ ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ಸೋಮವಾರ ಸಮ್ಮತಿಸಿದೆ.

ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಪ್ರಶಾಂತ್ ಕುಮಾರ್ ಮಿಶ್ರಾ ಅವರಿದ್ದ ಪೀಠವು, ಖೇರಾ ಅವರ ಅರ್ಜಿಗೆ ಪ್ರತಿಕ್ರಿಯಿಸಲು ಉತ್ತರ ಪ್ರದೇಶ ಸರ್ಕಾರಕ್ಕೆ ಸೂಚಿಸಿ, ನೋಟಿಸ್ ಜಾರಿ ಮಾಡಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ತಂದೆಯ ಹೆಸರನ್ನು ತಪ್ಪಾಗಿ ಹೇಳಿ ಅವಹೇಳನ ಮಾಡಿದ್ದಾರೆ ಎಂಬ ಆರೋಪವನ್ನು ಖೇರಾ ಎದುರಿಸುತ್ತಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿ ತನಿಖಾಧಿಕಾರಿಯು ಸಾಕ್ಷ್ಯಾಧಾರ ಸಂಗ್ರಹಿಸಿದ್ದಾರೆ. ಇದರ ಆಧಾರದ ಮೇಲೆ ಖೇರಾ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಅರ್ಜಿಯನ್ನು ಅಪರಾಧ ಪ್ರಕ್ರಿಯಾ ಸಂಹಿತೆಯ (ಸಿಆರ್‌ಪಿಸಿ) ಸೆಕ್ಷನ್ 482ರಡಿ ವಜಾಗೊಳಿಸಲು ಸಾಧ್ಯವಿಲ್ಲ ಎಂದು ಆಗಸ್ಟ್ 17ರಂದು ಹೈಕೋರ್ಟ್ ಹೇಳಿತ್ತು.

ಅಸ್ಸಾಂ ಹಾಗೂ ಉತ್ತರ ಪ್ರದೇಶದಲ್ಲಿ ಖೇರಾ ವಿರುದ್ಧ ದಾಖಲಾಗಿದ್ದ ಎಲ್ಲಾ ಎಫ್‌ಐಆರ್‌ಗಳನ್ನು ಒಟ್ಟಿಗೆ ಸೇರಿಸಿ ತನಿಖೆ ನಡೆಸುವಂತೆ ಲಖನೌದ ಹಜರತ್‌ಗಂಜ್ ಠಾಣೆಯ ಪೊಲೀಸರಿಗೆ ಸುಪ್ರೀಂ ಕೋರ್ಟ್ ಸೂಚಿಸಿತ್ತು. ಪ್ರಕರಣಕ್ಕೆ ಸಂಬಂಧಿಸಿ ಫೆಬ್ರುವರಿ 23ರಂದು ಅವರನ್ನು ದೆಹಲಿ ವಿಮಾನ ನಿಲ್ದಾಣದಲ್ಲಿ ಬಂಧಿಸಲಾಗಿತ್ತು. ಅದೇ ದಿನ ಅವರಿಗೆ ಲಖನೌ ನ್ಯಾಯಾಲಯ ಮಧ್ಯಂತರ ಜಾಮೀನು ನೀಡಿತ್ತು.

ನ. 3ರಂದು ಶಿಕ್ಷಣ ಸಾಧನೆ ಸಮೀಕ್ಷೆ

ನವದೆಹಲಿ (ಪಿಟಿಐ): ವಿದ್ಯಾರ್ಥಿಗಳ ಮೌಲ್ಯಮಾಪನ, ಶಾಲೆಗಳ ಕಾರ್ಯಕ್ಷಮತೆ ಪರಿಶೀಲನೆಗಾಗಿ ಸ್ಥಾಪಿಸಲಾಗಿರುವ ರಾಷ್ಟ್ರಮಟ್ಟದ ನಿಯಂತ್ರಣ ವ್ಯವಸ್ಥೆಯಾದ 'ಪರಖ್' (ಪಿಎಆರ್‌ಎಕೆಎಚ್) ನವೆಂಬರ್ 3ರಂದು ರಾಜ್ಯ ಶಿಕ್ಷಣ ಸಾಧನೆ ಸಮೀಕ್ಷೆ ನಡೆಸಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದೇಶದಾದ್ಯಂತ 1.10 ಕೋಟಿ ವಿದ್ಯಾರ್ಥಿಗಳನ್ನು ಈ ಸಮೀಕ್ಷೆಯು ಒಳಗೊಳ್ಳಲಿದೆ.

ರಾಜ್ಯದಾದ್ಯಂತ ಶಾಲಾ ಮಕ್ಕಳ ಕಲಿಕೆಯಲ್ಲಿ ಯಾವ ರೀತಿ ಸುಧಾರಣೆ ಯಾಗ ಬೇಕಿದೆ ಎನ್ನುವುದನ್ನು ಗುರುತಿಸುವುದು ಸಮೀಕ್ಷೆಯ ಉದ್ದೇಶವಾಗಿದೆ.

ಶಿಕ್ಷಣ ಸಚಿವಾಲಯ ಈಗಾಗಲೇ ಜಿಲ್ಲಾ ಮಟ್ಟದಲ್ಲಿ ವಾರ್ಷಿಕ ರಾಷ್ಟ್ರೀಯ ಸಾಧನಾ ಸಮೀಕ್ಷೆ (ಎನ್‌ಎಎಸ್) ನಡೆಸುತ್ತಿದೆ. ಇದಕ್ಕೂ ಮುನ್ನ ರಾಜ್ಯ ಶಿಕ್ಷಣ ಸಾಧನೆ ಸಮೀಕ್ಷೆ ನಡೆಸಲಾಗುತ್ತದೆ.

ರಾಷ್ಟ್ರೀಯ ಶೈಕ್ಷಣಿಕ ಸಂಶೋಧನಾ ಮತ್ತು ತರಬೇತಿ ಮಂಡಳಿ (ಎನ್‌ಸಿಇಆರ್‌ಟಿ) ಅಡಿಯಲ್ಲಿ ಪರಖ್ ಕೈಗೊಳ್ಳುತ್ತಿರುವ ಮೊದಲ ಸಮೀಕ್ಷೆ ಇದಾಗಿದೆ.

ಸಂಸದರ ಸಂಪರ್ಕಕ್ಕೆ 'ನಮೋ' ಆ್ಯಪ್

ನವದೆಹಲಿ (ಪಿಟಿಐ): ಜನರು ತಮ್ಮ ಕ್ಷೇತ್ರದ ಸಂಸದರನ್ನು ಸಂಪರ್ಕಿಸಲು ಮತ್ತು ಮಾತುಕತೆ ನಡೆಸಲು ಅವಕಾಶ ನೀಡುವ 'ನಮೋ' ಆ್ಯಪ್‌ನ ವೈಶಿಷ್ಟ್ಯದ ಕುರಿತು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಒತ್ತಿ ಹೇಳಿದರು.

'ನಮೋ' ಆ್ಯಪ್‌ನಲ್ಲಿ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಉತ್ತೇಜಿಸುವ ಕುತೂಹಲಕಾರಿ ವಿಭಾಗವಿದೆ. ಅಲ್ಲಿ ನೀವು ನಿಮ್ಮ ಸಂಸದರೊಂದಿಗೆ ಸಂಪರ್ಕ ಸಾಧಿಸಬಹುದು' ಎಂದು ಅವರು 'ಎಕ್ಸ್'ನಲ್ಲಿ ಅವರು ತಿಳಿಸಿದ್ದಾರೆ.

ಬಿಜೆಪಿ ಸಂಸದರು ತಮ್ಮ ಕ್ಷೇತ್ರಗಳಲ್ಲಿ ಕೈಗೊಳ್ಳುವ ವಿವಿಧ ಚಟುವಟಿಕೆಗಳ ಕುರಿತೂ ಆ್ಯಪ್‌ನಲ್ಲಿ ಮಾಹಿತಿ ಇರುತ್ತದೆ. ಆ ಕಾರ್ಯಕ್ರಮಗಳಲ್ಲಿ ಜನರೂ ಭಾಗವಹಿಸಬಹುದಾಗಿದೆ ಎಂದೂ ಹೇಳಿದ್ದಾರೆ.

ಬೆಲ್ಟ್ ಆ್ಯಂಡ್ ರೋಡ್ ಸಭೆಗೆ ಬಹಿಷ್ಕಾರ

ಬೀಜಿಂಗ್ (ಪಿಟಿಐ): ಚೀನಾದ ಮಹತ್ವಾಕಾಂಕ್ಷೆಯ ಬೆಲ್ಟ್ ಆ್ಯಂಡ್ ರೋಡ್ ಇನಿಷಿಯೆಟೀವ್ (ಬಿಆರ್‌ಐ) ಯೋಜನೆಯ ಸಭೆ ಮಂಗಳವಾರ ನಿಗದಿಯಾಗಿದ್ದು ಇದನ್ನು ಬಹಿಷ್ಕರಿಸಲು ಭಾರತ ನಿರ್ಧರಿಸಿದೆ.

ಚೀನಾದ ಬಿಆರ್‌ಐ ಭಾಗವಾಗಿರುವ ಚೀನಾ–ಪಾಕಿಸ್ತಾನ ಆರ್ಥಿಕ ಕಾರಿಡಾರ್ (ಸಿಪಿಇಸಿ) ಭಾರತದ ಸಾರ್ವಭೌಮತ್ವಕ್ಕೆ ಸಂಬಂಧಿಸಿದ ವಿಚಾರ ಎಂಬುದನ್ನು ತಿಳಿಸಿಕೊಡುವ ಉದ್ದೇಶದಿಂದ ಈ ಸಭೆಯಿಂದ ದೂರ ಉಳಿಯಲು ಭಾರತ ತೀರ್ಮಾನಿಸಿದೆ. ಈ ಮೂಲಕ ಭಾರತವು ಸತತ ಮೂರನೇ ಸಲ ಈ ಸಭೆಯಿಂದ ಅಂತರ ಕಾಯ್ದುಕೊಂಡಂತೆ ಆಗಲಿದೆ.

2017 ಮತ್ತು 2019ರ ಸಭೆಯನ್ನು ಭಾರತ ಬಹಿಷ್ಕರಿಸಿತ್ತು.

ಅಧ್ಯಕ್ಷ ಷಿ ಜಿನ್‌ಪಿಂಗ್ ಅವರ ಮಹತ್ವಾಕಾಂಕ್ಷಿ ಯೋಜನೆಯಾಗಿರುವ ಬಿಆರ್‌ಐ 10 ವರ್ಷ ಪೂರೈಸಿದೆ. ಈ ಹಿನ್ನೆಲೆಯಲ್ಲಿ ಮಂಗಳವಾರದಿಂದ ಎರಡು ದಿನಗಳ ಸಭೆ ಆಯೋಜಿಸಲಾಗಿದೆ ಎಂದು ಚೀನಾದ ವಿದೇಶಾಂಗ ಸಚಿವಾಲಯ ತಿಳಿಸಿದೆ ಎಂದು ಚೀನಾದ ಸರ್ಕಾರಿ ಸ್ವಾಮ್ಯದ ಸುದ್ದಿಸಂಸ್ಥೆ ವರದಿ ಮಾಡಿದೆ.

ಈ ಯೋಜನೆ ಮೂಲಕ ಶ್ರೀಲಂಕಾದಂಥ ಸಣ್ಣ ದೇಶಗಳನ್ನು ಸಾಲದ ಸುಳಿಗೆ ಸಿಲುಕಿಸಲು ಚೀನಾ ಯತ್ನಿಸುತ್ತಿದೆ ಎಂಬ ಆರೋಪಗಳ ನಡುವೆಯೇ ಅಂತರರಾಷ್ಟ್ರೀಯ ಸಹಕಾರಕ್ಕೆ ಬೆಲ್ಟ್ ಮತ್ತು ರೋಡ್ ಫೋರಂ (ಬಿಆರ್‌ಎಫ್‌ಐಸಿ) ಸಭೆ ಆಯೋಜಿಸಲಾಗಿದೆ.

ಈ ಯೋಜನೆಯ ಭಾಗವಾಗಿರುವ ಚೀನಾ–ಪಾಕಿಸ್ತಾನ ಆರ್ಥಿಕ ಕಾರಿಡಾರ್ (ಸಿಪಿಇಸಿ) ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ಹಾದು ಹೋಗಲಿದ್ದು, ಇದು ಭಾರತದ ಸಾರ್ವಭೌಮತ್ವಕ್ಕೆ ಧಕ್ಕೆಯಾಗಲಿದೆ ಎಂದು ಭಾರತ ಹಿಂದಿನಿಂದಲೂ ಪ್ರತಿಪಾದಿಸಿಕೊಂಡು ಬಂದಿದೆ.

ಸಲಿಂಗ ವಿವಾಹಕ್ಕೆ ಕಾನೂನು ಮಾನ್ಯತೆ ಬೇಡಿಕೆ: ಇಂದು ತೀರ್ಪು

ಪ್ರಜಾವಾಣಿ ವಾರ್ತೆ

ನವದೆಹಲಿ: ಸಲಿಂಗ ವಿವಾಹಕ್ಕೆ ಕಾನೂನಿನ ಮಾನ್ಯತೆ ನೀಡಬೇಕು ಎಂದು ಕೋರಿ ಸಲ್ಲಿಸಲಾಗಿದ್ದ ವಿವಿಧ ಅರ್ಜಿಗಳಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಮಂಗಳವಾರ (ಅ.17) ತೀರ್ಪು ನೀಡಲಿದೆ. 10 ದಿನಗಳ ಕಾಲ ವಿಚಾರಣೆ ನಡೆಸಿದ್ದ ನ್ಯಾಯಪೀಠವು ಮೇ 11ರಂದು ತೀರ್ಪು ಕಾಯ್ದಿರಿಸಿತ್ತು.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಸಾಂವಿಧಾನಿಕ ಪೀಠದಲ್ಲಿ ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್, ಎಸ್. ರವೀಂದ್ರ ಭಟ್, ಹಿಮಾ ಕೊಹ್ಲಿ, ಪಿ.ಎಸ್.ನರಸಿಂಹ ಅವರಿದ್ದಾರೆ.

ಹಿರಿಯ ವಕೀಲರಾದ ಎ.ಎಂ. ಸಿಂಘ್ವಿ, ರಾಜು ರಾಮಚಂದ್ರನ್, ಕೆ.ವಿ. ವಿಶ್ವನಾಥನ್ (ಈಗ ಸುಪ್ರಿಂ ಕೋರ್ಟ್‌ನ ನ್ಯಾಯಮೂರ್ತಿ), ಆನಂದ್ ಗ್ರೋವರ್, ಸೌರಬ್ ಕೃಪಾಲ್ ಅವರು ಈ ಬಗ್ಗೆ ಕೋರ್ಟ್‌ನ ಮೆಟ್ಟಿಲೇರಿದ್ದ ವಿವಿಧ 21 ಅರ್ಜಿದಾರರ ಪರವಾಗಿ ವಾದ ಮಂಡಿಸಿದ್ದರು.

'ಈ ಕುರಿತ ತನ್ನ ಪ್ರಶ್ನೆಗೆ ಏಳು ರಾಜ್ಯಗಳು ಪ್ರತಿಕ್ರಿಯಿಸಿವೆ. ಈ ಪೈಕಿ ರಾಜಸ್ಥಾನ, ಆಂಧ್ರಪ್ರದೇಶ, ಅಸ್ಸಾಂ ರಾಜ್ಯಗಳು ಸಲಿಂಗ ವಿವಾಹಕ್ಕೆ ಕಾನೂನು ಮಾನ್ಯತೆ ನೀಡಬೇಕು ಎಂಬ ಅರ್ಜಿದಾರರ ಮನವಿಗೆ ವಿರೋಧ ವ್ಯಕ್ತಪಡಿಸಿವೆ ಎಂದು ತಿಳಿಸಿತ್ತು.

'ಸಲಿಂಗ ವಿವಾಹಕ್ಕೆ ಕಾನೂನು ಮಾನ್ಯತೆ ನೀಡಬೇಕು. ಪೂರಕವಾಗಿ 1954ರ ವಿಶೇಷ ವಿವಾಹ ಕಾಯ್ದೆಯ (ಎಸ್‌ಎಂಎ) ನಿಬಂಧನೆಗಳನ್ನು ಮರು ವ್ಯಾಖ್ಯಾನಿಸಬೇಕು ಎಂದು ಅರ್ಜಿದಾರರು ಮನವಿ ಮಾಡಿದ್ದರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಶ್ರದ್ಧಾಂಜಲಿ

ಅನಂತಪದ್ಮನಾಭಯ್ಯ ಟಿ.ಎಸ್.
(ಗುಂಡಣ್ಣ) Retd. HAL
ಜನನ: 25-05-1931 ಮರಣ: 15-10-2023
ಇಂತಿ ದುಃಖತಪ್ತರು:
ಅನಿಲ್ ಕುಮಾರ್ ಮತ್ತು ಕುಟುಂಬವರ್ಗದವರು
Mob: 9449111159

15ನೇ ವರ್ಷದ ಚಿರಸ್ಮರಣೆ

ಹನುಮಂತಯ್ಯ ಉರುಫ್ ಕೆಂದಪ್ಪ
(ನಿಧನ: 17.10.2008)
ದಿವಂಗತರ ಆತ್ಮಕ್ಕೆ ಶಾಂತಿ ಕೋರುವ:
ಹೆಂಡತಿ, ಮಗ ಮತ್ತು ಮೊಮ್ಮಕ್ಕಳು
ಅವರಗೆರೆ, ಬಿಡದಿ, ರಾಮನಗರ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವೈಯಕ್ತಿಕ
Change of Name
ನಾನು, ನಿವೇದಿತಾ ರಮೇಶ್ ಮುಳೆ, ದಿನಾಂಕ 28082023 ರಂದು ಬೆಂಗಳೂರಿನ ನೋಟರಿ ಯಂಕೋಬಾ ಅವರ ಮುಂದೆ ಪ್ರಮಾಣ ವಚನ ಸ್ವೀಕರಿಸುವ ಮೂಲಕ ನನ್ನ ಹೆಸರನ್ನು ನಿವೇದಿತಾ ರಮೇಶ್ ರಾವ್ ಮುಳೆ ಎಂದು ಬದಲಾಯಿಸಿದ್ದೇನೆ

ಪ್ರವಾಸ
Travel

ವ್ಯಾಪಾರ
Business Offers
Finance
EARN DAILY Rs. 1000 trading and Investment on your own account. Call 9967066300

ಉದ್ಯೋಗಾವಕಾಶ
Call Centre
ಗಯಾ, ಬಿಹಾರದಲ್ಲಿ ಕೆಲಸ ಮಾಡಲು ಟೆಲಿಕಾಲರ್ ಗಳು ಬೇಕಾಗಿದ್ದಾರೆ.ವೇತನ ತಿಂಗಳಿಗೆ 12000/- ಊಟ -ವಸತಿ ಉಚಿತ. ಕನ್ನಡ, ಮಲಯಾಳಂ, ತೆಲುಗು, ತಮಿಳು ಭಾಷೆಗಳನ್ನು ತಿಳಿದಿರಬೇಕು. ಸಂಪರ್ಕಿಸಿ: ಮೊಬೈಲ್ - 09540509611

Domestic Helpers / Housekeeping
NO FEE (labour contractor) ಬೇಕಾಗಿದ್ದಾರೆ. TATA Warehouse: Hoskote, Bangalore, Salary 18000/- , OT. 128 per/ hour work: Packing Loading helpers, 250 Nos Room &Food (Deduct) Ph 9844434996/ 9035240677 SSLC Pass/Fail. Male Female

General
ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

MNC ಕಂಪನಿಗಳಿಗೆ ಕೆಲಸಕ್ಕೆ ಬೇಕಾಗಿದ್ದಾರೆ. ಊಟ, ರೂಮ್, ESI, PF, OT. 18,500- 47,500. SSLC, PUC. 8861041526, 7022121680.

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ, ಟಿ.ವಿ.ಎಸ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ,ಪಿಯುಸಿ, ಡಿಗ್ರಿ, ITIನವರುಗಳು 16,600- 65,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ 7259552930

Part-Time Jobs
ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430266 /6366430366

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000ರಿಂದ20,000 ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

Multiple Vacancy
REQUIRED SUPERVISOR, Telecaller & Field Executive For Bank_Loan Collection. Direct Recruitment to Company:- 7899040499, 9620206756.

ಭಾರತೀಯ ರೈಲ್ವೆ - ಪ್ರವಾಸ ರೈಲು
ಪಂಚ ದ್ವಾರಕ ಯಾತ್ರೆ
ಡಾಕೋರ್ ದ್ವಾರಕಾ - ದ್ವಾರಕಾ
ಬ್ಯಾಟ್ ದ್ವಾರಕಾ - ಸೋಮನಾಥ್
ಉದಯಪುರ್ - ನಿಷ್ಕಳಂಕ ಮಹಾದೇವ್
ಸಮುದ್ರ ದೇವಸ್ಥಾನ - ಸ್ಟ್ಯಾಚು ಆಫ್ ಯುನಿಟಿ
29NOV|12 DAYS|₹19050
ವಿಶೇಷ ರೈಲು - ಪ್ರವಾಸ ಸ್ಥಳ - ಊಟ - ವಸತಿ
9015 500 200
WWW.SOUTHSTARRAIL.COM

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

DH DECCAN HERALD Classifieds
More value, more impact
The 1st thing to do when Selling/Buying your Property
ಪ್ರಜಾವಾಣಿ
REAL ESTATE
#1 PLACE YOUR AD HERE
www.dhclassifieds.com
BOOK NOW
Book your ad with us now! For more details contact:
+91 9886213331 | +91 9901641752 |
+91 9845114560 | +91 9900428036 |
+91 9731810277 | 080- 45557163/164

ಕ್ರೂರ ಕಾನೂನು ಬಳಕೆಗೆ ಆಕ್ಷೇಪ

ಪತ್ರಕರ್ತರ ರಕ್ಷಣೆ: ರಾಷ್ಟ್ರಪತಿಗೆ ಪತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಪತ್ರಕರ್ತರ ವಿರುದ್ಧ ಕ್ರೂರ ಕಾನೂನುಗಳ ಬಳಕೆ ಮಾಡುತ್ತಿರುವುದು ಹೆಚ್ಚುತ್ತಿದೆ. ತಕ್ಷಣವೇ ರಾಷ್ಟ್ರಪತಿ ಮಧ್ಯಪ್ರವೇಶಿಸಿ ಮಾಧ್ಯಮ ಸ್ವಾತಂತ್ರ್ಯ ಮತ್ತು ಪತ್ರಕರ್ತರ ವೃತ್ತಿ ಹಾಗೂ ಬದುಕನ್ನು ರಕ್ಷಿಸಬೇಕು ಎಂದು ಒತ್ತಾಯಿಸಿ ಎಂಟು ಮಾಧ್ಯಮ ಸಂಘಟನೆಗಳು ಮತ್ತು ವಕೀಲರ ಸಂಘಟನೆ ಜಂಟಿಯಾಗಿ ಸೋಮವಾರ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಪತ್ರ ಬರೆದಿವೆ.

ಮುಖ್ಯಾಂಶಗಳು

- ಎಂಟು ಮಾಧ್ಯಮ ಸಂಸ್ಥೆಗಳಿಂದ ಮನವಿ
- ಪತ್ರಕರ್ತರ ವಿರುದ್ಧ ಬಳಸುವ ಕಾನೂನಿನಡಿ ಜಾಮೀನಿಗೆ ಅವಕಾಶ ಮರೀಚಿಕೆ
- ಕೂಡಲೇ, ರಾಷ್ಟ್ರಪತಿ ಅವರ ಮಧ್ಯಪ್ರವೇಶಕ್ಕೆ ಕೋರಿಕೆ

ಪ್ರೆಸ್ ಕ್ಲಬ್ ಆಫ್ ಇಂಡಿಯಾ, ಪ್ರೆಸ್ ಅಸೋಸಿಯೇಷನ್, ಇಂಡಿಯನ್ ವುಮೆನ್ ಪ್ರೆಸ್ ಕಾಪ್ಸ್, ದೆಹಲಿ ಯೂನಿಯನ್ ಆಫ್ ಜರ್ನಲಿಸ್ಟ್ಸ್, ಕೇರಳ ಯೂನಿಯನ್ ಆಫ್ ವರ್ಕಿಂಗ್ ಜರ್ನಲಿಸ್ಟ್ಸ್, ಡಿಜಿಪಬ್, ಫಾರಿನ್ ಕರೆಸ್ಪಾಂಡೆಂಟ್ ಕ್ಲಬ್, ವೆಟರನ್ ಜರ್ನಲಿಸ್ಟ್ ಗ್ರೂಪ್ ಮತ್ತು ಆಲ್ ಇಂಡಿಯಾ ಲಾಯರ್ಸ್ ಯೂನಿಯನ್ ಈ ಪತ್ರಕ್ಕೆ ಸಹಿ ಮಾಡಿವೆ.

ಪತ್ರಕರ್ತರ ವಿರುದ್ಧ ಬಳಸುತ್ತಿರುವ ಕಾನೂನುಗಳು ಜಾಮೀನಿಗೆ ಅವಕಾಶ ಕಲ್ಪಿಸುವುದಿಲ್ಲ. ಇವುಗಳಲ್ಲಿ ಜೈಲು ವಾಸ ಕಾಯಂ ಆಗಿದೆ. ಅಲ್ಲದೆ, ಮಾಧ್ಯಮ ಪ್ರತಿನಿಧಿಗಳು ತಮ್ಮ ವೃತ್ತಿಗೆ ಪ್ರಮುಖವಾಗಿ ಬಳಸುವ ಫೋನ್‌ಗಳು, ಲ್ಯಾಪ್‌ಟಾಪ್‌ಗಳು ಮತ್ತು ಹಾರ್ಡ್ ಡಿಸ್ಕ್‌ಗಳಂತಹ ಸಾಧನಗಳನ್ನು ವಶಪಡಿಸಿಕೊಳ್ಳಲು ಅಧಿಕಾರಿಗಳು ಕೆಲವು ಕಠಿಣ ಕಾನೂನುಗಳ ಅಡಿಯಲ್ಲಿ ತಮ್ಮ 'ಅನಿರ್ಬಂಧಿತ ಹಕ್ಕು' ಬಳಸಿಕೊಂಡಿದ್ದಾರೆ ಎಂದು ಪತ್ರದಲ್ಲಿ ಪ್ರಸ್ತಾಪಿಸಲಾಗಿದೆ.

ಈ ಪತ್ರದಲ್ಲಿ ನಿರ್ದಿಷ್ಟ ಪ್ರಕರಣದ ನಿದರ್ಶನ ಉಲ್ಲೇಖಿಸಿಲ್ಲ. ಆದರೆ, ಇತ್ತೀಚೆಗೆ ನ್ಯೂಸ್‌ಕ್ಲಿಕ್ ಸಂಸ್ಥಾಪಕ-ಸಂಪಾದಕ ಪ್ರಬೀರ್ ಪುರಕಾಯಸ್ಥ ಮತ್ತು ಆ ಸಂಸ್ಥೆಯ ಮಾನವ ಸಂಪನ್ಮೂಲ ಮುಖ್ಯಸ್ಥ ಅಮಿತ್ ಚಕ್ರವರ್ತಿ ಅವರನ್ನು ಯುಎಪಿಎ ಅಡಿಯಲ್ಲಿ ಬಂಧಿಸಿ, 44 ಇತರ ಪತ್ರಕರ್ತರಿಗೆ ವಸ್ತುಗಳನ್ನು ವಶಪಡಿಸಿಕೊಂಡಿದ್ದಕ್ಕಾಗಿ ಈ ಪತ್ರ ಬರೆಯಲಾಗಿದೆ.

ಷೇರುಪೇಟೆ ವಹಿವಾಟು 117



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,751
ಇಂದಿನ ಅಂತ್ಯ	19,731
	20
ದಿನದ ಕನಿಷ್ಠ	19,691

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹555
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹562

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ಹೊಸ)	₹1560 (1540)
ಸೋಯಾ (ಹೊಸ)	₹900 (900)
ಸೂರ್ಯಕಾಂತಿ (ಹೊಸ)	₹905 (890)
ಪಾಮೊಲೀನ್	₹825 (823)

ವಿನಿಮಯ ದರ

$ ಡಾಲರ್	83.27
£ ಪೌಂಡ್	101.30
€ ಯುರೊ	87.79
¥ ಯೆನ್ (100ಕ್ಕೆ)	56

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಕೆ.ಆರ್.ಪೇಟೆ	₹7950-7950
ತಿಪಟೂರು	₹8000-9800
ತುಮಕೂರು	₹4200-5050
ತುರುವೇಕೆರೆ	₹9000-9000

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ		ಹೊಸತು	37000-41500	ಕೋಕ	29689-33999
ಕೋಕ	15000-27500	**ಪುತ್ತೂರು**		ಕೆಂಪುಗೋಟು	32209-32699
ಹಳತು	46000-48500	ಹೊಸತು	34000-43000	ರಾಶಿ	42099-46559
ಹೊನ್ನಾಳಿ		**ಸಾಗರ**		ತಟ್ಟಿಬೆಟ್ಟೆ	36699-42599
ರಾಶಿ	46605-46605	ಬಿಳಿಗೋಟು	16290-32689	**ಶಿರಸಿ**	
ಹೊಸನಗರ		ಚಾಲಿ	34299-38501	ಬೆಟ್ಟೆ	39699-42809
ಹಳೆಚಾಲಿ	37500-41000	ಕೋಕ	16099-33099	ಬಿಳಿಗೋಟು	22199-36699
ಹೊಸಚಾಲಿ	31000-34000	ಕೆಂಪುಗೋಟು	24290-35109	ಚಾಲಿ	37669-41401
ಕಾರ್ಕಳ		ರಾಶಿ	33899-47599	ಕೆಂಪುಗೋಟು	30899-32599
ಹಳತು	30000-48500	ಸಿಪ್ಪೆಗೋಟು	10199-21132	ರಾಶಿ	44108-47109
ಕುಮಟ		**ಶಿವಮೊಗ್ಗ**		**ತುಮಕೂರು**	
ಚಿಪ್ಪು	30599-34609	ಬೆಟ್ಟೆ	49520-53410	ರಾಶಿ	43000-44800
ಕೋಕ	20169-32019	ಗೊರಬಾಳು	11800-36651	**ಯಲ್ಲಾಪುರ**	
ಫ್ಯಾಕ್ಟರಿ	10509-26529	ಹೊಸತು	45569-46899	ಬಿಳಿಗೋಟು	31299-34730
ಹಳೆಚಾಲಿ	39809-40239	ರಾಶಿ	46359-48099	ಚಾಲಿ	37700-40480
ಹೊಸಚಾಲಿ	37269-40009	ಸರಕು	53319-83810	ಕೋಕ	18918-28699
ಕುಂದಾಪುರ		**ಸಿದ್ದಾಪುರ**		ಕೆಂಪುಗೋಟು	32623-34199
ಹಳೆಚಾಲಿ	43500-47000	ಬಿಳಿಗೋಟು	32619-34800	ರಾಶಿ	43850-50869
		ಚಾಲಿ	37199-40319	ತಟ್ಟಿಬೆಟ್ಟೆ	40742-42750

ಆಹಾರ ವಸ್ತುಗಳು, ಜವಳಿ, ರಾಸಾಯನಿಕ ಬೆಲೆ ಇಳಿಕೆ ಪರಿಣಾಮ

ಸಗಟು ಹಣದುಬ್ಬರ ಇಳಿಮುಖ



ನವದೆಹಲಿ (ಪಿಟಿಐ): ಸಗಟು ಹಣದುಬ್ಬರವು ಸತತ ಆರನೇ ತಿಂಗಳಿನಲ್ಲಿಯೂ ಇಳಿಕೆ ಕಂಡಿದೆ. ಆಹಾರ ವಸ್ತುಗಳ ಬೆಲೆ ಕಡಿಮೆ ಆಗಿದ್ದರಿಂದ ಸೆಪ್ಟೆಂಬರ್‌ನಲ್ಲಿ ಸಗಟು ಹಣದುಬ್ಬರ ಪ್ರಮಾಣವು ಶೇ (-) 0.26ರಷ್ಟು ಇಳಿಕೆ ಕಂಡಿದೆ.

ಸಗಟುದರಸೂಚ್ಯಂಕ (ಡಬ್ಲ್ಯುಪಿಐ) ಆಧರಿಸಿದ ಹಣದುಬ್ಬರವು ಏಪ್ರಿಲ್ ತಿಂಗಳಿನಿಂದಲೂ ಶೂನ್ಯಕ್ಕಿಂತಲೂ ಕಡಿಮೆ ಮಟ್ಟದಲ್ಲಿಯೇ ದಾಖಲಾಗುತ್ತಿದೆ. ಆಗಸ್ಟ್‌ನಲ್ಲಿ ಶೇ (-) 0.52ರಷ್ಟು ಇತ್ತು. ಇದಕ್ಕೆ ಹೋಲಿಸಿದರೆ ಶೇ (-) 0.26ರಷ್ಟು ಇಳಿಕೆ ಕಂಡಿದೆ. ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ಶೇ 10.55ರಷ್ಟು ಗರಿಷ್ಠ ಮಟ್ಟದಲ್ಲಿ ಇತ್ತು.

ಆಹಾರ ವಸ್ತುಗಳ ಹಣದುಬ್ಬರವು ಹಿಂದಿನ ಎರಡು ತಿಂಗಳವರೆಗೂ ಎರಡಂಕಿ ಮಟ್ಟದಲ್ಲಿ ಇದ್ದದ್ದು ಸೆಪ್ಟೆಂಬರ್‌ನಲ್ಲಿ ಶೇ 3.35ಕ್ಕೆ ಇಳಿಕೆ ಕಂಡಿದೆ. ಆಗಸ್ಟ್‌ನಲ್ಲಿ ಶೇ 10.60ರಷ್ಟು ಇತ್ತು. ರಾಸಾಯನಿಕ, ರಾಸಾಯನಿಕ ಉತ್ಪನ್ನಗಳು, ಜವಳಿ, ಲೋಹ ಮತ್ತು ಆಹಾರ ವಸ್ತುಗಳ ಬೆಲೆಯು ಕಳೆದ ವರ್ಷದ ಸೆಪ್ಟೆಂಬರ್‌ಗೆ ಹೋಲಿಸಿದರೆ ಈ ವರ್ಷದ ಸೆಪ್ಟೆಂಬರ್‌ನಲ್ಲಿ ಇಳಿಕೆ ಕಂಡಿದೆ. ಇದರಿಂದಾಗಿ ಸಗಟು ಹಣದುಬ್ಬರ ಇಳಿಕೆ ಕಾಣುವಂತಾಗಿದೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ತಿಳಿಸಿದೆ.

ಇಂಧನ ಮತ್ತು ವಿದ್ಯುತ್ ವಲಯಗಳ ದರವು ಆಗಸ್ಟ್‌ನಲ್ಲಿ ಶೇ (-) 6.03 ಇದ್ದಿದ್ದು ಸೆಪ್ಟೆಂಬರ್‌ನಲ್ಲಿ ಶೇ (-) 3.35ಕ್ಕೆ ಇಳಿಕೆ ಕಂಡಿದೆ. ತಯಾರಿಕಾ ವಸ್ತುಗಳ ಹಣದುಬ್ಬರವು ಶೇ (-) 2.37 ರಿಂದ ಶೇ (-) 1.34ಕ್ಕೆ ಇಳಿಕೆ ಕಂಡಿದೆ. ತರಕಾರಿಗಳ ಬೆಲೆಯು ಶೇ 48.39 ರಿಂದ ಶೇ (-)15ಕ್ಕೆ ಇಳಿಕೆ ಕಂಡಿದೆ. ಆಲೂಗಡ್ಡೆ ದರವು ಶೇ (-) 25.24ರಷ್ಟು ಆಗಿದೆ. ಆದರೆ, ಬೇಳೆಕಾಳು, ಈರುಳ್ಳಿ, ಹಾಲು ಮತ್ತು ಹಣ್ಣಿನ ಬೆಲೆಯಲ್ಲಿ ಏರಿಕೆ ಕಂಡುಬಂದಿದೆ.

'ದ್ವಿತೀಯಾರ್ಧದಲ್ಲಿ ಹೆಚ್ಚಲಿದೆ ಹಣದುಬ್ಬರ'

ಕೋಲ್ಕತ್ತ: ಕಚ್ಚಾ ತೈಲ ದರ ಏರಿಕೆ ಮತ್ತು ಮುಂಗಾರು ಬಿತ್ತನೆ ಕಡಿಮೆ ಆಗಿರುವುದರಿಂದ ಪ್ರಸಕ್ತ ಹಣಕಾಸು ವರ್ಷದ ದ್ವಿತೀಯಾರ್ಧದಲ್ಲಿ ಸಗಟು ಹಣದುಬ್ಬರ ಏರಿಕೆ ಕಾಣುವ ಸಾಧ್ಯತೆ ಇದೆ ಎಂದು ತಜ್ಞರು ಹೇಳಿದ್ದಾರೆ.

ಮುಂಗಾರು ಮಳೆಯ ಕೊರತೆಯಿಂದಾಗಿ ಆಹಾರಧಾನ್ಯಗಳ ಬಿತ್ತನೆ ಕಡಿಮೆ ಆಗಿದೆ. ಇದರ ಜೊತೆಗೆ ಕಚ್ಚಾ ತೈಲ ದರ ಏರಿಕೆ ಆಗುತ್ತಿರುವುದರಿಂದಾಗಿ ಸಗಟು ಹಣದುಬ್ಬರ ಏರಿಕೆ ಕಾಣುವ ಸಂಭವ ಇದೆ ಎಂದು ಕೇರ್‌ಎಡ್ಜ್‌ನ ಮುಖ್ಯ ಆರ್ಥಿಕ ತಜ್ಞೆ ರಜನಿ ಸಿನ್ಹಾ ತಿಳಿಸಿದ್ದಾರೆ.

ಸದ್ಯದ ಮಟ್ಟಕ್ಕೆ ಕಚ್ಚಾ ತೈಲ ದರ ಇಳಿಮುಖವಾಗಿದೆ. ಆದರೆ, ರಷ್ಯಾ ಮತ್ತು ಮಧ್ಯಪ್ರಾಚ್ಯದಲ್ಲಿನ ಬಿಕ್ಕಟ್ಟಿನಿಂದಾಗಿ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಏರಿಕೆ ಕಾರಣವಾಗಲಿದೆ. ಆದರಿಂದಾಗಿ ಸಗಟು ಹಣದುಬ್ಬರದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಲಿದೆ ಎಂದು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸ್ಟ್ಯಾಟಿಸ್ಟಿಕ್ಸ್‌ನ ಅರ್ಥಶಾಸ್ತ್ರಜ್ಞ ಅಭಿರೂಪ್ ಸರ್ಕಾರ್ ಹೇಳಿದ್ದಾರೆ.

'ಜಿಡಿಪಿ ಶೇ 6.3 ಬೆಳವಣಿಗೆ'

ನವದೆಹಲಿ (ಪಿಟಿಐ): ಭಾರತದ ಅರ್ಥವ್ಯವಸ್ಥೆಯು 2023–24ನೇ ಹಣಕಾಸು ವರ್ಷದಲ್ಲಿ ಶೇ 6.3ರಷ್ಟು ಬೆಳವಣಿಗೆ ಕಾಣುವ ನಿರೀಕ್ಷೆ ಇದೆ ಎಂದು ಭಾರತೀಯ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಘ (ಫಿಕ್ಕಿ) ಸೋಮವಾರ ಹೇಳಿದೆ.

ಹಣಕಾಸು ವಲಯಗಳ ಸ್ಥಿತಿ ಉತ್ತಮವಾಗಿದೆ. ಖಾಸಗಿ ಹೂಡಿಕೆ ಹೆಚ್ಚಾಗುತ್ತಿದೆ. ಈ ಕಾರಣಗಳಿಂದಾಗಿ ಅರ್ಥವ್ಯವಸ್ಥೆಯು ಈ ಪ್ರಮಾಣದ ಬೆಳವಣಿಗೆ ಕಾಣಬಹುದು ಎಂದು ಅದು ಹೇಳಿದೆ.

ಎಲ್‌ನಿನೊ ಪರಿಣಾಮವು ಮುಂಗಾರು ಮಳೆಯ ಅಸಮಾನ ಹಂಚಿಕೆಗೆ ಕಾರಣವಾಗಿದೆ. ಹೀಗಾಗಿ ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ವಲಯಗಳ ಬೆಳವಣಿಗೆಯು ಶೇ 2.7ರಷ್ಟು ಆಗುವ ಅಂದಾಜು ಮಾಡಲಾಗಿದೆ. 2022–23ರಲ್ಲಿ ಶೇ 4ರಷ್ಟು ಬೆಳವಣಿಗೆ ಆಗಿತ್ತು ಎಂದು ಸಮೀಕ್ಷೆಯಲ್ಲಿ ತಿಳಿಸಿದೆ.

ಕೈಗಾರಿಕೆ ಮತ್ತು ಸೇವೆಗಳ ವಲಯಗಳು ಕ್ರಮವಾಗಿ ಶೇ 5.6ರಷ್ಟು ಮತ್ತು ಶೇ 7.3ರಷ್ಟು ಬೆಳವಣಿಗೆ ಕಾಣುವ ಅಂದಾಜು ಮಾಡಿರುವುದಾಗಿ ಹೇಳಿದೆ.

ಜಾಗತಿಕ ಮಟ್ಟದಲ್ಲಿ ಎದುರಾಗಿರುವ ರಾಜಕೀಯ ಬಿಕ್ಕಟ್ಟು, ಚೀನಾದ ಮಂದಗತಿಯ ಬೆಳವಣಿಗೆ, ವಾಡಿಕೆಗಿಂತಲೂ ಕಡಿಮೆ ಮಳೆಯಾಗಿರುವುದು... ಸೇರಿ ಹಲವು ವಿದ್ಯಮಾನಗಳು ದೇಶದ ಬೆಳವಣಿಗೆ ಪ್ರಮಾಣವನ್ನು ತಗ್ಗಿಸುವ ಸಾಧ್ಯತೆ ಇದೆ ಎಂದೂ ತಿಳಿಸಿದೆ.

ಜಾಗತಿಕ ಬೇಡಿಕೆಯು ಕಡಿಮೆ ಆಗುತ್ತಿರುವುದರಿಂದ ಭಾರತದ ಬೆಳವಣಿಗೆಯ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಲಿದೆ. ದೇಶದ ರಫ್ತು ವಲಯವು ಈಗಾಗಲೇ ಅದರ ಪರಿಣಾಮ ಎದುರಿಸುತ್ತಿದ್ದು, ರಫ್ತು ಇಳಿಕೆ ಕಾಣುತ್ತಿದೆ ಎಂದು ಹೇಳಿದೆ.

ಈ ಹಣಕಾಸು ವರ್ಷದ ಅಂತ್ಯದವರೆಗೂ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಬಡ್ಡಿದರ ಬದಲಾವಣೆ ಮಾಡುವ ಸಾಧ್ಯತೆ ಇಲ್ಲ ಎಂದೂ ಹೇಳಿದೆ. 2024–25ರ ಮೊದಲ ಅಥವಾ 2ನೇ ತ್ರೈಮಾಸಿಕದಲ್ಲಿ ಆರ್‌ಬಿಐ ಬಡ್ಡಿದರ ಕಡಿತ ಮಾಡುವ ಸಂಭವ ಇದೆ ಎನ್ನುವುದು ಆರ್ಥಿಕ ತಜ್ಞರ ಅಭಿಪ್ರಾಯ ಆಗಿದೆ ಎಂದು ಫಿಕ್ಕಿ ತಿಳಿಸಿದೆ.

ಪ್ರಯಾಣಿಕ ವಾಹನ ಮಾರಾಟ ತ್ರೈಮಾಸಿಕವೊಂದರ ಗರಿಷ್ಠ

ನವದೆಹಲಿ (ಪಿಟಿಐ): ಪ್ರಯಾಣಿಕ ವಾಹನಗಳ ಸಗಟು ಮಾರಾಟವು ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ 10.74 ಲಕ್ಷಕ್ಕೆ ತಲುಪಿದ್ದು, ತ್ರೈಮಾಸಿಕವೊಂದರಲ್ಲೇ ಆಗಿರುವ ಗರಿಷ್ಠ ಮಾರಾಟ ಇದಾಗಿದೆ ಎಂದು ಭಾರತೀಯ ವಾಹನ ತಯಾರಕರ ಒಕ್ಕೂಟವು (ಎಸ್‌ಐಎಎಂ) ಸೋಮವಾರ ತಿಳಿಸಿದೆ.

2022–23ರ ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ 10.26 ಲಕ್ಷ ಪ್ರಯಾಣಿಕ ವಾಹನಗಳ ಮಾರಾಟ ಆಗಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಮಾರಾಟದಲ್ಲಿ ಶೇ 4.7ರಷ್ಟು ಹೆಚ್ಚಳ ಕಂಡುಬಂದಿದೆ.

ಯುಟಿಲಿಟಿ ಮತ್ತು ಸ್ಪೋರ್ಟ್ಸ್ ಯುಟಿಲಿಟಿ ವಾಹನಗಳಿಗೆ ಉತ್ತಮ ಬೇಡಿಕೆ ಬಂದಿರುವುದರಿಂದ ಪ್ರಯಾಣಿಕ ವಾಹನಗಳ ಮಾರಾಟದ ಬೆಳವಣಿಗೆಯಲ್ಲಿ ಏರಿಕೆ ಕಂಡುಬಂದಿದೆ ಎಂದು ಒಕ್ಕೂಟದ ಅಧ್ಯಕ್ಷ ವಿನೋದ್ ಅಗರ್ವಾಲ್ ತಿಳಿಸಿದ್ದಾರೆ. ಆದರೆ ಪ್ರವೇಶ ಮಟ್ಟದ (ಎಂಟ್ರಿ ಲೆವೆಲ್) ಕಾರುಗಳ ಮಾರಾಟದಲ್ಲಿ ಇಳಿಕೆ ಕಂಡುಬಂದಿದೆ. 2018–19ರ ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ 1.38 ಲಕ್ಷ ಇದ್ದಿದ್ದು 2022–23ರ ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ 35 ಸಾವಿರಕ್ಕೆ ಇಳಿಕೆ ಕಂಡಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಇದೇ ಮೊದಲ ಬಾರಿಗೆ ಪ್ರಯಾಣಿಕ ವಾಹನ ಮಾರಾಟವು 20 ಲಕ್ಷದ ಗಟಿ ದಾಟಿದೆ. ಪ್ರಸಕ್ತ ಹಣಕಾಸು ವರ್ಷದ ಆರು ತಿಂಗಳಿನಲ್ಲಿ ಪ್ರಯಾಣಿಕ ವಾಹನ ಮಾರಾಟವು 20.70 ಲಕ್ಷಕ್ಕೆ ಏರಿಕೆ ಕಂಡಿದೆ. ಹಿಂದಿನ ಹಣಕಾಸು ವರ್ಷದ ಆರು ತಿಂಗಳಿನಲ್ಲಿ 19.36 ಲಕ್ಷದಷ್ಟು ಮಾರಾಟ ಆಗಿತ್ತು. ಎಂದು ಒಕ್ಕೂಟವು ತಿಳಿಸಿದೆ.

ಪ್ರಯಾಣಿಕ ವಾಹನ ಮಾರಾಟ

20.70 ಲಕ್ಷ
2023–24ರ ಏಪ್ರಿಲ್–ಸೆಪ್ಟೆಂಬರ್ ಅವಧಿ

19.36 ಲಕ್ಷ
2022–23ರ ಏಪ್ರಿಲ್–ಸೆಪ್ಟೆಂಬರ್ ಅವಧಿ

ರಫ್ತು ಶೇ 17ರಷ್ಟು ಇಳಿಕೆ

ಜಾಗತಿಕ ಬಿಕ್ಕಟ್ಟಿನಿಂದಾಗಿ ವಾಹನಗಳ ರಫ್ತು 2023–24ರ ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ ಶೇ 17ರಷ್ಟು ಇಳಿಕೆ ಕಂಡಿದೆ ಎಂದು ಒಕ್ಕೂಟವು ಮಾಹಿತಿ ನೀಡಿದೆ.

2022–23ನೇ ಹಣಕಾಸು ವರ್ಷದ ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ 26.80 ಲಕ್ಷ ವಾಹನಗಳನ್ನು ರಫ್ತು ಮಾಡಲಾಗಿತ್ತು. 2023–24ನೇ ಹಣಕಾಸು ವರ್ಷದ ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ 22.11 ಲಕ್ಷಕ್ಕೆ ಇಳಿಕೆ ಕಂಡಿದೆ. ಪ್ರಯಾಣಿಕ ವಾಹನ ರಫ್ತು ಶೇ 5ರಷ್ಟು ಹೆಚ್ಚಳ ಕಂಡಿದೆ. ಆದರೆ, ದ್ವಿಚಕ್ರ ರಫ್ತು ಶೇ 20ರಷ್ಟು ಇಳಿಕೆ ಕಂಡಿದೆ ಎಂದು ತಿಳಿಸಿದೆ.

ಜಿಯೊ ಫೈನಾನ್ಶಿಯಲ್ ಲಾಭ ಹೆಚ್ಚಳ

ನವದೆಹಲಿ (ಪಿಟಿಐ): ಜಿಯೊ ಫೈನಾನ್ಶಿಯಲ್ ಸರ್ವಿಸಸ್ ಲಿಮಿಟೆಡ್, ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹668 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದಲ್ಲಿ ಇದ್ದ ₹331 ಕೋಟಿ ಲಾಭಕ್ಕೆ ಹೋಲಿಸಿದರೆ ಈ ಬಾರಿ ಲಾಭದಲ್ಲಿ ಶೇ 30ರಷ್ಟು ಏರಿಕೆ ಕಂಡುಬಂದಿದೆ ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ. ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನಿಂದ ಪ್ರತ್ಯೇಕಗೊಂಡ ಬಳಿಕ ಕಂಪನಿಯ ಮೊದಲ ಫಲಿತಾಂಶ ಇದಾಗಿದೆ. ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ವರಮಾನವು ಶೇ 47ರಷ್ಟು ಏರಿಕೆ ಕಂಡು ₹608 ಕೋಟಿಗೆ ತಲುಪಿದೆ. ಹಿಂದಿನ ಇದೇ ಅವಧಿಯಲ್ಲಿ ವರಮಾನ ₹414 ಕೋಟಿಯಷ್ಟು ಇತ್ತು.

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)
₹270-456
ದ್ವಿತಳಿ (ಬಿ.ವಿ)
₹265-622

ಎಚ್‌ಡಿಎಫ್‌ಸಿ ಬ್ಯಾಂಕ್ ಲಾಭ ₹16,811 ಕೋಟಿ

ಮುಂಬೈ (ಪಿಟಿಐ): ಎಚ್‌ಡಿಎಫ್‌ಸಿ ಬ್ಯಾಂಕ್‌ನ ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹16,811 ಕೋಟಿ ಆಗಿದೆ.

ಎಚ್‌ಡಿಎಫ್‌ಸಿ ಬ್ಯಾಂಕ್‌ನಲ್ಲಿ ಎಚ್‌ಡಿಎಫ್‌ಸಿ ಲಿಮಿಟೆಡ್ ವಿಲೀನಗೊಂಡ ಬಳಿಕ ಪ್ರಕಟ ಆಗುತ್ತಿರುವ ಮೊದಲ ತ್ರೈಮಾಸಿಕ ಫಲಿತಾಂಶ ಇದಾಗಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್‌ನ ನಿವ್ವಳ ಲಾಭವು ₹11,162 ಕೋಟಿ ಇತ್ತು.

ಬ್ಯಾಂಕ್‌ನ ನಿವ್ವಳ ಬಡ್ಡಿ ಲಾಭವು (ಎನ್‌ಐಎಂ) ಶೇ 4 ರಿಂದ ಶೇ 3.4ಕ್ಕೆ ಇಳಿಕೆ ಕಂಡಿದೆ. ಬ್ಯಾಂಕ್‌ನ ಒಟ್ಟು ವರಮಾನವು ₹46,181 ಕೋಟಿಯಿಂದ ₹78,406 ಕೋಟಿಗೆ ಏರಿಕೆ ಕಂಡಿದೆ. ವಸೂಲಾಗದ ಸಾಲದ ಸರಾಸರಿ ಪ್ರಮಾಣವು (ಎನ್‌ಪಿಎ) ಶೇ 1.23 ರಿಂದ ಶೇ 1.34ಕ್ಕೆ ಏರಿಕೆ ಕಂಡಿದೆ.

ಹೆಚ್ಚುವರಿ ನಗದಿನ ಅಗತ್ಯಕ್ಕಾಗಿ ಸಾಲದ ಮೇಲಿನ ವೆಚ್ಚ ಹೆಚ್ಚಾಗಿರುವುದು ಹಾಗೂ ವಿಲೀನ ಪ್ರಕ್ರಿಯೆ ಕಾರಣಗಳಿಂದಾಗಿ ನಿವ್ವಳ ಬಡ್ಡಿ ಗಳಿಕೆಯು ಇಳಿಕೆ ಕಾಣುವಂತಾಗಿದೆ ಎಂದು ಬ್ಯಾಂಕ್‌ನ ಮುಖ್ಯ ಹಣಕಾಸು ಅಧಿಕಾರಿ (ಸಿಎಫ್‌ಒ) ಶ್ರೀನಿವಾಸನ್ ವೈದ್ಯನಾಥನ್ ತಿಳಿಸಿದ್ದಾರೆ.

ಬ್ಯಾಂಕ್‌ನ ನಿವ್ವಳ ಬಡ್ಡಿ ಆದಾಯವು ಶೇ 30ರಷ್ಟು ಹೆಚ್ಚಾಗಿ ₹27,385 ಕೋಟಿಗೆ ಏರಿಕೆ ಕಂಡಿದೆ. ಠೇವಣಿ ಪ್ರಮಾಣವು ಶೇ 5.3ರಷ್ಟು ಮತ್ತು ಮುಂಗಡ ಶೇ 4.9ರಷ್ಟು ಹೆಚ್ಚಾಗಿದೆ ಎಂದು ಅವರು ಹೇಳಿದ್ದಾರೆ.

ಭವಿಷ್ಯದಲ್ಲಿ ಎದುರಾಗಬಹುದಾದ ಆರ್ಥಿಕ ನಷ್ಟ ಭರಿಸಲು ತೆಗೆದಿರಿಸುವ ಮೊತ್ತವು ₹ 3,240 ಕೋಟಿಯಿಂದ ₹2,903 ಕೋಟಿಗೆ ಇಳಿಕೆ ಕಂಡಿದೆ. ಸೆಪ್ಟೆಂಬರ್ ತ್ರೈಮಾಸಿಕದಲ್ಲಿ 16 ಸಾವಿರ ಜನರನ್ನು ನೇಮಕ ಮಾಡಿಕೊಳ್ಳಲಾಗಿದ್ದು, ಒಟ್ಟು ಸಿಬ್ಬಂದಿ ಸಂಖ್ಯೆಯು 1.98 ಲಕ್ಷಕ್ಕೆ ಏರಿಕೆ ಕಂಡಿದೆ ಎಂದು ತಿಳಿಸಿದೆ.

ಮುಖ್ಯಾಂಶಗಳು

- ವಸೂಲಾಗದ ಸಾಲದ ಪ್ರಮಾಣ ಹೆಚ್ಚಳ
- ಸೆಪ್ಟೆಂಬರ್ ತ್ರೈಮಾಸಿಕದಲ್ಲಿ 16 ಸಾವಿರ ನೇಮಕ

10 ಗ್ರಾಂ ಚಿನ್ನ ₹350 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ಚಿನ್ನ, ಬೆಳ್ಳಿ ದರ ಇಳಿಕೆ ಕಂಡಿತು. ಚಿನ್ನದ ದರ 10 ಗ್ರಾಂಗೆ ₹350ರಷ್ಟು ಇಳಿಕೆ ಕಂಡು ₹60,150ರಂತೆ ಮಾರಾಟ ಆಯಿತು. ಬೆಳ್ಳಿ ಧಾರಣೆ ಕೆ.ಜಿಗೆ ₹300 ಇಳಿಕೆ ಕಂಡು ₹74 ಸಾವಿರಕ್ಕೆ ತಲುಪಿತು.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನ, ಬೆಳ್ಳಿ ದರ ಇಳಿಕೆ ಕಂಡಿದ್ದರಿಂದ ದೇಶಿ ಮಾರುಕಟ್ಟೆಯಲ್ಲಿಯೂ ಅದರ ಪರಿಣಾಮ ಕಂಡುಬಂದಿತು ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಒಂದು ಔನ್ಸ್‌ಗೆ (28.34 ಗ್ರಾಂ) 1,912 ಡಾಲರ್ ಮತ್ತು ಬೆಳ್ಳಿ ಒಂದು ಔನ್ಸ್‌ಗೆ 22.50 ಡಾಲರ್‌ನಂತೆ ಮಾರಾಟ ಆಯಿತು.

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹148
ಆರ್‌ಎಸ್‌ಎಸ್-5	₹142
ಗುಡ್ ಲಾಟ್	₹131

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹10600
ಎಸಿ	₹6440
ಆರ್‌ಪಿ	₹9500
ಆರ್‌ಸಿ	₹5960

ಮುಂಬೈ ಧಾರಣೆ

ಶೇಂಗಾ

16-10-2023

ಜಾವಾ 70/80(ಹೊಸ)	12200-12300
ಜಾವಾ 80/90(ಹೊಸ)	12900-12000
ದಪ್ಪ ಮಧ್ಯಪ್ರದೇಶ(ಹೊಸ)	10500-10600
ದಪ್ಪ ಗುಜರಾತ್(ಹೊಸ)	11300-11400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1570 (1550)
ಒಂದು ವಾರದ ಡೆಲಿವರಿ	1565 (1545)
ಸೋಯಾ ಕಚ್ಚಾ	850 (845)
ಪಾಮ್ ವಾರದ ಡೆಲಿವರಿ	823 (821)
ಸೂರ್ಯಕಾಂತಿ ಎಣ್ಣೆ ಕಚ್ಚಾ	815 (815)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
58,900 (59,305)
ಬೆಳ್ಳಿ ಕೆ.ಜಿ 70,900 (71,150)

ಆವರಣದಲ್ಲಿ ಶನಿವಾರ ದಿನದ ಧಾರಣೆ

ತೋಟಗಾರಿಕೆ ಇಲಾಖೆ
ತೋಟಗಾರಿಕೆ ನಿರ್ದೇಶನಾಲಯ, ತೋಟಗಾರಿಕೆ ಮಾಹಿತಿ ಕೇಂದ್ರ, ಲಾಲ್‌ಬಾಗ್, ಬೆಂಗಳೂರು–04
ಮೊಬೈಲ್ ಸಂಖ್ಯೆ: 8553884517

ಸಂ.: ತೋಇ/ತೋಉನಿ/ತೋಮಾಕೇ/ವಿನಿ2/03/2023–24 ದಿನಾಂಕ: 16–10–2023

ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ, ದ್ವಿ–ಲಕೋಟೆ ವಿಧಾನ)

ತೋಟಗಾರಿಕೆ ಉಪ ನಿರ್ದೇಶಕರ ಕಛೇರಿ, ತೋಟಗಾರಿಕೆ ಮಾಹಿತಿ ಕೇಂದ್ರ, ಲಾಲ್ ಬಾಗ್, ಬೆಂಗಳೂರು ರವರು ತೋಟಗಾರಿಕಾ ಇಲಾಖಾ ವತಿಯಿಂದ ನಡೆಯುವ ಸಭೆ/ಸಮಾರಂಭ/ತರಬೇತಿ/ಕಾರ್ಯಾಗಾರಗಳಿಗೆ ಕೇಟರಿಂಗ್ ಸೇವೆ ಒದಗಿಸಲು ಅನುಭವಿ ಕೇಟರರ್ಸ್ ರವರಿಂದ ಇ–ಬಿಡ್ ಅನ್ನು ಆಹ್ವಾನಿಸುತ್ತಿದ್ದಾರೆ.

ಘಟನಾವಳಿಗಳ ವೇಳಾಪಟ್ಟಿ: 1) ಟೆಂಡರ್ ದಾಖಲಾತಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಅಂತರ್ಜಾಲದಿಂದ ಪಡೆದುಕೊಳ್ಳುವ ಮತ್ತು ಇ–ಪ್ರೊಕ್ಯೂರ್‌ಮೆಂಟ್ ಅಂತರ್ಜಾಲಕ್ಕೆ ಭರ್ತಿ (ಅಪ್‌ಲೋಡ್) ಮಾಡುವ ಅವಧಿ: 17–10–2023 ರಿಂದ 02–11–2023 ರ ಸಂಜೆ 5.30 ಗಂಟೆವರೆಗೆ. 2) ಬಿಡ್ ಪೂರ್ವ (ಪ್ರೀ ಬಿಡ್) ಸಭೆಯ ದಿನಾಂಕ ಮತ್ತು ಸಮಯ: 27–10–2023, ಬೆಳಗ್ಗೆ 11.30 ಗಂಟೆಗೆ. 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 03–11–2023, ಬೆಳಗ್ಗೆ 11.30 ಗಂಟೆಗೆ. 4) ಆರ್ಥಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: 06–11–2023, ಬೆಳಗ್ಗೆ 11.30 ಗಂಟೆಗೆ. 5) ಬಿಡ್ಡು ಪೂರ್ವ ಸಭೆ ನಡೆಯುವ ಮತ್ತು ಬಿಡ್ಡುಗಳನ್ನು ತೆರೆಯುವ ಸ್ಥಳದ ಹಾಗೂ ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ತೋಟಗಾರಿಕೆ ಉಪ ನಿರ್ದೇಶಕರು, ತೋಟಗಾರಿಕೆ ಮಾಹಿತಿ ಕೇಂದ್ರ, ಲಾಲ್ ಬಾಗ್, ಬೆಂಗಳೂರು–04. ಫೋನ್ ಸಂಖ್ಯೆ: 8553884517 ಇ–ಮೇಲ್: ddhhiclalbagh@gmail.com 6) ಟೆಂಡರ್ ಅಂದಾಜು ಮೊತ್ತ: ರೂ. 35,00,000/– 7) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಮೊತ್ತ (ಇ.ಎಂ.ಡಿ): ರೂ. 70,000/–

ಸಹಿ/–
ತೋಟಗಾರಿಕೆ ಉಪನಿರ್ದೇಶಕರು
(ತೋಟಗಾರಿಕೆ ಮಾಹಿತಿ ಕೇಂದ್ರ)
DIPR/CP/1722/GREENFMC/2023-24

ಕರ್ನಾಟಕ ಸರ್ಕಾರ
ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ
ಸರ್ಕಾರದ ಸ್ವಾಯತ್ತ ಸಂಸ್ಥೆ
ಇ–ಮೇಲ್ : directorgimsgulbarga@gmail.com ದೂರವಾಣಿ ಸಂ.08472-227252 ಫ್ಯಾಕ್ಸ್ 260252

No. GIMS/KLB/EST-1/Walk in interview/CR-128/2023-24/1647 ದಿನಾಂಕ: 13–10–2023

ತಿದ್ದುಪಡಿ ಅಧಿಸೂಚನೆ–1

ದಿನಾಂಕ: 12–10–2023 ರ ಈ ಕಚೇರಿಯ ಅಧಿಸೂಚನೆ ಸಂಖ್ಯೆ GIMS/KLB/EST-1/Walk in interview/CR-128/2023-24/1635 ರಲ್ಲಿ ನೇರ ಸಂದರ್ಶನದ ಅಧಿಸೂಚನೆಯನ್ನು ಉಲ್ಲೇಖಿಸಿ ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿಯ (ಟ್ರಾಮಾ ಕೇರ್ ಕೇಂದ್ರ ಸೇರಿದಂತೆ) ಸ್ಥಳೀಯ ವೃಂದ (ಕಲ್ಯಾಣ ಕರ್ನಾಟಕ ಪ್ರದೇಶ) ಅಡಿಯಲ್ಲಿ ಸಹಾಯಕ ಪ್ರಾಧ್ಯಾಪಕರು, ಹಿರಿಯ ಸ್ಥಾನಿಕ ವೈದ್ಯರನ್ನು ಮತ್ತು ಅಪಘಾತ ಚಿಕಿತ್ಸಾ ವೈದ್ಯಾಧಿಕಾರಿಗಳ ಹುದ್ದೆಗಳ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು.

ಅದರಂತೆ, ಸಹಾಯಕ ಪ್ರಾಧ್ಯಾಪಕರು, ಹಿರಿಯ ಸ್ಥಾನಿಕ ವೈದ್ಯರನ್ನು ಮತ್ತು ಅಪಘಾತ ಚಿಕಿತ್ಸಾ ವೈದ್ಯಾಧಿಕಾರಿಗಳ ಹುದ್ದೆಗಳ ವಯೋಮಾನದ ಮಾನದಂಡವನ್ನು ಭಾಗಶಃ ಮಾರ್ಪಾಡುಗೊಳಿಸಿ ಗರಿಷ್ಠ ವಯಸ್ಸಿನ ಮಿತಿಯನ್ನು ಮಾರ್ಪಡಿಸಲಾಗಿದೆ. ಮತ್ತು GM 38 ವರ್ಷಗಳು, OBC 41 ವರ್ಷ, SC/ST 43 ವರ್ಷಗಳು ಎಂದು ಓದಿಕೊಳ್ಳತಕ್ಕದ್ದು.

ಸಹಿ/– ನಿರ್ದೇಶಕರು,
ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/369/ಕೆ.ಎಸ್.ಎಂ.ಸಿ.&ಎ/2023–24

ಜಿಲ್ಲಾ ಯೋಜನಾಧಿಕಾರಿಗಳ ಕಾರ್ಯಾಲಯ, ಸಮಗ್ರ ಶಿಕ್ಷಣ ಕರ್ನಾಟಕ, ಬೀದರ

ಸಂಖ್ಯೆ:–ಸ.ಶಿ.ಕ.ಬೀ/ಕೆ.ಜಿ.ಬಿ.ವಿ.ಟೈಪ–1/ಮ್ಯಾ.ಪಾ.ಹೊ.ಗು.ಸೇ.ಒ.ಕು/ಇ–ಟೆಂಡರ/ಆಹ್ವಾನ/2023–24 ದಿ/13–10–2023

ಅಲ್ಪಾವಧಿ ಇ–ಟೆಂಡರ ಅರ್ಜಿ

2023–24 ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ನಡೆಯುತ್ತಿರುವ, 4 ಕೆ.ಜಿ.ಬಿ.ವಿ. ಟೈಪ–1 ವಿದ್ಯಾರ್ಥಿ ನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಲಯಕ್ಕೆ ಹೊರ ಗುತ್ತಿಗೆ ಅಧಾರದ ಮೇಲೆ ವಿವಿಧ ಹುದ್ದೆಗಳು ಒದಗಿಸುವ ಕುರಿತು ಅಲ್ಪಾವಧಿ ಇ–ಟೆಂಡರ ಈ ಕೆಳಗಿನಂತೆ ಆವ್ಹಾನಿಸಲಾಗಿದೆ. ಟೆಂಡರ ಗೆ ಇಡಲಾದ ಅಂದಾಜು ಮೊತ್ತ ರೂ 50,52,000/–

ದಿನಾಂಕ :12–10–2023 ರಿಂದ 25–10–2023ರ ವರೆಗೆ ಅರ್ಹ ಆಸಕ್ತ ಬಿಡ್ಡದಾರರಿಂದ ಇ–ಪ್ರೋಕ್ಯೂರಮೆಂಟ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಅಂತಿಮ ದಿ. 25–10–2023 ಇದ್ದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ:–9448999388 ಹಾಗೂ ಅಂತರ್ಜಾಲತಾಣ ವಿಳಾಸ http://www.eproc.karnataka.gov.in ನಲ್ಲಿ ವೀಕ್ಷಿಸಬಹುದು.

ಸಹಿ/– ಉಪನಿರ್ದೇಶಕರು ಹಾಗೂ ಪದನಿಮಿತ್ತ, ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ – ಬೀದರ.
ವಾ.ಸಾ.ಸಂ.ಇ/ಬೀದರ/102/ಕೆ.ಎಸ್.ಎಂ.ಸಿ.&ಎ/2023–24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಗೋವಿಂದರಾಜನಗರ ವಿಭಾಗ, 2ನೇ ಮಹಡಿ, ಶಕ್ತಿ ಸೌಧ, 13ನೇ ಅಡ್ಡರಸ್ತೆ, 4ನೇ ಬಿ ಮುಖ್ಯರಸ್ತೆ, ಎಂ.ಸಿ. ಬಡಾವಣೆ, ವಿಜಯನಗರ, ಬೆಂಗಳೂರು–40.
ಸಂಖ್ಯೆ: ಕಾಪಾಅ(ಗೋರಾನ)/ಟೆಂಡರ್/ಜಿಎಲ್–03/2023–24 ದಿನಾಂಕ: 16.10.2023

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಈ ಕೆಳಗಿನ ಸಹಿದಾರರು ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್ /ಎಂ.ಇ.ಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಗಳ ಹೆಸರು	ಅಂದಾಜು ಮೊತ್ತ (₹.ಲಕ್ಷಗಳಲ್ಲಿ)	ಇಎಂಡಿ (₹.ಗಳಲ್ಲಿ)
ದ್ವಿಲಕೋಟೆ ಕಾಮಗಾರಿಗಳು		
ಗೋವಿಂದರಾಜನಗರ ಉಪ ವಿಭಾಗದ ವಾರ್ಡ್ ಸಂಖ್ಯೆ–135, 136, 137 & 138ರಲ್ಲಿ ರಸ್ತೆಗುಂಡಿಗಳನ್ನು ಮುಚ್ಚುವುದು.	60.00	1,20,000/-
ಚಂದ್ರಲೇಔಟ್ ಉಪ ವಿಭಾಗದ ವಾರ್ಡ್ ಸಂಖ್ಯೆ–139, 140, 141, 142 & 143ರಲ್ಲಿ ರಸ್ತೆಗುಂಡಿಗಳನ್ನು ಮುಚ್ಚುವುದು.	75.00	1,50,000/-

ಟೆಂಡರ್ ವೇಳಾಪಟ್ಟಿ: (1) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ 25.10.2023ರ ಸಂಜೆ 4:00 ಗಂಟೆಯವರೆಗೆ. (2) ಆರ್ಥಿಕ ಪ್ರಸ್ತಾವನೆಗಳನ್ನು ದಿನಾಂಕ 27.10.2023ರ ಮಧ್ಯಾಹ್ನ 12:30 ಗಂಟೆಯ ನಂತರ ತೆರೆಯಲಾಗುವುದು. (3) ಈ ಟೆಂಡರ್ ಪ್ರಕಟಣೆಯನ್ನು ಬೃ.ಬೆಂ.ಮ.ಪಾಲಿಕೆ ವೆಬ್‌ಸೈಟ್ www.bbmp.gov.in. ನಲ್ಲಿಯು ಕೂಡ ವೀಕ್ಷಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಗೋವಿಂದರಾಜನಗರ ವಿಭಾಗ

ಕರ್ನಾಟಕ ಸರ್ಕಾರ
ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಧಾರವಾಡ,
c/o ವೀಕ್ಷಣಾಲಯ, ಡಿ.ಸಿ. ಕಂಪೌಂಡ ಧಾರವಾಡ–580001
ದೂರವಾಣಿ ಸಂಖ್ಯೆ : 0836-2742420 E-mail - dcpudwd@gmail.com
ಸಂಖ್ಯೆ:ಜಿಮರಘಧಾ/ಪಪ್ರನೀಸಕು/2023–24/337 ದಿನಾಂಕ : 09–10–2023

ಪೋಷಕರ ಪತ್ತೆಗಾಗಿ ಪತ್ರಿಕಾ ಪ್ರಕಟಣೆ

ದಿನಾಂಕ : 03–10–2023 ರಂದು ಯಾರೋ ಅಪರಿಚಿತ ಪೋಷಕರು ಗಂಡು ಮಗುವಿಗೆ ಜನ್ಮ ನೀಡಿ ಮಗುವಿನ ಜನನ ಬಚ್ಚಿಡುವ ಉದ್ದೇಶದಿಂದ ಮತ್ತು ಆರೈಕೆಯನ್ನು ಮಾಡದೇ ಸದರ ನವಜಾತ ಗಂಡು ಮಗುವನ್ನು ಕಲಘಟಗಿ ಪಟ್ಟಣದ ಮಾಚಾಪೂರ ರಸ್ತೆಯ ಬದಿಗೆ ಇರುವ ಮಂಜುನಾಥ ವಾಘ್ಮೋಡೆ ಇವರ ಕಬ್ಬಿನ ಹೊಲದಲ್ಲಿ ಯಾರೋ ಹೆರಿಗೆಯಾದ ನಂತರ ಗಂಡು ಮಗುವನ್ನು ಹೊಲದಲ್ಲಿಯೇ ಬಿಟ್ಟು ಹೋಗಿದ್ದು, ಈ ಕುರಿತು ಕಲಘಟಗಿ ಪೊಲೀಸ್ ಠಾಣೆಯಲ್ಲಿ ಗುನ್ನಾ ನಂಬರ್ 0271/2023 ರ ಪ್ರಕರಣ ದಾಖಲಾಗಿರುತ್ತದೆ. ಸಧ್ಯ ಮಗು ಪಾಲನೆ ಪೋಷಣೆಗಾಗಿ ಕಿಮ್ಸ್ ಆಸ್ಪತ್ರೆ, ಹುಬ್ಬಳ್ಳಿಯಲ್ಲಿ ದಾಖಲಾಗಿರುತ್ತದೆ.

ಆದ್ದರಿಂದ ಸದರಿ ಮಗುವಿನ ಪಾಲಕರು/ಪೋಷಕರ ಕಾನೂನು ರೀತಿ ಹಕ್ಕುಳ್ಳವರು ಎಲ್ಲಿದ್ದರೂ 02 ತಿಂಗಳ ಅವಧಿ ಮುಗಿಯುವದರ ಒಳಗಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಧಾರವಾಡ, ಅಮೂಲ್ಯ(ಜಿ) ಶಿಶುಗೃಹ ಹುಬ್ಬಳ್ಳಿ ಅಧೀಕ್ಷಕರನ್ನು ಅಥವಾ ಕಲಘಟಗಿ ಪೊಲೀಸ ಠಾಣೆಯನ್ನು ಸಂಪರ್ಕಿಸಬೇಕು, ಒಂದು ವೇಳೆ ಯಾರೂ ವಾರಸದಾರರು ಬಾರದ ಪಕ್ಷದಲ್ಲಿ ಕಾನೂನು ರೀತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಧಾರವಾಡ ಪ್ರಕಟಣೆ ತಿಳಿಸಿದೆ.

ಮಗುವಿನ ವಿವರ ಈ ಕೆಳಗಿನಂತಿದೆ : ಮಗುವಿನ ಜನ್ಮ ದಿನಾಂಕ : 03–10–2023, ಮಗು ಸಿಕ್ಕಸ್ಥಳದ ಹೆಸರು : ಕಲಘಟಗಿ ಪಟ್ಟಣದ ಮಾಚಾಪೂರ ರಸ್ತೆಯ ಬದಿಗೆ ಇರುವ ಮಂಜುನಾಥ ವಾಘ್ಮೋಡೆ ಇವರ ಕಬ್ಬಿನ ಹೊಲದಲ್ಲಿ, ದಾಖಲಾದ ದಿನಾಂಕ : 03–10–2023, ಲಿಂಗ : ಗಂಡು, ಮೈ ಬಣ್ಣ : ಗೋಧಿ ಬಣ್ಣ

ಸಹಿ/– ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು
ವಾಸಾಸಂಇ/ಧಾ/ಕೆಎಸ್‌ಎಂಸಿಎ/386/2023–24 ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಧಾರವಾಡ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
"NAAC Accredited with 'A' Grade 2014"
Ph.: 0836-2215207
KU/HC/2023-24/850 Date: 16.10.2023

ಟೆಂಡರ ಪ್ರಕಟಣೆ
(ಇ–ಪ್ರೋಕ್ಯೂರಮೆಂಟ ಮುಖಾಂತರ ಮಾತ್ರ)

ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಆವರಣದಲ್ಲಿರುವ ಆರೋಗ್ಯ ಕೇಂದ್ರ ಹಾಗೂ ಕರ್ನಾಟಕ ಮಹಾವಿದ್ಯಾಲಯದ ಆವರಣದಲ್ಲಿರುವ ಆರೋಗ್ಯ ಕೇಂದ್ರ ಈ ಎರಡು ಆರೋಗ್ಯ ಕೇಂದ್ರಗಳಿಗೆ 2023–24ನೇ ಸಾಲಿಗೆ ಔಷಧಗಳನ್ನು ಪೂರೈಕೆ ಮಾಡಲು ಅರ್ಹ ಔಷಧಿ ಪೂರೈಕೆದಾರರಿಂದ ಇ–ಪ್ರೋಕ್ಯೂರಮೆಂಟ ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ ಟೆಂಡರನಲ್ಲಿ ಭಾಗವಹಿಸಲು ಕೊನೆಯ ದಿನಾಂಕ: 31.10.2023.

ಹೆಚ್ಚಿನ ವಿವರಗಳಿಗೆ ಆನ್‌ಲೈನ್ ಮೂಲಕ ವೆಬ್‌ಸೈಟ್ https://eproc.karnataka.gov.in ನೋಡಬಹುದು

1	ಟೆಂಡರನಲ್ಲಿ ಭಾಗವಹಿಸಲು ಕೊನೆಯ ದಿನಾಂಕ	31.10.2023 13.01 ಗಂಟೆಗೆ
2	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	02.11.2023 13.05 ಗಂಟೆಗೆ
3	ಫೈನಾನ್ಸಿಯಲ್ ಬಿಡ್ ತೆರೆಯುವ ದಿನಾಂಕ	03.11.2023 13.00 ಗಂಟೆಗೆ

ಸಹಿ/– ಕುಲಸಚಿವರು
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು
ಟೆಂಡರ್ ಆಹ್ವಾನ ಪ್ರಕಟಣೆ
ಟೆಂಡರ್ ಪ್ರಕಟಣೆ ಸಂಖ್ಯೆ : 21/2023–24, Dtd : 11.10.2023

ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು ಚಿಕ್ಕಮಗಳೂರು ಜಿಲ್ಲೆಯ **ಕಡೂರು ತಾಲ್ಲೂಕಿನ 06** ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. **ಕನಿಷ್ಠ ಮೊತ್ತ ರೂ. 37.69 ಲಕ್ಷ, ಗರಿಷ್ಠ ಮೊತ್ತ ರೂ. 108.35** ಲಕ್ಷದ ಕಾಮಗಾರಿಗಳನ್ನು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ Standard Tender Document-KW-3&4 ರಂತೆ ವಿವರಗಳನ್ನು ಲಗತ್ತಿಸತಕ್ಕದ್ದು. ಗುತ್ತಿಗೆದಾರರಿಗೆ ಅಧಿನಿಯಮ 1 ರಲ್ಲಿ ನಮೂದಿಸಿರುವ ಕನಿಷ್ಠ ಅರ್ಹತೆಗಳಿದ್ದರೆ ಮಾತ್ರ ಗುತ್ತಿಗೆಯನ್ನು ವಹಿಸಬಹುದಾಗಿರುತ್ತದೆ. ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದಿನಾಂಕ: **11.10.2023 ರಿಂದ 30.10.2023** ರವರೆಗೆ **ಸಂಜೆ 5.00** ಗಂಟೆಯೊಳಗೆ ಸಲ್ಲಿಸಬೇಕು, ಟೆಂಡರನ್ನು ದಿನಾಂಕ **31.10.2023** ರಂದು **ಸಂಜೆ 05:30ಕ್ಕೆ** ತೆರೆಯಲಾಗುವುದು. ಈ ದಿನಾಂಕದಂದು ಆಕಸ್ಮಿಕ ರಜಾ ದಿನಗಳು ಬಂದಲ್ಲಿ ಮರುದಿನವನ್ನು ಪರಿಗಣಿಸಲಾಗುವುದು. ಪ್ರಕಟಣೆಯನ್ನು https://kppp.karnataka.gov.in ನಲ್ಲಿ ಓದಿಕೊಳ್ಳುವುದು ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು

ಕರ್ನಾಟಕ ಸರಕಾರ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಕುದುರೆಮುಖ ವನ್ಯಜೀವಿ ವಿಭಾಗ, ಕಾರ್ಕಳ–574104.
ಫೋನ್: 08258–298183, Email: dcfwlkarkala@gmail.com
ಕ್ರ.ಸಂ.ಬಿ1:ಸಿಆರ್:01:2023–24 ದಿನಾಂಕ: 03–10–2023

ಇ–ಟೆಂಡರ್ ಪ್ರಕಟಣೆ

ಕುದುರೆಮುಖ ವನ್ಯಜೀವಿ ವಿಭಾಗದ ಕೊಲ್ಲೂರು ವನ್ಯಜೀವಿ ವಲಯ ವ್ಯಾಪ್ತಿಯಲ್ಲಿ "ಸಿಬ್ಬಂದಿ ಗ್ರೂಪ್ ಹೌಸಿಂಗ್" ನಿರ್ಮಾಣ ಮಾಡಲು kppp.karnataka.gov.in ಮೂಲಕ ಇ–ಟೆಂಡರ್ ಅಹ್ವಾನಿಸಲಾಗಿದೆ. ಟೆಂಡರ್ ಷರತ್ತು ಸಂಬಂಧ ವಿವರ/ಸ್ಪಷ್ಟೀಕರಣ ಪಡೆಯಲು ಕೊನೆಯ ದಿನಾಂಕ: 21–10–2023 ಅಪರಾಹ್ನ 4.00 ಗಂಟೆ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 25–10–2023 ಅಪರಾಹ್ನ 4.00 ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 26–10–2023 ಅಪರಾಹ್ನ 4.30 ಗಂಟೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ: 27–10–2023 ಅಪರಾಹ್ನ:4.30 ಗಂಟೆ. ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಕುದುರೆಮುಖ ವನ್ಯಜೀವಿ ವಿಭಾಗ, ಕಾರ್ಕಳ ಇವರ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ (ಕಛೇರಿ ದೂರವಾಣಿ ಸಂಖ್ಯೆ: 08258–298183)

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ,
ಕುದುರೆಮುಖ ವನ್ಯಜೀವಿ ವಿಭಾಗ, ಕಾರ್ಕಳ
ವಾಸಾಇ/ಸನಿಉ/ಕೆಎಸ್‌ಎಂಸಿಎ/348/23–24 ದಿ: 16.10.2023

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಸಿಂಗಟಾಲೂರು ಏತ ನೀರಾವರಿ ಯೋಜನೆ, ವಿಭಾಗ ನಂ.1, ಮುಂಡರಗಿ, ಗದಗ ಜಿಲ್ಲೆ.
Ph. No. 08371-295016 e-mail: eeslis1mdg@gmail.com

ಕೊಟೇಷನ್ ಪ್ರಕಟಣೆ

ಉಲ್ಲೇಖ: ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ: 1111/2023–24 ದಿನಾಂಕ: 13.10.2023

ಸಿಂಗಟಾಲೂರು ಏತ ನೀರಾವರಿ ಯೋಜನೆಯ ನಂ.1 ವಿಭಾಗ ಮುಂಡರಗಿ ಕಛೇರಿ ವ್ಯಾಪ್ತಿಯಲ್ಲಿ ಬರುವ ಹಿರೇಹಳ್ಳ ಯೋಜನೆಯಡಿ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿಗೆ ಅಂದಾಜು ಪಟ್ಟಿಯನ್ನು ತಯಾರಿಸಲು ಅವಶ್ಯವಿರುವ ಒಟ್ಟು 08 ಐಟಂಗಳಿಗೆ ದರಗಳನ್ನು ಅರ್ಹ ಬಿಡ್ಡುದಾರರಿಂದ ಕೊಟೇಷನ್‌ಗಳನ್ನು ಆಹ್ವಾನಿಸಲಾಗಿದೆ.

ಇನ್ನುಳಿದಂತೆ, ಸದರಿ 08 ಐಟಂಗಳಿಗೆ ಸಂಬಂಧಿಸಿದ ವಿವರಗಳನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ ತಮ್ಮ ಕೋರಿಕೆಯನ್ನು ವಿಭಾಗ ಕಛೇರಿ ಇಮೇಲ್ eeslis1mdg@gmail.com ವಿಳಾಸಕ್ಕೆ ಸಲ್ಲಿಸಿ ಪಡೆಯಬಹುದಾಗಿದೆ. ಐಟಂವಾರು ಕೊಟೇಷನ್ ದರಗಳನ್ನು ಎಲ್ಲಾ ಪರಿಕರಗಳು ಮತ್ತು ತೆರಿಗೆಗಳನ್ನು ಒಳಗೊಂಡಿರುವಂತೆ ನಮೂದಿಸಿ ಸೀಲು ಮಾಡಿದ ಲಕೋಟೆಯಲ್ಲಿ ದಿನಾಂಕ: 26.10.2023ರ ಒಳಗಾಗಿ ಕೆಳಕಂಡ ಕಛೇರಿಗೆ ತಲುಪಿಸಲು ಕೋರಲಾಗಿದೆ.

ಸಹಿ/–ಕಾರ್ಯಪಾಲಕ ಅಭಿಯಂತರರು,
ಸಿಂಗಟಾಲೂರು ಏತ ನೀರಾವರಿ ಯೋಜನೆ,
ನಂ. 1 ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ,
ಮುಂಡರಗಿ, ಗದಗ ಜಿಲ್ಲೆ.
ವಾ.ಸಾ.ಇ/ಗದಗ/262/2023–24/ದೇಶಪಾಂಡೆಪಬ್ಲಿಸಿಟಿ

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ
(ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ಜಂಟಿ ಸಹಭಾಗಿತ್ವದಲ್ಲಿ)
ಇ–ಮೇಲ್ : contactus@bmrc.co.in ವೆಬ್‌ಸೈಟ್ : www.bmrc.co.in
ಸಂಖ್ಯೆ: ಬಿಎಂಆರ್‌ಸಿಎಲ್/ಇಎಲ್‌ಇ/ಎನ್‌ಐಟಿ/314/2023 ದಿನಾಂಕ: 17.10.2023

ತಿದ್ದುಪಡಿ – 01

ಬಿಎಂಆರ್‌ಸಿಎಲ್, **"ಫೇಸ್–2ಎ ಮತ್ತು ಫೇಸ್–2ಬಿ ಗೆ ಟ್ರಾಕ್ಷನ್ ಉಪಕೇಂದ್ರಗಳು, ಆಕ್ಸಿಲರಿ ಉಪಕೇಂದ್ರಗಳು ಮತ್ತು ಸ್ಕಾಡಾ ಪದ್ಧತಿ ಸೇರಿದಂತೆ 33ಕೆವಿ ಡಿಸ್ಟ್ರಿಬ್ಯೂಷನ್, 750ವಿ ಡಿಸಿ ಥರ್ಡ್ ರೈಲ್ ಟ್ರಾಕ್ಷನ್ ವಿದ್ಯುದೀಕರಣದ ಇಂಜನಿಯರಿಂಗ್, ಸರಬರಾಜು, ಸ್ಥಾಪನೆ, ಪರೀಕ್ಷೆ ಮತ್ತು ಕಾರ್ಯಾಚರಣೆಗೆ"** ಟೆಂಡರ್ ದಸ್ತಾವೇಜಿನ ಆನ್‌ಲೈನ್ ಮರು ಮಾರಾಟ ದಿನಾಂಕವನ್ನು **17.10.2023ರಿಂದ 27.10.2023ರ ಮಧ್ಯರಾತ್ರಿಯವರೆಗೆ** ನಿಗದಿಪಡಿಸಲಾಗಿದೆ. ಟೆಂಡರ್‌ಗಳನ್ನು ಸಲ್ಲಿಸುವ ದಿನಾಂಕ: **24.11.2023ರಂದು 11.00 ಗಂಟೆಯಿಂದ 15.00 ಗಂಟೆವರೆಗೆ.** ಟೆಂಡರ್‌ಗಳನ್ನು ತೆರೆಯುವ ದಿನಾಂಕ: **24.11.2023ರಂದು 15.30 ಗಂಟೆಗೆ.** ಹೆಚ್ಚಿನ ವಿವರಗಳಿಗಾಗಿ ನಮ್ಮ ವೆಬ್‌ಸೈಟ್: **www.bmrc.co.in** ಪರಿವೀಕ್ಷಿಸಿ

ಸಹಿ/– ವ್ಯವಸ್ಥಾಪಕ ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭವನ, ಜೆ.ಸಿ,. ರಸ್ತೆ, ಬೆಂಗಳೂರು – 560 002.
ದೂರವಾಣಿ:080–22213530/22241325, ಫ್ಯಾಕ್ಸ್: 080–22214379.
ಇ–ಮೇಲ್:kanbhavblr@gmail.com, ವೆಬ್‌ಸೈಟ್: www.kannadasiri.in
ಸಂಖ್ಯೆ: DKC-17015/78/2023-CALL-4 ದಿನಾಂಕ:17.10.2023

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

2023–24ನೇ ಸಾಲಿಗೆ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಅಧಿಕಾರಿಗಳ ಅಧಿಕೃತ ಕಛೇರಿ ಕೆಲಸಗಳಿಗಾಗಿ ಖಾಸಗಿ ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಸೇವೆ ಪಡೆಯಲು ಮರು ಇ–ಟೆಂಡರ್ ಕರೆಯಲಾಗಿದೆ.

1) ಬಿಡ್ ದಾಖಲೆಗಳನ್ನು http://kppp.karnataka.gov.in ಪೋರ್ಟಲ್‌ನಿಂದ ಡೌನ್ಲೋಡ್ ಮಾಡಿಕೊಳ್ಳುವ ದಿನಾಂಕ : 17.10.2023 ರಿಂದ. 2) ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ : ರೂ. 35,00,000/– 3) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ : ರೂ. 87,500/– 4) ಟೆಂಡರ್‌ಗಳನ್ನು ಅಪ್‌ಲೋಡ್ ಮಾಡುವ ಅಂತಿಮ ದಿನಾಂಕ : 24.10.2023 ರ ಸಂಜೆ 5.30 ಗಂಟೆಯವರೆಗೆ. 5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 25.10.2023 ರ ಬೆಳಿಗ್ಗೆ 11.00 ಗಂಟೆಗೆ.

ಯಾವುದೇ ವಿಚಾರಣೆ, ಸ್ಪಷ್ಟೀಕರಣಕ್ಕಾಗಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು– 560 002. ದೂರವಾಣಿ : 080–22213530 ರವರನ್ನು ಸಂಪರ್ಕಿಸಬಹುದು.

ಸಹಿ/– ನಿರ್ದೇಶಕರು,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ವಾಸಾಸಂಇ/ವಾಪ್ರ/ಜೆಎ/1717/2023–24

ಮಿಜೋರಾಂನಲ್ಲಿ ಪ್ರಚಾರ: ಪ್ರಧಾನಿ ವಿರುದ್ಧ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಾಗ್ದಾಳಿ

‘ಇಸ್ರೇಲ್ ಬಗ್ಗೆಯೇ ಮೋದಿಗೆ ಕಾಳಜಿ’

ಐಜ್ವಾಲ್ (ಪಿಟಿಐ): ‘ಇಸ್ರೇಲ್‌ನಲ್ಲಿ ಏನು ನಡೆಯುತ್ತಿದೆ ಎಂದು ತಿಳಿಯಲು ಪ್ರಧಾನಿ ನರೇಂದ್ರ ಮೋದಿ ಅವರು ಆಸಕ್ತರಾಗಿದ್ದಾರೆ. ಆದರೆ ಮಣಿಪುರದಲ್ಲಿ ಏನಾಗುತ್ತಿದೆ ಎಂಬ ಕುರಿತು ತಿಳಿಯುವ ಆಸಕ್ತಿ ಅವರಿಗೆ ಇಲ್ಲ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸೋಮವಾರ ಹರಿಹಾಯ್ದಿದ್ದಾರೆ.

ವಿಧಾನಸಭೆ ಚುನಾವಣೆಗೆ ಸಜ್ಜಾಗುತ್ತಿರುವ ಮಿಜೋರಾಂಗೆ ಎರಡು ದಿನಗಳ ಭೇಟಿಗಾಗಿ ಆಗಮಿಸಿರುವ ಅವರು, ನಗರದಲ್ಲಿ 2 ಕಿ.ಮೀ ಪಾದಯಾತ್ರೆ ನಡೆಸಿದರು. ಬಳಿಕ ರಾಜಭವನದ ಬಳಿ ಸಾರ್ವಜನಿಕ ಸಭೆ ನಡೆಸಿದರು. 1986ರಲ್ಲಿ ಶಾಂತಿ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಒಳನುಸುಳುವಿಕೆಯಿಂದ ಜರ್ಜರಿತವಾಗಿದ್ದ ಮಿಜೋರಾಂನಲ್ಲಿ ಶಾಂತಿ ನೆಲೆಸುವಂತೆ ಕಾಂಗ್ರೆಸ್ ಮಾಡಿತು ಎಂದು ಅವರು ಈ ವೇಳೆ ಹೇಳಿದರು.

‘ಪಕ್ಕದ ರಾಜ್ಯ ಮಣಿಪುರವು ಈಗ ಏಕೀಕೃತ ಒಂದೇ ರಾಜ್ಯವಾಗಿ ಉಳಿದಿಲ್ಲ. ಅದು ಜನಾಂಗದ ಆಧಾರದಲ್ಲಿ ಇಬ್ಭಾಗವಾಗಿದೆ. ಅಲ್ಲಿ ಜನರು ಹತ್ಯೆಗೀಡಾಗುತ್ತಿದ್ದಾರೆ, ಮಹಿಳೆಯರ ಮೇಲೆ ದೌರ್ಜನ್ಯ ನಡೆಸಲಾಗುತ್ತಿದೆ, ಮಕ್ಕಳು ಹತರಾಗುತ್ತಿದ್ದಾರೆ’ ಎಂದರು.

‘ಪರಸ್ಪರರನ್ನು ಗೌರವಿಸುವುದು, ಪರಸ್ಪರರ ಬಗ್ಗೆ ಸಹಿಷ್ಣುತಾ ಭಾವ ಹೊಂದುವುದು ಮತ್ತು ಇತರ ಧರ್ಮ, ಭಾಷೆಗಳಿಂದ ಹೊಸದನ್ನು

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಬೆಂಬಲಿಗರೊಂದಿಗೆ ಮಿಜೋರಾಂನ ಐಜ್ವಾಲ್‌ನಲ್ಲಿ ಸೋಮವಾರ ಪಾದಯಾತ್ರೆ ನಡೆಸಿದರು —ಪಿಟಿಐ ಚಿತ್ರ

> **ಬಿಜೆಪಿಯು ದೇಶದ ಬೇರೆಬೇರೆ ಸಮುದಾಯಗಳು, ಧರ್ಮಗಳು ಮತ್ತು ಭಾಷೆಗಳ ಮೇಲೆ ದಾಳಿ ನಡೆಸಿದೆ ಮತ್ತು ದ್ವೇಷ, ಹಿಂಸಾಚಾರವನ್ನು ಪಸರಿಸಿದೆ**
> **ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

ಕಲಿಯುವುದು ಭಾರತದ ಆಶಯವಾಗಿದೆ. ಆದರೆ ಭಾರತದ ಆಶಯವು ಈಗ ಬಿಜೆಪಿಯಿಂದ ಛಿದ್ರವಾಗಿದೆ’ ಎಂದು ವಾಗ್ದಾಳಿ ನಡೆಸಿದರು.

ಆಡಳಿತಾರೂಢ ಎಂಎನ್‌ಎಫ್ ವಿರುದ್ಧವೂ ವಾಗ್ದಾಳಿ ನಡೆಸಿದ ರಾಹುಲ್, ಬಿಜೆಪಿಯ ಎಲ್ಲಾ ದುಷ್ಕೃತ್ಯಗಳನ್ನು ಎಮ್‌ಎನ್‌ಎಫ್ ಬೆಂಬಲಿಸುತ್ತಿದೆ ಎಂದರು. ಕಳೆದ ಐದು ವರ್ಷಗಳಲ್ಲಿ ಎಂಎನ್‌ಎಫ್ ಸರ್ಕಾರವು ಕೇವಲ 2 ಸಾವಿರ ಉದ್ಯೋಗಗಳನ್ನು ಸೃಷ್ಟಿಸಿದೆ. ರಾಜ್ಯದ ಆರ್ಥಿಕ ಭವಿಷ್ಯವನ್ನು ನಾಶಗೊಳಿಸಿದೆ ಎಂದರು.

ಮಿಜೋರಾಂನಲ್ಲಿ ಎಎಪಿ ಸ್ಪರ್ಧೆ

ನವದೆಹಲಿ (ಪಿಟಿಐ): ಮಿಜೋರಾಂ ವಿಧಾನಸಭೆ ಚುನಾವಣೆಯಲ್ಲಿ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸುವುದಾಗಿ ಎಎಪಿ ಸೋಮವಾರ ಘೋಷಿಸಿದೆ.

ಎಎಪಿ ಸಂಚಾಲಕ, ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರ ನೇತೃತ್ವದಲ್ಲಿ ಭಾನುವಾರ ನಡೆದ ಸಭೆಯಲ್ಲಿ ಈ ಕುರಿತು ನಿರ್ಧಾರಿಸಲಾಯಿತು ಎಂದು ಈಶಾನ್ಯ ರಾಜ್ಯಗಳ ಎಎಪಿ ಉಸ್ತುವಾರಿ ರಾಜೇಶ್ ಶರ್ಮಾ ತಿಳಿಸಿದರು.

ಕಾಂಗ್ರೆಸ್ ಅಭ್ಯರ್ಥಿಗಳ ಪಟ್ಟಿ ಪ್ರಕಟ

ಗುವಾಹಟಿ: 40 ಸದಸ್ಯ ಬಲದ ಮಿಜೋರಾಂ ವಿಧಾನಸಭೆ ಚುನಾವಣೆಗೆ ಕಾಂಗ್ರೆಸ್ ಪಕ್ಷವು 39 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಸೋಮವಾರ ಬಿಡುಗಡೆ ಮಾಡಿದೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಮಿಜೋರಾಂನಲ್ಲಿ ಪ್ರಚಾರ ನಡೆಸುತ್ತಿರುವ ವೇಳೆಯೇ ಪಟ್ಟಿ ಬಿಡುಗಡೆಯಾಗಿದೆ. ಐವರು ಶಾಸಕರಲ್ಲಿ ನಾಲ್ವರಿಗೆ ಈ ಬಾರಿ ಪಕ್ಷವು ಟಿಕೆಟ್ ನೀಡಿದೆ. ಪಲಕ್ ಕ್ಷೇತ್ರದಲ್ಲಿ ಶಾಸಕ ಕೆ.ಟಿ. ರೋಕ್‌ಹೌ ಬದಲಾಗಿ ಹೊಸ ಅಭ್ಯರ್ಥಿಗೆ ಟಿಕೆಟ್ ನೀಡಲಾಗಿದೆ.

‘ಕೇಂದ್ರದಲ್ಲೂ ಕಾಂಗ್ರೆಸ್ ಸರ್ಕಾರ’

ಜೈಪುರ: ರಾಜಸ್ಥಾನದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರವನ್ನು ಉಳಿಸಿಕೊಳ್ಳಲಿದೆ ಅಲ್ಲದೆ 2024ರಲ್ಲಿ ಕೇಂದ್ರದಲ್ಲೂ ಅಧಿಕಾರಕ್ಕೆ ಬರಲಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಬರನ್ ಜಿಲ್ಲೆಯಲ್ಲಿ ಪೂರ್ವ ರಾಜಸ್ಥಾನ ಕಾಲುವೆ ಯೋಜನೆ (ಇಆರ್‌ಸಿಪಿ) ಕುರಿತು ಜಾಗೃತಿ ಕಾರ್ಯಕ್ರಮಕ್ಕೆ ಅವರು ಚಾಲನೆ ನೀಡಿದರು. ಇದೇ ವೇಳೆ ರಾಜಸ್ಥಾನದಲ್ಲಿ ಕಾಂಗ್ರೆಸ್ ಚುನಾವಣಾ ಪ್ರಚಾರವನ್ನೂ ಆರಂಭಿಸಿದರು.

ಇಆರ್‌ಸಿಪಿಯನ್ನು ರಾಷ್ಟ್ರೀಯ ಯೋಜನೆಯಾಗಿ ಪರಿಗಣಿಸಬೇಕು ಎಂದು ಕಾಂಗ್ರೆಸ್ ಒತ್ತಾಯಿಸುತ್ತಾ ಬಂದಿದೆ. ₹ 40 ಸಾವಿರ ಕೋಟಿ ಮೊತ್ತದ ಈ ಯೋಜನೆಯು 13 ಜಿಲ್ಲೆಗಳಿಗೆ ನೀರಾವರಿ ಒದಗಿಸುತ್ತದೆ. ಯೋಜನೆಯನ್ನು ಈ ಹಿಂದೆ ಬಿಜೆಪಿಯೇ ಪ್ರಸ್ತಾಪಿಸಿತ್ತು. ಆದರೆ ಯೋಜನೆಗೆ ಹಣ ನೀಡಲು ಹಿಂದೇಟು ಹಾಕುತ್ತಿದೆ. ಕಾಂಗ್ರೆಸ್ ಇದನ್ನೇ ಚುನಾವಣಾ ವಿಷಯವಾಗಿ ಮಾಡಿಕೊಂಡಿದೆ.

‘ಪ್ರಧಾನಿ ಅವರು ಯೋಜನೆಗೆ ಹಣ ನೀಡುವ ಭರವಸೆ ನೀಡಿದ್ದರು. ಆದರೆ ಈಗ ಮರೆತಿದ್ದಾರೆ. ಕಾಂಗ್ರೆಸ್ ₹ 25 ಸಾವಿರ ಕೋಟಿ ಹಣ ಹಾಕಿ ಯೋಜನೆಯನ್ನು ಪೂರ್ಣಗೊಳಿಸುತ್ತಿದೆ. ಈ ರಾಜ್ಯದಲ್ಲಿ ಕೇಂದ್ರ ಸಚಿವರು ಮತ್ತು 25 ಸಂಸದರು ಇದ್ದಾರೆ. ಆದರೆ ಯಾರೊಬ್ಬರೂ ಇಆರ್‌ಸಿಪಿ ಯೋಜನೆ ಕಾರ್ಯಗತಗೊಳಿಸಲು ಒತ್ತಾಯಿಸಲಿಲ್ಲ. ಅವರು ಯೋಜನೆಗೆ ಹಣವನ್ನೂ ತರಲಿಲ್ಲ, ನೀರೂ ಜನರಿಗೆ ದೊರಕಲಿಲ್ಲ’ ಎಂದರು.

ಛತ್ತೀಸಗಢ: ನಾಮಪತ್ರ ಸಲ್ಲಿಕೆ, ಶಾ ಉಪಸ್ಥಿತಿ

ಪ್ರಜಾವಾಣಿ ವಾರ್ತೆ

ಭೋಪಾಲ್: ಛತ್ತೀಸಗಢ ವಿಧಾನಸಭೆಯ ಮೊದಲ ಹಂತದ ಚುನಾವಣೆಗಾಗಿ ಮಾಜಿ ಮುಖ್ಯಮಂತ್ರಿ ರಮಣ್ ಸಿಂಗ್ ಮತ್ತು ಇತರ ಮೂವರು ರಾಜನಂದಗಾಂವ್‌ನಲ್ಲಿ ನಾಮಪತ್ರ ಸಲ್ಲಿಸಿದರು. ಈ ವೇಳೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಉಪಸ್ಥಿತರಿದ್ದರು.

ಛತ್ತೀಸಗಢದಲ್ಲಿ ನ. 7 ಮತ್ತು 17ರಂದು ಎರಡು ಹಂತದಲ್ಲಿ ಚುನಾವಣೆ ನಡೆಯಲಿದೆ. ಮೊದಲ ಹಂತದಲ್ಲಿ ಬಸ್ತರ್ ಮತ್ತು ರಾಜನಂದಗಾಂವ್ ಜಿಲ್ಲೆಗಳು ಸೇರಿ 20 ವಿಧಾನಸಭಾ ಸ್ಥಾನಗಳಿಗಾಗಿ ಮತ್ತು ಎರಡನೇ ಹಂತದಲ್ಲಿ ಉಳಿದ 70 ಸ್ಥಾನಗಳಿಗೆ ಚುನಾವಣೆ ನಡೆಯಲಿದೆ.

ನಾಮಪತ್ರ ಸಲ್ಲಿಕೆಗೆ ಮೊದಲು ಸಾರ್ವಜನಿಕ ಸಭೆ ‘ಪರಿವರ್ತನ್ ಮಹಾಸಂಕಲ್ಪ ಸಮ್ಮೇಳನ’ ನಡೆಯಿತು. ಅಮಿತ್ ಶಾ, ರಮಣ್ ಸಿಂಗ್ ಸೇರಿದಂತೆ ಹಿರಿಯ ನಾಯಕರು ಉಪಸ್ಥಿತರಿದ್ದರು. ಸಭೆ ಬಳಿಕ ನಾಯಕರು ಜಿಲ್ಲಾಧಿಕಾರಿ ಕಚೇರಿಗೆ ಮೆರವಣಿಗೆಯಲ್ಲಿ ತಲುಪಿದರು.

ಸಭೆಯಲ್ಲಿ ಮಾತನಾಡಿದ ಅಮಿತ್ ಶಾ, ಕಾಂಗ್ರೆಸ್‌ನ ಭೂಪೇಶ್ ಬಘೇಲ್ ನೇತೃತ್ವದ ಸರ್ಕಾರದ ವಿರುದ್ಧ ಹರಿ ಹಾಯ್ದರು. ಬಘೇಲ್ ಅವರ ಸರ್ಕಾರ ಕಾಂಗ್ರೆಸ್ ಪಕ್ಷಕ್ಕೆ ಹಣ ಒದಗಿಸುವ ಎಟಿಎಂ ಯಂತ್ರವಾಗಿದೆ. ರಾಜ್ಯದಲ್ಲಿ ಮದ್ಯ, ಕಲ್ಲಿದ್ದಲು ಸೇರಿದಂತೆ ಹಗರಣಗಳ ಪಟ್ಟಿಯೇ ಇದೆ. ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬಂದರೆ ಓಲೈಕೆ ರಾಜಕಾರಣ ಮುಂದುವರಿಸಲಿದೆ ಎಂದು ಆರೋಪಿಸಿದರು.

ವಸುಂಧರಾ–ಕಟಾರಿಯಾ ಭೇಟಿ

ಪ್ರಜಾವಾಣಿ ವಾರ್ತೆ

ಜೈಪುರ: ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರ ರಾಜಸ್ಥಾನ ಭೇಟಿಗೆ ಒಂದು ದಿನ ಮುಂಚಿತವಾಗಿ, ಮಾಜಿ ಮುಖ್ಯಮಂತ್ರಿ ವಸುಂಧರಾ ರಾಜೇ ಅವರು ಅಸ್ಸಾಂ ರಾಜ್ಯಪಾಲ ಗುಲಾಬ್ ಚಂದ್ ಕಟಾರಿಯಾ ಅವರೊಂದಿಗೆ ಚರ್ಚೆ ನಡೆಸಿದ್ದಾರೆ.

ಹುಟ್ಟೂರು ಉದಯಪುರಕ್ಕೆ ಭೇಟಿ ನೀಡಿರುವ ಕಟಾರಿಯಾ ಅವರು ರಾಜೇ ಅವರೊಂದಿಗೆ 40 ನಿಮಿಷ ಮಾತುಕತೆ ನಡೆಸಿದರು. ಈ ಇಬ್ಬರೂ ನಾಯಕರನ್ನು ಪಕ್ಷದಲ್ಲಿ ಕಡೆಗಣಿಸಲಾಗುತ್ತಿದೆ ಎಂದು ರಾಜಕೀಯ ಮೂಲಗಳು ತಿಳಿಸಿವೆ.

ಆರ್‌ಎಸ್‌ಎಸ್ ಹಿನ್ನೆಲೆಯಿಂದ ಬಂದಿರುವುದರಿಂದ ಕಟಾರಿಯಾ ಮುಖ್ಯಮಂತ್ರಿ ಸ್ಥಾನಕ್ಕೆ ಸ್ಪರ್ಧಿ ಆಗಬಹುದು. ಎಂಟು ಬಾರಿ ಶಾಸಕ ಮತ್ತು ಒಂದು ಬಾರಿ ಉದಯಪುರ ಸಂಸದರಾಗಿದ್ದ ಕಟಾರಿಯಾ 2004 ರಿಂದ 2008 ರವರೆಗೆ ಮತ್ತು 2014 ರಿಂದ 2018 ರವರೆಗೆ ಎರಡು ಬಾರಿ ರಾಜ್ಯ ಗೃಹ ಸಚಿವರಾಗಿದ್ದರು.

ವಧುಗೆ 10 ಗ್ರಾಂ ಚಿನ್ನ, ವಿದ್ಯಾರ್ಥಿಗಳಿಗೆ ಉಚಿತ ಇಂಟರ್‌ನೆಟ್?

ಹೈದರಾಬಾದ್ (ಪಿಟಿಐ): ಮದುವೆ ಸಂದರ್ಭದಲ್ಲಿ ವಧುವಿಗೆ ₹ 1 ಲಕ್ಷ ನಗದು, 10 ಗ್ರಾಂ ಚಿನ್ನ, ವಿದ್ಯಾರ್ಥಿಗಳಿಗೆ ಉಚಿತ ಇಂಟರ್‌ನೆಟ್ ಸೇರಿದಂತೆ ಹಲವು ಭರವಸೆಗಳನ್ನು ತೆಲಂಗಾಣ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಘೋಷಣೆ ಮಾಡುವ ಸಾಧ್ಯತೆಯಿದೆ.

ತೆಲಂಗಾಣ ಪ್ರದೇಶ ಕಾಂಗ್ರೆಸ್ (ಟಿಪಿಸಿಸಿ) ಪ್ರಣಾಳಿಕೆ ಸಮಿತಿ ಅಧ್ಯಕ್ಷ ಡಿ.ಶ್ರೀಧರ್ ಬಾಬು ಪ್ರಕಾರ, ಪಕ್ಷದ ‘ಮಹಾಲಕ್ಷ್ಮಿ’ ಗ್ಯಾರಂಟಿ ಅಡಿ ₹1 ಲಕ್ಷ ನಗದು ಜೊತೆಗೆ ಚಿನ್ನ ಹೆಚ್ಚುವರಿ ಸೇರ್ಪಡೆಯಾಗಿದೆ.

ಒಂದು ತೊಲ (10 ಗ್ರಾಂ) ಚಿನ್ನ ನೀಡಲಾಗುವುದು. ಇದರ ಮೌಲ್ಯ ಸುಮಾರು ₹50,000 ರಿಂದ ₹55,000 ಇದೆ ಎಂದು ಶ್ರೀಧರ್ ಬಾಬು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ವಿದ್ಯಾರ್ಥಿಗಳಿಗೆ ಉಚಿತ ಇಂಟರ್‌ನೆಟ್ ಅನ್ನು ಪ್ರಣಾಳಿಕೆಯಲ್ಲಿ ಸೇರಿಸಲು ಪಕ್ಷ ಯೋಜಿಸುತ್ತಿದೆ. ಅಧಿಕಾರಕ್ಕೆ ಬಂದ ನಂತರ ಇಂಟರ್‌ನೆಟ್ ಸೇವಾ ಪೂರೈಕೆದಾರರೊಂದಿಗೆ ಚರ್ಚಿಸಿ, ವಿಧಾನಗಳನ್ನು ರೂಪಿಸಲಾಗುವುದು ಎಂದು ಪ್ರಣಾಳಿಕೆ ಸಮಿತಿಯ ಸದಸ್ಯರೊಬ್ಬರು ತಿಳಿಸಿದ್ದಾರೆ. ಪ್ರಸ್ತುತ ಬಿಆರ್‌ಎಸ್ ಸರ್ಕಾರ ಕಲ್ಯಾಣ ಲಕ್ಷ್ಮಿ ಮತ್ತು ಶಾದಿ ಮುಬಾರಕ್ ಯೋಜನೆ ಅಡಿ, 18 ವರ್ಷ ಪೂರ್ಣಗೊಳಿಸಿದ ಮತ್ತು ಪೋಷಕರ ವಾರ್ಷಿಕ ಆದಾಯ ₹2 ಲಕ್ಷ ಮೀರದ ತೆಲಂಗಾಣದ ವಧುಗಳಿಗೆ ₹1,00,116 ಹಣವನ್ನು ಒಂದು ಬಾರಿ ಆರ್ಥಿಕ ಸಹಾಯವಾಗಿ ನೀಡುತ್ತಿದೆ.

‘ಕೈ’ ತಪ್ಪಿದ ಟಿಕೆಟ್: ಅಸಮಾಧಾನ ಸ್ಫೋಟ

ತೆಲಂಗಾಣ: ಪಿಸಿಸಿ ಅಧ್ಯಕ್ಷ ರೇವಂತ್ ವಿರುದ್ಧ ಟಿಕೆಟ್ ವಂಚಿತರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ತೆಲಂಗಾಣ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ 55 ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಿದ ಬೆನ್ನಲ್ಲೇ, ಟಿಕೆಟ್ ವಂಚಿತರ ಅಸಮಾಧಾನ ಸ್ಫೋಟಗೊಂಡಿದೆ. ಟಿಕೆಟ್ ಕೈ ತಪ್ಪಿದ ಪ್ರಬಲ ಆಕಾಂಕ್ಷಿಗಳು ಬಹಿರಂಗವಾಗಿ ಅತೃಪ್ತಿ ವ್ಯಕ್ತಪಡಿಸಿದ್ದಾರೆ.

ಆಯ್ಕೆ ಪ್ರಕ್ರಿಯೆಯ ಮಾನದಂಡ ಪ್ರಶ್ನಿಸುವ ಮೂಲಕ ಹೈಕಮಾಂಡ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರೆ, ಮತ್ತೆ ಕೆಲವರು ಪಕ್ಷಕ್ಕೆ ರಾಜೀನಾಮೆ ನೀಡಿದ್ದಾರೆ.

ವಿಧಾನಸಭೆಯ 119 ಸ್ಥಾನಗಳಿಗೆ ಅಭ್ಯರ್ಥಿಗಳನ್ನು ಕಣಕ್ಕಿಳಿಸುವಲ್ಲಿ ‘ಗೆಲುವಿನ ಸಾಮರ್ಥ್ಯ’ದ ಏಕೈಕ ಮಾನದಂಡವು ನಾಯಕರಿಗೆ ತಲೆನೋವಾಗಿ ಪರಿಣಮಿಸಿದೆ. ಇತ್ತೀಚೆಗೆ ಕಾಂಗ್ರೆಸ್ ಸೇರಿದ 12 ಮಂದಿಗೆ ಟಿಕೆಟ್ ನೀಡಲಾಗಿದೆ. ಟಿಕೆಟ್ ವಂಚಿತರಲ್ಲಿ ಕೆಲವರು ಗಾಂಧಿ ಭವನದಲ್ಲಿ ಪ್ರತಿಭಟನೆ ನಡೆಸಿ, ಪಿಸಿಸಿ ಅಧ್ಯಕ್ಷ ಎ. ರೇವಂತ್ ರೆಡ್ಡಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ತೆಲಂಗಾಣ ಪ್ರದೇಶ ಕಾಂಗ್ರೆಸ್ ಸಮಿತಿ (ಟಿಪಿಸಿಸಿ) ಕಾರ್ಯದರ್ಶಿ ಕುರುವಾ ವಿಜಯ್ ಕುಮಾರ್ ಒಂದು ಹೆಜ್ಜೆ ಮುಂದೆ ಹೋಗಿ ರೇವಂತ್ ರೆಡ್ಡಿ ಪಕ್ಷದ ಟಿಕೆಟ್ ಗಳನ್ನು ಹೊರಗಿನವರಿಗೆ ಮಾರಾಟ ಮಾಡಿದ್ದಾರೆ ಎಂದು ಆರೋಪಿಸಿದ್ದಾರೆ. ಅವರ ಹಣಕಾಸಿನ ವಹಿವಾಟುಗಳನ್ನು ಪರಿಶೀಲಿಸಲು ಜಾರಿ ನಿರ್ದೇಶನಾಲಯ (ಇ.ಡಿ) ಮತ್ತು ಚುನಾವಣಾ ಆಯೋಗಕ್ಕೆ ದೂರು ನೀಡುವುದಾಗಿಯೂ ಬೆದರಿಕೆ ಹಾಕಿದ್ದಾರೆ.

ತೆಲಂಗಾಣಕ್ಕಾಗಿ ಹೋರಾಡಿದವರನ್ನು ಕಾಂಗ್ರೆಸ್ ಟಿಕೆಟ್ ನೀಡುವಲ್ಲಿ ನಿರ್ಲಕ್ಷಿಸಿದೆ ಎಂದು ಆರೋಪಿಸಿ, ಗನ್ ಪಾರ್ಕ್ ನಲ್ಲಿ ಅವರು ತಮ್ಮ ಬೆಂಬಲಿಗರೊಂದಿಗೆ ಪ್ರತಿಭಟಿಸಿದರು.

ಮೊದಲ ಪಟ್ಟಿಯಲ್ಲಿ ರೆಡ್ಡಿಗಳಿಗೆ 17, ಹಿಂದುಳಿದ ವರ್ಗಕ್ಕೆ 12, ವೇಲಮಗೆ 7, ಪರಿಶಿಷ್ಟ ಜಾತಿಗೆ 12, ಪರಿಶಿಷ್ಟ ಪಂಗಡಕ್ಕೆ 2, ಬ್ರಾಹ್ಮಣರಿಗೆ 2 ಮತ್ತು ಮುಸ್ಲಿಮರಿಗೆ 3 ಟಿಕೆಟ್ ಸಿಕ್ಕಿದೆ.

ಮೇಡ್ಚಲ್ ಕ್ಷೇತ್ರದ ಆಕಾಂಕ್ಷಿಯಾಗಿದ್ದ ಹರಿವರ್ಧನ್ ರೆಡ್ಡಿ ಬೆಂಬಲಿಗರು ಗಾಂಧಿ ಭವನಕ್ಕೆ ಮುತ್ತಿಗೆ ಹಾಕಿ, ‘ಕಾಂಗ್ರೆಸ್ ಬಚಾವೊ, ರೇವಂತ್ ರೆಡ್ಡಿ ಹಟಾವೊ’ ಎಂಬ ಘೋಷಣೆ ಕೂಗಿದರು. ಅಭ್ಯರ್ಥಿಗಳ ಆಯ್ಕೆಗೆ ಏಕೈಕ ಮಾನದಂಡವಾಗಿರುವ ಸಮೀಕ್ಷೆ ವರದಿಗಳನ್ನು ಬಹಿರಂಗಪಡಿಸಬೇಕು ಎಂದು ಹರಿವರ್ಧನ್ ರೆಡ್ಡಿ ಬೆಂಬಲಿಗರು ಒತ್ತಾಯಿಸಿದರು.

ಚಿಂತಪಲ್ಲಿ ಜಗದೀಶ್ವರ ರಾವ್ ಬೆಂಬಲಿಗರು ಅವರ ಕಚೇರಿಯಿಂದ ಪಕ್ಷದ ಧ್ವಜಗಳನ್ನು ತೆಗೆದುಹಾಕಿದರು. ಉಪ್ಪಳದಲ್ಲಿ ರೇವಂತ್ ರೆಡ್ಡಿ ಅವರು ತಮ್ಮ ಬೆಂಬಲಿಗರಿಗೆ ಪಕ್ಷದ ಟಿಕೆಟ್ ನೀಡಿದ್ದಾರೆ ಎಂದು ರಾಗಿಡ್ಡಿ ಲಕ್ಷ್ಮ ರೆಡ್ಡಿ ಆರೋಪಿಸಿ, ಕಾಂಗ್ರೆಸ್‌ಗೆ ರಾಜೀನಾಮೆ ನೀಡಿದರು.

ತೆಲಂಗಾಣ ಬದಲಾವಣೆಗೆ ಅವಕಾಶ ನೀಡಿ: ರಾಜನಾಥ್

ಪ್ರಜಾವಾಣಿ ವಾರ್ತೆ

ಹೈದರಾಬಾದ್: ತೆಲಂಗಾಣದ ಬದಲಾವಣೆಗಾಗಿ ಬಿಜೆಪಿಗೆ ಒಂದು ಅವಕಾಶ ನೀಡುವಂತೆ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಜನರಿಗೆ ಮನವಿ ಮಾಡಿದರು.

ಜಮ್ಮಿಕುಂಟಾದಲ್ಲಿ ಸೋಮವಾರ ಸಾರ್ವಜನಿಕ ಸಭೆ ಉದ್ದೇಶಿಸಿ ಮಾತನಾಡಿದ ಸಿಂಗ್, ತೆಲಂಗಾಣದಲ್ಲಿ ಭಾರಿ ಭ್ರಷ್ಟಾಚಾರ ನಡೆಯುತ್ತಿದ್ದು, ಭ್ರಷ್ಟಾಚಾರದ ಚರ್ಚೆಗಳು ನವದೆಹಲಿಗೆ ತಲುಪಿವೆ. ಕೆಸಿಆರ್ ಕುಟುಂಬಕ್ಕೆ ತೆಲಂಗಾಣ ಖಾಸಗಿ ಲಿಮಿಟೆಡ್ ಕಂಪನಿಯಾಗಿ ಮಾರ್ಪಟ್ಟಿದೆ ಎಂದು ಆರೋಪಿಸಿದರು.

‘ರಾಜ್ಯ ಮೊದಲು’ ಎಂಬುದು ಜನರ ಕಾರ್ಯಸೂಚಿಯಾಗಿದ್ದರೂ, ಬಿಆರ್‌ಎಸ್ ಮುಖ್ಯಸ್ಥ ಕೆ. ಚಂದ್ರಶೇಖರ ರಾವ್ ಅವರಿಗೆ ಕುಟುಂಬ ಮೊದಲು ಎಂದರು.

1984ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ತೆಲಂಗಾಣ ಮತ್ತು ಗುಜರಾತ್‌ನಲ್ಲಿ ತಲಾ ಒಂದು ಸ್ಥಾನ ಮಾತ್ರ ಗೆದ್ದಿತ್ತು. 27 ವರ್ಷಗಳ ಬಳಿಕ ಗುಜರಾತ್ ಇಂದು ಅಭಿವೃದ್ಧಿಯಲ್ಲಿ ಮಾದರಿಯಾಗಿದೆ. ತೆಲಂಗಾಣದಲ್ಲಿ ಅಭಿವೃದ್ಧಿ ಹೈದರಾಬಾದ್‌ಗೆ ಮಾತ್ರ ಸೀಮಿತವಾಗಿದೆ. ಇತರ ಸ್ಥಳಗಳಲ್ಲಿ ಏಕೆ ಸಾಧ್ಯವಿಲ್ಲ ಎಂದು ಸಿಂಗ್ ಪ್ರಶ್ನಿಸಿದರು.

ಪ್ಯಾಲೆಸ್ಟೀನ್ ಪರ ಪೋಸ್ಟ್: ಕಾನ್‌ಸ್ಟೆಬಲ್ ಅಮಾನತು

ಲಖಿಂಪುರ ಖೀರಿ (ಪಿಟಿಐ): ಪ್ಯಾಲೆಸ್ಟೀನ್ ಬೆಂಬಲಿಸಿ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಹಂಚಿಕೊಂಡಿದ್ದ ಉತ್ತರ ಪ್ರದೇಶದ ಪೊಲೀಸ್ ಕಾನ್‌ಸ್ಟೆಬಲ್ ಸುಹೈಲ್ ಅನ್ಸಾರಿ ಅವರನ್ನು ಅಮಾನತು ಮಾಡಲಾಗಿದೆ ಎಂದು ಅಧಿಕಾರಿಯೊಬ್ಬರು ಸೋಮವಾರ ತಿಳಿಸಿದ್ದಾರೆ.

ಸುಹೈಲ್ ಅವರು ಪ್ಯಾಲೆಸ್ಟೀನ್‌ಗೆ ದೇಣಿಗೆ ನೀಡುವಂತೆ ಕೋರಿ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದರು. ಇದು ಎರಡು–ಮೂರು ದಿನಗಳಿಂದ ಭಾರಿ ಹಂಚಿಕೆಯಾಗುತ್ತಿತ್ತು. ಇದನ್ನು ಅರಿತ ಪೊಲೀಸ್ ವರಿಷ್ಠಾಧಿಕಾರಿ ಅವರು ಪ್ರಕರಣದ ತನಿಖೆಗೆ ಸೂಚಿಸಿದ್ದಾರೆ. ಜೊತೆಗೆ ಸುಹೈಲ್ ಅವರನ್ನು ಸೇವೆಯಿಂದ ಅಮಾನತು ಮಾಡಿದ್ದಾರೆ. ಸುಹೈಲ್ ತಪ್ಪಿತಸ್ಥರೆಂದು ಸಾಬೀತಾದಲ್ಲಿ ಕಠಿಣ ಕ್ರಮ ಜರುಗಿಸಲಾಗುವುದು ಎಂದೂ ಹೇಳಿದ್ದಾರೆ ಎಂದು ಸರ್ಕಲ್ ಆಫೀಸರ್ ಸಂದೀಪ್ ಸಿಂಗ್ ತಿಳಿಸಿದ್ದಾರೆ.

ಅಮೆರಿಕದ ಮಾತು ಬದಲು

ಯುದ್ಧದ ನಿಯಮ ಪಾಲಿಸಲು ಇಸ್ರೇಲ್‌ಗೆ ಒತ್ತಾಯ

ವಾಷಿಂಗ್ಟನ್ (ಎಪಿ): ಇಸ್ರೇಲ್‌ಗೆ ಎಚ್ಚರಿಕೆಯ ಕಿವಿಮಾತನ್ನು ಹೇಳಿರುವ ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರು, ‘ಇಸ್ರೇಲ್, ಗಾಜಾ ಪ್ರದೇಶವನ್ನು ಮತ್ತೆ ಆಕ್ರಮಿಸಬಾರದು’ ಎಂದಿದ್ದಾರೆ. ಇಸ್ರೇಲ್‌ಗೆ ಸಂಯಮ ಪ್ರದರ್ಶಿಸುವಂತೆ ಅವರು ಇಷ್ಟು ಗಟ್ಟಿ ದನಿಯಲ್ಲಿ ಸೂಚಿಸಿರುವುದು ಇದೇ ಮೊದಲು.

ಗಾಜಾ ಪ್ರದೇಶವನ್ನು ಆಕ್ರಮಿಸಿಕೊಳ್ಳುವುದು ‘ದೊಡ್ಡ ತಪ್ಪು ಎಂದು ನನಗೆ ಅನಿಸುತ್ತದೆ’ ಎಂದು ಬೈಡನ್ ಅವರು ಮಾಧ್ಯಮವೊಂದಕ್ಕೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ. ‘ಗಾಜಾದಲ್ಲಿ ಹಮಾಸ್ ಹಾಗೂ ಹಮಾಸ್‌ನ ತೀವ್ರಗಾಮಿಗಳು ಪ್ಯಾಲೆಸ್ಟೀನ್ ಜನರನ್ನು ಪ್ರತಿನಿಧಿಸುವುದಿಲ್ಲ... ತೀವ್ರಗಾಮಿಗಳನ್ನು ಮಣಿಸುವುದು ಅಗತ್ಯವಾದ ಕ್ರಮ’ ಎಂದು ಅವರು ಹೇಳಿದ್ದಾರೆ.

ಗಾಜಾದಲ್ಲಿ ನಾಗರಿಕರ ಮೇಲೆ ಇಸ್ರೇಲ್ ನಡೆಸಿರುವ ಬಾಂಬ್ ದಾಳಿಯನ್ನು ಬೈಡನ್ ಮತ್ತು ಅಮೆರಿಕ ಸರ್ಕಾರ ಖಂಡಿಸಿಲ್ಲ. ಆದರೆ, ಗಾಜಾ ಪ್ರದೇಶಕ್ಕೆ ಅಗತ್ಯ ವಸ್ತುಗಳನ್ನು ಒಯ್ಯಲು ಅವಕಾಶ ಕಲ್ಪಿಸಬೇಕು ಎಂದು ಅಮೆರಿಕವು ಇಸ್ರೇಲ್, ಈಜಿಪ್ಟ್ ಮತ್ತು ಇತರ ರಾಷ್ಟ್ರಗಳಿಗೆ ಮನವಿ ಮಾಡಿದೆ.

‘ಯುದ್ಧದ ನೀತಿಗಳಿಗೆ ಅನುಗುಣವಾಗಿ ಇಸ್ರೇಲ್ ನಡೆದುಕೊಳ್ಳುತ್ತದೆ ಎಂಬುದು ನನ್ನ ವಿಶ್ವಾಸ. ಪ್ರಜಾತಾಂತ್ರಿಕ ವ್ಯವಸ್ಥೆಗಳು ಹಾಗೂ ಪ್ರಜಾತಾಂತ್ರಿಕ ದೇಶಗಳು ಹೇಗೆ ನಡೆದುಕೊಳ್ಳಬೇಕು ಎಂಬುದಕ್ಕೆ ನಿಯಮಗಳಿವೆ. ಗಾಜಾದಲ್ಲಿನ ಅಮಾಯಕರಿಗೆ ಔಷಧ, ಆಹಾರ ಮತ್ತು ನೀರು ಪಡೆಯಲು ಅವಕಾಶ ಆಗುತ್ತದೆ ಎಂಬ ವಿಶ್ವಾಸವೂ ನನಗೆ ಇದೆ’ ಎಂದು ಬೈಡನ್ ಹೇಳಿದ್ದಾರೆ.

ಯುದ್ಧವು ಬೇರೆಡೆಗಳಿಗೆ ವಿಸ್ತರಿಸುವುದನ್ನು ತಡೆಯುವ ಉದ್ದೇಶದಿಂದ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಅವರು ಮಧ್ಯಪ್ರಾಚ್ಯದ ದೇಶಗಳ ಪ್ರವಾಸ ಕೈಗೊಂಡಿದ್ದು, ಅವರು ಸೋಮವಾರ ಇಸ್ರೇಲ್‌ಗೆ ಮರಳಿದ್ದಾರೆ. ಅರಬ್ ಜಗತ್ತಿನ ಬೇರೆ ಬೇರೆ ದೇಶಗಳ ನಾಯಕರು ವ್ಯಕ್ತಪಡಿಸಿರುವ ಅನಿಸಿಕೆಗಳನ್ನು ಇಸ್ರೇಲ್‌ನ ನಾಯಕತ್ವಕ್ಕೆ ಅವರು ತಿಳಿಸಲಿದ್ದಾರೆ.

‘ಪ್ರಜಾತಂತ್ರ ವ್ಯವಸ್ಥೆಗಳು ನಾಗರಿಕರ ಜೀವಕ್ಕೆ ಬೆಲೆ ಕೊಡಬೇಕು. ನಾವು ಭಯೋತ್ಪಾದಕರಿಗಿಂತ ಭಿನ್ನರಾಗುವುದು ಇದರಿಂದಲೇ’ ಎಂದು ಅಮೆರಿಕದ ರಾಷ್ಟ್ರೀಯ ಭದ್ರತಾ ಸಲಹೆಗಾರ ಜೇಕ್ ಸಲುವಾನ್ ಹೇಳಿದ್ದಾರೆ.

‘ಎಲ್ಲ ಮಿಲಿಟರಿ ಕಾರ್ಯಾಚರಣೆಗಳು ಯುದ್ಧಕ್ಕೆ ಸಂಬಂಧಿಸಿದ ನಿಯಮಗಳಿಗೆ ಅನುಗುಣವಾಗಿಯೇ ಇರಬೇಕು. ನಾಗರಿಕರನ್ನು ರಕ್ಷಿಸಬೇಕು, ಸುರಕ್ಷಿತ ಸ್ಥಳಗಳಿಗೆ ತೆರಳಲು ನಾಗರಿಕರಿಗೆ ನಿಜವಾಗಿಯೂ ಒಂದು ಅವಕಾಶ ಇರಬೇಕು. ಅವರಿಗೆ ನೀರು, ಆಹಾರ ಮತ್ತು ಔಷಧಗಳು ಲಭ್ಯವಿರಬೇಕು ಎಂಬ ಸಂದೇಶವನ್ನು ಅಮೆರಿಕವು ಬಹಿರಂಗದಲ್ಲಿಯೂ ಖಾಸಗಿಯಾಗಿಯೂ ನೀಡುತ್ತಿದೆ’ ಎಂದು ಕೂಡ ಸಲುವಾನ್ ಹೇಳಿದ್ದಾರೆ.

ಅಮೆರಿಕದ ಸರ್ಕಾರದಲ್ಲಿ ಪ್ರಮುಖ ಹುದ್ದೆಗಳನ್ನು ಹೊಂದಿರುವ ಇವರ ಈ ಹೇಳಿಕೆಗಳು, ಅಮೆರಿಕದ ಆಡಳಿತದ ಮಾತುಗಳಲ್ಲಿ ಬದಲಾವಣೆ ಆಗಿರುವುದನ್ನು ತೋರಿಸುತ್ತಿವೆ. ಅರಬ್ ನಾಯಕರ ಅಭಿಪ್ರಾಯಗಳಿಗೆ ಅಮೆರಿಕದ ನಾಯಕರು ಕಿವಿಗೊಟ್ಟ ನಂತರದಲ್ಲಿ ಈ ಬದಲಾವಣೆಗಳು ಆಗಿವೆ. ಗಾಜಾದ ಮೇಲೆ ಇಸ್ರೇಲ್ ಸೇನೆಯು ಭೂದಾಳಿ ನಡೆಸಿದರೆ ಪ್ಯಾಲೆಸ್ಟೀನ್ ಜನರ ಪಾಲಿಗೆ ಎದುರಾಗುವ ಅಪಾಯಗಳ ಬಗ್ಗೆ ಅರಬ್ ನಾಯಕರು ಅಮೆರಿಕದ ನಾಯಕರಲ್ಲಿ ಕಳವಳ ವ್ಯಕ್ತಪಡಿಸಿದ್ದಾರೆ. ಅಷ್ಟೇ ಅಲ್ಲದೆ, ಅರಬ್ ರಾಷ್ಟ್ರಗಳಲ್ಲಿನ ಜನಾಭಿಪ್ರಾಯದ ಮೇಲೆ ಪರಿಣಾಮ ಉಂಟಾಗುತ್ತದೆ ಎಂಬ ವಿಚಾರವನ್ನು ಕೂಡ ಅರಬ್ ನಾಯಕರು ಅಮೆರಿಕಕ್ಕೆ ತಿಳಿಸಿದ್ದಾರೆ.

> **ನಾಗರಿಕರಿಗೆ ತೊಂದರೆ ಆಗುವುದನ್ನು ತಡೆಯಲು ಸಾಧ್ಯವಿರುವ ಎಲ್ಲ ಬಗೆಯ ಮುನ್ನೆಚ್ಚರಿಕೆಗಳನ್ನು ಇಸ್ರೇಲ್ ತೆಗೆದುಕೊಳ್ಳಬೇಕು**
> **ಆ್ಯಂಟನಿ ಬ್ಲಿಂಕನ್,** ಅಮೆರಿಕದ ವಿದೇಶಾಂಗ ಕಾರ್ಯದರ್ಶಿ

ಇಸ್ರೇಲ್‌ಗೆ ಬೈಡನ್ ಭೇಟಿ?

ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರು ಮುಂದಿನ ದಿನಗಳಲ್ಲಿ ಇಸ್ರೇಲ್‌ಗೆ ಭೇಟಿ ನೀಡುವ ಬಗ್ಗೆ ಪರಿಶೀಲಿಸುತ್ತಿದ್ದಾರೆ. ಆದರೆ ಪ್ರಯಾಣದ ಬಗ್ಗೆ ಇನ್ನೂ ಅಂತಿಮ ತೀರ್ಮಾನ ಆಗಿಲ್ಲ ಎಂದು ಮೂಲಗಳು ತಿಳಿಸಿವೆ.

ಬೈಡನ್ ಅವರು ಇಸ್ರೇಲ್‌ಗೆ ಭೇಟಿ ನೀಡಿದರೆ, ಅಮೆರಿಕವು ಇಸ್ರೇಲ್‌ಗೆ ನೀಡುತ್ತಿರುವ ಬೆಂಬಲದ ಬಹುದೊಡ್ಡ ದ್ಯೋತಕ ಅದಾಗುತ್ತದೆ. ಇಸ್ರೇಲ್ ಸೇನೆಯು ಗಾಜಾ ಮೇಲೆ ಭೂದಾಳಿ ನಡೆಸಿದರೆ ಇಸ್ರೇಲ್–ಹಮಾಸ್ ಯುದ್ಧವು ಬೇರೆಡೆ ವಿಸ್ತರಿಸಬಹುದು ಎಂಬ ಭೀತಿಯ ನಡುವೆ ಈ ಭೇಟಿಯ ಸುದ್ದಿ ಬಂದಿದೆ.

ಬೈಡನ್ ಅವರು ಇಸ್ರೇಲ್‌ಗೆ ಭೇಟಿ ನೀಡುವುದನ್ನು ಹಮಾಸ್ ಬಂಡುಕೋರ ಸಂಘಟನೆಗೆ ಬೆಂಬಲ ನೀಡುತ್ತ ಬಂದಿರುವ ಇರಾನ್ ‘ಪ್ರಚೋದನಕಾರಿ ನಡೆ’ ಎಂದು ಭಾವಿಸಬಹುದು.

ಆಹಾರ, ನೀರು ಕೊರತೆ • ಮನೆಗಳನ್ನು ತೊರೆದ 10 ಲಕ್ಷಕ್ಕೂ ಹೆಚ್ಚು ನಿವಾಸಿಗಳು

ಗಾಜಾ: ಖಾಲಿಯಾಗುತ್ತಿರುವ ಔಷಧ ಸಂಗ್ರಹ

ರಫಾ (ಗಾಜಾ ಪಟ್ಟಿ) (ಎಪಿ): ಆಹಾರ ಮತ್ತು ನೀರಿನ ಕೊರತೆ ಎದುರಿಸುತ್ತಿರುವ ಗಾಜಾದಲ್ಲಿನ ಪ್ಯಾಲೆಸ್ಟೀನ್ ಪ್ರಜೆಗಳು ಸೋಮವಾರ ಆಶ್ರಯ ಬಯಸಿ ಶಾಲೆಗಳು ಹಾಗೂ ಆಸ್ಪತ್ರೆಗಳತ್ತ ಧಾವಿಸಿದ್ದಾರೆ.

ಗಾಜಾ ಮೇಲೆ ಇಸ್ರೇಲ್ ಸೇನೆಯು ಭೂದಾಳಿ ನಡೆಸುವ ಸಾಧ್ಯತೆ ಇದ್ದು, ಗಾಜಾದ ಹತ್ತು ಲಕ್ಷಕ್ಕೂ ಹೆಚ್ಚು ನಿವಾಸಿಗಳು ಮನೆಗಳನ್ನು ತೊರೆದಿದ್ದಾರೆ. ಗಾಜಾದಲ್ಲಿ ಆಹಾರ, ನೀರು ಮತ್ತು ಔಷಧಗಳ ಸಂಗ್ರಹವು ಖಾಲಿ ಆಗುತ್ತಿದೆ.

ಗಾಜಾ ಮತ್ತು ಈಜಿಪ್ಟ್ ನಡುವಿನ ರಫಾ ಗಡಿಯಲ್ಲಿ ಅಗತ್ಯ ವಸ್ತುಗಳನ್ನು ಹೊತ್ತು ತಂದಿರುವ ಟ್ರಕ್‌ಗಳು ನಿಂತಿವೆ. ಅಗತ್ಯ ವಸ್ತುಗಳನ್ನು ಗಾಜಾ ಪಟ್ಟಿಯೊಳಕ್ಕೆ ಒಯ್ಯಲು, ವಿದೇಶಿ ಪ್ರಜೆಗಳಿಗೆ ಗಾಜಾ ಪಟ್ಟಿಯಿಂದ ಹೊರನಡೆಯಲು ಸಾಧ್ಯವಾಗುವ ರೀತಿಯಲ್ಲಿ ಕದನ ವಿರಾಮ ಘೋಷಿಸುವಲ್ಲಿ ಸಂಧಾನಕಾರರು ಯಶಸ್ಸು ಕಾಣುತ್ತಾರೆ ಎಂಬ ನಿರೀಕ್ಷೆಯಲ್ಲಿ ಹಲವರಿದ್ದಾರೆ.

ಇಸ್ರೇಲ್‌ನ ಉತ್ತರ ಭಾಗದಲ್ಲಿ ಹಿಜ್ಬುಲ್ಲಾ ಸಂಘಟನೆಯು ಇಸ್ರೇಲ್‌ನತ್ತ ದಾಳಿ ನಡೆಸುತ್ತಿದೆ. ಇದಕ್ಕೆ ಇಸ್ರೇಲ್ ಸೇನೆಯು ಪ್ರತ್ಯುತ್ತರ ನೀಡುತ್ತಿದೆ. ಉತ್ತರ ಭಾಗದ 28 ಪ್ರದೇಶಗಳಿಂದ ಸ್ಥಳಾಂತರಗೊಳ್ಳಲು ತನ್ನ ನಾಗರಿಕರಿಗೆ ಸೂಚಿಸಿದೆ.

‘ಉತ್ತರದಲ್ಲಿ ನಮ್ಮನ್ನು ಪರೀಕ್ಷಿಸುವ ಕೆಲಸ ಮಾಡಬೇಡಿ. ಹಿಂದಿನ ತಪ್ಪನ್ನು ಮತ್ತೆ ಮಾಡಬೇಡಿ. ಈ ಬಾರಿ ನೀವು ತೆರಬೇಕಿರುವ ಬೆಲೆಯು ಭಾರಿ ಆಗಿರುತ್ತದೆ’ ಎಂದು ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಸಂಸತ್ತಿನಲ್ಲಿ ಸೋಮವಾರ ಹೇಳಿದ್ದಾರೆ.

ವಿಶ್ವಸಂಸ್ಥೆಯ ಶಿಬಿರಗಳನ್ನು ಆಶ್ರಯ ಪಡೆದಿರುವ ಪ್ಯಾಲೆಸ್ಟೀನ್ ಪ್ರಜೆಗಳಿಗೆ ದಿನವೊಂದಕ್ಕೆ 1 ಲೀಟರ್‌ನಷ್ಟೂ ನೀರು ಸಿಗುತ್ತಿಲ್ಲ. ಔಷಧಗಳ ಪೂರೈಕೆಯು ಬಹುತೇಕ ನಿಂತುಹೋಗಿದೆ, ವೆಂಟಿಲೇಟರ್‌ಗಳು ಹಾಗೂ ಇನ್‌ಕ್ಯುಬೇಟರ್‌ಗಳಿಗೆ ವಿದ್ಯುತ್ ಪೂರೈಸುವ ಜನರೇಟರ್‌ಗಳಿಗೆ ಒಂದು ದಿನಕ್ಕೆ ಮಾತ್ರ ಸಾಕಾಗುವಷ್ಟು ಇಂಧನ ಉಳಿದಿದೆ, ಆರೋಗ್ಯ ಸೇವೆಗಳು ಕುಸಿದುಬೀಳುವ ಹಂತ ತಲುಪಿವೆ ಎಂದು ಗಾಜಾದ ಆಸ್ಪತ್ರೆಗಳು ಎಚ್ಚರಿಸಿವೆ.

ಹಮಾಸ್ ವಿರುದ್ಧ ಇಸ್ರೇಲ್‌ನ ಯುದ್ಧ ಆರಂಭವಾದ ನಂತರದಲ್ಲಿ 2,750ಕ್ಕೂ ಹೆಚ್ಚು ಪ್ಯಾಲೆಸ್ಟೀನಿಯನ್ನರು ಸತ್ತಿದ್ದಾರೆ ಎಂದು ಗಾಜಾ ಆರೋಗ್ಯ ಸಚಿವಾಲಯ ತಿಳಿಸಿದೆ. ಇಸ್ರೇಲ್‌ನಲ್ಲಿ 1,400ಕ್ಕೂ ಹೆಚ್ಚು ಮಂದಿ ಸಾವನ್ನಪ್ಪಿದ್ದಾರೆ. ‘ಜನರ ಸಾಮೂಹಿಕ ಸ್ಥಳಾಂತರ, ನೀರು ಪೂರೈಕೆ ಮತ್ತು ನೈರ್ಮಲ್ಯ ವ್ಯವಸ್ಥೆಯು ಉತ್ತಮವಾಗಿಲ್ಲದ ಕಾರಣ ರೋಗಗಳು ಹರಡುವ ಸಾಧ್ಯತೆ ಇದೆ’ ಎಂದು ಗಾಜಾದ ಸ್ಥಿತಿಯ ಬಗ್ಗೆ ವಿಶ್ವ ಆರೋಗ್ಯ ಸಂಸ್ಥೆಯು ಕಳವಳ ವ್ಯಕ್ತಪಡಿಸಿದೆ.

ಗಾಜಾದಲ್ಲಿ ನಾಲ್ಕು ಆಸ್ಪತ್ರೆಗಳು ಕೆಲಸ ನಿಲ್ಲಿಸಿವೆ, 21 ಆಸ್ಪತ್ರೆಗಳಿಗೆ ಇಸ್ರೇಲ್ ಜಾಗ ಖಾಲಿ ಮಾಡುವಂತೆ ಆದೇಶಿಸಿದೆ. ಆದರೆ ಈ ಆದೇಶ ಒಪ್ಪಲು ಅಲ್ಲಿನ ವೈದ್ಯರು ಸಿದ್ಧರಿಲ್ಲ. ಆಸ್ಪತ್ರೆಗಳನ್ನು ಸ್ಥಳಾಂತರಿಸಿದರೆ ರೋಗಿಗಳು, ನವಜಾತ ಶಿಶುಗಳ ಜೀವಕ್ಕೆ ಅಪಾಯ ಉಂಟಾಗುತ್ತದೆ ಎಂದು ವೈದ್ಯರು ಹೇಳುತ್ತಿದ್ದಾರೆ.

ಗಾಜಾ ಪಟ್ಟಿಯ ದಕ್ಷಿಣ ಭಾಗದ ಖಾನ್ ಯೂನಿಸ್ ಹೊರಗಡೆ ನೀರಿನ ಪೂರೈಕೆ ಪುನರಾರಂಭಿಸಲಾಗಿದೆ ಎಂದು ಇಸ್ರೇಲ್ ಹೇಳಿದೆ. ಆದರೆ ಗಾಜಾದಲ್ಲಿ ಜನರಿಗೆ ನೆರವು ಒದಗಿಸುತ್ತಿರುವ ಕಾರ್ಯಕರ್ತರು ನೀರು ಪೂರೈಕೆ ಆಗುತ್ತಿರುವುದಕ್ಕೆ ಸಾಕ್ಷ್ಯವಿಲ್ಲ ಎಂದು ಹೇಳಿದ್ದಾರೆ.

11 ಪತ್ರಕರ್ತರು ಹತ: ಅಕ್ಟೋಬರ್ 7ರ ನಂತರದಲ್ಲಿ ಇಸ್ರೇಲ್ ವಾಯುದಾಳಿಯಿಂದಾಗಿ 11 ಮಂದಿ ಪ್ಯಾಲೆಸ್ಟೀನ್ ಪತ್ರಕರ್ತರು ಮೃತಪಟ್ಟಿದ್ದಾರೆ ಎಂದು ಪ್ಯಾಲೆಸ್ಟೀನ್ ಜರ್ನಲಿಸ್ಟ್ ಸಿಂಡಿಕೇಟ್ ಹೇಳಿದೆ.

ಗಾಜಾ ಪಟ್ಟಿಯ ಮಧ್ಯದಲ್ಲಿರುವ ನುಸೈರತ್ ಶಿಬಿರದಲ್ಲಿ ಇಸ್ರೇಲ್ ದಾಳಿಯಿಂದ ಧ್ವಂಸಗೊಂಡಿರುವ ಕಟ್ಟಡಗಳ ಪಕ್ಕದಲ್ಲಿ ಸಾಗಿದ ಪ್ಯಾಲೆಸ್ಟೀನ್ ಮಹಿಳೆಯರು (ಎಪಿ/ಪಿಟಿಐ ಚಿತ್ರ)

ಯುದ್ಧ ಭೂಮಿಯ ಸುತ್ತ

- ಗಾಜಾ ಪಟ್ಟಿಗೆ ಸನಿಹದ ಪ್ರದೇಶಗಳಿಂದ ಸ್ಥಳಾಂತರ ಮಾಡಲಾದ ಇಸ್ರೇಲ್ ಪ್ರಜೆಗಳನ್ನು ಹೋಟೆಲ್ ಕೊಠಡಿಗಳಲ್ಲಿ ಇರಿಸಲಾಗಿದೆ. ಇಸ್ರೇಲಿನ ಸುಮಾರು ಶೇಕಡ 50ರಷ್ಟು ಹೋಟೆಲ್ ಕೊಠಡಿಗಳಲ್ಲಿ ಇವರೇ ಇದ್ದಾರೆ.
- ಗಾಜಾ ಮೇಲಿನ ದಾಳಿ ಸ್ಥಗಿತಗೊಂಡರೆ ಹಮಾಸ್ ಬಂಡುಕೋರರು ಒತ್ತೆಯಾಳುಗಳನ್ನು ಬಿಡುಗಡೆ ಮಾಡಲಿದ್ದಾರೆ ಎಂದು ಇರಾನ್ ಹೇಳಿರುವುದಾಗಿ ಕೆಲವು ಸುದ್ದಿಸಂಸ್ಥೆಗಳು ವರದಿ ಮಾಡಿವೆ.

ಕದನ ವಿರಾಮ ಇಲ್ಲ: ಇಸ್ರೇಲ್

ಜೆರುಸಲೇಂ (ಎಎಫ್‌ಪಿ): ಗಾಜಾ ಪಟ್ಟಿಯಲ್ಲಿ ಇರುವ ವಿದೇಶಿ ಪ್ರಜೆಗಳಿಗೆ ನೆರೆಯ ಈಜಿಪ್ಟ್‌ಗೆ ತೆರಳಲು ಅವಕಾಶ ಕಲ್ಪಿಸಲು ಗಾಜಾದಲ್ಲಿನ ಮಿಲಿಟರಿ ಕಾರ್ಯಾಚರಣೆಗೆ ತಾತ್ಕಾಲಿಕ ವಿರಾಮ ಘೋಷಿಸಲಾಗಿದೆ ಎಂಬ ವರದಿಗಳನ್ನು ಇಸ್ರೇಲ್ ಅಲ್ಲಗಳೆದಿದೆ.

ಗಾಜಾ ಪಟ್ಟಿ ಮತ್ತು ಈಜಿಪ್ಟ್ ನಡುವಿನ ರಫಾ ಗಡಿಯನ್ನು ಸೋಮವಾರ ಕೆಲವು ತಾಸುಗಳ ಮಟ್ಟಿಗೆ ಮುಕ್ತವಾಗಿ ಇರಿಸಿ, ವಿದೇಶಿ ಪ್ರಜೆಗಳು ಗಾಜಾ ಪಟ್ಟಿಯಿಂದ ಹೊರಗೆ ತೆರಳಲು ಹಾಗೂ ಅಗತ್ಯ ವಸ್ತುಗಳನ್ನು ಗಾಜಾ ಪಟ್ಟಿಯೊಳಕ್ಕೆ ರವಾನಿಸಲು ಇಸ್ರೇಲ್, ಈಜಿಪ್ಟ್ ಮತ್ತು ಅಮೆರಿಕ ಒಪ್ಪಿವೆ ಎಂದು ಕೆಲವು ಮಾಧ್ಯಮಗಳು ವರದಿ ಮಾಡಿದ್ದವು.

ಆದರೆ, ಕದನ ವಿರಾಮ ಇಲ್ಲ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ಕಚೇರಿಯ ಪ್ರಕಟಣೆ ತಿಳಿಸಿದೆ.

ಅರಬ್ ಲೀಗ್ ಒತ್ತಾಯ: ಗಾಜಾ ಪಟ್ಟಿಯಲ್ಲಿ ನಡೆಯುತ್ತಿರುವ ಮಿಲಿಟರಿ ಕಾರ್ಯಾಚರಣೆಯನ್ನು ತಕ್ಷಣವೇ ನಿಲ್ಲಿಸಬೇಕು, ಅಲ್ಲಿನ ಪ್ಯಾಲೆಸ್ಟೀನ್ ನಾಗರಿಕರಿಗೆ ಅಗತ್ಯ ವಸ್ತುಗಳನ್ನು ತಲುಪಿಸಲು ಅವಕಾಶ ಕಲ್ಪಿಸಬೇಕು ಎಂದು ಅರಬ್ ಲೀಗ್ ಒತ್ತಾಯಿಸಿದೆ.

ಬಾಗ್ದಾದ್‌ನಲ್ಲಿ ಅರಬ್ ಕಾನೂನು ಸಚಿವರ ಸಭೆಯಲ್ಲಿ ಲೀಗ್‌ನ ಮಹಾ ಪ್ರಧಾನ ಕಾರ್ಯದರ್ಶಿ ಅಹಮದ್ ಅಬೌಲ್ ಘೇಟ್ ಅವರು ಈ ಒತ್ತಾಯ ಮಾಡಿದ್ದಾರೆ.

ಒತ್ತೆಯಾಳುಗಳ ಸಂಖ್ಯೆ ಹೆಚ್ಚು

ಜೆರುಸಲೇಂ (ರಾಯಿಟರ್ಸ್): ಹಮಾಸ್ ಮತ್ತು ಪ್ಯಾಲೆಸ್ಟೀನಿನ ಇತರ ಬಂಡುಕೋರರು ಗಾಜಾದಲ್ಲಿ 199 ಮಂದಿಯನ್ನು ಒತ್ತೆಯಾಳುಗಳನ್ನಾಗಿ ಇರಿಸಿಕೊಂಡಿದ್ದಾರೆ ಎಂದು ಇಸ್ರೇಲ್ ಮಿಲಿಟರಿ ಸೋಮವಾರ ಹೇಳಿದೆ. ಬಂಡುಕೋರರು ಒತ್ತೆ ಇರಿಸಿಕೊಂಡಿದ್ದಾರೆ ಎನ್ನಲಾಗಿರುವ ಜನರ ಸಂಖ್ಯೆಯ ವಿಚಾರವಾಗಿ ಹಿಂದೆ ಮಾಡಿದ್ದ ಅಂದಾಜುಗಳಿಗಿಂತ ಇದು ಹೆಚ್ಚು.

ಒತ್ತೆಯಾಳುಗಳಾಗಿ ಬಂಡುಕೋರರ ಬಳಿ ಇರುವವರ ಕುಟುಂಬಗಳನ್ನು ಗುರುತಿಸಲಾಗಿದೆ ಎಂದು ಇಸ್ರೇಲ್ ಮಿಲಿಟರಿ ವಕ್ತಾರ ಡೇನಿಯಲ್ ಹಗರಿ ಹೇಳಿದ್ದಾರೆ. ಆದರೆ ಒತ್ತೆಯಾಳುಗಳಾಗಿ ಇರುವವರಲ್ಲಿ ವಿದೇಶಿಯರೂ ಇದ್ದಾರೆಯೇ ಎಂಬ ಬಗ್ಗೆ ಅವರು ಮಾಹಿತಿ ನೀಡಿಲ್ಲ.

ಪ್ಯಾಲೆಸ್ಟೀನ್ ರಾಯಭಾರ ಕಚೇರಿಗೆ ಭೇಟಿ

ನವದೆಹಲಿ (ಪಿಟಿಐ): ವಿರೋಧ ಪಕ್ಷಗಳ ಕೆಲವು ಪ್ರಮುಖರು ಇಲ್ಲಿನ ಪ್ಯಾಲೆಸ್ಟೀನ್ ರಾಯಭಾರ ಕಚೇರಿಗೆ ಸೋಮವಾರ ಭೇಟಿ ನೀಡಿ, ಪ್ಯಾಲೆಸ್ಟೀನ್ ಜನರಿಗೆ ಬೆಂಬಲ ಸೂಚಿಸಿದರು. ಬಿಎಸ್‌ಪಿ ಪಕ್ಷದ ಡ್ಯಾನಿಶ್ ಅಲಿ, ಕಾಂಗ್ರೆಸ್ಸಿನ ಮಣಿಶಂಕರ್ ಅಯ್ಯರ್ ಮತ್ತು ಜೆಡಿ(ಯು) ಪಕ್ಷದ ಕೆ.ಸಿ. ತ್ಯಾಗಿ, ಸಿಪಿಐ(ಎಂಎಲ್)ನ ದೀಪಾಂಕರ್ ಭಟ್ಟಾಚಾರ್ಯ ಮತ್ತು ಸಮಾಜವಾದಿ ಪಕ್ಷದ ಜಾವೆದ್ ಅಲಿ ಖಾನ್ ಅವರು ಕೂಡ ಜೊತೆ ಇದ್ದರು.

‘ಶಾಂತಿಯನ್ನು ಬಯಸುವ ಧ್ವನಿಯು ಈಗ ಗಟ್ಟಿಯಾಗಬೇಕಿದೆ. ಏಕೆಂದರೆ ಗಾಜಾದಲ್ಲಿ ಈಗ ನಡೆಯುತ್ತಿರುವುದು ಜನರ ಹತ್ಯೆ ಮಾತ್ರವೇ ಅಲ್ಲ. ಅಲ್ಲಿ ನಡೆಯುತ್ತಿರುವ ಘಟನೆಗಳು ವಿಶ್ವವನ್ನು ಮೂರನೆಯ ಮಹಾಯುದ್ಧದ ಕಡೆ ತಳ್ಳುತ್ತಿವೆ’ ಎಂದು ಭಟ್ಟಾಚಾರ್ಯ ಹೇಳಿದರು.

ಮಾರ್ಷ್, ಇಂಗ್ಲಿಸ್ ಅರ್ಧಶತಕ • ಜಂಪಾ ಕೈಚಳಕ • ಶ್ರೀಲಂಕಾ ವಿರುದ್ಧ ಆಸ್ಟ್ರೇಲಿಯಾಕ್ಕೆ ಐದು ವಿಕೆಟ್‌ಗಳ ಗೆಲುವು

ಕಮಿನ್ಸ್ ಪಡೆಗೆ ಮೊದಲ ಜಯದ ಸಿಹಿ

ಲಖನೌ (ಪಿಟಿಐ): ಸತತ ಎರಡು ಸೋಲುಗಳಿಂದ ಕಂಗೆಟ್ಟಿದ್ದ ಆಸ್ಟ್ರೇಲಿಯಾ ತಂಡ, ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಸೋಮವಾರ ಮೊದಲ ಜಯದ ಸಿಹಿಯುಂಡಿತು.

ಏಕನಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಆಲ್‌ರೌಂಡ್ ಆಟವಾಡಿದ ಪ್ಯಾಟ್ ಕಮಿನ್ಸ್ ಬಳಗ, ಐದು ವಿಕೆಟ್‌ಗಳಿಂದ ಶ್ರೀಲಂಕಾ ತಂಡವನ್ನು ಮಣಿಸಿತು.

ಪಾಯಿಂಟ್ ಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿದ್ದ ಆಸ್ಟ್ರೇಲಿಯಾ, ಈ ಗೆಲುವಿನೊಂದಿಗೆ ಎರಡು ಸ್ಥಾನ ಮೇಲಕ್ಕೇರಿದೆ. ಲಂಕಾ ತಂಡ ತಾನಾಡಿದ ಮೂರು ಪಂದ್ಯಗಳಲ್ಲೂ ಮುಖಭಂಗ ಅನುಭವಿಸಿದೆ.

ಮೊದಲು ಬ್ಯಾಟ್ ಮಾಡಿದ ಶ್ರೀಲಂಕಾ 43.3 ಓವರ್‌ಗಳಲ್ಲಿ 209 ರನ್‌ಗಳಿಗೆ ಆಲೌಟಾಯಿತು. 47 ರನ್‌ಗಳಿಗೆ 4 ವಿಕೆಟ್ ಪಡೆದ ಆ್ಯಡಮ್ ಜಂಪಾ ಮತ್ತು ಕಮಿನ್ಸ್ (32ಕ್ಕೆ 2) ಅವರು ಎದುರಾಳಿ ಬ್ಯಾಟರ್‌ಗಳನ್ನು ನಿಯಂತ್ರಿಸಿದರು.

ಆಸ್ಟ್ರೇಲಿಯಾ ತಂಡ 35.2 ಓವರ್‌ಗಳಲ್ಲಿ ಐದು ವಿಕೆಟ್ ಕಳೆದುಕೊಂಡು ಗುರಿ ತಲುಪಿತು. ಅರ್ಧಶತಕ ಗಳಿಸಿದ ಮಿಚೆಲ್ ಮಾರ್ಷ್ (52; 51 ಎ., 4X9) ಮತ್ತು ಜೋಶ್ ಇಂಗ್ಲಿಸ್ (58; 59 ಎ., 4X5, 6X1) ಗೆಲುವಿನ ಹಾದಿ ಸುಗಮಗೊಳಿಸಿದರು.

ಸಾಧಾರಣ ಗುರಿ ಬೆನ್ನಟ್ಟಿದ ಆಸ್ಟ್ರೇಲಿಯಾ, ಆರಂಭದಲ್ಲಿ ಅಲ್ಪ ಆತಂಕ ಎದುರಿಸಿತು. ದಿಲ್ಶಾನ್ ಮಧುಶಂಕಾ ಅವರು ನಾಲ್ಕನೇ ಓವರ್‌ನ ಮೊದಲ ಹಾಗೂ ಕೊನೆಯ ಎಸೆತದಲ್ಲಿ ಕ್ರಮವಾಗಿ ಡೇವಿಡ್ ವಾರ್ನರ್ (11) ಮತ್ತು ಸ್ಟೀವನ್ ಸ್ಮಿತ್ (0) ಅವರನ್ನು ಎಲ್‌ಬಿ ಬಲೆಯಲ್ಲಿ ಕೆಡವಿದರು.

ಆದರೆ ಮಾರ್ಷ್ ಮತ್ತು ಲಾಬುಶೇನ್ (40; 60 ಎ.) ಮೂರನೇ ವಿಕೆಟ್‌ಗೆ 57 ರನ್ ಸೇರಿಸಿ ಅಪಾಯ ದೂರ ಮಾಡಿದರು. ಲಾಬುಶೇನ್ ಅವರು ವಿಕೆಟ್ ಕಾಯ್ದುಕೊಂಡರೆ, ಮತ್ತೊಂದು ಬದಿಯಲ್ಲಿ ಮಾರ್ಷ್ ಆಕ್ರಮಣಕಾರಿ ಆಟವಾಡಿ ಲಂಕಾ ಬೌಲರ್‌ಗಳು ಹಿಡಿತ ಸಾಧಿಸದಂತೆ ನೋಡಿಕೊಂಡರು.

ಅರ್ಧಶತಕ ಪೂರೈಸಿದ ಮಾರ್ಷ್, ರನೌಟ್ ಆದರು. ಬಳಿಕ ಬಂದ ಇಂಗ್ಲಿಸ್ ಅವರು ಲಾಬುಶೇನ್ ಜತೆ 4ನೇ ವಿಕೆಟ್‌ಗೆ 77 ರನ್‌ಗಳನ್ನು ಸೇರಿಸಿ ಲಂಕಾ ತಂಡದ ಮರುಹೋರಾಟದ ಬಾಗಿಲು ಮುಚ್ಚಿದರು. ಮಹೀಷ ತೀಕ್ಷಣ ಮತ್ತು ದುನಿತ್ ವೆಳಾಲಗೆ ಅವರ ಸ್ಪಿನ್ ದಾಳಿಯನ್ನು ಇವರು ಲೀಲಾಜಾಲವಾಗಿ ಎದುರಿಸಿದರು. ಇವರಿಬ್ಬರು ಔಟಾದ ಬಳಿಕ ಬಂದ ಗ್ಲೆನ್ ಮ್ಯಾಕ್ಸ್‌ವೆಲ್ (ಔಟಾಗದೆ 31; 21 ಎ., 4X4, 6X2) ಹಾಗೂ ಮಾರ್ಕಸ್ ಸ್ಟೊಯಿನಿಸ್ (ಔಟಾಗದೆ 20; 10 ಎ., 4X2, 6X1) ಬೀಸಾಟವಾಡಿ ತಂಡವನ್ನು ಬೇಗನೇ ಗೆಲುವಿನತ್ತ ಮುನ್ನಡೆಸಿದರು.

ಉತ್ತಮ ಆರಂಭ, ಹಠಾತ್ ಕುಸಿತ: ಟಾಸ್ ಗೆದ್ದ ಲಂಕಾ ತಂಡದ ನಾಯಕ ಕುಶಾಲ್ ಮೆಂಡಿಸ್ ಬ್ಯಾಟಿಂಗ್ ಆಯ್ದುಕೊಂಡರು. ವಿಕೆಟ್ ನಷ್ಟವಿಲ್ಲದೆ 125 ರನ್ ಗಳಿಸಿದ್ದ ತಂಡ ಆ ಬಳಿಕ ಹಠಾತ್ ಕುಸಿತ ಕಂಡಿತು. 84 ರನ್‌ಗಳಿಗೆ 10 ವಿಕೆಟ್‌ಗಳನ್ನು ಕಳೆದುಕೊಂಡಿತು.

ಪಥುಮ್ ನಿಸಾಂಕ (61; 67 ಎ., 4X8) ಮತ್ತು ಕುಶಾಲ್ ಪೆರೆರಾ (78; 82 ಎ., 4X12) ಅವರು ತಂಡಕ್ಕೆ ಭದ್ರ ಬುನಾದಿ ಹಾಕಿಕೊಟ್ಟರು. ಎದುರಾಳಿ ತಂಡದ ಆರಂಭಿಕ ದಾಳಿಯನ್ನು ಸಮರ್ಥವಾಗಿ ನಿಭಾಯಿಸಿದ ಈ ಜೋಡಿ 21.4 ಓವರ್‌ಗಳಲ್ಲಿ 125 ರನ್ ಕಲೆಹಾಕಿತು. ನಿಸಾಂಕ ಅವರ ವಿಕೆಟ್ ಪಡೆದ ಕಮಿನ್ಸ್ ಈ ಜತೆಯಾಟ ಮುರಿದರು. ವಾರ್ನರ್ ಅವರ ಅತ್ಯುತ್ತಮ ಕ್ಯಾಚ್‌ಗೆ ನಿಸಾಂಕ ಔಟಾದರು. ಐದು ಓವರ್‌ಗಳ ಬಳಿಕ ಪೆರೆರಾ ಅವರನ್ನು ಕಮಿನ್ಸ್ ಬೌಲ್ಡ್ ಮಾಡಿದರು.

ಈ ಎರಡು ವಿಕೆಟ್‌ಗಳ ಪತನವು ಆಸ್ಟ್ರೇಲಿಯಾ ಬೌಲರ್‌ಗಳು ಪಾರಮ್ಯ ಸಾಧಿಸಲು ಅನುವು ಮಾಡಿಕೊಟ್ಟಿತು. ಜಂಪಾ ಅವರು ಕುಶಾಲ ಮೆಂಡಿಸ್ (9) ಮತ್ತು ಸದೀರ ಸಮರವಿಕ್ರಮ (8) ಅವರನ್ನು ಎರಡು ಓವರ್‌ಗಳ ಅಂತರದಲ್ಲಿ ಪೆವಿಲಿಯನ್‌ಗೆ ಕಳುಹಿಸಿದರು.

ಆ ಬಳಿಕ ಲಂಕಾ ಬ್ಯಾಟರ್‌ಗಳ ಪೆವಿಲಿಯನ್ ಪರೇಡ್ ನಡೆಯಿತು. ಆರಂಭಿಕ ಬ್ಯಾಟರ್‌ಗಳು ಮತ್ತು ಮಧ್ಯಮ ಕ್ರಮಾಂಕದಲ್ಲಿ ಚರಿತ ಅಸಲಂಕ (25) ಹೊರತುಪಡಿಸಿ ಇತರ ಯಾರೂ ಎರಡಂಕಿಯ ಮೊತ್ತ ಗಳಿಸಲಿಲ್ಲ.

ಸಂಕ್ಷಿಪ್ತ ಸ್ಕೋರ್: ಶ್ರೀಲಂಕಾ 43.3 ಓವರ್‌ಗಳಲ್ಲಿ 209 (ಪಥುಮ್ ನಿಸಾಂಕ 61, ಕುಶಾಲ್ ಪೆರೆರಾ 78, ಚರಿತ ಅಸಲಂಕ 25, ಮಿಚೆಲ್ ಸ್ಟಾರ್ಕ್ 43ಕ್ಕೆ 2, ಪ್ಯಾಟ್ ಕಮಿನ್ಸ್ 32ಕ್ಕೆ 2, ಆ್ಯಡಮ್ ಜಂಪಾ 47ಕ್ಕೆ 4)

ಆಸ್ಟ್ರೇಲಿಯಾ 35.2 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 215 (ಮಿಚೆಲ್ ಮಾರ್ಷ್ 52, ಮಾರ್ನಸ್ ಲಾಬುಶೇನ್ 40, ಜೋಶ್ ಇಂಗ್ಲಿಸ್ 58, ಗ್ಲೆನ್ ಮ್ಯಾಕ್ಸ್‌ವೆಲ್ ಔಟಾಗದೆ 31, ಮಾರ್ಕಸ್ ಸ್ಟೊಯಿನಿಸ್ ಔಟಾಗದೆ 20, ದಿಲ್ಶಾನ್ ಮಧುಶಂಕಾ 38ಕ್ಕೆ 3) **ಫಲಿತಾಂಶ:** ಆಸ್ಟ್ರೇಲಿಯಾ ತಂಡಕ್ಕೆ 5 ವಿಕೆಟ್ ಗೆಲುವು

ಆಸ್ಟ್ರೇಲಿಯಾ ತಂಡದ ಆ್ಯಡಮ್ ಜಂಪಾ (ಮಧ್ಯದಲ್ಲಿ) ಅವರು ಸಹ ಆಟಗಾರರೊಂದಿಗೆ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಮುಖ್ಯಾಂಶಗಳು

- ಶ್ರೀಲಂಕಾದ ನಿಸಾಂಕ, ಪೆರೆರಾ ಅರ್ಧಶತಕ
- 84 ರನ್‌ಗಳಿಗೆ 10 ವಿಕೆಟ್ ಕಳೆದುಕೊಂಡ ಲಂಕಾ
- 47 ಕ್ಕೆ 4 ವಿಕೆಟ್ ಪಡೆದ ಜಂಪಾ

ವಿಶ್ವಕಪ್ ಕ್ರಿಕೆಟ್: ಪಾಯಿಂಟ್ ಪಟ್ಟಿ

ದೇಶ	ಪಂದ್ಯ	ಗೆಲುವು	ಸೋಲು	ಟೈ	ಪಾಯಿಂಟ್	ಎನ್‌ಆರ್‌ಆರ್
ಭಾರತ	3	3	0	0	6	1.821
ನ್ಯೂಜಿಲೆಂಡ್	3	3	0	0	6	1.604
ದಕ್ಷಿಣ ಆಫ್ರಿಕಾ	2	2	0	0	4	2.360
ಪಾಕಿಸ್ತಾನ	3	2	1	0	4	-0.137
ಇಂಗ್ಲೆಂಡ್	3	1	2	0	2	-0.084
ಅಫ್ಗಾನಿಸ್ತಾನ	3	1	2	0	2	-0.652
ಬಾಂಗ್ಲಾದೇಶ	3	1	2	0	2	-0.699
ಆಸ್ಟ್ರೇಲಿಯಾ	3	1	2	0	2	-0.734
ಶ್ರೀಲಂಕಾ	3	0	3	0	0	-1.532
ನೆದರ್ಲೆಂಡ್ಸ್	2	0	2	0	0	-1.438

ಏಕನಾ ಕ್ರೀಡಾಂಗಣದಲ್ಲಿ ಹೋರ್ಡಿಂಗ್ ಬಿದ್ದಿರುವುದು –ಎಎಫ್‌ಪಿ ಚಿತ್ರ

ಬಿರುಗಾಳಿಗೆ ಬಿದ್ದ ಹೋರ್ಡಿಂಗ್

ಲಖನೌ (ಪಿಟಿಐ): ಆಸ್ಟ್ರೇಲಿಯಾ– ಶ್ರೀಲಂಕಾ ನಡುವಣ ಪಂದ್ಯ ನಡೆದ ಏಕನಾ ಕ್ರೀಡಾಂಗಣದ ಚಾವಣಿಗೆ ಕಟ್ಟಿದ್ದ ಹಲವು ಹೋರ್ಡಿಂಗ್‌ಗಳು ಜೋರಾಗಿ ಬೀಸಿದ ಗಾಳಿಗೆ ಕಳಚಿ ಬಿದ್ದಿವೆ.

ಇದರಿಂದ ಕೆಲಹೊತ್ತು ಆತಂಕದ ವಾತಾವರಣ ನಿರ್ಮಾಣವಾಯಿತು. ಶ್ರೀಲಂಕಾ ತಂಡದ ಇನಿಂಗ್ಸ್ ವೇಳೆ ಮಳೆಯಿಂದಾಗಿ ಕೆಲಹೊತ್ತು ಆಟ ಸ್ಥಗಿತಗೊಂಡಿತು. ಈ ವೇಳೆ ಬಲವಾದ ಗಾಳಿ ಬೀಸಿದೆ. ಹೋರ್ಡಿಂಗ್‌ಗಳು ಪ್ರೇಕ್ಷಕರು ಕುಳಿತುಕೊಳ್ಳುವ ಆಸನಗಳ ಮೇಲೆ ಬಿದ್ದಿವೆ. ಹೋರ್ಡಿಂಗ್ ಬಿದ್ದ ಜಾಗದಲ್ಲಿ ಪ್ರೇಕ್ಷಕರು ಇರಲಿಲ್ಲ. ಮುನ್ನೆಚ್ಚರಿಕೆ ಕ್ರಮವಾಗಿ ಗ್ಯಾಲರಿಯ ಹಿಂದಿನ ಸಾಲುಗಳ ಆಸನಗಳಲ್ಲಿ ಕುಳಿತುಕೊಳ್ಳುವಂತೆ ಪ್ರೇಕ್ಷಕರಿಗೆ ಸೂಚಿಸಲಾಯಿತು.

ಧರ್ಮಶಾಲಾದಲ್ಲಿ ಇಂದು ನೆದರ್ಲೆಂಡ್ಸ್ ವಿರುದ್ಧ ಪಂದ್ಯ: ಮೊದಲ ಜಯದ ತವಕದಲ್ಲಿ ಸ್ಕಾಟ್ ಪಡೆ

ದಕ್ಷಿಣ ಆಫ್ರಿಕಾಕ್ಕೆ ಹ್ಯಾಟ್ರಿಕ್ ಗೆಲುವಿನ ನಿರೀಕ್ಷೆ

ಧರ್ಮಶಾಲಾ (ಪಿಟಿಐ): ಎದುರಾಳಿ ತಂಡಗಳ ಬೌಲರ್‌ಗಳನ್ನು ಹಿಗ್ಗಾಮುಗ್ಗ ದಂಡಿಸಿ ಗೆಲುವಿನ ನಾಗಾಲೋಟದ-ಲ್ಲಿರುವ ದಕ್ಷಿಣ ಆಫ್ರಿಕಾ ತಂಡ ಹಾಲಿ ವಿಶ್ವಕಪ್‌ನಲ್ಲಿ ಉತ್ತಮ ಆರಂಭ ಮಾಡಿದೆ. ಪ್ರಕೃತಿ ಸೌಂದರ್ಯದ ಎಚ್‌ಪಿಸಿಎ ಕ್ರೀಡಾಂಗಣದಲ್ಲಿ ಮಂಗಳವಾರ ನಡೆಯುವ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ಪಾಯಿಂಟ್ ಪಟ್ಟಿಯ ತಳದಲ್ಲಿರುವ ನೆದರ್ಲೆಂಡ್ಸ್ ತಂಡವನ್ನು ಎದುರಿಸಲಿದ್ದು, ಮತ್ತೊಂದು ಗೆಲುವಿನ ನಿರೀಕ್ಷೆಯಲ್ಲಿದೆ.

ಈ ಹಿಂದಿನ ವಿಶ್ವಕಪ್ ನಿರ್ಣಾಯಕ ಪಂದ್ಯಗಳಲ್ಲಿ ಸೋತು 'ಚೋಕರ್ಸ್' ಹಣೆಪಟ್ಟಿ ಹೊತ್ತಿರುವ ಸ್ಪ್ರಿಂಗ್‌ಬಾಕ್ ಹರಿಣಗಳ ತಂಡ, ಈ ಸಲ ಮೊದಲ ಪಂದ್ಯದಲ್ಲಿ ಶ್ರೀಲಂಕಾ ವಿರುದ್ಧ ಸುಲಭ ಜಯಗಳಿಸಿದರೆ, ಎರಡನೇ ಪಂದ್ಯದಲ್ಲಿ ಐದು ಬಾರಿಯ ಚಾಂಪಿಯನ್ ಆಸ್ಟ್ರೇಲಿಯಾ ತಂಡಕ್ಕೆ ಮುಟ್ಟಿನೋಡಿ-ಕೊಳ್ಳುವಂಥ ಪೆಟ್ಟು ನೀಡಿದೆ. ಹೀಗಾಗಿ ಈ ತಂಡದ ಪ್ರದರ್ಶನದ ಮೇಲೆ ಎಲ್ಲರ ಗಮನ ನೆಟ್ಟಿದೆ. ಈ ಬಾರಿ ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ತಂಡಗಳು ಆರಂಭದಲ್ಲೇ ಹಿನ್ನಡೆ ಕಂಡಿವೆ. ದಕ್ಷಿಣ ಆಫ್ರಿಕಾದ ಬ್ಯಾಟಿಂಗ್ ಈ ವಿಶ್ವಕಪ್‌ನಲ್ಲಿ ಕಣ್ಣುಕೋರೈಸಿದೆ. ಅನುಭವಿ ಬ್ಯಾಟರ್–ಕೀಪರ್ ಕ್ವಿಂಟನ್ ಡಿ ಕಾಕ್, ರಸಿ ವ್ಯಾನ್ ಡೆರ್ ಡಸೆ, ಏಡನ್ ಮರ್ಕರಂ ಅವರು ಮೊದಲ ಪಂದ್ಯದಲ್ಲೇ ಶತಕ ಹೊಡೆದಿದ್ದರು. ಹೆನ್ರಿಕ್ ಕ್ಲಾಸೆನ್, ಡೇವಿಡ್ ಮಿಲ್ಲರ್ ಕೂಡ ಮಿಂಚಿನ ಇನಿಂಗ್ಸ್ ಆಡಬಲ್ಲವರು.

ಮೊದಲ ಪಂದ್ಯದಲ್ಲಿ ಆಫ್ರಿಕಾ ಬೌಲರ್‌ಗಳ ಪ್ರದರ್ಶನ ನಿರೀಕ್ಷಿತ ಮಟ್ಟದಲ್ಲಿ ಇರಲಿಲ್ಲ. ಆದರೆ ಆ ಕೊರತೆಯನ್ನು, ಆಸ್ಟ್ರೇಲಿಯಾ ವಿರುದ್ಧದ ಪಂದ್ಯದಲ್ಲಿ ಸರಿದೂಗಿಸಿ-ಕೊಂಡಿತು. ಆ ಪಂದ್ಯದಲ್ಲೂ ಡಿ ಕಾಕ್ ಶತಕ ಬಾರಿಸಿದ್ದರು.

ಅಭ್ಯಾಸದಲ್ಲಿ ನಿರತವಾಗಿರುವ ನೆದರ್ಲೆಂಡ್ಸ್ ತಂಡದ ನಾಯಕ ಸ್ಕಾಟ್ ಎಡ್ವರ್ಡ್ಸ್ –ಪಿಟಿಐ ಚಿತ್ರ

ನೆದರ್ಲೆಂಡ್ಸ್ ತಂಡದಲ್ಲಿ, ಗಮನ ಸೆಳೆಯುವ ರೀತಿಯ ಪ್ರದರ್ಶನ ಇದುವರೆಗೆ ಯಾರಿಂದಲೂ ಬಂದಿಲ್ಲ. ಆದರೆ ಆ ತಂಡ ಹಿಂದೆ ಸವಾಲೆಸೆಯುವ ಆಟ ತೋರಿದ್ದಿದೆ. 2009ರ ಟಿ–20 ವಿಶ್ವಕಪ್ ಪಂದ್ಯದಲ್ಲಿ ಆತಿಥೇಯ ಇಂಗ್ಲೆಂಡ್ ತಂಡವನ್ನೇ ಲಾರ್ಡ್ಸ್‌ನಲ್ಲಿ ಸೋಲಿಸಿ ಬೆರಗು ಮೂಡಿಸಿತ್ತು. ಕಳೆದ ವರ್ಷ ಆಸ್ಟ್ರೇಲಿಯಾದಲ್ಲಿ ನಡೆದ ಟಿ–20 ವಿಶ್ವಕಪ್‌ನ ಸೂಪರ್ 12 ಹಂತದಲ್ಲಿ 13 ರನ್‌ಗಳಿಂದ ಪ್ರಬಲ ದಕ್ಷಿಣ ಆಫ್ರಿಕಾವನ್ನು ಸೋಲಿಸಿ, ಆ ತಂಡದ ಕಪ್ ಆಸೆ ಭಗ್ನಗೊಳಿಸಿತ್ತು.

ಆದರೆ ಈ ಮಾದರಿಯಲ್ಲಿ ತಂಡ ಅಂಥ ಪ್ರದರ್ಶನ ನೀಡಿಲ್ಲ. ಆದರೆ ಅಚ್ಚರಿಯ ಫಲಿತಾಂಶಕ್ಕೆ ಯತ್ನಿಸುವುದಂತೂ ಖಚಿತ. ಇಂಗ್ಲೆಂಡ್ ತಂಡವನ್ನು, ಅಫ್ಗಾನಿಸ್ತಾನ ಸೋಲಿಸಿದ್ದು ಆ ತಂಡಕ್ಕೆ ಪ್ರೇರಣೆ ನೀಡಬಹುದು.

ಮುಖಾಮುಖಿ: ದಕ್ಷಿಣ ಆಫ್ರಿಕಾ ಮತ್ತು ನೆದರ್ಲೆಂಡ್ಸ್ ತಂಡಗಳು ಇದುವರೆಗೆ ಏಳು ಬಾರಿ ಮುಖಾಮುಖಿಯಾಗಿವೆ. ಆರು ಬಾರಿ ದಕ್ಷಿಣ ಆಫ್ರಿಕ ಜಯಗಳಿಸಿದೆ. ಒಂದು ಪಂದ್ಯ (2021 ನವೆಂಬರ್) ಮಳೆಯಿಂದಾಗಿ ಅರ್ಧದಲ್ಲೇ ಮೊಟಕುಗೊಂಡಿತ್ತು.

ಕ್ವಿಂಟನ್ ಡಿ ಕಾಕ್

ತಂಡಗಳು

ನೆದರ್ಲೆಂಡ್ಸ್: ಸ್ಕಾಟ್ ಎಡ್ವರ್ಡ್ಸ್ (ನಾಯಕ, ವಿಕೆಟ್ ಕೀಪರ್), ಕಾಲಿನ್ ಆ್ಯಕ್ರಮನ್, ವೆಸ್ಲಿ ಬರೇಸಿ, ಬಾಸ್ ಡಿ ಲೀಡ್, ಆರ್ಯನ್ ದತ್, ಸೈಬ್ರಾಂಡ್ ಇಂಗೆಲ್‌ಬ್ರೆಕ್ಟ್, ರಯಾನ್ ಕ್ಲೀನ್, ತೇಜ ನಿಡಮಾನೂರು, ಮ್ಯಾಕ್ ಒ'ಡೌಡ್, ಸಕೀನ್ ಝುಲ್ಫಿಕರ್, ಶರೀಜ್ ಅಹ್ಮದ್, ಲೋಗನ್ ವಾನ್ ಬೀಕ್, ರೋಲೊಫ್ ವಾನ್ ಡರ್ ಮೆರ್ವ್, ಪಾಲ್ ವಾನ್ ಮೀಕೆರೆನ್, ವಿಕ್ರಮಜಿತ್ ಸಿಂಗ್

ದಕ್ಷಿಣ ಆಫ್ರಿಕಾ: ತೆಂಬಾ ಬವುಮಾ (ನಾಯಕ), ಜೆರಾಲ್ಡ್ ಕೊಯೆಟ್ಜಿ, ಕ್ವಿಂಟನ್ ಡಿ ಕಾಕ್ (ವಿಕೆಟ್ ಕೀಪರ್), ರೀಝಾ ಹೆಂಡ್ರಿಕ್ಸ್, ಮಾರ್ಕೊ ಜಾನ್ಸೆನ್, ಹೆನ್ರಿಚ್ ಕ್ಲಾಸೆನ್, ಕೇಶವ ಮಹಾರಾಜ್, ಏಡನ್ ಮರ್ಕರಮ್, ಡೇವಿಡ್ ಮಿಲ್ಲರ್, ಲುಂಗಿ ಗಿಡಿ, ಆ್ಯಂಡಿಲೆ ಫಿಶುವಾಯೊ, ಕಗಿಸೊ ರಬಾಡ, ತಬ್ರೇಜ್ ಶಂಸಿ, ರಸಿ ವಾನ್‌ಡರ್ ಡಸೆನ್, ಲಿಜಾಡ್ ವಿಲಿಯಮ್ಸ್.

ಪಂದ್ಯ ಆರಂಭ: ಮಧ್ಯಾಹ್ನ 2.00

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ರೊನಾಲ್ಡಿನೊ ಭೇಟಿ: ಅಭಿಮಾನಿಗಳಲ್ಲಿ ಪುಳಕ

ಕೋಲ್ಕತ್ತ (ಪಿಟಿಐ): ಬ್ರೆಜಿಲ್‌ನ ದಿಗ್ಗಜ ಫುಟ್‌ಬಾಲ್ ಆಟಗಾರರಲ್ಲಿ ಒಬ್ಬರಾಗಿರುವ ರೊನಾಲ್ಡಿನೊ ಅವರು ಎರಡು ದಿನಗಳ ಭೇಟಿಗೆ ಕೋಲ್ಕತ್ತಕ್ಕೆ ಬಂದಿದ್ದು, ಅಭಿಮಾನಿಗಳಲ್ಲಿ ಪುಳಕ ಉಂಟುಮಾಡಿದರು.

ಭಾನುವಾರ ರಾತ್ರಿ ಇಲ್ಲಿಗೆ ಬಂದಿಳಿದ ಅವರನ್ನು ಸ್ವಾಗತಿಸಲು ವಿಮಾನ ನಿಲ್ದಾಣದ ಹೊರಗೆ ನೂರಾರು ಅಭಿಮಾನಿಗಳು ನೆರೆದಿದ್ದರು. ಸೋಮವಾರ ಅವರು ದುರ್ಗಾ ಪೂಜೆಯ ಪೆಂಡಾಲ್ ಉದ್ಘಾಟನೆ ಸೇರಿದಂತೆ ಹಲವು ಕಾರ್ಯಕ್ರಮಗಳಲ್ಲಿ ಪಾಲ್ಗೊಂಡರು.

ಅವರು ಹೋದಲ್ಲೆಲ್ಲಾ 'ರೊನಾಲ್ಡಿನೊ... ರೊನಾಲ್ಡಿನೊ' ಹಾಗೂ 'ಬ್ರೆಜಿಲ್... ಬ್ರೆಜಿಲ್' ಎಂಬ ಘೋಷಣೆಗಳು ಮೊಳಗಿದವು. ಬಾರ್ಸಿಲೋನಾ ಮತ್ತು ಎಸಿ ಮಿಲಾನ್ ಕ್ಲಬ್‌ನ ಮಾಜಿ ಆಟಗಾರನನ್ನು ನೋಡಲು ಅಭಿಮಾನಿಗಳು ಮುಗಿಬಿದ್ದರು.

ಕೋಲ್ಕತ್ತದ ಹೊರವಲಯದ ಮೆರ್ಲಿನ್ ರೈಸ್ ರೆಸಿಡೆನ್ಶಿಯಲ್ ಕಾಂ-ಪ್ಲೆಕ್ಸ್‌ನಲ್ಲಿ ತಾವು ಆರಂಭಿಸಿರುವ 'ಆರ್ 10' ಅಕಾಡೆಮಿಯನ್ನು ಅವರು ಉದ್ಘಾಟಿಸಿದರು. ವಿವಿಧ ವಯೋವರ್ಗದ ನೂರಾರು ಯುವ ಆಟಗಾರರು ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

43 ವರ್ಷದ ಅವರು ಆ ಬಳಿಕ ಉತ್ತರ ಕೋಲ್ಕತ್ತದಲ್ಲಿ ಡಿಸ್ನಿಲ್ಯಾಂಡ್ ಮಾದರಿಯಲ್ಲಿ ಸ್ಥಾಪಿಸಿರುವ ದುರ್ಗಾ ಪೂಜಾ ಪೆಂಡಾಲ್ ಉದ್ಘಾಟಿಸಿದರು. ಅಲ್ಲಿ ಅವರಿಗೆ ತಿಲಕವಿಟ್ಟು ಸಾಂಪ್ರದಾಯಿಕ ಸ್ವಾಗತ ನೀಡಲಾಯಿತು.

ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರನ್ನು ಕಾಲಿಘಾಟ್‌ನ-ಲ್ಲಿರುವ ನಿವಾಸದಲ್ಲಿ ಭೇಟಿಯಾದರು. ಮೋಹನ್ ಬಾಗನ್, ಈಸ್ಟ್ ಬೆಂಗಾಲ್ ಮತ್ತು ಮೊಹಮ್ಮಡನ್ ಸ್ಪೋರ್ಟಿಂಗ್ ಕ್ಲಬ್‌ಗಳ ಅಧಿಕಾರಿಗಳು ರೊನಾಲ್ಡಿನೊ ಅವರನ್ನು ಬರಮಾಡಿಕೊಂಡರು.

'ಶತಮಾನದ ಇತಿಹಾಸ ಹೊಂದಿರುವ ಕೋಲ್ಕತ್ತದ ಫುಟ್‌ಬಾಲ್ ಕ್ಲಬ್‌ಗಳ ಪರಂಪರೆಯ ಬಗ್ಗೆ ಮುಖ್ಯಮಂತ್ರಿ ಅವರು ರೊನಾಲ್ಡಿನೊಗೆ ವಿವರಿಸಿದರು. ಕೋಲ್ಕತ್ತದ ಕ್ಲಬ್‌ಗಳಲ್ಲಿ ಆಡಲು ಬ್ರೆಜಿಲ್‌ನ ಹೆಚ್ಚೆಚ್ಚು ಆಟಗಾರರನ್ನು ಕಳುಹಿಸುವಂತೆಯೂ ಅವರು ಮನವಿ ಮಾಡಿದರು' ಎಂದು ಈಸ್ಟ್ ಬೆಂಗಾಲ್ ತಂಡದ ಅಧಿಕಾರಿ ನೀತು ಸರ್ಕಾರ್ ತಿಳಿಸಿದರು.

ಮಂಗಳವಾರ ಅವರು ಕೋಲ್ಕತ್ತದ ಹೊರವಲಯದ ಮಹೇಶ್ತಲಾದಲ್ಲಿ ಆಯೋಜಿಸಿರುವ ಪ್ರದರ್ಶನ ಪಂದ್ಯವನ್ನು ವೀಕ್ಷಿಸುವುದು ಸೇರಿದಂತೆ ಕೆಲವು ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ.

ರೊನಾಲ್ಡಿನೊ ಅವರು ಯುವ ಆಟಗಾರರೊಂದಿಗೆ ಫೋಟೊಗೆ ಪೋಸ್ ನೀಡಿದರು –ಎಎಫ್‌ಪಿ ಚಿತ್ರ

ಸಬ್ ಜೂನಿಯರ್ ಹಾಕಿ: ಸುಪ್ರೀತ್, ಲಕ್ಷ್ಮಿ ಸಾರಥ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಗಳವಾರದಿಂದ ಅ.24ರ ವರೆಗೆ ಚೆನ್ನೈನಲ್ಲಿ ನಡೆಯಲಿರುವ ಹಾಕಿ ಇಂಡಿಯಾ ಸಬ್ ಜೂನಿಯರ್ ಬಾಲಕ ಮತ್ತು ಬಾಲಕಿಯರ ದಕ್ಷಿಣ ವಲಯ ಚಾಂಪಿಯನ್‌ಷಿಪ್ ಟೂರ್ನಿಯಲ್ಲಿ ಕರ್ನಾಟಕದ ತಂಡಗಳನ್ನು ಜಿ. ಸುಪ್ರಿತ್ ಮತ್ತು ಲಕ್ಷ್ಮಿ ಅವರು ಮುನ್ನಡೆಸಲಿದ್ದಾರೆ.

ತಂಡಗಳು: ಬಾಲಕರ ತಂಡ: ಜಿ.ಸುಪ್ರೀತ್ (ನಾಯಕ), ನಿಖಿಲ್ ಆರ್. ಗೌಡ ಮತ್ತು ತೇಜಸ್ ರಾಜ್‌ಶೇಖರ್ ಪವಾರ್ (ಗೋಲ್‌ಕೀಪರ್‌ಗಳು), ಎಂ.ನಿಶಾಂತ್, ಎಚ್.ಎಚ್.ದೀಕ್ಷಿತ್, ಎ.ಯು. ನಮನ ಬೆಳ್ಳಿಯಪ್ಪ, ಚಿರಾಗ್ ಜೆ. ಕೋಟ್ಯಾನ್, ಎಂ.ಸಿ. ಜಶನ್ ತಮ್ಮಯ್ಯ, ಸಿ. ಧನುಷ್, ಕೆ.ಎಸ್. ಸಮರ್ಥ ನಾಯಕ, ಎಂ.ಯು. ಸೋಹನ್ ಕಾರ್ಯಾಪ್ಪ, ರೋಹಿತ್ ಕಾಖಂಡಕಿ, ವಿ.ವೈ. ಸಾಕ್ಷಿತ್ ಗೌಡ, ಕೆ.ಎ. ನಿಹಾಲ್, ಕೆ.ಎಂ. ಶ್ರೇಯಸ್, ವಿ.ಪಿ. ವಿವಿನ್, ಮಲ್ಲು ಸುಣಗಾರ, ಥನೀಶ್ ಮಾದಪ್ಪ; ಎಂ.ಅರುಣ್ ಮತ್ತು ಕೃಷ್ಣ ರೆಡ್ಡಿ (ಕೋಚ್)

ಬಾಲಕಿಯರ ತಂಡ: ಲಕ್ಷ್ಮಿ (ನಾಯಕಿ), ಸಿ.ಕೆ. ಲಿಪ್ಸಿಕಾ ಕಾಳಪ್ಪ ಮತ್ತು ಸಿ.ಎಂ. ತ್ರಿಶಾ ದೇಚಮ್ಮ (ಗೋಲ್‌ಕೀಪರ್‌ಗಳು), ಟಿ.ಎಂ. ಧನ್ಯಾ, ಎಂ.ಎಸ್. ಗಗನಾ, ಟಿ.ಎಸ್. ವಿದ್ಯಾಶ್ರೀ, ಎಸ್. ಪ್ರಣೀತಾ, ಕೆ.ಎ.ಪೂರ್ವಿ ಪೂವಮ್ಮ, ಎ.ಜಿ. ಪರ್ಲಿನ್ ಪೊನ್ನಮ್ಮ, ಕೆ.ಪಿ. ಅಕ್ಷರಾ ತಿಮ್ಮಯ್ಯ, ಸಿಂಚನಾ ರಾಜ್, ಎಚ್.ಸಿ. ಅಕ್ಷಿತಾ, ಕೆ.ಆರ್. ದೀಪ್ತಿ, ಎಸ್.ಕೆ. ದೇಚಕ್ಕ, ಪ್ರತೀಕ್ಷಾ ಪಿ. ಕೋಟ್ಯಾನ್, ಭಾವನಾ, ಪಿ.ಕೆ. ನಿರೀಕ್ಷಾ, ವೈಷ್ಣವಿ ಅರುಲ್; ಪಮ್ಮಿಶೆಟ್ಟಿ ಹರೀಶ್ (ಕೋಚ್), ಬಿ.ಎಂ. ಕೋಮಲಾ (ಮ್ಯಾನೇಜರ್)

ಐಟಿಎಫ್ ಟೂರ್ನಿ: ಪ್ರಧಾನ ಸುತ್ತು ಇಂದಿನಿಂದ

ಫೈಸಲ್, ಲ್ಯೂಕ್ ಸೊರೆನ್ಸನ್ ಮುನ್ನಡೆ

ಪ್ರಜಾವಾಣಿ ವಾರ್ತೆ

ಧಾರವಾಡ: ಭಾರತದ ಫೈಸಲ್ ಖಮರ್, ಆಸ್ಟ್ರೇಲಿಯಾದ ಲ್ಯೂಕ್ ಸೊರೆನ್ಸನ್ ನಗರದ ಜಿಲ್ಲಾ ಲಾನ್ ಟೆನಿಸ್ ಸಂಸ್ಥೆಯ (ಡಿಡಿಎಲ್‌ಟಿಎ) ಅಂಗಣದಲ್ಲಿ ಸೋಮವಾರ ನಡೆದ ಐಟಿಎಫ್ ಟೂರ್ನಿಯ ಅರ್ಹತಾ ಪಂದ್ಯದ ಫೈನಲ್ ಸುತ್ತಿನಲ್ಲಿ ಅವರು ಪ್ರಧಾನ ಸುತ್ತಿಗೆ ಪ್ರವೇಶಿಸಿದ್ದಾರೆ. ಪ್ರಧಾನ ಸುತ್ತಿನ ಪಂದ್ಯಗಳು ಮಂಗಳವಾರ ಆರಂಭವಾಗಲಿವೆ.

ಫೈಸಲ್ ಅವರು 6–3, 7–5ರಿಂದ ವಿಯೆಟ್ನಾಂನ ಹಾಮಿನ್ ಡುಕ್‌ವೊ ಅವರನ್ನುಮಣಿಸಿದರು. ಲ್ಯೂಕ್ ಸೊರೆನ್ಸನ್ ಅವರು 6–3, 7–5 ರಿಂದ ಭಾರತದ ರೋಹನ್ ಮೆಹ್ರಾ ಅವರನ್ನು ಸೋಲಿಸಿದರು. ಮೂರು ಸೆಟ್‌ಗಳಿಗೆ ಬೆಳೆದ ಇನ್ನೊಂದು ಪಂದ್ಯದಲ್ಲಿ ಇಟಲಿಯ ಎನ್ರಿಕೋ ಜಿಯೊಕೊಮಿನಿ ಅವರು 6–4, 1–6, 10-6 ರಿಂದ ಸ್ವಿಟ್ಜರ್‌ಲೆಂಡ್‌ನ ಕಾರ್ಲ್‌ಸನ್ ವಿಸ್ಟ್ರಾಂಡ್ ಅವರನ್ನು ಸೋಲಿಸಿದರು.

ಜಗಮೀತ್ ಸಿಂಗ್ ಅವರು ಧರ್ಮಿಲ್ ಶಾ ಅವರನ್ನು 7–6(9), 6–4ರಿಂದ ಸೋಲಿಸಿದರು.

ಟೂರ್ನಿಯಲ್ಲಿ ಭಾಗವಹಿಸಿರುವ ಆಟಗಾರರ ಪೈಕಿ ಎಂಟು ಮಂದಿ ಪ್ರಧಾನ ಸುತ್ತಿಗೆ ಪ್ರವೇಶಿಸುವರು. ಮಳೆ, ಮಂದ ಬೆಳಕಿನ ಕಾರಣದಿಂದ ಸೋಮವಾರದ ಅರ್ಹತಾ ಸುತ್ತಿನ ನಾಲ್ಕು ಪಂದ್ಯಗಳನ್ನು ಮಂಗಳವಾರಕ್ಕೆ (ಅಕ್ಟೋಬರ್ 17) ಮುಂದೂಡಲಾಯಿತು.

ಚಾಪೆಲ್‌ಗೆ ಅಗ್ರ ಶ್ರೇಯಾಂಕ: ಟೂರ್ನಿಯ 'ಡ್ರಾ' ಸಮಾರಂಭ ಸೋಮವಾರ ನಡೆಯಿತು. ಅಮೆರಿಕದ ನಿಕ್ ಚಾಪೆಲ್ ಅವರಿಗೆ ಅಗ್ರ ಶ್ರೇಯಾಂಕ ನೀಡಲಾಗಿದೆ. ರಷ್ಯಾದ ಬೊಗ್ದಾನ್ ಬೊಬ್ರೊವ್ ಎರಡನೇ ಶ್ರೇಯಾಂಕ ಪಡೆದಿದ್ದಾರೆ.

ಭಾರತದ ದಿಗ್ವಿಜಯ ಸಿಂಗ್ ಮತ್ತು ಏಷ್ಯನ್ ಗೇಮ್ಸ್ ಪುರುಷರ ಡಬಲ್ಸ್ ಬೆಳ್ಳಿ ವಿಜೇತ ರಾಮಕುಮಾರ್ ರಾಮನಾಥನ್ ಅವರಿಗೆ ಕ್ರಮವಾಗಿ ಮೂರು ಮತ್ತು ನಾಲ್ಕನೇ ಶ್ರೇಯಾಂಕ ನೀಡಲಾಗಿದೆ. ಭಾರತದ ಸಿದ್ಧಾರ್ಥ ರಾವತ್ ಮತ್ತು ಪ್ರಜ್ವಲ್ ದೇವ್ ಕ್ರಮವಾಗಿ ಏಳು ಮತ್ತು ಎಂಟನೇ ಶ್ರೇಯಾಂಕ ಪಡೆದಿದ್ದಾರೆ.

'ಚುನಾವಣೆ ನಡೆದ ಕೂಡಲೇ ಕುಸ್ತಿ ಸಂಸ್ಥೆ ಅಮಾನತು ರದ್ದು'

ಮುಂಬೈ (ಪಿಟಿಐ): 'ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಮಾಜಿ ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ವಿರುದ್ಧ ಲೈಂಗಿಕ ಶೋಷಣೆಯ ಆರೋಪ ಪ್ರಕರಣಕ್ಕೆ ಸಂಬಂಧಿಸಿ ನಾವು ಮಧ್ಯಪ್ರವೇಶ ಮಾಡುವುದಿಲ್ಲ. ಆದರೆ ಮಹಿಳಾ ಕುಸ್ತಿಪಟುಗಳು ಮತ್ತೊಮ್ಮೆ ವಿಶ್ವ ಕುಸ್ತಿ ಸಂಸ್ಥೆಯನ್ನು (ಯುಡಬ್ಲ್ಯುಡಬ್ಲ್ಯು) ಸಂಪರ್ಕಿಸಿದಲ್ಲಿ ಅವರ ಅಹವಾಲು ಕೇಳಲಿದ್ದೇವೆ' ಎಂದು ಯುಡಬ್ಲ್ಯುಡಬ್ಲ್ಯು ಮುಖ್ಯಸ್ಥ ನೆನಾದ್ ಲಾಲೊವಿಕ್ ಸೋಮವಾರ ತಿಳಿಸಿದರು.

ಬಿಜೆಪಿ ಸಂಸದರೂ ಆಗಿರುವ ಬ್ರಿಜ್‌ಭೂಷಣ್ ಅವರು ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ್ದಾರೆಂದು ಒಲಿಂಪಿಕ್ ಪದಕ ವಿಜೇತರಾದ ಬಜರಂಗ್ ಪೂನಿಯಾ, ಸಾಕ್ಷಿ ಮಲಿಕ್ ಮತ್ತು ಏಷ್ಯನ್ ಗೇಮ್ಸ್ ಪದಕ ವಿಜೇತೆ ವಿನೇಶಾ ಫೋಗಟ್ ಅವರು ಆರೋಪಿಸಿದ್ದರು.

ಅವಧಿ ಮುಗಿದರೂ ಚುನಾವಣೆ ನಡೆಸದ ಭಾರತ ಕುಸ್ತಿ ಸಂಸ್ಥೆಯನ್ನು ಯುಡಬ್ಲ್ಯುಡಬ್ಲ್ಯು ಅಮಾನತು ಮಾಡಿತ್ತು. 'ಚುನಾವಣೆ ನಡೆದ ಕೂಡಲೇ ನಾವು ಅಮಾನತು ವಾಪಸು ಪಡೆಯುತ್ತೇವೆ' ಎಂದು ಐಒಸಿ ಅಧಿವೇಶನದಲ್ಲಿ ಪಾಲ್ಗೊಳ್ಳಲು ಮುಂಬೈಗೆ ಬಂದಿರುವ ಲಾಲೊವಿಕ್ ಹೇಳಿದರು.

ಸಿ.ಎಂ. ಕಪ್ ರಾಜ್ಯಮಟ್ಟದ ಕ್ರೀಡಾಕೂಟ: ಎಲೈಟ್ ಗುಂಪಿನ ಸ್ಪರ್ಧೆ

ದಸರಾ ಕ್ರೀಡೆ: ಮೈಸೂರು ತಂಡಗಳ ಶುಭಾರಂಭ

• ಆರ್. ಜಿತೇಂದ್ರ

ಮೈಸೂರು: ಆತಿಥೇಯ ಮೈಸೂರು ತಂಡಗಳು ಸೋಮವಾರ ಆರಂಭಗೊಂಡ ದಸರಾ ಸಿ.ಎಂ. ಕಪ್ ರಾಜ್ಯಮಟ್ಟದ ಕ್ರೀಡಾಕೂಟದ ಹಾಕಿ, ನೆಟ್‌ಬಾಲ್, ವಾಲಿಬಾಲ್‌ನಲ್ಲಿ ಪುರುಷ ಹಾಗೂ ಮಹಿಳೆಯರ ವಿಭಾಗಗಳೆರಡ-ರಲ್ಲೂ ಶುಭಾರಂಭ ಮಾಡಿದವು.

ಇಲ್ಲಿನ ಚಾಮುಂಡಿ ವಿಹಾರ ಕ್ರೀ-ಡಾಂಗಣದಲ್ಲಿ ನಡೆದ ಮಹಿಳೆಯರ ವಿಭಾಗದ ಹಾಕಿ ಪಂದ್ಯದಲ್ಲಿ ಮೈಸೂರು ವನಿತೆಯರು 7–0 ಅಂತರದಿಂದ ಬೆಳಗಾವಿ ತಂಡವನ್ನು ಮಣಿಸಿದರು.

ಪುರುಷರ ವಿಭಾಗದ ಹಾಕಿ ಪಂದ್ಯದಲ್ಲಿ ಮೈಸೂರು 4–2ರಿಂದ ಶಿವಮೊಗ್ಗ ತಂಡವನ್ನು ಮಣಿಸಿತು. ಒಂದು ಹಂತದಲ್ಲಿ 4 ಗೋಲುಗಳ ಮೂಲಕ ಮೈಸೂರು ಉತ್ತಮ ಮುನ್ನಡೆ ಕಾಯ್ದುಕೊಂಡಿದ್ದು, ಪುಟಿದೆದ್ದ ಶಿವಮೊಗ್ಗ ಗೆಲುವಿಗೆ ಪ್ರಯತ್ನ ನಡೆಸಿತಾದರೂ ಯಶಸ್ಸು ಕಾಣಲಿಲ್ಲ.

ಮೊದಲ ದಿನದ ಫಲಿತಾಂಶ: ಪುರುಷರು: ಶೂಟಿಂಗ್: 25 ಮೀ. ಎಸ್‌ಟಿಸಿ ಪಿಸ್ತೂಲ್: ರಾಕೇಶ್ ಮನ್‌ಪತ್–1, ರಕ್ಷಿತ್ ಶಾಸ್ತ್ರಿ–2, ಮಂಜುನಾಥ್ ಪಟಗಾರ–3; 50 ಮೀ. ಪಿಸ್ತೂಲ್ ಐಎಸ್‌ಎಸ್‌ಎಫ್: ರಕ್ಷಿತ್ ಶಾಸ್ತ್ರಿ–1, ಪಿ. ಜಯಂತ್–2, 50 ಮೀ. ರೈಫಲ್ 3ಪಿ: ಗೌತಮ್–1, ಆರ್.ಡಿ. ಸೂರ್ಯ–2, ಬಿ. ನಿಖಿಲ್–3; **ಕೊಕ್ಕೊ:** ರಾಯಚೂರು ತಂಡಕ್ಕೆ 12–11 ಅಂತರದಿಂದ ಹಾವೇರಿ ವಿರುದ್ಧ ಜಯ; ಧಾರವಾಡಕ್ಕೆ 16–14 ಅಂತರದಿಂದ ಬೆಂಗಳೂರು ವಿರುದ್ಧ ಗೆಲುವು; ಬೆಳಗಾವಿಗೆ 12–10ರಿಂದ ಮೈಸೂರು ವಿರುದ್ಧ ಗೆಲುವು; ಬಾಗಲಕೋಟೆ ತಂಡಕ್ಕೆ 14–13 ಅಂತರದಿಂದ ವಿಜಯನಗರ ವಿರುದ್ಧ ಗೆಲುವು; **ಹಾಕಿ:** ಧಾರವಾಡಕ್ಕೆ 3–0 ಗೋಲುಗಳಿಂದ ಬಳ್ಳಾರಿ ವಿರುದ್ಧ ಗೆಲುವು; ಮೈಸೂರು ತಂಡಕ್ಕೆ 4–2 ರಿಂದ ಶಿವಮೊಗ್ಗ ವಿರುದ್ಧ ಗೆಲುವು; ಹಾಸನಕ್ಕೆ ಹಾವೇರಿ ವಿರುದ್ಧ 3–1 ಅಂತರದ ಜಯ; **ವಾಲಿಬಾಲ್:** ಬೆಂಗಳೂರು ಡಿವೈಎಸ್‌ಎಸ್‌ಗೆ 3–1 ಸೆಟ್ ಅಂತರದಿಂದ ದಕ್ಷಿಣ ಕನ್ನಡ ವಿರುದ್ಧ ಜಯ; ರಾಮನಗರಕ್ಕೆ ಹಾವೇರಿ ವಿರುದ್ಧ 2–0 ಸೆಟ್‌ಗಳಿಂದ ಜಯ; ಮೈಸೂರು ತಂಡಕ್ಕೆ ಕೆಎಸ್‌ಪಿ ವಿರುದ್ಧ 2–0 ಅಂತರದ ಗೆಲುವು; **ಫುಟ್‌ಬಾಲ್:** ಹಾಸನಕ್ಕೆ 4–1 ಗೋಲುಗಳ ಅಂತರದಿಂದ ದಾವಣಗೆರೆ ವಿರುದ್ಧ ಜಯ; ಮೈಸೂರಿಗೆ 2–1ರಿಂದ ಉತ್ತರ ಕನ್ನಡ ವಿರುದ್ಧ ಜಯ; **ನೆಟ್‌ಬಾಲ್:** ದಕ್ಷಿಣ ಕನ್ನಡಕ್ಕೆ 49–37ರಿಂದ ಚಾಮರಾಜನಗರ ವಿರುದ್ಧ, ಬೆಂಗಳೂರು ಗ್ರಾಮೀಣ ತಂಡಕ್ಕೆ 27–06ರಿಂದ ರಾಮನಗರ ವಿರುದ್ಧ, ಮೈಸೂರಿಗೆ 39–34ರಿಂದ ಬೆಂಗಳೂರು ನಗರ ವಿರುದ್ಧ, ದಕ್ಷಿಣ ಕನ್ನಡಕ್ಕೆ 34–15ರಿಂದ ಬೆಂಗಳೂರು ಗ್ರಾಮಾಂತರ ವಿರುದ್ಧ ಜಯ.

ಮಹಿಳೆಯರು: ಶೂಟಿಂಗ್: 50 ಮೀ. ರೈಫಲ್: ಎಚ್.ಟಿ. ಅನುಷ್ಕಾ (ಬೆಂಗಳೂರು)–1, ದೀಕ್ಷಾ ರಾಗಿಣಿ (ಬೆಂಗಳೂರು)–2, ಕಿರೋನ್ ನಂದನ–3; 5 ಮೀ. ಪಿಸ್ತೂಲ್: ಜಿ. ರೋಹಿತಾ–1, ಪೂರ್ವಿ ನಾಯಕ್–2, ರಕ್ಷಾ ಪಟಗಾರ್–3; **ಕೊಕ್ಕೊ:** ಯಾದಗಿರಿ ತಂಡಕ್ಕೆ 6–5ರಿಂದ ಬೆಂಗಳೂರು ವಿರುದ್ಧ ಗೆಲುವು; ಧಾರವಾಡ ತಂಡಕ್ಕೆ ಬಾಗಲಕೋಟೆ ವಿರುದ್ಧ 12–7ರಿಂದ ಜಯ; ಬೆಳಗಾವಿ ತಂಡಕ್ಕೆ 9–7ರಿಂದ, ಮೈಸೂರು ತಂಡಕ್ಕೆ ಗದಗ ವಿರುದ್ಧ 15–08ರಿಂದ ಜಯ; **ಹಾಕಿ:** ಮೈಸೂರು ತಂಡಕ್ಕೆ ಬೆಳಗಾವಿ ವಿರುದ್ಧ 7–0 ಗೋಲುಗಳ ಅಂತರದ ಗೆಲುವು; ಬಾಗಲಕೋಟೆಗೆ 4–0 ಅಂತರದಿಂದ ಹಾಸನ ವಿರುದ್ಧ ಗೆಲುವು; ದಕ್ಷಿಣ ಕನ್ನಡಕ್ಕೆ 6–2 ಅಂತರದಿಂದ ಕೊಡಗು ವಿರುದ್ಧ ಜಯ; **ವಾಲಿಬಾಲ್:** ಧಾರವಾಡಕ್ಕೆ ಉಡುಪಿ ವಿರುದ್ಧ 2–0 ಸೆಟ್ ಅಂತರದ ಜಯ; ಬೆಂಗಳೂರು ಡಿವೈಎಸ್‌ಎಸ್‌ಗೆ ಬಳ್ಳಾರಿ ವಿರುದ್ಧ 2–0 ಅಂತರದ ಜಯ; ಮೈಸೂರು ತಂಡಕ್ಕೆ ರಾಮನಗರ ವಿರುದ್ಧ 2–0 ಅಂತರದ ಜಯ; ಧಾರವಾಡ ತಂಡಕ್ಕೆ 2–0 ಅಂತರದಿಂದ ಹಾವೇರಿ ವಿರುದ್ಧ ಜಯ; ದಕ್ಷಿಣ ಕನ್ನಡಕ್ಕೆ 2–0 ಅಂತರದಿಂದ ಹಾಸನ ವಿರುದ್ಧ ಜಯ; ಉಡುಪಿ ತಂಡಕ್ಕೆ 2–0 ಅಂತರರಿಂದ ಜಯ;

ದಸರಾ ಕ್ರೀಡಾಕೂಟದ ಪುರುಷರ ಕೊಕ್ಕೊ ಪಂದ್ಯದಲ್ಲಿ ಬೆಂಗಳೂರು ತಂಡದ ಆಟಗಾರನನ್ನು ಧಾರವಾಡ ತಂಡದ ಆಟಗಾರ ಔಟ್ ಮಾಡಲು ಯತ್ನಿಸಿದ ಕ್ಷಣ –ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಶೂಟಿಂಗ್: ರಕ್ಷಿತ್‌ಗೆ ಡಬಲ್ ಸಂಭ್ರಮ

ಬೆಂಗಳೂರಿನ ಜೆ.ಪಿ. ನಗರದ ರಕ್ಷಿತ್ ಶಾಸ್ತ್ರಿ ಅವರು ದಸರಾ ಕ್ರೀಡಾಕೂಟದ ಶೂಟಿಂಗ್ ಸ್ಪರ್ಧೆಯಲ್ಲಿ ಸೋಮವಾರ ಎರಡು ಪದಕಗಳನ್ನು ಗೆದ್ದು ಸಂಭ್ರಮಿಸಿದರು. ಬೆಂಗಳೂರಿನ ಭಾರತೀಯ ಕ್ರೀಡಾ ಪ್ರಾಧಿಕಾರದ ಆವರಣದಲ್ಲಿ ನಡೆದ ಸ್ಪರ್ಧೆಯ ಮೊದಲ ದಿನದ ಎಲ್ಲ ಪದಕಗಳೂ ಬೆಂಗಳೂರು ಸ್ಪರ್ಧಿಗಳ ಪಾಲಾದವು. 50 ಮೀಟರ್ಸ್ ಫ್ರೀ ಪಿಸ್ತೂಲ್ ವಿಭಾಗದಲ್ಲಿ ರಕ್ಷಿತ್ 532 ಅಂಕ ಕಲೆಹಾಕುವ ಮೂಲಕ ಬಂಗಾರಕ್ಕೆ ಕೊರಳೊಡ್ಡಿದರು. 25 ಮೀಟರ್ಸ್ ಎಸ್‌ಟಿಡಿ ಪಿಸ್ತೂಲ್ ವಿಭಾಗದಲ್ಲಿ ರಾಕೇಶ್ ಮನ್‌ಪತ್ 534 ಅಂಕಗಳ ಮೂಲಕ ಚಿನ್ನಕ್ಕೆ ಗುರಿ ಇಟ್ಟರೆ, ರಕ್ಷಿತ್ 527 ಅಂಕಗಳೊಂದಿಗೆ ಬೆಳ್ಳಿಗೆ ತೃಪ್ತಿ ಪಟ್ಟುಕೊಂಡರು. ಮಹಿಳೆಯರ 50 ಮೀಟರ್ಸ್ ರೈಫಲ್ ಸ್ಪರ್ಧೆಯಲ್ಲಿ 576 ಅಂಕಗಳ ಮೂಲಕ ಬಂಗಾರಕ್ಕೆ ಗುರಿ ಇಟ್ಟರೆ, 5 ಮೀಟರ್ಸ್ ಸ್ಪೋರ್ಟ್ಸ್ ಪಿಸ್ತೂಲ್ ವಿಭಾಗದಲ್ಲಿ ರೋಹಿತಾ 560 ಅಂಕಗಳೊಂದಿಗೆ ಚಿನ್ನ ಗಳಿಸಿದರು.

ಮಹಿಳಾ ಕ್ರಿಕೆಟ್: ಪ್ರಿ ಕ್ವಾರ್ಟರ್‌ಗೆ ಕರ್ನಾಟಕ ತಂಡ

ಬೆಂಗಳೂರು: ಬಿ.ಜಿ.ತೇಜಸ್ವಿನಿ ಅವರ ಆಲ್‌ರೌಂಡ್ ಆಟದ ನೆರವಿನಿಂದ ಗುಜರಾತ್ ತಂಡವನ್ನು ಮಣಿಸಿದ ಕರ್ನಾಟಕ, ಬಿಸಿಸಿಐ 19 ವರ್ಷದೊಳಗಿನ ಮಹಿಳೆಯರ 'ಒನ್‌ಡೇ ಟ್ರೋಫಿ' ಕ್ರಿಕೆಟ್ ಟೂರ್ನಿಯ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

ಗುವಾಹಟಿಯ ನೆರ್ಸಾ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯವನ್ನು ಕರ್ನಾಟಕ 5 ವಿಕೆಟ್‌ಗಳಿಂದ ಜಯಿಸಿತು.

ವಿಶಾಖಪಟ್ಟಣದಲ್ಲಿ ಅ.20 ರಂದು ನಡೆಯಲಿರುವ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಕರ್ನಾಟಕ ತಂಡ ಮುಂಬೈ ವಿರುದ್ಧ ಪೈಪೋಟಿ ನಡೆಸಲಿದೆ.

ಸಂಕ್ಷಿಪ್ತ ಸ್ಕೋರ್: ಗುಜರಾತ್ 47.2 ಓವರ್‌ಗಳಲ್ಲಿ 125 (ಲಿಸಾ ಕೆ. ಜೋಶಿ 32, ಬಿ.ಜಿ.ತೇಜಸ್ವಿನಿ 22ಕ್ಕೆ 4, ವಂದಿತಾ ಕೆ.ರಾವ್ 21ಕ್ಕೆ 3) ಕರ್ನಾಟಕ 39 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 129 (ಶ್ರೇಯಾ ಎಸ್ ಚವಾಣ್ 41, ಬಿ.ಜಿ.ತೇಜಸ್ವಿನಿ ಔಟಾಗದೆ 21, ಮಿಥಿಲಾ ವಿನೋದ್ ಔಟಾಗದೆ 29, ಝೀಲ್ ಎನ್. ಮಿಠಾಯಿವಾಲಾ 29ಕ್ಕೆ 2, ನಿಧಿಬೆನ್ ದೇಸಾಯಿ 25ಕ್ಕೆ 2)

ಪಂದ್ಯ ಮಳೆಯ ಪಾಲು

ಡೆಹ್ರಾಡೂನ್: ಕರ್ನಾಟಕ ಮತ್ತು ತಮಿಳುನಾಡು ನಡುವಣ ಸೈಯ್ಯದ್ ಮುಷ್ತಾಕ್ ಅಲಿ ಟ್ರೋಫಿ ಟಿ–20 ಕ್ರಿಕೆಟ್ ಟೂರ್ನಿ ಪಂದ್ಯ ಮಹಾರಾಣಾ ಪ್ರತಾಪ್ ಕಾಲೇಜು ಮೈದಾನದಲ್ಲಿ ಸೋಮವಾರ ಒಂದೂ ಎಸೆತ ಕಾಣದೇ ಮಳೆಗೆ ಕೊಚ್ಚಿಹೋಯಿತು.

ಟಿ–20 ಮಾದರಿ ಸೇರಿದಂತೆ ಐದು ಆಟಗಳ ಸೇರ್ಪಡೆ

2028ರ ಒಲಿಂಪಿಕ್ಸ್‌ಗೆ ಕ್ರಿಕೆಟ್

ಮುಂಬೈ (ಪಿಟಿಐ): ಕ್ರಿಕೆಟ್ (ಟಿ–20 ಮಾದರಿ) ಆಟವನ್ನು 2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್ ಪಟ್ಟಿಗೆ ಸೋಮವಾರ ಅಧಿಕೃತವಾಗಿ ಸೇರ್ಪಡೆಗೊಳಿಸಲಾಗಿದೆ. ಈ ಮೂಲಕ ಕ್ರಿಕೆಟ್ ವಿಸ್ತರಣೆಯ ಮಹತ್ವಾಕಾಂಕ್ಷೆಗೆ ಆನೆಬಲ ಬಂದಂತಾಗಿದೆ.

ಚುಟುಕು ಕ್ರಿಕೆಟ್ ಜೊತೆಗೆ, ಸ್ಕ್ವಾಷ್, ಬೇಸ್‌ಬಾಲ್/ ಸಾಫ್ಟ್‌ಬಾಲ್, ಲಕ್ರೋಸ್ ಮತ್ತು ಫ್ಲ್ಯಾಗ್ ಫುಟ್‌ಬಾಲ್ ಆಟಗಳ ಸೇರ್ಪಡೆಗೂ, ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ)ಯು ತನ್ನ 141ನೇ ಅಧಿವೇಶನದಲ್ಲಿ ಅನುಮೋದನೆ ನೀಡಿದೆ. ಜಿಯೊ ವರ್ಲ್ಡ್‌ಸಿಟಿಯಲ್ಲಿ ಈ ಮೂರು ದಿನಗಳ ಅಧಿವೇಶನ ನಡೆದಿದೆ.

ಐಒಸಿಯ ಕಾರ್ಯಕಾರಿ ಮಂಡಳಿ ಮಾಡಿದ ಶಿಫಾರಸುಗಳಿಗೆ ಧ್ವನಿಮತದ ಮೂಲಕ ಒಪ್ಪಿಗೆ ಪಡೆದ ನಂತರ ಐಒಸಿ ಅಧ್ಯಕ್ಷ ಥಾಮಸ್ ಬಾಕ್ ಅವರು ಒಲಿಂಪಿಕ್ಸ್‌ಗೆ ಕ್ರಿಕೆಟ್ ಮತ್ತು ಇತರ ಆಟಗಳ ಸೇರ್ಪಡೆಯನ್ನು ಘೋಷಿಸಿದರು.

ಈ ಐದು ಆಟಗಳ ಸೇರ್ಪಡೆಗೆ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯ 99 ಸದಸ್ಯರ ಪೈಕಿ ಇಬ್ಬರಷ್ಟೇ ವಿರೋಧ ಸೂಚಿಸಿದರು.

ಒಲಿಂಪಿಕ್ ಶೂಟಿಂಗ್ ಚಾಂಪಿಯನ್ ಹಾಗೂ ಲಾಸ್ ಏಂಜಲೀಸ್ 2028ರ ಕ್ರೀಡಾ ನಿರ್ದೇಶಕ ಆಗಿರುವ ಇಟಲಿಯ ನಿಕೊಲೊ ಕ್ಯಾಂಪ್ರಿಯಾನಿ ಅವರು ಈ ವೇಳೆ ವಿರಾಟ್ ಕೊಹ್ಲಿ ಅವರ ಜನಪ್ರಿಯತೆಯನ್ನು ಪ್ರಸ್ತಾಪಿಸಿದರು.

'ಅಂದಾಜು 2.5 ಶತಕೋಟಿ ಅಭಿಮಾನಿಗಳಿರುವ ಜಗತ್ತಿನ ಎರಡನೇ ಅತಿ ಜನಪ್ರಿಯ ಕ್ರೀಡೆಯನ್ನು ನಾವು ಸ್ವಾಗತಿಸುತ್ತಿದ್ದೇವೆ. ಲಾಸ್ ಏಂಜಲೀಸ್‌ನಲ್ಲೇ ಏಕೆ ಎಂಬ ಪ್ರಶ್ನೆ ಏಳಬಹುದು. ಆದರೆ ಕ್ರಿಕೆಟ್ ಆಟವನ್ನು ಅಮೆರಿಕದಲ್ಲಿ ಬೆಳೆಸಲು ನಾವು ಬದ್ಧರಾಗಿದ್ದು, ಮೇಜರ್ ಕ್ರಿಕೆಟ್ ಲೀಗ್ ನಡೆಸುವ ಮೂಲಕ ನಾವು ಈಗಾಗಲೇ ಆ ನಿಟ್ಟಿನಲ್ಲಿ ಹೆಜ್ಜೆಯಿಟ್ಟಾಗಿದೆ' ಎಂದು ಹೇಳಿದರು.

ಮುಂದಿನ ವರ್ಷ ಅಮೆರಿಕ ಮತ್ತು ವೆಸ್ಟ್ ಇಂಡೀಸ್‌ನಲ್ಲಿ ಟಿ–20 ವಿಶ್ವಕಪ್ ನಡೆಯಲಿದೆ ಎಂದರು. 'ನನ್ನ ಸ್ನೇಹಿತ ವಿರಾಟ್ (ಕೊಹ್ಲಿ) ಅವರಿಗೆ ಸಾಮಜಿಕ ಜಾಲತಾಣಗಳಲ್ಲಿ 34 ಕೋಟಿ ಫಾಲೊವರ್‌ಗಳಿದ್ದು, ವಿಶ್ವದ ಮೂರನೇ ಜನಪ್ರಿಯ ಕ್ರೀಡಾಪಟು ಆಗಿದ್ದಾರೆ. ಇದು ಲೆ ಬ್ರಾನ್ ಜೇಮ್ಸ್, ಟಾಮ್ ಬ್ರಾಡಿ ಮತ್ತು ಟೈಗರ್ ವುಡ್ಸ್ ಅವರಿಗಿಂತ ಅಧಿಕವಾಗಿದೆ.

ಅತಿ ದೊಡ್ಡ ಜನಸಂಖ್ಯೆಯ ದೇಶದಲ್ಲಿ ಕ್ರಿಕೆಟ್‌ಗೆ ಭಾರಿ ಸಂಖ್ಯೆಯ ಅಭಿಮಾನಿವರ್ಗ, ಕ್ರಿಕೆಟ್ ಸೇರ್ಪಡೆಗೆ ಐಸಿಸಿಗೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ನೀಡಿದ ಬೆಂಬಲವೂ, ಕ್ರಿಕೆಟ್ ಒಲಿಂಪಿಕ್ಸ್‌ನಲ್ಲಿ ಸ್ಥಾನ ಪಡೆಯಲು ನೆರವಾಗಿದೆ.

2021ರಲ್ಲಿ ಮೊದಲ ಬಾರಿ ತನ್ನ ನಿಲುವು ಬದಲಿಸಿ, ಒಲಿಂಪಿಕ್ ಕ್ರೀಡೆಗಳಲ್ಲಿ ಕ್ರಿಕೆಟ್ ಸೇರ್ಪಡೆಗೆ ಬೆಂಬಲ ಸೂಚಿಸಿತು. ಅದಕ್ಕೆ ಮೊದಲು, ತನ್ನ ಸ್ವಾಯತ್ತತೆಗೆ ಧಕ್ಕೆಯಾಗಬಹುದೆಂಬ ಆತಂಕದಿಂದ ಅದು ಒಲವು ತೋರಿಸಿರಲಿಲ್ಲ.

ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಅವರೂ ಈ ನಡೆಯನ್ನು ಸ್ವಾಗತಿಸಿದ್ದು, 'ಒಲಿಂಪಿಕ್ಸ್‌ಗೆ ಕ್ರಿಕೆಟ್ ಸೇರ್ಪಡೆ, ಆಟಕ್ಕೆ ಹೊಸ ಗಡಿಗಳನ್ನು ತೆರೆಯಲಿದೆ' ಎಂದಿದ್ದಾರೆ.

'ಮೂಲಸೌಕರ್ಯಗಳ ಅಭಿವೃದ್ಧಿ, ಸ್ಪರ್ಧೆಯ ವ್ಯಾಪಕತೆ, ಯುವ ಅಭಿವೃದ್ಧಿ, ಅಧಿಕಾರಿಗಳಿಗೆ, ವೃತ್ತಿಪರರಿಗೆ ಹೊಸ ಅವಕಾಶವನ್ನು ತೆರೆಯಲಿದೆ' ಎಂದರು.

ಈ ಘೋಷಣೆಯೊಂದಿಗೆ, ಭಾರತದಲ್ಲಿ ಐಒಸಿಯ ಒಲಿಂಪಿಕ್ಸ್ ಪ್ರಸಾರದ ಹಕ್ಕುಗಳ ಮೌಲ್ಯ (ಆದಾಯ) ಗಮನಾರ್ಹವಾಗಿ ಏರುವ ನಿರೀಕ್ಷೆಯಿದೆ.

ಈ ಘೋಷಣೆಗೆ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಕೂಡ ಸಂತಸ ವ್ಯಕ್ತಪಡಿಸಿದೆ.

1900ರಲ್ಲಿ ಆಡಲಾಗಿತ್ತು

ಕ್ರಿಕೆಟ್ ಆಟವನ್ನು ಈ ಹಿಂದೆ ಒಮ್ಮೆ– 1900ರ ಪ್ಯಾರಿಸ್ ಒಲಿಂಪಿಕ್ಸ್ ಕ್ರೀಡೆಗಳಲ್ಲಿ (ಪ್ಯಾರಿಸ್) ಆಡಲಾಗಿತ್ತು. ಎರಡೇ ತಂಡಗಳು ಭಾಗವಹಿಸಿದ್ದು, ಇಂಗ್ಲೆಂಡ್ ತಂಡ, ಫ್ರಾನ್ಸ್ ತಂಡವನ್ನು ಸೋಲಿಸಿತ್ತು. ಎರಡೂ ತಂಡಗಳಲ್ಲಿ ತಲಾ 12 ಆಟಗಾರರು ಇದ್ದು ಎರಡು ದಿನಗಳ 'ಟೆಸ್ಟ್' ಪಂದ್ಯ ನಡೆದಿತ್ತು.

ಅಫ್ಘಾನಿಸ್ತಾನ ಡಬ್ಲ್ಯು ಸಿ 2019 ವಿಜೇತರನ್ನು ಸೋಲಿಸಿತು !

ಐಒಎಗೆ ಸಿಇಒ ನೇಮಕ ಶೀಘ್ರ: ಬಾಕ್

ಮುಂಬೈ (ಪಿಟಿಐ): ಭಾರತ ಒಲಿಂಪಿಕ್ ಸಂಸ್ಥೆಯು ತನ್ನ ನಿಯಮಾವಳಿಯಂತೆ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯನ್ನು (ಸಿಇಒ) ಶೀಘ್ರ ನೇಮಕ ಮಾಡಿಕೊಳ್ಳಲಿದೆ ಎಂದು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ಅಧ್ಯಕ್ಷ ಥಾಮಸ್ ಬಾಕ್ ವಿಶ್ವಾಸ ವ್ಯಕ್ತಪಡಿಸಿದರು.

ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯ ಅಧಿವೇಶನದ ಎರಡನೇ ದಿನದ ಕಲಾಪಗಳ ನಂತರ ಅವರು ಸೋಮವಾರ ಮಾಧ್ಯಮದವರ ಜೊತೆ ಮಾತನಾಡಿದರು.

'ಭಾರತ ಒಲಿಂಪಿಕ್ ಸಂಸ್ಥೆ ಅಧ್ಯಕ್ಷೆ ಪಿ.ಟಿ.ಉಷಾ ಅವರೊಂದಿಗೆ ಚರ್ಚೆ ನಡೆಸಿದ್ದೇವೆ. ಅವರು ಸಂಸ್ಥೆಯಲ್ಲಿ ಸುಧಾರಣೆ ತರಲು ಪಣತೊಟ್ಟಂತೆ ಕಾಣುತ್ತಿದೆ. ಈಗಾಗಲೇ ಅವರು ಕೆಲವು ಕ್ರಮಗಳನ್ನು ಕೈಗೊಂಡಿದ್ದಾರೆ. ನಾವು ಐಒಎ ಬೆಳವಣಿಗೆಗಳನ್ನು ಗಮನಿಸುತ್ತಿದ್ದೇವೆ. ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚೆ ನಡೆಸಿದ್ದು, ವಿಶೇಷವಾಗಿ ಐಒಎಗೆ ಸಿಇಒ ನೇಮಕ ಬಗ್ಗೆ ಮಾತನಾಡಿದ್ದೇವೆ. ನೇಮಕ ಶೀಘ್ರವೇ ನಡೆಯಬಹುದೆಂಬ ವಿಶ್ವಾಸ ಇದೆ' ಎಂದರು.

ಸೌತ್ ಯುನೈಟೆಡ್ ತಂಡಕ್ಕೆ ಜಯ

ಬೆಂಗಳೂರು: ಸೌತ್ ಯುನೈಟೆಡ್ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 2–0 ಯಿಂದ ಬಿಯುಎಫ್‌ಸಿ ತಂಡದ ವಿರುದ್ಧ ಜಯ ಸಾಧಿಸಿತು.

ಸೋಮವಾರ ನಡೆದ ಪಂದ್ಯದಲ್ಲಿ ಸೌತ್ ಯುನೈಟೆಡ್ ತಂಡದ ಪರ ಇಶಾನ್ ಸಾಹಿ (20ನೇ), ರಂಗ್ಸಿಂಗ್ ಮುಯಿನಾವೊ (45ನೇ) ತಲಾ ಒಂದು ಗೋಲು ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ಕೊಡಗು ಎಫ್‌ಸಿ ತಂಡವು 1–1 ರಿಂದ ಎಚ್‌ಎಎಲ್ ಎಫ್‌ಸಿ ತಂಡದೊಂದಿಗೆ ಡ್ರಾ ಸಾಧಿಸಿತು. ಕೊಡಗು ತಂಡದ ಪರ ಅರುಣ್ ಲಾಲ್ (58ನೇ), ಎಚ್‌ಎಎಲ್ ತಂಡದ ಪರ ಎಸ್. ಜಾನಿ ಕೋಮ್ (65ನೇ) ತಲಾ ಒಂದು ಬಾರಿ ಚೆಂಡನ್ನು ಗುರಿ ಸೇರಿಸಿದರು.

ಡೆನ್ಮಾರ್ಕ್ ಓಪನ್ ಇಂದಿನಿಂದ: ಪ್ರಣಯ್‌ಗೆ ವಿಶ್ರಾಂತಿ

ಸಿಂಧು, ಲಕ್ಷ್ಯ ಸೇನ್ ಮೇಲೆ ನಿರೀಕ್ಷೆ

ಒಡೆನ್ಸ್, ಡೆನ್ಮಾರ್ಕ್ (ಪಿಟಿಐ): ಏಷ್ಯನ್ ಕ್ರೀಡಾಕೂಟದಲ್ಲಿ ಕಂಚಿನ ಪದಕ ಗೆದ್ದ ಭಾರತದ ಬ್ಯಾಡ್ಮಿಂಟನ್ ಆಟಗಾರ ಎಚ್.ಎಸ್. ಪ್ರಣಯ್ ಬೆನ್ನುನೋವಿನಿಂದ ಬಳಲುತ್ತಿದ್ದು, ಮಂಗಳವಾರ ಆರಂಭವಾಗಲಿರುವ ಡೆನ್ಮಾರ್ಕ್ ಓಪನ್ ಸೂಪರ್ 750 ಟೂರ್ನಿಯಿಂದ ಅವರು ಹಿಂದೆ ಸರಿದಿದ್ದಾರೆ.

31 ವರ್ಷದ ಪ್ರಣಯ್ ಅವರು ಬೆನ್ನುನೋವಿನ ನಡುವೆಯೂ ಏಷ್ಯನ್ ಕ್ರೀಡಾಕೂಟದ ಪುರುಷರ ಸಿಂಗಲ್ಸ್ ವಿಭಾಗದಲ್ಲಿ 41 ವರ್ಷದ ಬಳಿಕ ಭಾರತಕ್ಕೆ ಪದಕ ತಂದುಕೊಟ್ಟಿದ್ದರು.

'ಈ ತಿಂಗಳು ನಡೆಯುವ ಟೂರ್ನಿಯಲ್ಲಿ ಆಡಲು ಸಾಧ್ಯವಾಗುತ್ತಿಲ್ಲ. ಎರಡು– ಮೂರು ವಾರಗಳ ಕಾಲ ವಿಶ್ರಾಂತಿ ಅಗತ್ಯವಿದೆ. ಹೀಗಾಗಿ, ಡೆನ್ಮಾರ್ಕ್ ಮತ್ತು ಫ್ರಾನ್ಸ್ ಓಪನ್ ಟೂರ್ನಿಯಲ್ಲಿ ಆಡುತ್ತಿಲ್ಲ' ಎಂದು ಪಿಟಿಐಗೆ ಅವರು ತಿಳಿಸಿದ್ದಾರೆ.

ಪ್ರಣಯ್ ಅವರ ಅನುಪಸ್ಥಿತಿಯಲ್ಲಿ ಲಕ್ಷ್ಯಸೇನ್ ಅವರು ಡೆನ್ಮಾರ್ಕ್ ಓಪನ್‌ನಲ್ಲಿ ಭಾರತದ ಸವಾಲನ್ನು ಮುನ್ನಡೆಸಲಿದ್ದಾರೆ. ವಿಶ್ವದ 15ನೇ ಕ್ರಮಾಂಕದ ಸೇನ್ ಮೊದಲ ಸುತ್ತಿನಲ್ಲಿ ಥಾಯ್ಲೆಂಡ್‌ನ ಕಾಂತಾಫೋನ್ ವಾಂಗ್‌ಚರೊಯೆನ್ ಅವರನ್ನು ಎದುರಿಸಲಿದ್ದಾರೆ.

ಪಿ.ವಿ. ಸಿಂಧು

ಆರ್ಕಟಿಕ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಸೆಮಿಫೈನಲ್ ಹಂತ ತಲುಪಿ, ಅಲ್ಲಿ ನಿರಾಸೆ ಅನುಭವಿಸಿದ ಪಿ.ವಿ. ಸಿಂಧು ಅವರು ಇಲ್ಲಿ ಉತ್ತಮ ಪ್ರದರ್ಶನದ ವಿಶ್ವಾಸದಲ್ಲಿದ್ದಾರೆ. ಅವರು ಮೊದಲ ಸುತ್ತಿನಲ್ಲಿ ಸ್ಕಾಟ್ಲೆಂಡ್‌ನ ಕಿರ್ಸ್ಟಿ ಗಿಲ್ಮೊರ್ ಅವರ ಸವಾಲನ್ನು ಎದುರಿಸುವರು.

ಕಿದಂಬಿ ಶ್ರೀಕಾಂತ್ ಚೀನಾದ ವೆಂಗ್ ಹಾಂಗ್ ಯಾಂಗ್ ಅವರೊಂದಿಗೆ, ಪ್ರಿಯಾಂಶು ರಾಜಾವತ್ ಮಲೇಷ್ಯಾದ ಲೀ ಝಿ ಜಿಯಾ ಅವರೊಂದಿಗೆ ಸೆಣಸಾಡುವರು.

ಪುರುಷರ ಡಬಲ್ಸ್‌ನ ವಿಶ್ವದ ಅಗ್ರ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ ಮೊದಲ ಸುತ್ತಿನಲ್ಲಿ ಮಲೇಷ್ಯಾದ ಓಂಗ್ ಯೂ ಸಿನ್ ಮತ್ತು ಟಿಯೋ ಈ ಯಿ ಅವರ ವಿರುದ್ಧ ಸೆಣಸಾಡಲಿದೆ. ಭಾರತದ ಜೋಡಿ ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನದ ಸಾಧನೆ ಮಾಡಿತ್ತು.

72198 21111
BAJAJ FINANCE LTD - AF
BAJAJ SECURE • AMC • ROAD SIDE ASSISTANCE
ನಿಯಮ ಹಾಗೂ ಷರತ್ತುಗಳು ಅನ್ವಯಿಸುತ್ತವೆ. *ಪಲ್ಸರ್ N150 ವೇರಿಯಂಟ್‌ನ ಎಕ್ಸ್-ಶೋರೂಮ್ ಬೆಲೆ. ನಿಜವಾದ ಬಣ್ಣಗಳು ಮತ್ತು ಎಕ್ಸೆಸರೀಸ್‌ನಲ್ಲಿ ವ್ಯತ್ಯಾಸವಿರಬಹುದು ಅಥವಾ ಸ್ಟ್ಯಾಂಡರ್ಡ್ ಇಕ್ವಿಪ್‌ಮೆಂಟ್‌ನ ಅಂಗಭಾಗವಲ್ಲದೇ ಇರಬಹುದು. ನಿರ್ದಿಷ್ಟ ಮಾಡೆಲ್‌ಗಳಿಗಾಗಿ ನಿರ್ದಿಷ್ಟ ರಾಜ್ಯಗಳಲ್ಲಿ ಎಎಮ್‌ಸಿ ಲಭ್ಯ. ಹೆಚ್ಚಿನ ವಿವರಗಳಿಗಾಗಿ ಬಜಾಜ್ ಡೀಲರರಲ್ಲಿ ವಿಚಾರಿಸಿರಿ. ರೋಡ್‌ಸೈಡ್ ಸಹಾಯವನ್ನು ಥರ್ಡ್ ಪಾರ್ಟಿಯವರು ಒದಗಿಸುತ್ತಾರೆ ಮತ್ತು ಅವರ ನಿಯಮ ಹಾಗೂ ಷರತ್ತುಗಳ ಅನುಸಾರವಿರುತ್ತದೆ.

Authorised Dealers for Bajaj Auto Ltd.: Bangalore • Bommanahalli AMBA BAJAJ: 9535411100 • **HSR Layout** AMBA BAJAJ: 8884333732 • **Sarjapur** AMBA BAJAJ: 7406688884• **BTM Layout** AMBA BAJAJ: 9513926221• **Madiwala** AMBA BAJAJ: 9945000048• **Electronic City** AMBA BAJAJ: 8971711118• **Nayandahalli Mysore Rd** RV BAJAJ: 6360308373 • **Chandra Layout Moodalapalya** RV BAJAJ: 9740444545 • **Kengeri** RV BAJAJ: 7353763305 • **Giri Nagar** RV BAJAJ: 7353763302• **Vijaynagar** RV BAJAJ: 7353763307• **Banashankari** POPULAR BAJAJ: 9945111874 • **Rajajinagar** POPULAR BAJAJ : 6366554001 • **Koramangala** POPULAR BAJAJ: 9845589079 • **Konankunte** POPULAR BAJAJ: 7760967834 • **Ramnagara** POPULAR BAJAJ: 7760967832 • **Kanakpura** POPULAR BAJAJ: 9972533890 • POPULAR BAJAJ **Channapatna** 9901947666 • POPULAR BAJAJ **Uttarahalli** 9972095890 • POPULAR BAJAJ **Gottigere** 7760996891 • **Yelahanka** KALYANI BAJAJ: 9449849618 • **Mekhri circle** KALYANI BAJAJ 8884413593 **Mathikere** KALYANI BAJAJ: 8884430126 • **Chikkaballapura** KALYANI BAJAJ: 8884413594 • **Devanahalli** KALYANI BAJAJ: 9449849624 • **Marathahalli** KHIVRAJ BAJAJ: 9036091986 • **Kasturba Rd** KHIVRAJ BAJAJ: 9035060140 • **Indiranagar** KHIVRAJ BAJAJ: 9035060139 • **Hennur** KHIVRAJ BAJAJ: 9742155225 • **Banaswadi** KHIVRAJ BAJAJ: 9035060147 • **Yeshwanthpur :** KHIVRAJ BAJAJ: - 96320 68142 • **Hesargatta** KHIVRAJ BAJAJ: 9035060148 • **Whitefield** KHIVRAJ BAJAJ: 8618840097 • **Hoskote** KHIVRAJ BAJAJ: 9035005075 • **Magadi Rd** ANANT BAJAJ: 9980009166 • **Laggere** ANANT BAJAJ: 7022984402 • **Hubli** CHANNAMMA BAJAJ: 9620614106 • **Arvind Nagar branch** 8884771881 **Gadag** CHANNAMMA BAJAJ: 7090665850 • **Sirsi** CHANNAMMA BAJAJ: 8884645609 • **Haveri** CHANNAMMA BAJAJ: 8151884422 • **Belgaum** JAGAJAMPI BAJAJ: 988690116, JAGASHREE BAJAJ: 7349773962. • **Chikodi** JAGAJAMPI BAJAJ: 9449736406 • **Gokak** JAGAJAMPI BAJAJ: 7022425616 • **Bellary AADI BAJAJ: 9606050246• Raichur SHREE BALAJI AUTOMOBILES: 9964626515• Koppal I A BAJAJ: 8123712938• Hospet AADI BAJAJ:9731361414 • Hagaribommanahalli AADI BAJAJ: 9900363010• SIRUGUPPA AADI BAJAJ: 9110217558 • Bijapur BIJJARGI BAJAJ (BLDE Road)**: 6362877793 •(Bus Stand Road) 8884000970 • **Bagalkot** BIJJARGI BIKES: 9148448324 • **Sindagi** BIJJARGI BAJAJ 8861946802• **Bidar** SINDOL BAJAJ 9513226555 • **Chitradurga** BTV BAJAJ: Ph: 8310553554 • **Hiriyur** BTV BAJAJ: Ph: 8310553554 • **Challakere** BTV BAJAJ 8310553554 • **Davangere** JAIN BAJAJ: Ph: 9343636805 • **Harihara** JAIN BAJAJ: Ph: 9632300444 • **Gulbarga** VKG BAJAJ: 9632018700 • **Yadgir** VKG BAJAJ: 8867776567 • **Humnabad** VKG BAJAJ 8050889160 • **Shimoga** SUPREME BAJAJ: 8105000999 • **Sagar** SUPREME BAJAJ: 9008339799 • **Bhadravathi** SUPREME BAJAJ: 9008352799 • **Chikkamagalur** SUPREME BAJAJ: 9008379799 • **Tarikere** SUPREME BAJAJ: 9008569799 • **Hosanagar** SUPREME BAJAJ 9731767799 • **Anandpura** SUPREME BAJAJ 9663501499 • **Hassan** ARPITA BAJAJ: 9902439255, **Arsikere** ARPITA BAJAJ: 9964094535 • **Kolar** KHIVRAJ 9611768292 • **KGF** KHIVRAJ BAJAJ: 7349507477• **Tumkur** AKSHAYA BAJAJ: 7259040212• **Tiptur** AKSHAYA BAJAJ: 7259040226 • **Sira** AKSHAYA BAJAJ: 7259040328 • **Kunigal** AKSHAYA BAJAJ: 7338662706 • **Madhugiri** AKSHAYA BAJAJ: 7259040340 • **BH Road:** 7338662687 • **Mysore Saraswathipuram** POPULAR BAJAJ: 9148101113 • **Chamarajapuram** POPULAR BAJAJ: 7259786271 • **Vontikoppal** STAR BAJAJ: 9886959722 • **Mandya** POPULAR BAJAJ: 7760967900 • **Chamarajanagara** PATEL BAJAJ: 9480494888 • **Hunsur** STAR BAJAJ: 8884374777 • **Kushalnagar** POPULAR BAJAJ: 7259786276 • **Nanjangud** STAR BAJAJ: 9742100252 • **NR Mohalla** STAR BAJAJ: 8095777706 • **Balmatta** SUPREME BAJAJ: 9606973192 • **Kuloor** SUPREME BAJAJ: 9606237547 • **Surathkal** SUPREME BAJAJ: 9606973193 • **Thokottu** 9606702429 • **B C Road** 7618715273 • **Bidar** SINDOL BAJAJ 9513226555 • **UDUPI** SAANVI BAJAJ 8861135225.